ಕನ್ನಡ
ಕಾವ

ಕನ್ನಡ ಸಾಹಿತ್ಯ ಸಂಗಮ

ಸಂಪಾದಕರು
ಡಾ. ಬೈರಮಂಗಲ ರಾಮೇಗೌಡ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ಕನ್ನಡ ಸಾಹಿತ್ಯ ಸಂಗಮ

ಸಂಪಾದಕರು
ಡಾ. ಬೈರಮಂಗಲ ರಾಮೇಗೌಡ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦೦೧೮

KANNADA SAHITYA SANGAMA
Edited by: Dr. Byramangala Ramegowda, Dr. D.K. Chittaiah Poojar
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi + 176 Price : **Rs.45=00 : 2011**

ಮುದ್ರಣದ ವರ್ಷ : ೨೦೧೧
ಪ್ರತಿಗಳು : ೧೦೦೦
ಬೆಲೆ : ನಲವತ್ತೈದು ರೂಪಾಯಿಗಳು

ಪಠ್ಯರಚನಾ ಸಮಿತಿ – ಸದಸ್ಯರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಡಾ. ಬೈರಮಂಗಲ ರಾಮೇಗೌಡ
ಪ್ರೊ. ಎಂ.ಜಿ. ಚಂದ್ರಶೇಖರಯ್ಯ

ಪ್ರಕಟಣಾ ಸಮಿತಿ

ಅಧ್ಯಕ್ಷರು – ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಸಂಚಾಲಕರು – ಪ್ರೊ. ಎಚ್.ಕೆ. ಮಳಲಿಗೌಡ

ಸದಸ್ಯರು

ಶ್ರೀ ಸಂಗಮೇಶ ಬಾದವಾಡಗಿ
ಡಾ. ಗಿರಡ್ಡಿ ಗೋವಿಂದರಾಜ
ಪ್ರೊ. ಎಸ್.ಜಿ.ಸಿದ್ಧರಾಮಯ್ಯ
ಶ್ರೀ ಬಿ.ಆರ್.ಪೊಲೀಸ್ ಪಾಟೀಲ
ಶ್ರೀ ಮಾನಸ
ಶ್ರೀ ಪ್ರದೀಪ್‌ಕುಮಾರ ಕಲ್ಕೂರ
ಶ್ರೀ ಮುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ಕುಂ.ವೀರಭದ್ರಪ್ಪ
ಶ್ರೀ ವಿಷ್ಣು ನಾಯ್ಕ
ಡಾ. ಬೈರಮಂಗಲ ರಾಮೇಗೌಡ

ಸಮ್ಮೇಳನಾಧ್ಯಕ್ಷರು – ಪ್ರೊ. ಜಿ. ವೆಂಕಟಸುಬ್ಬಯ್ಯ
೭೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು – ಶ್ರೀ ಮನು ಬಳಿಗಾರ್
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ.ಎಂ.ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

'ಪ್ರವೇಶ' 'ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಬಹಳಷ್ಟು ವರ್ಷಗಳಿಂದ ಸಾಹಿತ್ಯಪ್ರಿಯರು ಈ ಪರೀಕ್ಷೆಗಳಿಗೆ ನೋಂದಾವಣೆ ಮಾಡಿಸಿ, ಶ್ರದ್ಧೆಯಿಂದ ಅಭ್ಯಾಸ ಮಾಡಿ, ಪರೀಕ್ಷೆ ಬರೆದು ಅರ್ಹತಾ ಪತ್ರಗಳನ್ನು ಪಡೆದುಕೊಂಡಿದ್ದಾರೆ. ರ್‍ಯಾಂಕುಗಳಿಗೆ ನಿಶ್ಚಿತ ಮೊತ್ತದ ನಗದು ಬಹುಮಾನ ಗಳಿಸಿ ಹೆಮ್ಮೆಪಟ್ಟಿದ್ದಾರೆ. ಸಾಹಿತ್ಯ ಪರೀಕ್ಷೆಗಳ ರ್‍ಯಾಂಕ್ ವಿಜೇತರಿಗೆ ಬಹುಮಾನ ಪ್ರದಾನ ಮಾಡುವ ಸಮಾರಂಭವೇ ಪರಿಷನ್ಮಂದಿರದಲ್ಲಿ ನಡೆಯುವ ಪುಟ್ಟದೊಂದು ಸಾಹಿತ್ಯ ಹಬ್ಬದಂತಿರುತ್ತದೆ. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು. ಹಾಗೆಯೇ ಬಿ.ಎ. ಪದವಿಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಿರದಿದ್ದರೂ 'ರತ್ನ' ಪರೀಕ್ಷೆಯ ಅರ್ಹತಾ ಪತ್ರದ ನೆರವಿನಿಂದ ಕನ್ನಡ ಎಂ.ಎ. ತರಗತಿಗಳಿಗೆ ಗರಿಷ್ಠ ಇಬ್ಬರು ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾದ ಅನುಕೂಲವೂ ಇದೆ.

ಇಷ್ಟೆಲ್ಲ ಮಹತ್ವ ಪಡೆದುಕೊಂಡಿರುವ ಪರೀಕ್ಷೆಗಳಿಗೆ ಪಠ್ಯಕ್ರಮವನ್ನು ರೂಪಿಸಿ, ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಿಂದ ಮೊದಲುಗೊಂಡು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಇವುಗಳ ವಿಭಿನ್ನ ಪ್ರಕಾರಗಳು, ಆಸಕ್ತಿಗಳು, ಚಳುವಳಿಗಳು, ಸಿದ್ಧಾಂತಗಳು – ಇವೆಲ್ಲವನ್ನೂ ದೃಷ್ಟಿಯಲ್ಲಿರಿಸಿಕೊಂಡು ಎಲ್ಲೂ ಅರೆಕೊರೆಯಾಗದಂತೆ, ಭಾರವಾಗದಂತೆ ಸಮತೋಲನವನ್ನು ಕಾಯ್ದುಕೊಂಡು ಈ ಕೆಲಸವನ್ನು ಮಾಡಬೇಕಾಗುತ್ತದೆ. ಸಮಕಾಲೀನ ಬದುಕು – ಅಭಿರುಚಿ–ಚಿಂತನೆಗಳಿಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ವಿಶ್ವವಿದ್ಯಾಲಯಗಳು ರೂಪಿಸುವ ಇದೇ ಉದ್ದೇಶದ ಪಠ್ಯಗಳಿಗೆ ಹೊಯ್‌ಕಯ್ ಆಗಿ ನಿಲ್ಲಬೇಕಾಗುತ್ತದೆ. ನಮ್ಮ ಈ ಆಶಯಕ್ಕೆ ಸ್ಪಂದಿಸುವಂತೆ ಸಾಹಿತ್ಯ ಪರೀಕ್ಷೆಗಳ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರೂಪಿಸುವ ಜವಾಬ್ದಾರಿಯನ್ನು ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಂ.ಜಿ. ಚಂದ್ರಶೇಖರಯ್ಯ ಪ್ರೀತಿಯಿಂದ ನಿರ್ವಹಿಸಿದ್ದಾರೆ. ವಿವಿಧ ಪಠ್ಯಗಳ ಸಂಪಾದಕರು ಸಕಾಲದಲ್ಲಿ ಅಚ್ಚುಕಟ್ಟಾಗಿ ಪುಸ್ತಕಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿ ಸುಂದರ ವಿನ್ಯಾಸದೊಂದಿಗೆ ಪುಸ್ತಕಗಳನ್ನು ಮುದ್ರಿಸಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ. ಸಾಹಿತ್ಯ ವಿದ್ಯಾರ್ಥಿಗಳು ಈ ಪುಸ್ತಕಗಳಿಂದ ನಿರೀಕ್ಷಿತ ಪ್ರಯೋಜನ ಪಡೆಯುವರೆಂದು ಭಾವಿಸಿದ್ದೇನೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಸಂಪಾದಕರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ 'ಕಾವ' ಸಾಹಿತ್ಯ ಪರೀಕ್ಷೆಗೆ ೨೦೧೦ರಿಂದ ಪಠ್ಯವಾಗಿ ಚಾಲನೆಗೊಳ್ಳುತ್ತಿರುವ 'ಕನ್ನಡ ಸಾಹಿತ್ಯ ಸಂಗಮ' ಒಂದು ಹೊಸ ಬಗೆಯ ಪ್ರಯೋಗ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸಂರಕ್ಷಣೆ–ಸಂವರ್ಧನೆಗಾಗಿ ಶ್ರಮಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಆ ಉದ್ದೇಶಕ್ಕೆ ಪೂರಕವಾಗಿ ಬಹುಜನ ಬಯಸುವ ಮೌಲಿಕ ಸಾಹಿತ್ಯ ಕೃತಿಗಳನ್ನೂ ಹೊರತರುತ್ತಿದೆ. ಇದರ ವಿಸ್ತರಣೆಯಾಗಿ ಕನ್ನಡ ಸಾಹಿತ್ಯ ಪರಿಷತ್ತು ಜಾನಪದ ಮತ್ತು ಶಾಸನ ಡಿಪ್ಲೊಮಾ ತರಗತಿಗಳನ್ನು ನಡೆಸುತ್ತಿದೆ; ಪ್ರವೇಶ, ಕಾವ, ಜಾಣ, ರತ್ನದಂಥ ಸಾಹಿತ್ಯ ಪರೀಕ್ಷೆಗಳನ್ನು ನಡೆಸುತ್ತಿದೆ. ಸಾಹಿತ್ಯ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳು ನಿರ್ದಿಷ್ಟ ಪಠ್ಯಕ್ರಮದ ಚೌಕಟ್ಟಿನಲ್ಲಿ ಅಧ್ಯಯನ ನಡೆಸಬೇಕಾಗುತ್ತದೆ. ಆ ಅಧ್ಯಯನ ನಿಗದಿತ ಪಠ್ಯಪುಸ್ತಕಗಳನ್ನು ಆಧರಿಸಿದ್ದು ಅವುಗಳನ್ನು ಸಾಹಿತ್ಯ ಪರಿಷತ್ತೇ ಪ್ರಕಟಿಸುತ್ತದೆ.

ಬದುಕು ನಿರಂತರ ಬದಲಾವಣೆಗೊಳಗಾಗುತ್ತಿರುವುದರಿಂದ ಅದರ ಗತಿಬಿಂಬವಾದ ಸಾಹಿತ್ಯವೂ ಬದಲಾವಣೆಗೊಳಗಾವುದು ಅನಿವಾರ್ಯವಾಗುತ್ತದೆ. ವರ್ತಮಾನದ ಆಸಕ್ತಿ, ಅಭಿರುಚಿ, ತಳಮಳ, ತಲ್ಲಣ, ವೇದನೆ, ಸಂವೇದನೆಗಳು ಮೈಪಡೆಯದೇ ಹೋದರೆ ಅಂಥ ಸಾಹಿತ್ಯಕೃತಿ ಓದುಗರಿಗೆ ರುಚಿಸಲಾರದು; ಅವರು ಪ್ರೀತಿಯಿಂದ ಅದರ ಪುಟಗಳನ್ನು ತಿರುವಿಹಾಕಲಾರರು. ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಡಾ. ನಲ್ಲೂರು ಪ್ರಸಾದ್ ಸಾಹಿತ್ಯ ಪರೀಕ್ಷೆಗಳ ಪಠ್ಯಪುಸ್ತಕಗಳನ್ನು ಪುನರ್ರೂಪಿಸಬೇಕೆಂದು ಬಯಸಿದ್ದು ಇಂಥದೇ ಕಾರಣದಿಂದಾಗಿ. 'ಕಾವ' ಪರೀಕ್ಷೆಯ ಪಠ್ಯವನ್ನು ಅಭ್ಯಾಸ ಮಾಡಬೇಕಾದವರು ಎಸ್ಸೆಸ್ಸೆಲ್ಸಿ ಮಟ್ಟದ ತಿಳುವಳಿಕೆಯನ್ನು ಪಡೆದಿರುವ ವಿದ್ಯಾರ್ಥಿಗಳು. ಅವರ ಗ್ರಹಣ ಸಾಮರ್ಥ್ಯಕ್ಕೆ ನಿಲುಕುವಂತೆ, ಅವರ ನಿತ್ಯದ ಅನುಭವಗಳ ಜೊತೆ ಸಮೀಕರಿಸಿ ನೋಡಲು ಸಹಾಯಕವಾಗುವಂತೆ, ಅವರು ಓದಿದ್ದು ಸ್ವಲ್ಪಮಟ್ಟಿಗಾದರೂ ಅವರ ಬದುಕಿನಲ್ಲಿ ಪ್ರಯೋಜನಕಾರಿಯಾಗುವಂತೆ, ಅವರಲ್ಲಿ ವಿಚಾರಶಕ್ತಿ ಜಾಗೃತವಾಗುವಂತೆ, ಅವರ ದೈನಂದಿನ ಮಾತುಕತೆಗಳಿಗೆ ಮತ್ತಷ್ಟು ಹೊಳಪು ಬರಲು ಸಾಧ್ಯವಾಗುವಂತೆ, ಪರೀಕ್ಷೆಯಲ್ಲಿ ಸಂತೋಷವಾಗಿ ಉತ್ತರ ಬರೆಯಲು ಸಹಕಾರಿಯಾಗುವಂತೆ ಹೀಗೆ ನಾನಾ ದೃಷ್ಟಿಕೋನಗಳನ್ನು ಎರಕಹೊಯ್ದು ಈ 'ಕನ್ನಡ ಸಾಹಿತ್ಯ ಸಂಗಮ'ವನ್ನು ಸಿದ್ಧಪಡಿಸಲಾಗಿದೆ. ನವೋದಯದಿಂದ ಪ್ರಾರಂಭಿಸಿ ಬಂಡಾಯದ ಪ್ರಸ್ತುತ ಅವಸ್ಥೆಯವರೆಗಿನ ಪದ್ಯ ಮತ್ತು ಗದ್ಯ ಸಾಹಿತ್ಯವನ್ನು ಇದರಲ್ಲಿ ಅಳವಡಿಸಿಕೊಳ್ಳಲಾಗಿದೆ. ಇಲ್ಲಿರುವ ಕವಿತೆಗಳನ್ನು ಪ್ರಾತಿನಿಧಿಕ ಕವಿತೆಗಳೆಂದಾಗಲೀ, ಲೇಖನಗಳನ್ನು ಪ್ರಾತಿನಿಧಿಕ ಲೇಖನಗಳೆಂದಾಗಲೀ ಗುರುತಿಸಲಾಗದಿದ್ದರೂ ನಮ್ಮ ಆಶಯಕ್ಕೆ ಹೊಂದುವಂಥವುಗಳೆಂದು ಭಾವಿಸಬಹುದಾಗಿದೆ. ಕವಿತೆ ಮತ್ತು ಲೇಖನಗಳ ಆಯ್ಕೆಯ ಸಂದರ್ಭದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳನ್ನು ಸ್ಪರ್ಶಿಸುವ, ಮೂರು ತಲೆಮಾರುಗಳನ್ನು ಪ್ರತಿನಿಧಿಸುವ ಎಚ್ಚರವನ್ನು ಕಾದುಕೊಳ್ಳಲಾಗಿದೆ. ಹಳೆಯ ತಲೆಮಾರಿನವರ ರಚನೆಗಳು ಬೇರೆ ಬೇರೆ ಸಂಕಲನಗಳಲ್ಲಿ, ಪುಸ್ತಕಗಳಲ್ಲಿ ಸೇರ್ಪಡೆಯಾಗಿ ಓದಿಗೆ, ಚರ್ಚೆಗೆ

ಗ್ರಾಸವಾಗಿರುವಂಥವು. ಆದರೆ ಹೊಸ ತಲೆಮಾರಿನವರ ಆಲೋಚನೆ ಮತ್ತು ಬರವಣಿಗೆಯ ರೀತಿ ನಿಜಕ್ಕೂ ಗಮನಾರ್ಹವಾಗಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಈವರೆಗೆ ಸಾಗಿಬಂದ ತಲೆಮಾರುಗಳ ಬೆನ್ನಮೇಲೋ ಹೆಗಲಮೇಲೋ ಕುಳಿತು ಮುಂದಕ್ಕೆ ನೋಡುವ ಶಕ್ತಿ ಅವಕ್ಕೆ ಖಂಡಿತ ಇದೆ. ಇದೆಲ್ಲ ಬೆಳವಣಿಗೆಗಳನ್ನು 'ಕಾವ'ದ ವಿದ್ಯಾರ್ಥಿಗಳು ಒಟ್ಟಾಗಿಯೇ ಪಡೆಯಬೇಕು. ಅವರಲ್ಲೂ ಇರಬಹುದಾದ ಶಕ್ತಿಯನ್ನು ಹೊರಹೊಮ್ಮಿಸಲು ಪ್ರೇರಣೆ ಪಡೆಯುವಂತಾಗಬೇಕು. ಸಾಹಿತ್ಯ–ಸಂಸ್ಕೃತಿಯ ಬೇರೆಬೇರೆ ನೆಲೆಗಳನ್ನು ಅರ್ಥೈಸಿಕೊಳ್ಳಲು ಸಜ್ಜಾಗಬೇಕು. ಇಂಥದೊಂದು ಅಪರೂಪದ ಸಂಕಲನವಾಗಿ 'ಕನ್ನಡ ಸಾಹಿತ್ಯ ಸಂಗಮ' ಪಠ್ಯವನ್ನು ಸಿದ್ಧಪಡಿಸಲು ಪ್ರೀತಿಯಿಂದ ನಮ್ಮನ್ನು ಒತ್ತಾಯಿಸಿ, ಸ್ವತಂತ್ರ ವಾತಾವರಣದಲ್ಲಿ ಅದು ರೂಪುಗೊಳ್ಳಲು ಕಾರಣರಾದ ಡಾ. ನಲ್ಲೂರು ಪ್ರಸಾದ್ ಅವರಿಗೆ ಧನ್ಯವಾದಗಳನ್ನು ಹೇಳಿ, ವಿದ್ಯಾರ್ಥಿಗಳ ಬಳಕೆಗೆ ಈ ಕೃತಿಯನ್ನು ಒಪ್ಪಿಸುತ್ತಿದ್ದೇವೆ.

ಡಾ. ಬೈರಮಂಗಲ ರಾಮೇಗೌಡ
ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

ಪರಿವಿಡಿ

ಕಾವ್ಯಭಾಗ

ಗದ್ಯಭಾಗ

ಕಾವ್ಯ ಭಾಗ

೧. ಕಲ್ಕಿ

– ಕುವೆಂಪು

ನಿದ್ದೆಯ ಲೋಕದಿ ಕನಸಿನ ಬೀದಿ ;
ತಿರುಗಿದೆ, ತೊಳಲಿದೆ, ತಪ್ಪಿತು ಹಾದಿ !
ಮುಂದೆ ಕಾಣಿಸಿತೊಂದು ಅರಣ್ಯ.
ಅನಂತವಾದುದು ವನವಿಸ್ತೀರ್ಣ,
ಹೆಮ್ಮರಗಳು ಕಿಕ್ಕಿರಿದುವು ಅಲ್ಲಿ,
ಬಿಡುವಿಲ್ಲದೆ ಹೆಣೆದಿದ್ದುವು ಬಳ್ಳಿ ;
ಮುಳ್ಳಿನ ಪೊದೆಗಳು ಗರಗಸವಳ್ಳಿ,
ಪ್ರೇತದಂತೆ ಪಾಪಾಸಿನ ಕಳ್ಳಿ !
ನುಗ್ಗಿದೆ ನಾನಾ ಹಳುವಿನಲಿ ;
ಆ ಕನಸಿನ ಹೆಗ್ಗಾಡಿನಲಿ.
ಅಲ್ಲಿದ್ದುದು ಬೆಳಕೆಂಬುವುದಲ್ಲ.
ಕತ್ತಲು ಅಲ್ಲ !
ಬೆಳಕೋ ಕತ್ತಲೋ ಶಿವನೇ ಬಲ್ಲ !
ಶಿವನೇ ಬಲ್ಲ!
ಪ್ರೇತಗಳಂದದಿ ಭೀತಿಯ ಛಾಯೆ
ಸುಳಿಸುಳಿದಾಡಿತು ಅಲ್ಲಿ,
ಆ ಘೋರ ಕಾನನದಲ್ಲಿ !
ನಡೆದೇ ನಡೆದೇ ನಡೆದೂ ನಡೆದೆ,
ಸಾಹಸ ಬಿಡದೆ, ಎದೆಗೆಡದೆ.
ಸುತ್ತಲು ಮೌನ !
ಸ್ಮಶಾನ ಮೌನ !
ಕಾಡನು ದಾಟಿದೆ : ಮುಂಗಡೆ ಬೆಟ್ಟ ;
ಶಿಖರವೊ ನಿಂತಿದೆ ಮುಗಿಲಿನ ಮುಟ್ಟ !
ಹತ್ತೀ ಹತ್ತೀ ಹತ್ತೀ ಹತ್ತಿ
ಕಡೆಯಲಿ ಸಿಕ್ಕಿತು ನಡುನೆತ್ತಿ !
ನೋಡಿದೆನಲ್ಲಿ,
ನಡುನೆತ್ತಿಯಲಿ !–

ಯಾವುದೊ ಊರು ಆ ಊರು?
ಬರಿ ಮಾಯದ ಊರು !
ಧನಿಕರ ಮನೆಗಳು ಒಂದೆಡೆ ನಿಂತಿವೆ
ಬಡವರ ಗುಡಿಸಲು ಒಂದೆಡೆ ನಿಂತಿವೆ.
ಜ್ಯೋತಿಯ ಮಣಿದೀಪಗಳಲ್ಲಿ ;
ಕತ್ತಲು, ಕಗ್ಗತ್ತಲು ಇಲ್ಲಿ !
ಹಾಡಿನ ನುಣ್ದನಿಯತ್ತ
ಗೋಳಿನ ನೀಳ್ದನಿಯಿತ್ತ
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ.
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲಿ !
ಆ ಕಡೆ ಉದ್ಯಾನ
ಈ ಕಡೆ ಸ್ಮಶಾನ !
ಪೀತಾಂಬರಗಳ ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ !
ನೋಡುತ ನೋಡುತ ನೋಡುತ್ತಿದ್ದೆ ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ ;
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಲುಗಳಿಗೆ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು
ಭುಗಿಭುಗಿಲೆನ್ನುತ ಮುತ್ತಿದುದು !
ಮುಗಿಲಿನವರೆಗೂ ಬಾನಿನವರೆಗೂ
ದಿಕ್ಕು ದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ !
ಬಡಬಾಗ್ನಿಯು ತಲೆತಗ್ಗಿತು ನಾಚಿ !
ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿ ಹೊತ್ತಿ
ದೂರದ ಆ ಗಿರಿಶಿಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ !
ಕೇಳಿಸಿತೊಡನೆಯ ಹಾಹಾಕಾರ !

ಮಕ್ಕಳು ಮರಿಗಳ ಚೀತ್ಕಾರ !
ಗರ್ಭಿಣಿ ಸ್ತ್ರೀಯರು, ಬಾಣಂತಿಯರು.
ನವ ವಧುಗಳು ಮೇಣ್ ಶ್ರೀಮಂತೆಯರು
ಹುಡುಗರು, ಮುದುಕರು, ಕುಂಟರು, ಕಿವುಡರು;
ಬಡವರ ಗೋಳನು ಕೇಳದ ಕಿವುಡರು
ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವೆಗೆ ಮೌಢ್ಯವ ಕೊಟ್ಟು
ಸುಖಸಂಪತ್ತನು ಕೊಂಡವರು,
ಮೃಷ್ಟಾನ್ನವನೇ ಉಂಡವರು ;
ಗುರುಗಳು, ಶಿಷ್ಯರು, ಮನೆಗಳು, ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ
ಬಡವರ ಬಗ್ಗರ ಜಠರಾಗ್ನಿಯಲಿ !
ಬಡವನ ಜಠರಾಗ್ನಿಯೆ ಬಡಬಾಗ್ನಿ !
ಬಡವನೆ ಕಲಿಯುಗದಂತ್ಯದ ಕಲ್ಕಿ !
ನೋಡುತಲಿದ್ದೆ;
ನೋಡುತಲಿದ್ದೆ;
ಕಣ್ಮರೆಯಾಯಿತು ಆ ದೃಶ್ಯ !
ಏನಿದು ಈ ದೃಶ್ಯ ?
ರಕ್ತದ ಜಲಪಾತ !
ನರಮಾಂಸದ ನಾತ !
ಧುಮುಧುಮುಕುತಲಿದೆ ರಕ್ತದ ರಣಧುನಿ !
ಹೊರಹೊಮ್ಮುತ್ತಿದೆ ನರರಾರ್ತಧ್ವನಿ
ಗಗನವು ರಕ್ತ ! ಭೂಮಿಯು ರಕ್ತ !
ನೋಡಿದರೆತ್ತಲು ರಕ್ತ ರಕ್ತ !
ಅಯ್ಯೋ ರಕ್ತ !
ಧುಮುಕುವ ಶೋಣಿತ ಗಿರಿಝುರಿಯಲ್ಲಿ,
ನರ ರುಂಡಗಳು
ನರ ಮುಂಡಗಳು
ಮುಂಗಾರ್ಗಾಲದ ಬಲ್ಸರಿಯಲ್ಲಿ
ಆಲಿಯ ಕಲ್ಲುಗಳುರುಳುರುಳ್ವಂತೆ

ಧುಮುಕುತಲಿರುವುವು ಬಂಡೆಗಳಂತೆ
ಧುಘುಂ ಧುಘುಂ ಧುಘುಮ್ಮನೆ ಬಿದ್ದು
ಹಾರುತಲಿವೆ ಬಿಸಿನೆತ್ತರು, ಸದ್ದು !
ಸುಂದರಿಯರ ತಲೆಮಂಡೆಗಳು,
ಶ್ರೀಮಂತರ ನೆಣದುಂಡೆಗಳು,
ಪಾಪದ ದೇಹ, ಪುಣ್ಯದ ದೇಹ,
ಗುಡಿಗೋಪುರಗಳು, ಧರ್ಮದ ಗೇಹ,
ತೇಲಿ, ತೇಲಿ, ತೇಲಿ, ತೇಲಿ,
ನುಗ್ಗುತಲಿವೆ ಕಸಕಡ್ಡಿಯ ಹೋಲಿ,
ಯಾರವನಲ್ಲಿ ? ದೂರದಲಿ
ಧಾವಿಸಿ ಬರುವನು ಕ್ರೌರ್ಯದಲಿ !
ಅಸ್ಥಿಪಂಜರದಶ್ವವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ !
ಅಸ್ಥಿಪಂಜರದಾಳವನು !
ಪ್ರೇತಸ್ವರೂಪಿಯದಾರವನು ?
ಬಲಗಡೆ ಕೈಯಲಿ ಮಿಂಚಿನ ಕತ್ತಿ !
ಎಡಗಡೆ ಕೈಯಲಿ ಸಿಡಿಲಿನ ಬುತ್ತಿ !
ಎಲುಬಿನ ಕುದುರೆ ! ಎಲುಬಿನ ಆಳು !
ಇವನೆಯೆ ಕಲ್ಕಿ ? ಬಡವರ ಬಾಳು
ಮೂರ್ತಿವೆತ್ತಿಹ ಬಡವರ ಗೋಳು
ನೋಡುತಲಿದ್ದೆ,
ಕೇಳುತಲಿದ್ದೆ !
"ಹಸಿವೇ, ದಾಹಾ !" ಎನ್ನುತ ಬಂದು,
"ರಕ್ತಾ ! ರಕ್ತಾ ! ರಕ್ತಾ !" ಎಂದು
ನೆತ್ತರು ಹೊಳೆಯಲಿ ಧುಮುಕಿದನು,
ಕುದುರೆಯೊಡನೆ ಧುಮ್ಮಿಕ್ಕಿದನು !
ಕುಡಿದನು ರಕ್ತವ ಮೊಗೆಮೊಗೆದು,
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯು ಕೆನೆಯುತ್ತಿತ್ತು !
ನಾದವು ಬೊಮ್ಮವ ಬಿರಿವಂತಿತ್ತು !

ಎಲುಬಿನ ಮೂರ್ತಿಯು ಗಹಗಹಿಸಿತ್ತು ;
ಗುಡುಗಿನ ಮಾಲೆಯ ಪೊರಮಡುತಿತ್ತು !
ಕುದುರೆಯು ಕುಡಿದೂ, ಆಳೂ ಕುಡಿದೂ
ತಿಂದರು ಶವಗಳ ಲರಿಲರಿ ಕಡಿದೂ !
ಬತ್ತಿತು ರಣಧುನಿ ; ಇನ್ನೂ ದಾಹ !
ಮುಗಿದುವು ಹೆಣಗಳು, ಇನ್ನೂ ಹಸಿವೆ !
ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ !
ತುಂಬದೊ ಹೊಟ್ಟೆ ;
ತುಂಬದು ಹೊಟ್ಟೆ !
ಕೆಟ್ಟೇ ! ಕೆಟ್ಟೇ !
ಅಯ್ಯೋ ಕೆಟ್ಟೇ !
ನೋಡಿದನೆನ್ನಂ ಬೆಟ್ಟದ ಮೇಲೆ
ಬರುತಿಹನಯ್ಯೋ ಒಲ್ಲೇ ! ಒಲ್ಲೇ !
ನೋಡುತಲಿದ್ದೆ !
ಕಂಪಿಸಿ ಬಿದ್ದೆ !
ಕಲ್ಕಿ ! ಕಲ್ಕಿ ! ಎನ್ನುತ ಚೀರಿ
ಕನಸೊಡೆದೆದ್ದೆ
ಇನ್ನೆಲ್ಲಿಯ ನಿದ್ದೆ ?

****

ಕವಿ–ಕಾವ್ಯ ವಿಚಾರ

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿ ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಬೆಳಗಿದ ಕವಿಗಳು, ದಾರ್ಶನಿಕರು, ಶಿಕ್ಷಣತಜ್ಞರು, ಆಡಳಿತಗಾರರು. ಈ ಶತಮಾನದ ಮೇರುಕೃತಿ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನು ಸೃಷ್ಟಿಸಿದವರು. ೧೯೨೨ರಲ್ಲೇ ಇಂಗ್ಲಿಷ್‌ನಲ್ಲಿ 'ಬಿಗಿನರ್ಸ್ ಮ್ಯೂಸ್' ಎನ್ನುವ ಕವನ ಸಂಕಲನ ಪ್ರಕಟಿಸಿದವರು. ಕನ್ನಡ ನಾಡು ನುಡಿಗಳ ಮೇಲ್ಮೆಗಾಗಿ ಹೋರಾಟ ಮಾಡಿದವರು. ಅಗಾಧವಾದ ಪ್ರತಿಭೆ, ಪಾಂಡಿತ್ಯ ಮತ್ತು ವ್ಯಾಪಕವಾದ ಜೀವನಾನುಭವದಿಂದ ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನಚಿತ್ರ, ಮಕ್ಕಳ ಸಾಹಿತ್ಯ, ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಮಹಾಕಾವ್ಯ ಮುಂತಾದ ನಾನಾ ಪ್ರಕಾರಗಳಲ್ಲಿ ಅರವತ್ತಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಮೌಢ್ಯತೆಯ ವಿರುದ್ಧ ಸಿಡಿದ ಕುವೆಂಪು ಅವರ ಸಾಹಿತ್ಯದ ಜೀವನಾಡಿ ವೈಚಾರಿಕತೆ. ಜಾತಿ, ಮತ, ಪಂಥ,

ಗುಂಪು, ವರ್ಗವ್ಯವಸ್ಥೆ, ವರ್ಣವ್ಯವಸ್ಥೆ ಮುಂತಾದ ನಾನಾ ದೃಷ್ಟಿಯ ಅಡ್ಡಗೋಡೆಗಳನ್ನು ಕೆಡವಿ ಅಜ್ಞಾನದ ಕತ್ತಲೆಯನ್ನು ಭೇದಿಸಿ, ಮಾನವಮತವನ್ನು ಹಿಡಿದು ವಿಶ್ವಪಥದಲ್ಲಿ ನಡೆಯಬೇಕೆಂಬ ಹಿರಿಯ ಸಂದೇಶ ಇವರದು. ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು, ಕೊಳಲು, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಬೆರಳ್ಗೆ ಕೊರಳ್, ಶ್ಮಶಾನ ಕುರುಕ್ಷೇತ್ರ, ಶೂದ್ರತಪಸ್ವಿ, ತಪೋನಂದನ, ದ್ರೌಪದಿಯ ಶ್ರೀಮುಡಿ, ಸ್ವಾಮಿ ವಿವೇಕಾನಂದ, ಚಿತ್ರಾಂಗದಾ ಇವು ಕುವೆಂಪು ಅವರ ಕೆಲವು ಮುಖ್ಯ ಕೃತಿಗಳು. ವಿನೋಬಾ ಭಾವೆ ಅವರು ಕುವೆಂಪು ಅವರನ್ನು ಸಂತ ಕವಿಗಳೆಂದೂ ಆಧುನಿಕ ವಾಲ್ಮೀಕಿಗಳೆಂದೂ ಕರೆದಿದ್ದಾರೆ. ಇವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತವಾಗಿದೆ.

ಈ ಪದ್ಯದಲ್ಲಿ ಕವಿ ಉಳ್ಳವರು ಮತ್ತು ಇಲ್ಲದವರ ಮಧ್ಯೆ ಉಂಟಾಗಿರುವ ಅಸಮಾನತೆಯನ್ನು ಕುರಿತು ವಿವರಿಸುತ್ತಿದ್ದಾರೆ. ಈ ಅಸಮಾನತೆ ಎನ್ನುವುದು ಹೀಗೇ ಮುಂದುವರಿದರೆ ಬಡವ ಮತ್ತು ಶ್ರೀಮಂತರ ಮಧ್ಯೆ ಹೋರಾಟ ಶುರುವಾಗುತ್ತದೆ. ಕಲ್ಕಿಯು ಬಡವನ ಅವತಾರದಲ್ಲಿ ಬಂದು ಕ್ರಾಂತಿ ಕಹಳೆ ಊದುತ್ತಾನೆ. ಸಮಾಜ ಸರ್ವನಾಶದತ್ತ ಸಾಗುತ್ತದೆ. ಹಾಗಾಗಿ ಇವರಿಬ್ಬರ ಮಧ್ಯೆ ಇರುವ ಕಂದಕವನ್ನು ಆದಷ್ಟು ಬೇಗ ಸರಿಹೊಂದುವಂತೆ ಮಾಡಬೇಕು ಎಂಬುದು ಕವಿಯ ಆಶಯ. ಕವಿಯು ಅರೆನಿದ್ರೆ / ಸ್ವಪ್ನದಲ್ಲಿ ಸಮಾಜದ ಅವ್ಯವಸ್ಥೆ, ವರ್ಗ ತಾರತಮ್ಯವನ್ನು ಕುರಿತು ಯೋಚಿಸುತ್ತಾರೆ. ಹಸಿವು ಮತ್ತು ಕ್ರೌರ್ಯ ಎಂಬುದು ಮನುಷ್ಯನನ್ನು ಯಾವ ಕೆಲಸಕ್ಕಾದರೂ ಎಳೆಸುತ್ತದೆ. ಬಡವರ ಹಸಿವಿನ ಬಡಬಾಗ್ನಿ ಎನ್ನುವುದು ಇಡೀ ಸಮಾಜವನ್ನೇ ಸುಟ್ಟು ಬೂದಿಮಾಡುವ ಸಾಮರ್ಥ್ಯ ಹೊಂದಿದೆ. ಒಂದು ಕಡೆ ಗುಡಿಸಲುಗಳು ಮತ್ತೊಂದು ಕಡೆ ಶ್ರೀಮಂತರ ಸೌಧಗಳಿವೆ. ಬಡವರ ಹೊಟ್ಟೆ ಹತ್ತಿ ಉರಿದು ಶ್ರೀಮಂತರ ಸೌಧಗಳನ್ನು ಸುಟ್ಟು ಗಿರಿಶಿಖರಗಳನ್ನೂ ಬೂದಿ ಮಾಡುತ್ತದೆ. ಅದರಲ್ಲಿ ಮಕ್ಕಳು ಮರಿಗಳು, ಗರ್ಭಿಣಿಯರು, ಸ್ತ್ರೀಯರು, ಬಾಣಂತಿಯರುರೆ ಅಲ್ಲದೆ ನವವಧುಗಳು ಇದ್ದಾರೆ. ಇವರ ಹಾಹಾಕಾರ-ಚೀತ್ಕಾರಗಳನ್ನು ಕಣ್ಣಿಗೆ ಕಟ್ಟುವಂತೆ ಕವಿ ಹೇಳಿದ್ದಾರೆ. ಶೋಷಣೆ ಎನ್ನುವುದು ಅತಿಯಾದಾಗ ಶೋಷಿತ ತಿರುಗಿಬೀಳುತ್ತಾನೆ. ಬಡವನು ಕಲಿಯುಗದಲ್ಲಿ ಕಲ್ಕಿಯಾಗಿ ಬರುತ್ತಾನೆ ಎಂದು ವಿವರಿಸುತ್ತಲೇ ಸಮಾಜದ ಈ ದುರವಸ್ಥೆಗೆ ಅನ್ನದ ಪ್ರಶ್ನೆಯೇ ಕಾರಣವಾಗುತ್ತದೆ ಎಂದು ಹೇಳುತ್ತಾರೆ. ಕಲ್ಕಿಯ ಅವತಾರವನ್ನು ಬಹು ತೀವ್ರವಾಗಿ ವಿವರಿಸುವ ಕವಿ ಇಡೀ ಕವನವನ್ನು ಒಂದು ಕನಸಿನ ರೂಪದಲ್ಲಿ ಹೇಳುತ್ತಿದ್ದರೂ ಅದು ಸಮಾಜದ ಭವಿಷ್ಯದ ಮುಂದಿನ ಎಚ್ಚರಿಕೆಯೂ ಆಗಿದೆ.

ಜಲಅ

೨. ವಿಶ್ವಕುಟುಂಬಿಯ ಕಷ್ಟ

–ಪು.ತಿ. ನರಸಿಂಹಾಚಾರ್

ಬೇಸಗೆ ಮಧ್ಯಾಹ್ನ ತಾಪವುಮ್ಮಳಿಸಿತಾ–
ಕಾಶಕೆಲ್ಲಕು ರವಿಯೊಬ್ಬ ;
ಬೀಸುತ ಗೋದುವೆ ಹಿಟ್ಟನ್ನು ನಾಗಿ ಆ–
ಯಾಸದೊಳೆಳೆವಳು ಕಲ್ಲ.

ಬಿಸಿಯುಂಡ ಬವಣೆಗೆ ನೆಲದೊಳು ಹೊರಳಿ ನಿ–
ಟ್ಟುಸಿರೆಳೆಯುವಳೆನ್ನ ಅಜ್ಜಿ ;
ಅಸುವನ್ನು ನಮಗಾಗಿ ಮೀಸಲು ತೆಗೆದಿಟ್ಟ
ಕಸಿಹಣ್ಣು ಹಣ್ಣು ನಮ್ಮಜ್ಜಿ.

ಬೇಗೆಯ ಬವಣೆಗೆ ಜಡವಾಯ್ತು ಸೃಷ್ಟಿಯು
ಕೂಗಿಲ್ಲ–ಸದ್ದಿಲ್ಲ–ಬಿಡುವು.
ಬೀಗಲು ಭಯ, ಜೀವ ನೆಳಲಿಗೆ ಶರಣಾಯ್ತು–
ನಾಗಿಗನಾಥೆಗೆ ಬಿಡುವೆ?

"ವರುಷದ ಕೂಸೆದ್ದು ಅಳುತಿರಬಹುದೇನೋ?
ನರಸೀಗೆ ಹಸಿವೇನೊ, ಭಯವೋ
ಸರಿಹಗಲಚ್ಚೇರು ಬೀಸುವುದುಳಿದಿದೆ ;
ಇರುಳೀಗೆ ತುಸ ಹಿಟ್ಟೂ ಇಲ್ಲ"

ಸೊರ ಸೋರ ಬುಸು ಬೂಸು ಎಂಬೊಂದು ದನಿಯಂದು
ಗರಿಮೂಡಿದಜ್ಜಿಯ ಕನಸ
ಹರಿಯೆ, ತಾನೆಲ್ಲೆಡೆ ನಿರುಕಿಸಿ ಕಂಡಳು
ಸೊರಗುವ ಒಕ್ಕಲ ಹೆಣ್ಣ.

"ನಾಗಿ, ಇದೇನವ್ವ ಬಿಸಿಲೊಳು ಕಣ್ಣೀರು !
ಸಾಗಿದ ಗಂಡನ ನೆನಪೆ?
ಬೇಗುದಿಗೊಂಬೆಯ ಬದುಕಿನ ಬವಣೆಗೆ?
ಮಾಗಿಲ್ಲವೇ ಬಾಳ ಗಾಯ?

"ಬಿಕ್ಕಿ ನೀನಳುವಷ್ಟು ಕಷ್ಟ ಅದೇನವ್ವ?
ಮಕ್ಕಳ ಹಂಬಲೆ, ನಾಗಿ"
ಉಕ್ಕುವ ದುಃಖವ ನುಂಗುತ ನುಡಿದಳಾ
ಒಕ್ಕಲ ಹೆಣ್ಣು ಈ ತೆರದಿ :

"ಏನೇಳ್ಲಿ ನಮ್ಮವ್ವ, ಇರುವೋರು ಮೂವೋರು ;
ನಾನು ನಮ್ಮೆಣ್ಣು ಮೊಲೆಗೂಸು.
ಕಾಣಿರಾ, ಒಪ್ಪೊತ್ತು ದುಡಿಯದೆ ಕೂತರೂ
ಪ್ರಾಣಾವ ನೀಸೋದು ಕಷ್ಟ.

ಹುಲುಮನುಸಿಯ ಪಾಡು ಹಿಂಗಯ್ತೆ, ನಮ್ಮವ್ವ,
ಮಲೆದೇವ್ರ ಪಾಡ ಏನೇಳ್ಲಿ !
ಸುಲಭಾನೆ ಲೋಕಾದ ಸಂಸಾರ ನಡೆಸೋದು
ಅಳು ಬಂತು ನಮ್ಮಪ್ಪಗಾಗಿ"

"ಹುಚ್ಚಿ ನೀನೆಲ್ಲಾರೂ ಹೋಗೆ"ಂದು ನಮ್ಮಜ್ಜಿ
ಹುಚ್ಚಾಗಿ ನಕ್ಕಳು ಅಂದು.
ಹೆಚ್ಚುಂಟೆ ಒಕ್ಕಲ ಹೆಣ್ಣಿನ ಮರುಕಕೂ?
ಅಚ್ಚರಿಗೊಂಬೆ ನಾನಿಂದೂ !

****

ಕವಿ–ಕಾವ್ಯ ವಿಚಾರ

ಪು.ತಿ.ನ. ಇವರ ಪೂರ್ಣ ಹೆಸರು ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್. ಇವರು ೧೯೦೫ರಲ್ಲಿ ಮೇಲುಕೋಟೆಯಲ್ಲಿ ಜನಿಸಿದರು. ಹಣತೆ, ಮಾಂದಳಿರು, ಶಾರದಯಾಮಿನಿ, ಹಳೆಬೇರು ಹೊಸಚಿಗುರು, ರಸ ಸರಸ್ವತಿ, ಮಲೆದೇಗುಲ, ಇರುಳ ಮೆರುಗು, ಹಣತೆಯ ಹಾಡು, ಗಣೇಶದರ್ಶನ, ಹೃದಯ ವಿಹಾರಿ ಮುಂತಾದವು ಇವರ ಕವನ ಸಂಕಲನಗಳು. 'ಶ್ರೀಹರಿಚರಿತೆ' ಇವರು ರಚಿಸಿದ ಮಹಾಕಾವ್ಯ. ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ಹಂಸದಮಯಂತಿ ಮತ್ತು ಇತರ ರೂಪಕಗಳು ಮುಂತಾದ ಗೀತ ನಾಟಕಗಳನ್ನು ರಚಿಸಿದ್ದಾರೆ. ರಾಮಾಚಾರಿಯ ನೆನಪು, ರಥಸಪ್ತಮಿ, ಈಚಲುಮರದ ಕೆಳಗೆ, ಧೇನುಕ ಪುರಾಣ ಮುಂತಾದ ಪ್ರಬಂಧ ಸಂಕಲನಗಳನ್ನು ಹಾಗೂ ಕಾವ್ಯಕುತೂಹಲ, ರಸಪ್ರಜ್ಞೆ ಎಂಬ ವಿಮರ್ಶಾ ಸಂಕಲನಗಳನ್ನು ರಚಿಸಿದ್ದಾರೆ. ಇವರ ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ 'ಡಿ.ಲಿಟ್' ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧೯೮೧ರಲ್ಲಿ ಚಿಕ್ಕಮಗಳೂರಿನಲ್ಲಿ ನಡೆದ ಅಖಿಲ ಭಾರತ ೬೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು.

ಓದು ನಾಗರೀಕತೆಗಳೇನನ್ನೂ ಅರಿಯದ, ಪರರ ಮನೆಯಲ್ಲಿ ಕೆಲಸ ಮಾಡಿಕೊಂಡು ಬಾಳು ಸಾಗಿಸುವ ಒಬ್ಬ ಬಡ ಹೆಣ್ಣಿನ ಮನಸ್ಸು ಎಷ್ಟು ಅನುಕಂಪ ಭರಿತವಾದದ್ದು ಎನ್ನುವುದನ್ನು ಈ ಕವಿತೆ ಹೇಳುತ್ತದೆ. ತನ್ನ ಕಷ್ಟವನ್ನು ಬದಿಗಿಟ್ಟು ಭಗವಂತನ ಕಷ್ಟ ಎಷ್ಟು ದೊಡ್ಡದೆಂಬುದನ್ನು ತನ್ನ ತಿಳುವಳಿಕೆಯ ಮಿತಿಯಲ್ಲಿ ತನ್ನದೇ ರೀತಿಯಲ್ಲಿ ಕಲ್ಪಿಸಿಕೊಂಡು ಅದಕ್ಕಾಗಿ ಮರುಕಪಟ್ಟುಕೊಳ್ಳುವ ಹೆಣ್ಣಿನ ವ್ಯಕ್ತಿತ್ವದ ಮುಗ್ಧತೆ ಮತ್ತು ಔದಾರ್ಯ ಎರಡೂ ಇಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿವೆ. ಸುಖ ಎನ್ನುವುದು ಎಲ್ಲ ಜೀವಿಗಳಿಗೂ ಒಂದೇ ರೀತಿಯಲ್ಲಿ ದೊರೆಯುವಂಥದ್ದಲ್ಲ. 'ಲೋಕೋಭಿನ್ನರುಚಿಃ' ಎಂಬ ಪ್ರಸಿದ್ಧವಾದ ಹೇಳಿಕೆಯೇ ಇದೆ. ಒಂದೊಂದು ಜೀವಿಗೂ ಒಬ್ಬೊಬ್ಬ ವ್ಯಕ್ತಿಗೂ ಒಂದೊಂದು ರೀತಿಯ ಬಾಳುವೆ ಇರುತ್ತದೆ. ಹಾಗೆಯೇ ಕಷ್ಟಗಳೂ ಸಹ. ಇದರಿಂದ ಹೊರತಾದವರು ಯಾರೂ ಇಲ್ಲ. ಬಡವ, ಬಲ್ಲಿದ, ವಯಸ್ಕ, ವೃದ್ಧ, ಹೆಣ್ಣು, ಗಂಡು ಎನ್ನುವ ಭೇದ ಇದಕ್ಕಿಲ್ಲ. ಆದರೆ ಕಷ್ಟದ ಸ್ವರೂಪಗಳು ಭಿನ್ನವಾಗಿರುತ್ತವೆ ಅಷ್ಟೆ. ಪ್ರಸ್ತುತ ಕವನದಲ್ಲಿ ಬರುವ 'ನಾಗಿ' ಅನಾಥೆ, ವೃದ್ಧೆ, ಬದುಕಿನ ಏಳುಬೀಳುಗಳನ್ನು ಕಂಡವಳು. ಕಂಡವರ ಕಷ್ಟಕ್ಕೆ ಮರುಗಿದವಳು. ತನಗನ್ನಿಸಿದ್ದನ್ನು ಹೇಳಿ ಸಮಾಧಾನಗೊಳಿಸಿದವಳು. ಬೇಗುದಿಗೊಂಡ ಬದುಕಿನ ಬವಣೆಗೆ ಮಾಗುವಿಕೆಯೇ ಮದ್ದು ಎಂದು ತಿಳಿದವಳು. ಬಡತನದಲ್ಲಿ ಸಂಸಾರ ನಡೆಸುವುದೇ ಕಷ್ಟವಾಗಿದೆ. "ಒಪ್ಪೊತ್ತು ದುಡಿಯದೆ ಕೂತರೂ ಪ್ರಾಣಾವ ನೀಸೋದು ಕಷ್ಟ" ಎಂದಾಗ ನಾಗಿ ತನ್ನ ಅನುಭವದ ಹಿನ್ನೆಲೆಯಲ್ಲಿ "ಹುಲುಮನುಸಿಯ ಪಾಡು ಹಿಂಗಯ್ತೆ ನಮ್ಮವ್ವ ಮಲೆದೇವ್ರ ಪಾಡ ಏನೇಳ್ಲಿ ಸುಲಭಾನೆ ಲೋಕಾದ ಸಂಸಾರ ನಡೆಸೋದು" ಎಂದು ಹೇಳುತ್ತಲೇ ದೇವರಿಗೂ ಕಷ್ಟ ತಪ್ಪಿದ್ದಲ್ಲ, ಇನ್ನು ನಮ್ಮಂಥವರು ಅದರ ಯೋಚನೆ ಮಾಡಲೇಬಾರದೆಂದು ವಿವರಿಸುವ ರೀತಿ ಅದ್ಭುತವಾದದ್ದು.

ಖಿ೦ಆ

೩. ಗಂಡ – ಹೆಂಡತಿ

– ಕೆ.ಎಸ್. ನರಸಿಂಹಸ್ವಾಮಿ

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರೂಪಾಯಿ !
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನೂ ಒಬ್ಬ ಸಿಪಾಯಿ

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ಹುಣ್ಣಿಮೆ, ಹೋಳಿಗೆ, ದೀಪ
ಹೆಂಡತಿ ತೌರಿಗೆ ಹೊರಡುವೆನೆಂದರೆ
ನನಗಿನ್ನಿಲ್ಲದ ಕೋಪ

ಭರಣಿಯ ತೆರೆದರೆ ಅರಿಸಿನ ಕುಂಕುಮ–
ಅವಳದು ಈ ಸಂಪತ್ತು
ತುಟಿಗಳ ತೆರೆದರೆ ತುಳುಕುವುವಿಂಪಿನ
ಎರಡೋ ಮೂರೋ ಮುತ್ತು

ಯುದ್ಧದ ಬೇಗೆಯನರಿತವಳಲ್ಲ ;
ಮುತ್ತಿಗೆ ಪಡಿತರವಿಲ್ಲ ;
ತುರುಬಿಗೆ ಮಲ್ಲಿಗೆ ತಪ್ಪುವುದಿಲ್ಲ ;
ಹೂವಿಗೆ ಬಡತನವಿಲ್ಲ.

ಕೈಬಳೆ, ತಾಳಿ ಓಲೆ, ಮೂಗುತಿ–
ಬಡವರ ಮಗಳೀ ಬಾಲೆ
ತಿಂಗಳ ಚೆಲುವಿನ ಮಂಗಳ ಮೂರುತಿ
ಶೀಲದ ಧವಳ ಜ್ವಾಲೆ.

ಕೈಹಿಡಿದವಳು ಕೈ ಬಿಡದವಳು
ಮಾಡಿದಡಿಗೆಯೇ ಚೆಂದ.
ನಾಗರ ಕುಚ್ಚಿನ ನಿಡುಜಡೆಯವಳು,
ಈಕೆ ಬಂದುದೆಲ್ಲಿಂದ?

ಎಲ್ಲಿಯ ಹಾಡಿದು? ಏನಿದು ಗಡಿಬಿಡಿ?
ಏಕಿದು ಹಸುರು ಮತಾಪು?
ಒಲುಮೆಯು ತಂಗಿತು ಬಡತನ ಮನೆಯಲಿ
ಕಂಬಳಿಯೇ ಕಿನಕಾಪು!

ಕಬ್ಬಿಗನೂರಿಗೆ ದಾರಿಗಳಿದ್ದರೆ
ಕನಸೇ ಇರಬೇಕು !
ಅಲ್ಲಿಯ ದೊರೆತನ ಸಿಗುವಂತಿದ್ದರೆ,
ನನಗೇ ಸಿಗಬೇಕು !

ತಾರೆಯ ಬೆಳಕಿನ ತುಂಬಿದ ಸಭೆಯಲಿ
ಸುಂದರಿ ಮೆರೆದಾಳು !
ನನ್ನೊಡನವಳೂ ಸಿಂಹಾಸನದಲಿ
ಮೆಲ್ಲನೆ ನಕ್ಕಾಳು !

ಚಂದಿರನೂರಿನ ಅರಮನೆಯಿಂದ
ಬಂದವರೀಗೆಲ್ಲಿ?
ಬೆಳ್ಳಿಯ ಕೋಟೆಯ ಬಾಗಿಲಿನಿಂದ
ಬಂದವರೀಗೆಲ್ಲಿ?

ಹೆಂಡತಿಯೊಂದಿಗೆ ಬಡತನ, ದೊರೆತನ–
ಏನೂ ಭಯವಿಲ್ಲ
ಹೆಂಡತಿಯೊಲುಮೆಯ ಭಾಗ್ಯವನರಿಯದ
ಗಂಡಿಗೆ ಜಯವಿಲ್ಲ.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರೂಪಾಯಿ !
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನೂ ಒಬ್ಬ ಸಿಪಾಯಿ !

****

ಕವಿ–ಕಾವ್ಯ ವಿಚಾರ

ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಜನಿಸಿದ ಕೆ.ಎಸ್. ನರಸಿಂಹಸ್ವಾಮಿ ಕೆ.ಎಸ್.ನ. ಎಂದೇ ಪ್ರಸಿದ್ಧರು. ಮೈಸೂರು ಮಲ್ಲಿಗೆ, ಶಿಲಾಲತೆ, ತೆರೆದ ಬಾಗಿಲು,

ಮನೆಯಿಂದ ಮನೆಗೆ ಮುಂತಾದ ಸಂಕಲನಗಳಲ್ಲಿ ಎಲ್ಲ ರೀತಿಯ ಸಂವೇದನೆಗಳಿಂದ ಕೂಡಿದ ಕವನಗಳನ್ನು ರಚಿಸಿದ್ದಾರೆ. ಬುದ್ಧಿಗಿಂತ ಭಾವಕ್ಕೆ ಇವರ ಕಾವ್ಯದಲ್ಲಿ ಪ್ರಾಧಾನ್ಯತೆ ಹೆಚ್ಚು, ಮೈಸೂರು ಮಲ್ಲಿಗೆ, ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ, ಶಿಲಾಲತೆ, ತೆರೆದ ಬಾಗಿಲು, ಮನೆಯಿಂದ ಮನೆಗೆ ಮುಂತಾದವು ಇವರ ಕವನ ಸಂಕಲನಗಳು. ಮಾರಿಕಲ್ಲು, ಉಪವನ, ದಮಯಂತಿ ಇವು ಗದ್ಯ ಬರಹಗಳು. ನನ್ನ ಕನಸಿನ ಭಾರತ, ಮೀಡಿಯಾ, ಮಾಯಾಶಂಖ ಮತ್ತು ಇತರ ಕಥೆಗಳು ಇವು ಅನುವಾದಿತ ಕೃತಿಗಳು. ಇವರ 'ತೆರೆದ ಬಾಗಿಲು' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಕುಮಾರನ್ ಆಶಾನ್ ಪ್ರಶಸ್ತಿಗೂ ಇವರು ಭಾಜನರಾಗಿದ್ದಾರೆ. ಅತ್ಯುತ್ತಮ ಗೀತ ರಚನಕಾರರೆಂದು ಚಲನಚಿತ್ರ ರಾಷ್ಟ್ರೀಯ ಪ್ರಶಸ್ತಿ, ದುಂಡು ಮಲ್ಲಿಗೆ ಸಂಕಲನಕ್ಕೆ ಪಂಪ ಪ್ರಶಸ್ತಿ ಲಭಿಸಿದೆ. ಹಾಗೆಯೇ ಮಾಸ್ತಿ ಸಾಹಿತ್ಯ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು, ಗೌರವಗಳು ಇವರಿಗೆ ಲಭಿಸಿವೆ.

'ಗಂಡ–ಹೆಂಡತಿ' ಎನ್ನುವ ಈ ಕವಿತೆಯಲ್ಲಿ ಕವಿಯ ಕಲ್ಪನೆ ಭಾವವಿಲಾಸದಲ್ಲಿ ಗರಿಗೆದರಿ ಹಾರುತ್ತದೆ. ಹಾಗಾಗಿ ಬುದ್ಧಿಗಿಂತ ಭಾವಕ್ಕೆ ಇಲ್ಲಿ ಪ್ರಾಧಾನ್ಯವಿದೆ. ಈ ಪದ್ಯದಲ್ಲಿ ವ್ಯಕ್ತಗೊಂಡಿರುವ ಉತ್ಪ್ರೇಕ್ಷೆಗೆ ಸಹಜೋಕ್ತಿಯ ಧಾಟಿಯಿರುವುದರಿಂದ ನವಿರಾದ ಹಾಸ್ಯದ ಪರಿಣಾಮವೂ ಇದೆ. ಈ ನವಿರಾದ ಹಾಸ್ಯದ ಹಿಂದೆ ಕಡುಬಡತನದ ಸೂಚನೆಯೂ ಇದೆ. ಗೃಹಿಣಿಯೊಬ್ಬಳ ಸರಳತೆ, ಸೌಂದರ್ಯ ಹಾಗೂ ಮುಗ್ಧತೆಯನ್ನು ಕವಿ ಪರಿಭಾವಿಸುವ ರೀತಿ ಅನನ್ಯವಾದದ್ದು. ಬಡತನವಿದ್ದರೂ ಗಂಡ–ಹೆಂಡತಿಯ ದಾಂಪತ್ಯ ಸುಖ ಜೀವನದ ರಹಸ್ಯವಿರುವುದು ಅವರಿಬ್ಬರ ನಡುವಿನ ಮಧುರ ಬಾಂಧವ್ಯದಲ್ಲಿ ಮತ್ತು ಹೊಂದಾಣಿಕೆಯಲ್ಲಿಯೇ ಹೊರತು ಬಾಹ್ಯ ಸಂಪತ್ತಿನಿಂದಲ್ಲ ಎನ್ನುವುದನ್ನು ಕವಿ ಸೂಚ್ಯವಾಗಿ ಅಭಿವ್ಯಕ್ತಿಸಿದ್ದಾರೆ. ಈ ಪದ್ಯದಲ್ಲಿ ಬರುವ ಕೋಟಿ ರೂಪಾಯಿ, ಹೋಳಿಗೆ, ಸಂಪತ್ತು, ಮುತ್ತು, ಕಿನಕಾಪು, ಸಿಂಹಾಸನ, ಅರಮನೆ ಮತ್ತು ಭಾಗ್ಯ ಎನ್ನುವ ಪದಗಳು ಶ್ರೀಮಂತಿಕೆಯನ್ನು ಸೂಚಿಸುತ್ತವೆ. ಆದರೆ ಇವೆಲ್ಲವನ್ನು ಹೆಂಡತಿಯೇ ಪ್ರತಿನಿಧಿಸುತ್ತಾಳೆ ಎಂದಾಗ ಬಡತನದ ಅರಿವಾಗುತ್ತದೆ. ಬಡತನವನ್ನೇ ಸಿರಿತನವಾಗಿ ಕಾಣುವಲ್ಲಿರುವ ನೆಮ್ಮದಿ ಪ್ರೇಮದ ಮಹತ್ವವನ್ನು ಹೇಳುತ್ತದೆ. ಬೇಂದ್ರೆಯವರ 'ನಾನು ಬಡವಿ ಆತ ಬಡವ' ಪದ್ಯ ಕೂಡ ಇದೇ ರೀತಿಯ ವಸ್ತು ಉಳ್ಳದ್ದು.

ಖಿಣ

೪. ರತ್ನನ್ ಪರ್ಪಂಚ

–ಜಿ.ಪಿ. ರಾಜರತ್ನಂ

ಯೋಳ್ಕೊಳ್ಳಾಕ್ ಒಂದ್ ಊರು
ತಲೇಮ್ಯಾಗ್ ಒಂದ್ ಸೂರು
ಮಲಗಾಕೆ ಬೂಮ್ತಾಯಿ ಮಂಚ ;
ಕೈ ಯಿಡದೋಳ್ ಪುಟ್ನಂಜಿ
ನೆಗ್‌ನೆಗ್ತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ !

ಅಗಲೆಲ್ಲ ಬೆವರ್ ಅರ್ಸಿ
ತಂದದ್ರಲ್ಲ್ ಒಸಿ ಮುರ್ಸಿ
ಸಂಜೇಲಿ ವುಳಿ ಯೆಂಡ ಕೊಂಚ
ಯಿರ್ತ ಮೈ ಝುಂ ಅಂದ್ರೆ
ವಾಸ್ನೆ ಘಂ ಘಂ ಅಂದ್ರೆ
ತುಂಬೋಯ್ತು ರತ್ನನ್ ಪರ್ಪಂಚ !

ಯೇನೋ ಕುಸಿಯಾದಾಗ
ಮತ್ತ್ ಎಚ್ಚಿ ವೋದಾಗ
ಅಂಗೇನೆ ಪರಪಂಚದ್ ಅಂಚ
ದಾಟ್ಕಂಡಿ ಆರಾಡ್ತ
ಕನ್ನಡದಲ್ ಪದವಾಡ್ತ
ಯಿಗ್ಗೋದು ರತ್ನನ್ ಪರ್ಪಂಚ !

ದುಕ್ಕಿಲ್ಲ ದಾಲಿಲ್ಲ
ನಮಗ್ ಅದರಾಗ್ ಪಾಲಿಲ್ಲ !
ನಾವ್ ಕಂಡಿಲ್ಲ್ ಆ ತಂಚ ವಂಚ
ನಮ್ಮಸ್ಟಕ್ ನಾವಾಗಿ
ಇದ್ದಿದ್ರಲ್ಲ್ ಆಯಾಗಿ
ಬಾಳೋದು ರತ್ನನ್ ಪರ್ಪಂಚ !

'ಬಡತನ ಗಿಡತನ
ಯೇನಿದ್ರೇನ್? ನಡತೇನ
ಚೆಂದಾಗ್ ಇಟ್ಕೊಳ್ಳಾದೆ ಅಚ್ಚ !'
ಅಂದ್ಕೊಂಡಿ ಸುಕವಾಗಿ
ಕಸ್ಟಕ್ ನೆಗಮೊಕವಾಗಿ
ನೆಗಿಯೋದೆ ರತ್ನನ್ ಪರ್ಪಂಚ !

ದೇವ್ರ್ ಏನ್ರ ಕೊಡಲಣ್ಣ
ಕೊಡದಿದ್ರ ಬುಡಲಣ್ಣ
ನಾವೆಲ್ಲ ಔನೀಗೆ ಬಚ್ಚ !
ಔನ್ ಆಕಿದ್ ತಾಳ್ದಂಗೆ
ಕಣ್ ಮುಚ್ಕೊಂಡ್ ಯೋಳ್ದಂಗೆ
ಕುಣಿಯೋದೆ ರತ್ನನ್ ಪರ್ಪಂಚ !

****

ಕವಿ–ಕಾವ್ಯ ವಿಚಾರ

ಇವರು ಈಗಿನ ರಾಮನಗರ (ಆಗಿನ ಕ್ಲೋಸ್‌ಪೇಟೆ) ದಲ್ಲಿ ೧೯೦೪ರಲ್ಲಿ ಜನಿಸಿದರು. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಪ್ರಾಕೃತ, ಹಿಂದಿ, ತೆಲುಗು ಭಾಷೆಗಳಲ್ಲಿ ವಿದ್ವತ್ ಸಂಪಾದಿಸಿಕೊಂಡಿದ್ದ ರಾಜರತ್ನಂ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃಷಿಮಾಡಿದ್ದಾರೆ. ರತ್ನನ ಪದಗಳು, ನಾಗನ ಪದಗಳು, ಶಾಂತಿ, ನೂರು ಪುಟಾಣಿ, ಪುರುಷ ಸರಸ್ವತಿ, ಜಪಾನಿನ ಹಿಮಗಿರಿ ಮುಂತಾದ ಕವನಸಂಕಲನಗಳನ್ನೂ ಗಂಡುಗೊಡಲಿ, ನರಕದ ನ್ಯಾಯ, ಕಂಬ್ಳಿ ಸೇವೆ, ಸಂಭವಾಮಿ ಯುಗೇಯುಗೇ, ಶಕಾರನ ಸಾರೋಟು, ಗೊಮ್ಮಟ ಶಿಲ್ಪ, ಸೋಲಿಗರ ಸಿದ್ಧ, ಹೆಂಡದ ಹಣ, ವೀರ ಮಾರ್ತಾಂಡ, ಚಾವುಂಡರಾಯ ಮುಂತಾದ ನಾಟಕಗಳನ್ನೂ ರಚಿಸಿದ್ದಾರೆ. ಮಕ್ಕಳಿಗಾಗಿ ತುತ್ತೂರಿ, ಕಡಲೆಪುರಿ, ಚುಟುಕು, ಕೆನೆಹಾಲು, ಕಲ್ಲುಸಕ್ಕರೆ ಎಂಬ ಕವನ ಸಂಕಲನಗಳನ್ನೂ ಗುಲಗಂಜಿ, ಕೋಳಿಕಳ್ಳ, ಗೂಳೂರು ಗಾಯಕರು, ಮುಂತಾದ ಗದ್ಯಕೃತಿಗಳನ್ನೂ ರಚಿಸಿದ್ದಾರೆ. ಧ್ವಜವಂದನೆ ನಾಟಕ ಬರೆದಿದ್ದಾರೆ. ಹಲವಾರು ವಿಮರ್ಶಾ ಕೃತಿಗಳನ್ನು ಬರೆದಿದ್ದಾರೆ. ಬೌದ್ಧ ಮತ್ತು ಜೈನ ಧರ್ಮಗಳಲ್ಲಿ ಆಸಕ್ತಿ ಇದ್ದ ರಾಜರತ್ನಂ ಚೀನಾ ದೇಶದ ಬೌದ್ಧಯಾತ್ರಿಕರು, ಪುಷ್ಪಾಂಜಲಿ, ಬುದ್ಧನ ಕತೆಗಳು, ಜಾತಕ ಕಥೆಗಳು, ಧಮ್ಮಪದ, ಮಹಾವೀರನ ಮಾತುಕತೆ, ಶ್ರೀಪಾರ್ಶ್ವನಾಥ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಗೆಳೆಯರೂ ಶಿಷ್ಯರೂ ಸೇರಿ 'ರಾಜಮಾರ್ಗ' ಎಂಬ ಅಭಿನಂದನಾ ಗ್ರಂಥವನ್ನು ಇವರಿಗೆ ಅರ್ಪಿಸಿದ್ದಾರೆ.

ಇವರು ೧೯೭೭ರಲ್ಲಿ ನವದೆಹಲಿಯಲ್ಲಿ ನಡೆದ ೫೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಸಾಮಾನ್ಯ ಮನುಷ್ಯನೊಬ್ಬ ತನ್ನ ನೂರೆಂಟು ಕಷ್ಟ, ಮಿತಿಗಳ ನಡುವೆಯೇ ಹೇಗೆ ತೃಪ್ತಿಯಿಂದ ಬಾಳಲು ಸಾಧ್ಯ ಎನ್ನುವುದನ್ನು ರತ್ನ ವಿನೋದದ ದನಿಯಲ್ಲಿ ಆದರೆ ತುಂಬಾ ಪ್ರಾಮಾಣಿಕವಾಗಿ, ಸಮರ್ಥವಾಗಿ ಪ್ರಸ್ತುತ ಪದ್ಯದಲ್ಲಿ ಹೇಳಿಕೊಂಡಿದ್ದಾನೆ. ರಾಜರತ್ನಂ ಅವರು ಹೆಂಡ ಹೆಂಡ್ತಿ ಕನ್ನಡ ಪದಗಳ ಬಗೆಗೆ ಪದ್ಯ ಬರೆದು ಭಾಷೆಯ ಬಗೆಗಿನ ಪ್ರೀತಿಯನ್ನು ಹೆಚ್ಚಿಸಿದ, ಆ ಮೂಲಕ ಆಡುನುಡಿಯ ಸೊಗಡನ್ನು ಕಾವ್ಯಕ್ಕೆ ತುಂಬಿ ಹಾಡಿ ಶಾಶ್ವತವಾಗಿ ಮನದಲ್ಲುಳಿಯುವಂತೆ ಮಾಡಿದ ಅಪರೂಪದ ಕವಿ. ಕಾವ್ಯದೊಳಗೆ ಆಡುಭಾಷೆಯನ್ನು ಬಳಸಿ ಹೊಸಜಗತ್ತನ್ನು ಸೃಷ್ಟಿಸಿ ಆ ಜಗತ್ತಿನಲ್ಲಿ ರತ್ನ, ನಂಜಿ, ಮುನಿಯನ ಪಾತ್ರಗಳನ್ನು ಅದ್ಭುತವಾಗಿ ನಿತ್ಯನೂತನವಾಗಿ ನಿರ್ಮಿಸಿರುವುದು ಅವರ ಕಾವ್ಯದ ವಿಶೇಷ. ಯೆಂಡ್ಕುಡ್ಕ ರತ್ನನ ಪಾತ್ರವನ್ನು ಸೃಷ್ಟಿಸಿ ಕುಡಿತ ಮತ್ತು ಆನಂತರದ ಆಯಾಮವನ್ನು ರಾಜರತ್ನಂ ತರಹ ಇನ್ನೊಬ್ಬರು ಕಟ್ಟಿಕೊಡಲು ಸಾಧ್ಯವಿಲ್ಲ. ಅಮಲಿನ ವಚನಗಳಿಂದ ಪ್ರಭಾವಿತರಾದ ಕವಿಗಳು ರತ್ನನ ಪ್ರಪಂಚವನ್ನು ಸೃಷ್ಟಿಸಿದ್ದಾರೆ. ಮನುಷ್ಯ ದುರಾಸೆಯ ಬೆನ್ನು ಹತ್ತದೆ, ಸೋಮಾರಿಯಾಗದೆ ಅಚ್ಚುಕಟ್ಟಾದ ಬದುಕನ್ನು ನಡೆಸಬೇಕಾದರೆ ಸಮಾಜದೊಂದಿಗೆ, ಕುಟುಂಬದೊಂದಿಗೆ ಅವನಿಗಿರಬೇಕಾದ ಬದ್ಧತೆ ಮುಖ್ಯ. ಹಾಗೇ ತಾನು ವಾಸಿಸುವ ಭೂಮಿ, ಭಾಷೆಯೂ ಅಷ್ಟೇ ಮುಖ್ಯ. ಆ ವರ್ತುಲದೊಳಗೆ ಅವನ ಪ್ರಪಂಚವಿರುತ್ತದೆ. ಈ ಕವನದ ಭಾಷಾ ಶೈಲಿ ಅದ್ಭುತವಾದದ್ದು. ಸಾಮಾನ್ಯ ಮನುಷ್ಯನ ಆಡುಭಾಷೆಯನ್ನೇ ಕವನದಲ್ಲಿ ಬಳಸಿ ಅದಕ್ಕೊಂದು ಹೊಸ ಆಯಾಮವನ್ನೇ ಸೃಷ್ಟಿ ಮಾಡಿದ್ದಾರೆ.

೫. ಸುಧೀರ

– ಗಂಗಾಧರ ಚಿತ್ತಾಲ

ಮಣ್ಣಾಗಿದ್ದಾನೆ ಹುಡುಗ !

ಕಣ್ಣಮುಂದೇ ಬೆಳೆದು ಕಣ್ತುಂಬಿ ನಿಂತವನು
ಎಲ್ಲಿಲ್ಲದಂಥ ಪ್ರಾಣೋಲ್ಲಾಸ ತಂದವನು
ಹೆದೆಗೇರಿ ಬಿಗಿಗೊಂಡ ಕೋದಂಡದಂಥವನು
ಈಗ ಮಣ್ಣಾಗಿದ್ದಾನೆ.

ಈ ಪಿಳ್ಳೆಯ ಲಕ್ಷ್ಯವೆಲ್ಲ ಅಂತರಿಕ್ಷಕ್ಕೆ ಎಂದು ಕಂಡಾಗಲೇ
        ಮನ ಅಳುಕಿತ್ತು

ಇವನ ಅಂಗಾಂಗದಲ್ಲಿ ಮಾತ್ರ
ಮುಗಿಲ ನೀಲಿಯ ಕುಡಿದು ಮೋಡಗಳಲೊಡನಾಡಿ ಕುಶಲ
ಕೇಳುವ ಚಪಲ ತುಳುಕಿತ್ತು.
ನೆಲಕ್ಕೇ ಕಾಲು ತಾಕದ ಬೀಸುನಡೆಯಲ್ಲಿ
ಗಾಳಿ ಬೆನ್ನೇರಿ ಬಾನಿಗೆ ಲಗ್ಗೆ ಇಡುವವನ ಸೆಳವಿತ್ತು

ಒಂದು ಮುಂಜಾನೆ ಕಣ್ಮುಚ್ಚಿ ನೋಡುತ್ತೇವೆ
        ದೋರ್ದಂಡ ಉದ್ದಂಡನಾಗಿ ನಿಂತಿದ್ದಾನೆ
ಸನ್ನದ್ಧ !

ಮಾತು ಮಾತಿಗೆ ಉಕ್ಕು, ಉತ್ತುಂಗ ಉತ್ಸಾಹ
ಕ್ಷಣ ನಿಲ್ಲುಗೊಡದ ಖುಷಿ, ನೆರಳನರಿಯದ ಭಾವ.

ಒಮ್ಮೊಮ್ಮೆ ಅನಿಸಿತ್ತು
ಇವನ ಧಮನಿಗಳಲ್ಲಿ ಸುರಿವ ನೆತ್ತರ ವೇಗ ಈ ನೆಲದ್ದೇ ಅಲ್ಲ,
ಈತ ನಮ್ಮಂತಿಲ್ಲಿ ಬವಣೆ ಬಳಲಿಕೆಯ ತಲೆ ಭಾರ
        ಸಾವರಿಸುತ್ತ ಕಾಲೆಳೆದು ದಿನ ನೂಕಿ ತೊಳಲಲು ಬಂದವನಲ್ಲ,

ಆದರೂ ಎಣಿಸಿರಲಿಲ್ಲ
ಈ ಗಗನವೇಧಿ
ಇಷ್ಟೊಂದು ತ್ವರೆಯ ಆತುರದಿಂದ ಬಂದವನು

ಹತ್ತೇ ದಿನ ತಿತ್ತಿರಿ ಕುಣಿದು

ಅಲ್ಲಲ್ಲಿ ನುಗ್ಗಿ ಹಿಗ್ಗಿ ರಂಗುರಂಗಿನ ನೂರು ಗುಳ್ಳೆ ಊದಿ
ಹಾರಿಸಿ
ತುಟಿಮೇಲೆ ಜೇನುರುಚಿ ತೊಟಕಿಕ್ಕುವಾಗಲೇ ನೆಕ್ಕಿ ಚಪ್ಪರಿಸಿ
ಹಗಲಿಡೀ ಮುಂಜಾವಿನಂತೆ ಕಳೆದು
ಬಿಸಿಲೇರಿ ಬೈಗಿಳಿವ ಮೊದಲಿಗೇ ಹೊರಡುವನು,

ಗರಿಬಿಚ್ಚಿ ನಿಗುರಿ ಗಗನಕ್ಕುಗಿದ ಈ ಬಾಣ
ಗಾಳಿ ಪಾಲಾಗಿ ನಾಲ್ಕಾರೆ ಪುಕ್ಕ ಮಾತ್ರ ನೆಲಕ್ಕಿಳಿಸಿ
ತೆರಳುವನು.
ಈಗ ಉಳಿದದ್ದೇನು?

ನೆನೆದಾಗಲೆಲ್ಲ ಮನಸಲ್ಲಿ ಕಲಕುವ ಅವನ
ಮರೆಯಲಾಗದ ಸದಾ ನಗುಮುಡಿದ ಮುಖಬಿಂಬ
ಕಣ್ಣು ತುಂಬುವ ಅವನ ದೇಹದ್ಯುತಿಯ ಖಂಬ
ಮಾಯಲಾರದ ನೋವು, ತವಿಸಬಾರದ ಕೊರಗು, ಹಳಹಳಿ.
ಈ ಆಕಾಶ ಪರವಶ ಜೀವ ಬಂತೆಲ್ಲಿಂದ ಹೋಯಿತೆಲ್ಲಿ?

****

ಕವಿ–ಕಾವ್ಯ ವಿಚಾರ

ಗಂಗಾಧರ ಚಿತ್ತಾಲರು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಹತ್ತಿರದ ಹನೇಹಳ್ಳಿ ಎಂಬ ಕುಗ್ರಾಮದಲ್ಲಿ ಜನಿಸಿದವರು. 'ಮನುಕುಲದ ಹಾಡು' ಕವನ ಸಂಕಲನದ ಮೂಲಕ ಕನ್ನಡ ಕಾವ್ಯ ಕ್ಷಿತಿಜವನ್ನು ಬೆಳಗಿದ ಕವಿ. ಅಪರೂಪಕ್ಕೆ ಕವಿತೆಗಳನ್ನು ಬರೆದರೂ ಸಾರ್ಥಕವಾದ ರಚನೆಗಳನ್ನು ನೀಡಿದ ಇವರ ಕಾವ್ಯದ ತುಂಬಾ ಉತ್ತರ ಕನ್ನಡದ ಗ್ರಾಮೀಣ ಪರಿಸರದ ಅನುಭವನಗಳನ್ನು ನಿಚ್ಚಳವಾಗಿ ವ್ಯಕ್ತಪಡಿಸಿದ್ದಾರೆ. ಮನುಷ್ಯ–ಮನುಷ್ಯರ ನಡುವಿನ ಸಂಬಂಧಗಳಿಗೆ ಒತ್ತುಕೊಟ್ಟು ಭಾವತೀವ್ರತೆಯಿಂದ ಬರೆಯುವ ಕವಿ. ಮನುಕುಲದ ಹಾಡು, ಸಂಪರ್ಕ, ಹರಿವ ನೀರಿದು, ಕಾಲದ ಕರೆ ಇವರ ಕವನ ಸಂಕಲನಗಳು. ಸಹಜತೆ ಸಂಕೇತಗಳ ಸಮರ್ಥ ಬಳಕೆ, ಅಭಿಜಾತ ಶೈಲಿಯನ್ನು ಆಧುನಿಕತೆಗೆ ಕಸಿಮಾಡಿಕೊಂಡ ಭಾಷೆ ಇವರ ಕಾವ್ಯಸಾಧನೆ.

ಇದೊಂದು ಶೋಕಗೀತೆ. ಈ ಕವನದಲ್ಲಿ ಕವಿ ಅಗಲಿದ ತರುಣನೊಬ್ಬನ ವ್ಯಕ್ತಿತ್ವವನ್ನು ನೆನಪಿಸಿಕೊಂಡು ಅದರ ವಿವಿಧ ಮಜಲುಗಳನ್ನು ವಿಭಿನ್ನ ನೆಲೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ನಿಕಟವರ್ತಿಯೊಬ್ಬನನ್ನು ಕಳೆದುಕೊಂಡ ನೋವಿನ ಸಾಂದ್ರತೆ ಇಲ್ಲಿ ಹೆಪ್ಪುಗಟ್ಟಿದೆ. ತನ್ನ ಕಣ್ಣಮುಂದೆ ಬೆಳೆದ ವ್ಯಕ್ತಿ ಹಟಾತ್ತನೆ ಸತ್ತಿದ್ದಾನೆಂದರೆ ನಂಬುವುದು ಕಷ್ಟ. ಆದರೂ ಅವನ ವ್ಯಕ್ತಿತ್ವವನ್ನು ಹತ್ತಿರದಿಂದ ಕಂಡವರು, ಅವನ ಶರವೇಗದ ಬೆಳವಣಿಗೆಯನ್ನು ಗಮನಿಸಿದವರಿಗೆ ಹೀಗೆ ಅನಿಸುವುದುಂಟು. "ಇವನ ಲಕ್ಷ್ಯವೆಲ್ಲ ಅಂತರಿಕ್ಷಕ್ಕೆ, ಗಾಳಿ ಬೆನ್ನೇರಿ ಬಾನಿಗೆ ಲಗ್ಗೆ ಇಡುವ ಅವನ ಹುಮ್ಮಸ್ಸು, ಉತ್ಸಾಹ, ಆತುರ ನೋಡಿ ಒಮ್ಮೊಮ್ಮೆ ಇವನ ಧಮನಿಗಳಲ್ಲಿ ಸುರಿವ ನೆತ್ತರ ವೇಗ ಈ ನೆಲದ್ದೇ ಅಲ್ಲ" ಅನ್ನಿಸಿದ್ದೂ ಉಂಟು. ಸಂಬಂಧಗಳ ಸೆಳೆತ ಅನುಕಂಪ ಏನಿದ್ದರೂ ಜೀವ ಅಶಾಶ್ವತವಾದದ್ದು, ನೀರ ಮೇಲಣಗುಳ್ಳೆಯಂಥದ್ದು. ಸಾವು ಯಾವಾಗ, ಯಾರಿಗೆ, ಹೇಗೆ ಬರುತ್ತದೆ ಎನ್ನುವುದು ನಿಗೂಢ. ಸತ್ತ ನಂತರ ಉಳಿಯುವುದೇನು? ಎನ್ನುವುದೇ ಇಲ್ಲಿನ ತರ್ಕ. ಹುಟ್ಟು ಸಾವುಗಳ ನಡುವೆ ಬದುಕಿನ ಕ್ಷಣಗಳು ಬಹಳ ಮುಖ್ಯ. ಸಾವಿನ ನಂತರವೂ ಉಳಿವುದೆಂದರೆ ನಮ್ಮ ಸನ್ನಡತೆ ಹಾಗೂ ಉತ್ತಮ ಕಾರ್ಯಗಳು ಎನ್ನುವುದನ್ನು ಕವಿತೆ ಗರ್ಭೀಕರಿಸಿಕೊಂಡಿದೆ. ಡಾ. ಚಂದ್ರಶೇಖರ ಕಂಬಾರರು ಡಿ.ಆರ್. ನಾಗರಾಜ್ ಅವರನ್ನು ಕುರಿತು ಬರೆದ 'ಡಿ.ಆರ್.' ಪದ್ಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

೬. ಭೀಮಾಲಾಪ

– ಜಿ.ಎಸ್. ಶಿವರುದ್ರಪ್ಪ

ಸೀರೆ ಉಟ್ಟು, ಬಳೆ ತೊಟ್ಟು, ಕಾಲಿಗೆ
ಗೆಜ್ಜೆ ಕಟ್ಟಿದ್ದಾನೆ ಒಬ್ಬ ;
ಇನ್ನೊಬ್ಬ ಕಾವಿ ಉಟ್ಟು ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ, ಕುದುರೆಲಾಯದಲ್ಲಿ
ಮತ್ತೊಬ್ಬ.

ಇದ್ದಾಳೆ ಇವಳು ಅವರಿವರ ತಲೆಯ
ಹೇನು ಹೆಕ್ಕುತ್ತಾ
ಆಗಾಗ ನಮ್ಮನ್ನೂ ಕುಕ್ಕುತ್ತಾ.

ನಾನೂ ಇದ್ದೇನೆ–ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ.

ಕಣ್ಣೆದುರು ತೇಲಿಬರುತ್ತವೆ :
ಕಂಡದ್ದು, ಕಲಿತದ್ದು ; ಬೆಂಕಿಗೆ ಬಿದ್ದು ಪಾರಾದದ್ದು ;
ಪಗಡೆದಾಳದ ಜೊತೆಗೆ ಉರುಳಿ ಬಿದ್ದದ್ದು ; ಬಿಚ್ಚಿದ
ಜಡೆಯ ನೆರಳಿನ ಕೆಳಗೆ ಭುಸುಗುಟ್ಟಿ ನರಳಿದ್ದು ;
ಕಾಡುಪಾಲಾಗಿ ಅಲೆದದ್ದು.

ನಿಟ್ಟುಸಿರಲ್ಲಿ ಪಟ ಬಿಚ್ಚಿ ತೇಲುತ್ತವೆ ಊರುಗಳು ;
ಮಹಾರಣ್ಯಗಳು, ಋಷಿಗಳು, ರಾಕ್ಷಸರು ;
ಬೆಳಗು ಬೈಗುಗಳು, ಇನ್ನೂ ಏನೇನೋ
ಸುರುಳಿ ಬಿಚ್ಚುತ್ತವೆ
ಜೀವ ಹಿಂಡುತ್ತವೆ.

ಅಲ್ಲಿ ಊರಾಚೆ ಮಸಣದಲ್ಲಿ
ಇದ್ದ ಪೌರುಷವನ್ನು ದುಂಡಗೆ ಸುತ್ತಿ
ಹೆಣವಾಗಿ ಮಲಗಿಸಿದ್ದೇವೆ, ಮರದ

ಕೊಂಬೆಯ ಮೇಲೆ.
ನೋಡುತ್ತಿದ್ದೇನೆ, ಸುತ್ತಲೂ ಎಂತೆಂಥವೋ
ವಿಜೃಂಭಿಸಿ ಮೀಸೆ ತಿರುವುತ್ತವೆ.
ಏರಬಾರದ ಕಡೆಗೆ ಏರಿ, ಇಳಿಯಬಾರದ ಕಡೆಗೆ
ಇಳಿದು ಕೆಡಿಸಿ ಹೊಲಸೆಬ್ಬಿಸಿವೆ.

ಗೆರೆದಾಟಬಾರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಕಾಯುತ್ತಿದ್ದೇನೆ.

****

ಕವಿ–ಕಾವ್ಯ ವಿಚಾರ

ಶಿವರುದ್ರಪ್ಪನವರು ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ೧೯೨೬ರಲ್ಲಿ ಜನಿಸಿದರು. ಸಾಮಗಾನ, ಚೆಲುವು, ದೇವಶಿಲ್ಪ, ಕಾರ್ತೀಕ, ದೀಪದಹೆಜ್ಜೆ, ಗೋಡೆ, ಪ್ರೀತಿ ಇಲ್ಲದ ಮೇಲೆ, ತೆರೆದ ದಾರಿ, ತೀರ್ಥವಾಣಿ, ಕಾಡಿನ ಕತ್ತಲಲ್ಲಿ ಮುಂತಾದವು ಇವರ ಕವನ ಸಂಕಲನಗಳು. ಇವರ ಕಾವ್ಯಾರ್ಥ ಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ವಿಮರ್ಶೆಯ ಪೂರ್ವಪಶ್ಚಿಮ, ಗತಿಬಿಂಬ, ಅನುರಣನ, ಪರಿಶೀಲನೆ, ಮಹಾಕಾವ್ಯ ಸ್ವರೂಪ ಇವು ಇವರ ಕೆಲವು ವಿಮರ್ಶಾ ಕೃತಿಗಳು. ಕನ್ನಡ ಕವಿಗಳ ಕಾವ್ಯಕಲ್ಪನೆ, ಹೊಸಗನ್ನಡ ಕವಿಗಳ ಕಾವ್ಯ ಚಿಂತನೆ ಇವು ಕಾವ್ಯತತ್ವ ಪರಿಶೀಲನೆಯ ಕೃತಿಗಳು. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಇಂಗ್ಲೆಂಡಿನಲ್ಲಿ ಚಾತುರ್ಮಾಸ, ಅಮೆರಿಕದಲ್ಲಿ ಕನ್ನಡಿಗ, ಗಂಗೆಯ ಶಿಖರಗಳಲ್ಲಿ ಇವು ಪ್ರವಾಸ ಕಥನಗಳು. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ಬಂದಿದೆ. ಇವರ ಒಟ್ಟು ಸಾಹಿತ್ಯಕ್ಕೆ 'ಪಂಪ' ಪ್ರಶಸ್ತಿ ಲಭಿಸಿದೆ. ೧೯೯೨ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ೨೦೦೬ರಲ್ಲಿ ಕರ್ನಾಟಕ ಸರ್ಕಾರದಿಂದ ರಾಷ್ಟ್ರಕವಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪಾಂಡವರು ಕೌರವರ ಮೋಸದ ಪಗಡೆಯಾಟದಲ್ಲಿ ಸೋತು ವನವಾಸಕ್ಕೆ ಹೋಗುತ್ತಾರೆ. ವನವಾಸವೂ ಮುಗಿದು ಒಂದು ವರ್ಷದ ಅಜ್ಞಾತವಾಸಕ್ಕಾಗಿ ವಿರಾಟರಾಯನ ಅರಮನೆಯಲ್ಲಿ ಮಾರುವೇಷದಲ್ಲಿ ಇರುವ ಪ್ರಸಂಗ ಬರುತ್ತದೆ. ಪಾಂಡವರು ಒಬ್ಬೊಬ್ಬರೂ ಅತಿ ಪರಾಕ್ರಮಿಗಳಾದರೂ ಅಸಹಾಯಕರಾಗಿ ಕಾಲಯಾಪನೆ ಮಾಡುವ ಸಂದರ್ಭವನ್ನು ಈ ಕವಿತೆ ಅದ್ಭುತವಾಗಿ ಕಟ್ಟಿಕೊಡುತ್ತದೆ.

ಜೀವನದಲ್ಲಿ ಎದುರಾಗುವ ಸಂದರ್ಭ, ಸನ್ನಿವೇಶ, ಆಕಸ್ಮಿಕ, ಅನಿವಾರ್ಯಗಳು ಎಂಥವರನ್ನೂ ಆಲಾಪಿಸುವಂತೆ ಮಾಡುತ್ತವೆ. ಆದರೆ ಆ ಆಲಾಪನೆ ಶಾಶ್ವತವಲ್ಲ, ಕಾಲ ಎಲ್ಲವನ್ನೂ ಗೆಲ್ಲುತ್ತದೆ ಎಂಬ ಆಶಯವನ್ನು ಈ ಕವಿತೆ ಹೇಳುತ್ತದೆ. ವಿರಾಟನ ಆರಮನೆಯ ಅಡಿಗೆ ಕೋಣೆಯಲ್ಲಿ "ಉರಿವ ಸೌದೆಗಳ ಜೊತೆಗೆ ಪಾತ್ರೆಗಳಲ್ಲಿ ಕೊತಕೊತ ಕುದಿದು ಹಳೆಯ ನೆನಪುಗಳನ್ನು ರುಬ್ಬುತ್ತಾ" ಭೀಮ ಕೂತಿದ್ದಾನೆ. ಅವನೆದುರಿಗೆ ನೆನಪುಗಳು ತೇಲಿಬರುತ್ತವೆ. ಕಂಡದ್ದು, ಕಲಿತದ್ದು, ಬೆಂಕಿಗೆ ಬಿದ್ದು ಪಾರಾದದ್ದು, ಪಗಡೆದಾಳದ ಜೊತೆಗೆ ಉರುಳಿಬಿದ್ದದ್ದು, ಬಿಚ್ಚಿದ ಜಡೆಯ ನೆರಳಿನ ಕೆಳಗೆ ಭುಸುಗುಟ್ಟಿ ನರಳಿದ್ದು ಇತ್ಯಾದಿ ಇತ್ಯಾದಿ. ಹಾಗೆಯೇ ಕಾಡಿನಲ್ಲಿ ಅಲೆದದ್ದು, ಆ ಮಹಾರಣ್ಯಗಳು, ಋಷಿಗಳು, ರಾಕ್ಷಸರು ಇನ್ನೂ ಏನೇನೋ ಸುರುಳಿ ಬಿಚ್ಚಿಕೊಳ್ಳುತ್ತವೆ. ಎಲ್ಲವನ್ನು ನೊಣೆದು ಕುಟ್ಟುವ ಸಾಮರ್ಥ್ಯವಿದ್ದರೂ ಅವನ ಅಸಹಾಯಕತೆಯನ್ನು ಕಂಡು ಸುತ್ತಲೂ ಎಂತೆಂಥವೋ ವಿಜೃಂಭಿಸಿ ಮೀಸೆ ತಿರುವುತ್ತವೆ. ಗೆರೆ ದಾಟಲಾರದೆ ಒಳ್ಳೆಯ ಕಾಲಕ್ಕಾಗಿ ಭೀಮ ಕಾದು ಕುಳಿತಿದ್ದಾನೆ. ಊರಾಚೆ ಮಸಣದಲ್ಲಿನ ಬನ್ನೀಮರದ ಮೇಲೆ ತನ್ನ ಪೌರುಷವನ್ನೆಲ್ಲಾ ಸುತ್ತಿಟ್ಟು ಹೆಣವಾಗಿ ಮಲಗಿಸಿರುವುದನ್ನು ನೆನೆದು ಮರುಗುತ್ತಿದ್ದಾನೆ. ಈ ಪದ್ಯ ಒಂದು ರೀತಿ ರನ್ನನ ಸಿಂಹಾವಲೋಕನ ಕ್ರಮದ ಶೈಲಿಯಲ್ಲಿದೆ. ಸಂದರ್ಭಗಳು ಅಥವಾ ಸನ್ನಿವೇಶಗಳು ಎಂಥ ಶಕ್ತಿಯನ್ನೂ ಸಹ ದುರ್ಬಲಗೊಳಿಸಬಲ್ಲವು ಎನ್ನುವುದನ್ನು ಈ ಕವಿತೆ ಧ್ವನಿಸುತ್ತದೆ.

೭. ಮಾಸ್ತಿ

– ಕೆ.ಎಸ್. ನಿಸಾರ್ ಅಹಮದ್

–೧–

ಸದಾ ಇವರು ಹೀಗೆಯೇ–
ಇಲ್ಲೆ, ಗಾಂಧಿಬಜಾರಿನ ಹಿರಿಚೌಕದೆದುರಲ್ಲಿ
ಸಿಗರೇಟು ಸೇದುತ್ತಲೊ ಪತ್ರಿಕೆಯನೋದುತ್ತಲೊ
ಹರಟುತ್ತಲೊ ಇದ್ದಾಗ, ಎದುರಾಗುವರು ಇದ್ದಕ್ಕಿದ್ದಂತೆ
–ನಿರ್ದಿಷ್ಟ ಸಮಯದಂತೆ.

ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ
ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು
ಸಾಂತ್ವನವ ನುಡಿದಿರುವ ಹಳೆನಮೂನೆಯ ಚಶ್ಮ ;
ಅದೇ ಕೊಡೆಯ ಗದೆ :
ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿಕುನ್ನಿಯ, ಪೋಲಿದನಗಳನ್ನ,
ಎದುರಿಸಲು ಮಳೆ ಬಿಸಿಲ ದಾಳಿಯನ್ನ,
ಸಾಲುಮರಗಳ ಹಕ್ಕಿ ಹಿಕ್ಕೆಯನ್ನ.

ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬೀಸಿನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ ; ಹಗುರಕ್ಕೆ ಸಲ್ಲುತ್ತದೆ.

–೨–

ಗವೀಪುರದಿಂದ ಗಾಂಧಿಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು
ಅಲ್ಲಿ ಕಾಯುತ್ತಾರೆ ಕಿಟ್ಟಿ ಗುಂಡೂ ಸುಬ್ಬು
ಹೊಚ್ಚ ಹೊಸ ಯೌವನದ ರಂಗುಗಳ ಗುಂಗುಗಳ
ಫ್ಯಾಷನ್ನು ಪಹರೆಗಳ, ಕಸಿಹಣ್ಣು ಚಹರೆಗಳ
ವರ್ತಮಾನದ ನಟ್ಟ ನಡುವಿನಲ್ಲಿ,

–ಕೂಗು ಹುಸಿಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ ;
ಚಣಕ್ಕಷ್ಟು ಚಳಿ ನೂಲು, ಒಂದಿಷ್ಟು ಹೂಬಿಸಿಲು ;
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

–೪–

ಹೊತ್ತಾಯಿತೆ? ಆವರಿಸಿತೇ ಮಬ್ಬು?
ಕೊಡೆ ತೆರೆದು ಏಕಾಕಿ ಮನೆಯತ್ತ ನಡೆಯುವರು ಮರೆತು ಕ್ಲಬ್ಬು.
ಗಾಂಧಿಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ –
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು
ಸರ್ಕಾರದ ಸಫಲತೆಯ ಹುಣ್ಣ ನೊಣ–ಸುತ್ತಿರಲು,
ದೀಪಗಳ ಝಗಮಗದಿ ಕಣ್ಸೋತು ನಿಂತಿರಲು
ಮನೆಮಠವ ಮರೆತಿರುವ ಮಂದಿಸಂತೆ –
ಬೊಬ್ಬೆ ಅಬ್ಬರದೆದುರು ಗುರುತುಹತ್ತದ ಹಾಗೆ
ಕಾಲಿಗೊತ್ತಿದ ಗಾಜಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ ;
ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.

ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ–
ಸಂದ ಜೀವನದೊಂದು ರೀತಿಯಂತೆ
ಸರಳ ಸದಭಿರುಚಿಯ ಖ್ಯಾತಿಯಂತೆ.

****

ಕವಿ–ಕಾವ್ಯ ವಿಚಾರ

ಕೆ.ಎಸ್. ನಿಸಾರ್ ಅಹಮದ್‌ರ ಹುಟ್ಟೂರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ. ತಂದೆ ಕೆ.ಎಸ್. ಹೈದರ್, ತಾಯಿ ಹಮೀದಾ ಬೇಗಂ. ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಇವರು ಕರ್ನಾಟಕದ ವಿವಿಧ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ

ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸಂಜೆ ಐದರ ಮಳೆ, ನಾನೆಂಬ ಪರಕೀಯ, ನಿತ್ಯೋತ್ಸವ ಮುಂತಾದವು ಇವರ ಕವನ ಸಂಕಲನಗಳು. 'ಇದು ಬರಿ ಬೆಡಗಲ್ಲೊ ಅಣ್ಣ' ವಿಮರ್ಶಾ ಕೃತಿ. ಹಾಗೆಯೇ 'ಹಕ್ಕಿಗಳು', 'ಶಿಲೆಗಳು ಖನಿಜಗಳು' ; 'ಮಟ್ಟಸಂತರು ಮತ್ತು ಕಲಿಗಳು' ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳಲ್ಲದೆ. ವಿಮರ್ಶೆ, ಪ್ರಬಂಧ, ಸಣ್ಣಕಥೆ, ವಿಚಾರ ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚಿಸಿದ್ದಾರೆ. ಇವರ 'ಹಕ್ಕಿಗಳು' ಎಂಬ ಕೃತಿಗೆ ಎನ್.ಸಿ.ಇ.ಆರ್.ಟಿ. ಬಹುಮಾನ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ. ಹೆಜ್ಜೆಗುರುತು ಎಂಬ ಇವರ ಅನುವಾದಿತ ಕೃತಿಗೆ ಸೋವಿಯತ್ ಲ್ಯಾಂಡ್ ನೆಹರು ಅಂತರ ರಾಷ್ಟ್ರೀಯ ಪ್ರಶಸ್ತಿಯೂ, ರಾಜ್ಯ ಪ್ರಶಸ್ತಿಯೂ ದೊರೆಕಿವೆ. 'ವಿಶ್ವಮಾನವ ಪ್ರಶಸ್ತಿ'ಗೆ ಪಾತ್ರರಾಗಿರುವ ಇವರು ಭಾರತೀಯ ಭಾಷೆಗಳಲ್ಲೇ ಮೊಟ್ಟಮೊದಲ ಬಾರಿಗೆ 'ನಿತ್ಯೋತ್ಸವ' ಎಂಬ ಭಾವಗೀತೆಗಳ ಧ್ವನಿಸುರುಳಿ ಹೊರತಂದ ಕೀರ್ತಿಗೆ ಭಾಜನರಾಗಿದ್ದಾರೆ.

ನಿಸಾರ್ ಅಹಮದ್ ಅವರು ಈ ಕವಿತೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರನ್ನು ವಿಶಿಷ್ಟವಾಗಿ ನೆನಪಿಸಿಕೊಂಡಿದ್ದಾರೆ. ಬೇಸರ ಕಳೆಯಲೆಂದೋ ಸ್ನೇಹಕ್ಕೆಂದೋ ದಿನನಿತ್ಯ ಸಭೆ ಸೇರುತ್ತಿದ್ದ ಕ್ಲಬ್, ಅಲ್ಲಿನ ಗೆಳೆಯರು ಹಾಗೂ ಮಾಸ್ತಿ ಇವರ ಕೂಟವನ್ನು ಬಹಳ ವಿನೋದ ಮತ್ತು ವ್ಯಂಗ್ಯದಿಂದ ಎಂಬಂತೆ ಕವಿತೆಯನ್ನು ಕಟ್ಟಿದ್ದಾರೆ. ಮಾಸ್ತಿ ನಡೆದಾಡಿದ ಗಾಂಧಿಬಜಾರಿನ ಸುತ್ತಮುತ್ತಲ ಪ್ರಾಕೃತಿಕ ಪರಿಸರ, ನಡೆದಾಡುತ್ತಲೇ ಮಾಸ್ತಿಯ ವ್ಯಕ್ತಿಚಿತ್ರವನ್ನು ಅವರ ನಖ-ಶಿಖಾಂತದಿಂದ ನೋಡುವ ಕ್ರಮ ಕುತೂಹಲಕಾರಿಯಾಗಿದೆ. ಗೆಳೆಯರ ಜೊತೆಗಿನ ಮಾತುಕತೆಯ ಮೂಲಕ ಸಾಗುವ ಈ ಕವಿತೆ ಜೀವನ ಮೌಲ್ಯ ಹಾಗೂ ಆಧುನಿಕತೆಯ ಮೆರವಣಿಗೆಯಿಂದ ಸಂಸ್ಕೃತಿಯಲ್ಲಾಗುವ ಪಲ್ಲಟದ ಕಡೆ ಬಹಳ ಗಂಭೀರವಾಗಿ ಸಾಗುತ್ತ ಓದುಗರನ್ನು ಆಲೋಚನೆಗೆ ತೊಡಗಿಸುತ್ತದೆ. ಭೂತಕಾಲವನ್ನು ವರ್ತಮಾನದಲ್ಲಿ ನೋಡುತ್ತಲೇ ಕಾವ್ಯ ವಿಶಿಷ್ಟ ಆಲೋಚನಾಕ್ರಮವನ್ನು ಧ್ವನಿಸುತ್ತದೆ.

೮. ನಾನು, ಗಾಂಧಿ ಮತ್ತು ನಮ್ಮ ಮೇಷ್ಟ್ರು

– ಪಿ. ಲಂಕೇಶ್

ಮಹಾತ್ಮ, ಈಗ ಈ ಪದ್ಯ ಹೇಳುತ್ತಿದ್ದಂತೆಯೇ ನೆಗೆದು ಬಿದ್ದರೆ,
ನನ್ನ ಆತ್ಮ ಕೈಚಾಚಿ ಕಂಬಗಳ ಮುಟ್ಟಬಲ್ಲದೆ?
ಅಥವಾ ನಿಂತು ಮೋಡ, ಮಿಂಚುಗಳ ನೋಡಬಲ್ಲದೆ?
ಅಥವಾ ಬಿರುಗಾಳಿ, ಭೂಕಂಪಕ್ಕೆ ನಡುಗಬಲ್ಲದೆ?

ಈ ಪ್ರಶ್ನೆಗಳ ಸುತ್ತುವ ಮನಸ್ಸು.

ಇಪ್ಪತ್ತು ವರ್ಷಗಳ ಹಿಂದೆ, ಮಾಧ್ಯಮಿಕ ಶಾಲೆ, ಬೆಳಗ್ಗೆ
ಮೇಷ್ಟ್ರು ಕ್ಲಾಸಿಗೆ ಬಂದರು, ಆ ಬೆಳಗ್ಗೆ,
ಕಿಟಕಿಯಾಚೆ ತುಂಬು ಬಿಸಿಲು,
ಮೇಷ್ಟ್ರು ಸಪ್ಪೆ ಮೋರೆಯಲ್ಲಿ ಹೇಳಿದರು,
'ಮಹಾತ್ಮ ಹೊರಟು ಹೋದರು' – ಬಹಳ
ಮುಖ್ಯ ಸುದ್ದಿಯಿರಬೇಕು, ರಜಾ ಬಿಟ್ಟರು ;
ಆಮೇಲೆ ಅನೇಕ ದಿನ ಅತ್ತರು ; ಅಳುತ್ತಾ
ಪಾಠ ಮಾಡಿದ್ದು ತಮಾಷೆಯಾಗಿತ್ತು. ಇವತ್ತಿಗೂ ನೆನಪಿದೆ ;
ಪೇಟದ ಆ ಮೇಷ್ಟ್ರು ; ಉದ್ದ ಮೂಗಿನ, ಅಗಲ ಕಣ್ಣಿನ
ಸುಕ್ಕು ಕುತ್ತಿಗೆಯ ಹಳೆಯ ಕೋಟಿನ ಮಾಸ್ತರು ;
ಕೊಳವೆಯಲ್ಲಿ ನೀರು ಮೇಲಕ್ಕೆ ಹತ್ತಿ ಕೆಳಗೆ
ಸುರಿವುದ ಕಲಿಸಿದ ಮಾಸ್ತರು, ದಿನದಿನಕ್ಕೆ ಕೊರಗಿ
ಆ ಚಳಿಗಾಲದಲ್ಲಿ ಸತ್ತರು. ನನಗೆ ಭಯವಾಗಿತ್ತು
ಅವರು ಮಾಯವಾದದ್ದಕ್ಕೆ, ಇದ್ದಕ್ಕಿದ್ದಂತೆ ಇಲ್ಲವಾದದ್ದಕ್ಕೆ
ದಿಗಿಲಾಗಿತ್ತು. ಆತ ಸತ್ತದ್ದಕ್ಕೆ ಈತ ಸತ್ತರೆ?
ನನ್ನ ಭುಜ ತಟ್ಟಿದ, ಕತೆ ಹೇಳಿದ, ಬೆತ್ತ ಹಿಡಿದು
ಸ್ತೋತ್ರ ಮಾಡಿಸಿದ ಮಾಸ್ತರು ಇಲ್ಲವಾದರೆ?
ಅಲ್ಲಾಡಲಾರರೆ? ಕಾಣಲಾರರೆ? ಇಲ್ಲ, ಸ್ಕೂಲಲ್ಲಿ,
ಬಯಲಲ್ಲಿ, ಎಲ್ಲಿಯೂ, ಇಲ್ಲಿಯೂ ಇಲ್ಲವೆ?

ಆಮೇಲೆ ಇದು ಮತ್ತು ನಿನ್ನ ಅಹಿಂಸೆ ಕಾಡಿಸಿತ್ತು ;
ಹಿಂಸೆಯಲ್ಲಿ ಬಿರಿತು ಮೊಳೆಯುವ ಬೀಜ,
ಅದರ ಒತ್ತಾಯಕ್ಕೆ ಸೀಳಿಕೊಳ್ಳುವ ಭೂಮಿ

ನೆತ್ತರಲ್ಲೆದ್ದು ಎಲ್ಲರ ಎಬ್ಬಿಸುವ ಸೂರ್ಯ,
ಸಿಡಿಲಾಗಿ ಬಡಿದು, ಕೆನೆದು ಹನಿಗರೆವ ಮೋಡ
ಉಕ್ಕಿ ಹುಚ್ಚೆದ್ದು ಭೋರ್ಗರೆದು, ತಿನ್ನುವ, ತಿನ್ನಿಸುವ ಕಡಲು
ನೆಲವ ಕೊಚ್ಚುವ ಮಳೆ,
ಮಳೆಯ ತಳ್ಳುವ ಗಾಳಿ,
ಗಾಳಿಯ ನುಂಗಿ ಸುಟ್ಟು ಚೊಕ್ಕ ಮಾಡುವ ಬೆಂಕಿ,
ಸುಟ್ಟ ಕಸುವಲ್ಲಿ ಕುಡಿಚಾಚಿ ಹಣ್ಣು ತೂಗುವ ಬಳ್ಳಿ,
ಸುಖದ ಆಳಕ್ಕೆ ಹಿಂಸೆಯ ನೋವು, ಮಹಾತ್ಮ, ಈ ಲೋಕದಲ್ಲಿ
ನನ್ನ ಬಡ ಮಾಸ್ತರು ಸಪ್ಪಗೆ, ಏನನ್ನೋ ಕಳೆದುಕೊಂಡವರಂತೆ
ನಡೆವಾಗ ಎಡವಿ ಜೀವ ಉಡುಗಿದವರ ಹಾಗೆ
ಯಾವುದೋ ಬೀಜ ಮೊಳೆತಂತೆ, ಜಾನಕಿಗಾಗಿ ನೆಲವೊಡೆದು
ಸತ್ಯ ಗೊತ್ತಾದಂತೆ, ಕುಗ್ಗಿದರು ; ಯಾವುದೋ ಮಳೆ, ಗಾಳಿಯಲ್ಲಿ
ಸಿಡಿಲೆರಗಿ ಒರಗಿದರು, ಕಣ್ಣು ಕಾಣುವ, ಬಾಯಿ ಸವಿಯದ ಫಲವಾದರು,
ನಿನ್ನವರಾಗಿ ಸಾವಿನಲ್ಲಿ ಮನವಿಟ್ಟು ಖಿನ್ನರಾದರು,
ಚಳಿಗಾಲದಲ್ಲಿ ಮಣ್ಣಾದರು.
ಇದಕ್ಕೇನೆನ್ನಲಿ ಮಹಾತ್ಮ? ಸಾವಿಗೆ ನೀನೆಷ್ಟು ಕಾರಣ? ಸತ್ಯ
ಅಹಿಂಸೆಗಳೆಷ್ಟು? ಖಂಡ ಮಾಂಸವ ಹೊಕ್ಕು ಹಾರೆ ಮೀಟುವ ಕಾಲ?
ಉಷ್ಣವಲಯದ ಶಾಖ? ಅಸ್ತವ್ಯಸ್ತ ದ್ವಂದ್ವಮಯ ಜಗಕ್ಕೆ
ಸತ್ಯ ಅನ್ನವಾಗದು ಮಹಾತ್ಮ ; ಅನ್ನ ಸತ್ಯವಾಗದು ಕಣೋ,
ಮುಗಿಯಲು ಅಂಧಕ, ಹೆಳವನಾಗಬೇಕಾದಲ್ಲಿ
ಹತ್ತು ತಲೆಗಳು ಬಿದ್ದು ಹುತ್ತ ಕೊನರುವ ಇಲ್ಲಿ
ಬೆಂಕಿ ಸುಡುವಲ್ಲಿ, ನೀರು ಮುಳುಗಿಸುವಲ್ಲಿ, ಭೂಮಿ ಬಿರಿವಲ್ಲಿ
ನೀನು ಮತ್ತು ಮಾಸ್ತರು ಸತ್ತಾಗ,
ಮಣ್ಣು ಕಸುವಾಯಿತೆ ಅಥವಾ ಬಯಲು ಬೆಳಕಾಯಿತೆ, ನೋಡುತ್ತ
ಶುರು ಮಾಡುವೆವು ಮತ್ತೊಮ್ಮೆ ಪೋಲಿರಾಗ.

****

ಕವಿ–ಕಾವ್ಯ ವಿಚಾರ

ಪಿ. ಲಂಕೇಶ್ (೧೯೩೫–೨೦೦೦) ಹೊಸಗನ್ನಡ ಸಾಹಿತ್ಯ – ಪತ್ರಿಕೋದ್ಯಮ–ಚಲನಚಿತ್ರ ಕ್ಷೇತ್ರಗಳಲ್ಲಿ ವಿಭಿನ್ನವಾಗಿ ನಿಲ್ಲುವ ಬಹುಮುಖ ಪ್ರತಿಭಾಶಾಲಿ. ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿಯಲ್ಲಿ ಜನಿಸಿ ಶಿವಮೊಗ್ಗ, ಬೆಂಗಳೂರು, ಮೈಸೂರುಗಳಲ್ಲಿ ಓದಿ ಅಧ್ಯಾಪಕರಾದರು. ೧೯೭೮ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ

ಹುದ್ದೆಗೆ ರಾಜೀನಾಮೆ ನೀಡಿ ಚಿತ್ರ ನಿರ್ದೇಶನಕ್ಕೆ ಧುಮಕಿದರು. ತಮ್ಮ ಮೊದಲ ಚಿತ್ರ 'ಪಲ್ಲವಿ'ಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡರು. ಕೆರೆಯ ನೀರನು ಕೆರೆಗೆ ಚೆಲ್ಲಿ, ನಾನಲ್ಲ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಕಲ್ಲುಕರಗುವ ಸಮಯ, ಉಲ್ಲಂಘನೆ ಇವರ ಪ್ರಮುಖ ಕಥಾಸಂಕಲನಗಳು. ಬಿಚ್ಚು, ತಲೆಮಾರು – ಕವನ ಸಂಕಲನಗಳು. ಬಿರುಕು, ಮುಸ್ಸಂಜೆಯ ಕಥಾ ಪ್ರಸಂಗ, ಅಕ್ಕ – ಕಾದಂಬರಿಗಳು. ತೆರೆಗಳು, ನನ್ನ ತಂಗಿಗೊಂದು ಗಂಡು ಕೊಡಿ, ಪೊಲೀಸರಿದ್ದಾರೆ ಎಚ್ಚರಿಕೆ, ಗಿಳಿಯು ಪಂಜರದೊಳಿಲ್ಲ, ಸಂಕ್ರಾಂತಿ, ಗುಣಮುಖ, ದೊರೆ ಈಡಿಪಸ್ ಮತ್ತು ಅಂತಿಗೊನೆ – ನಾಟಕಗಳು. 'ಟೀಕೆ ಟಿಪ್ಪಣಿ' ಸಂಪಾದಕೀಯ ಲೇಖನಗಳ ಸಂಕಲನ. 'ಹುಳಿಮಾವಿನ ಮರ' ಆತ್ಮಕಥನ. ೧೯೮೬ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೯೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಸಂದಿವೆ.

ಈ ಕವಿತೆಯಲ್ಲಿ ನಮಗೆ ಮುಖ್ಯವಾಗುವುದೆಂದರೆ ಕವಿ ತನ್ನ ಬಾಲ್ಯಕಾಲದಲ್ಲಿ ಶಾಲೆಯಲ್ಲಿ ನಡೆದ ಘಟನೆಯನ್ನು ವರ್ತಮಾನದಲ್ಲಿಟ್ಟು ಯೋಚಿಸುತ್ತಿರುವುದು. ಗಾಂಧಿ ಮತ್ತು ಸ್ವಾತಂತ್ರ್ಯದ ಹೋರಾಟದ ಕಲ್ಪನೆ ಇಲ್ಲಿದೆ. ಶಾಲಾ ಮಕ್ಕಳಿಗೆ ಗಾಂಧಿಯ ಸಾವು ಏನೂ ಅನ್ನಿಸದಿದ್ದರೂ ಆ ಶಾಲಾ ಮಾಸ್ತರರ ಮನಸ್ಸಿನ ಮೇಲಾದ ಆಘಾತವನ್ನು ವ್ಯಂಗ್ಯವಾಗಿ, ಆಶ್ಚರ್ಯವಾಗಿ ನೋಡುತ್ತಿದ್ದಾರೆ. ಅದೇ ಗುಂಗಿನಲ್ಲಿ ಸತ್ತ ಮಾಸ್ತರು ಎಷ್ಟೋ ದಿನಗಳ ನಂತರ ಕವಿಯನ್ನು ಮತ್ತೆ ಕಾಡಲಾರಂಭಿಸುವುದು ವಿಶೇಷ. ಮಾಸ್ತರ ವ್ಯಕ್ತಿತ್ವ, ಅವರ ಪಾಠ ಪ್ರಯೋಗಗಳು ಕಾಡಿದಷ್ಟು ಗಾಂಧಿಯ ಸಾವು ವಿದ್ಯಾರ್ಥಿಗಳನ್ನು ಕಾಡದಿರುವುದು ಆಶ್ಚರ್ಯ. ಹಾಗೆಯೇ ಗಾಂಧೀವಾದ ಮತ್ತು ಗಾಂಧಿ ವ್ಯಕ್ತಿತ್ವ ಎನ್ನುವುದನ್ನು ವರ್ತಮಾನದಲ್ಲಿ ಅರ್ಥೈಸುವ ಕ್ರಮ ವಿಶಿಷ್ಟವಾದದ್ದು. ಭುಜತಟ್ಟಿ ಕತೆ ಹೇಳಿದ, ಬೆತ್ತ ಹಿಡಿದು ಹೊಡೆದು ಪಾಠ ಹೇಳಿದ ಮಾಸ್ತರ ಸಾವು ನಮ್ಮನ್ನು ಇಷ್ಟು ಕಾಡಿದರೆ ಪಾಪ ಆ ಗಾಂಧಿ ಸಾವು ಮಾಸ್ತರನ್ನು ಎಷ್ಟು ಕಾಡಿರಬೇಡ ಎಂದು ಕವಿ ಮರುಕಪಡುತ್ತಿದ್ದಾನೆ. 'ಮಹಾತ್ಮ ಮಾಸ್ತರ ಸಾವಿಗೆ ನೀನೆಷ್ಟು ಕಾರಣ', ಸತ್ಯ ಅಹಿಂಸೆಗಳೆಷ್ಟು ಕಾರಣ 'ಸತ್ಯ ಅನ್ನವಾಗದು ಮಹಾತ್ಮ; ಅನ್ನ ಸತ್ಯವಾಗದು ಕಾಣೋ', 'ನೀನು ಮತ್ತು ಮಾಸ್ತರು ಸತ್ತಾಗ ಮಣ್ಣು ಕಸುವಾಯಿತೆ ಅಥವಾ ಬಯಲು ಬೆಳಕಾಯಿತೆ' ಎಂದು ಹೇಳುತ್ತಾ ತಮ್ಮ ನೋವನ್ನು ಅಭಿವ್ಯಕ್ತಿಸುವ ಧಾಟಿ ಅನನ್ಯವಾದದ್ದು. ವಾದಗಳು, ಸಿದ್ಧಾಂತಗಳು, ಚಳುವಳಿಗಳು, ಆದರ್ಶಗಳು ಇಂದು ಬರೀ ಭಾಷಣಗಳಾಗುತ್ತಿವೆ, ಶಾಲಾ ಪಠ್ಯಗಳಾಗುತ್ತಿವೆ; ನಿಜಜೀವನದಲ್ಲಿ ಅಳವಡಿಕೆಯಾಗುತ್ತಿಲ್ಲ; ವಿದ್ಯಾರ್ಥಿಗಳನ್ನು, ಯುವಕರನ್ನು ಅವು ಪ್ರಭಾವಿಸುತ್ತಿಲ್ಲ ಎಂಬ ನೋವು ಕವಿತೆಯಲ್ಲಿ ಅಡಗಿದೆ.

ಙಙಙ

೯. ಬೆಂಗಳೂರಿನ ಹಾಡು

–ಸಿದ್ಧಲಿಂಗಯ್ಯ

ಬೆಂಗಳೂರೇ ಎಂದು ಬಾಯಾರೆ ಕರೆಯೋರೆ
ಮೈ ತುಂಬ ವಡವೆಗಳು ಇರಬಹುದು ನನಗೆ
ನನ್ನ ಮೇಲಿರಬಹುದು ಎಲ್ಲ ಚೆಲುವರ ಕಣ್ಣು
ರಥ ಕುದುರೆ ಕಾಲಾಳು ಆನೆಗಳು ಸುತ್ತ

ನಮ್ಮ ಮದುವೆಗೆ ಮೊದಲು ಗಂಡ ಕೆಂಪೇಗೌಡ
ಹಾರುವರ ಹಟ್ಟಿಯಲಿ ಜೀತಕಿದ್ದ
ಚಿಂದಿ ದುಬಟಿಯ ಚೆಲುವ ತಂಗಳಿನ ಸರದಾರ
ದನದ ಕೊಟ್ಟಿಗೆಯಲ್ಲಿ ಮಲಗುತಿದ್ದ

ಏಳು ಲೋಕದ ನೋವು ಮೂಡುವಾಗೆದ್ದವನು
ದುಡಿಯುತಿದ್ದನು ಹೊತ್ತು ಇಳಿವತನಕ
ಹಿಪ್ಪನೇರಳೆ ಕಡ್ಡಿ ಹಣ್ಣು ತರಕಾರಿಗಳು
ಮಲ್ಲಿಗೆಯು ಕಿಕ್ಕಿರಿದು ಬೆಳೆವತನಕ

ಅಪ್ಪಣೆಯ ಕೊಟ್ಟ ಧಣಿ ಮೇಲುತೋಟವನೆಲ್ಲ
ಅಗೆದುಬಿಡು ನಾ ಬರುವ ವೇಳೆಯೊಳಗೆ
ಯಾವ ಕೀಲಿನ ನೋವೊ ಎಂಥ ಮಾಯದ ಮರೆವೊ
ನನಗಂಡ ತೋಟದಲಿ ಮಲಗಿ ಬಿಟ್ಟ

ಗಿಡಗಿಡವು ಹಾವಾಗಿ ನಾಗಲೋಕವು ಹುಟ್ಟಿ
ಬೇಲಿಗಳ ಮೇಲೆಲ್ಲ ಮಾಣಿಕ್ಯ ಚೆಲ್ಲಿ
ಏಳೆಡೆಯ ನಾಗರವು ನಿಂತು ನಾಂಟೇವಾಡಿ
ಮಲಗಿದ್ದ ಪತಿರಾಯ ಬೆಳಗುತ್ತಿದ್ದ

ಹತ್ತು ದಿಕ್ಕುಗಳಲ್ಲಿ ಮುತ್ತು ರತ್ನದ ದೀಪ
ಕಂಡ ಹಾರುವ ಹರಿದ ಬೆವರ ತೊರೆಯಾಗಿ
ಎಂಥ ಪುಣ್ಯವೊ ನಿನದು ಯಾವ ತಾಯಿಯ ಮಗನೊ
ನಾಗಪ್ಪ ಬಂದವನೆ ಕೆಂಪಯ್ಯ ಏಳೊ

ರಾಜ್ಯವಾಳುವ ಯೋಗ ನಿನಗುಂಟು ಕೆಂಪಣ್ಣ
ಎದ್ದು ನಿಲ್ಲೋ ರಾಜ ಕಟ್ಟಯ್ಯ ದಂಡು
ನೀನರಸನಾದಾಗ ನನ್ನ ಮಂತ್ರಿಯ ಮಾಡೊ
ಮುತ್ತಿಗೆಯ ಹಾಕಯ್ಯ ಕೊಳ್ಳಯ್ಯ ಕತ್ತಿ

ಸತ್ತ ಮಕ್ಕಳು ಎಷ್ಟು ಆದ ಮುಂಡೆಯರೆಷ್ಟು
ಎಷ್ಟಯ್ಯ ಕನಸೊಡೆದು ಹರಿದ ರಕ್ತ
ಮುರಿದ ಕೈ ಕಾಲುಗಳು ಮುರಿದ ತೊಲೆ ಕಂಬಗಳು
ಒಡೆದ ಹೊಂಗಳಸಗಳ ಲೆಕ್ಕವೆಷ್ಟು

ನನ್ನ ಗಂಡನ ಜೊತೆಯ ಜೀತಗಾರರ ಕಥೆಯು
ಯಾವ ಹಾಡಿನ ಒಳಗೂ ಮೂಡಲಿಲ್ಲ
ರಾಜ್ಯದಾಹದ ಬೆಂಕಿ ಊರೂರ ಸುಟ್ಟಾಗ
ಬೂದಿಯಾದರೊ ಅವರು ತಿಳಿಯಲಿಲ್ಲ

ನನ್ನ ಸೀರೆಯ ಸೆರಗು ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು

****

ಕವಿ–ಕಾವ್ಯ ವಿಚಾರ

ಡಾ. ಸಿದ್ಧಲಿಂಗಯ್ಯನವರ ಜನ್ಮಸ್ಥಳ ರಾಮನಗರ ಜಿಲ್ಲೆಯ ಮಾಗಡಿ. ತಂದೆ ದೇವಯ್ಯ, ತಾಯಿ ವೆಂಕಟಮ್ಮ. ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎ.(ಆನರ್ಸ್), ಎಂ.ಎ. ಹಾಗೂ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ವಿಶ್ವವಿದ್ಯಾಲಯ ಕಲಾನಿಕಾಯದ ಡೀನ್‌ರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಕರ್ನಾಟಕ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಎರಡು ಅವಧಿಗೆ ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾಗಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು ಮುಂತಾದವು ಇವರ ಕವನ ಸಂಕಲನಗಳು. ಹಕ್ಕಿನೋಟ ಇವರ ವಿಮರ್ಶಾಕೃತಿ. ಅವತಾರಗಳು ಎನ್ನುವುದು ಪ್ರಬಂಧಗಳ ಸಂಕಲನ. ಏಕಲವ್ಯ, ಪಂಚಮ ಮುಂತಾದ ನಾಟಕಗಳನ್ನೂ 'ಗ್ರಾಮದೇವತೆಗಳು' ಎನ್ನುವ ಪ್ರೌಢ ಸಂಶೋಧನಾ ಕೃತಿಯನ್ನೂ ಹೊರತಂದಿದ್ದಾರೆ. 'ಉರಿಕಂಡಾಯ' ಅವರ ಇತ್ತೀಚಿನ ಕೃತಿ. ಊರುಕೇರಿ ಭಾಗ–೧ ಮತ್ತು ೨

ಅವರ ಆತ್ಮಕತೆಗಳಾಗಿವೆ. ರಾಜ್ಯೋತ್ಸವ ಪ್ರಶಸ್ತಿ, ಅಂಬೇಡ್ಕರ್ ಶತಮಾನೋತ್ಸವ ಪ್ರಶಸ್ತಿ, ಅತ್ಯುತ್ತಮ ಚಲನಚಿತ್ರ ಗೀತರಚನಾ ಪ್ರಶಸ್ತಿ ಇವು ಇವರ ಸಾಧನೆಗೆ ಸಂದ ಗೌರವಗಳು ಮತ್ತು ಪ್ರಶಸ್ತಿಗಳು.

ಬೆಂಗಳೂರಿನ ಸ್ಥಾಪಕ ಕೆಂಪೇಗೌಡನನ್ನು ಕುರಿತು ಪ್ರಚಲಿತವಾಗಿರುವ ಜನಪದ ಕಥೆಯೊಂದು ಈ ಕವಿತೆಗೆ ಪ್ರೇರಣೆ. ಕಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರಭುತ್ವದ ಕ್ರೌರ್ಯ ಮತ್ತು ಜನಸಾಮಾನ್ಯರ ಸಂಕಟದ ಸ್ಥಿತಿಯನ್ನು ಹೇಳುವ ಪ್ರಯತ್ನವನ್ನು ಈ ಕವಿತೆಯಲ್ಲಿ ಕಾಣಬಹುದು. ಬೆಂಗಳೂರು ಇಂದು ವಿಶ್ವದಲ್ಲೇ ನಾಗಾಲೋಟದಲ್ಲಿ ಬೆಳೆಯುತ್ತಿರುವ ಸಿಲಿಕಾನ್ ಸಿಟಿ. ಬಂದವರನ್ನು ಆಕರ್ಷಣೆಯಿಂದಲೇ ಸೆಳೆದು ತನ್ನ ಮಡಿಲಿನಲ್ಲಿಟ್ಟುಕೊಳ್ಳುತ್ತಿದೆ. ಕೆಂಪೇಗೌಡನಿಂದ ನಿರ್ಮಾಣವಾದ ಈ ನಗರ ಇಂದು ಮಾಯಾನಗರಿಯಾಗಿ, ಆಕರ್ಷಣೆಯಾಗಿ, ಸಮಸ್ಯೆಗಳ ಕೂಪವಾಗಿ ಬೆಳೆಯುತ್ತಿದೆ. ಕೆಂಪೇಗೌಡ ಈ ನಗರ ಕಟ್ಟುವ ಮೊದಲು ಗೌಡನ ಹಟ್ಟಿಯ ಆಳಾಗಿ ಜೀತ ಮಾಡುತ್ತಿರಬೇಕಾದರೆ ನಡೆದ ಘಟನೆ ಇದು. ಒಮ್ಮೆ 'ಕೆಂಪ'ನ ಮೇಲೆ ಹಾವಿನ ನೆರಳು ಮೂಡಿ, ನಾಟ್ಯವಾಡಿ ಮುಂದೆ ಹೋದದ್ದನ್ನು ಕಂಡ ಬ್ರಾಹ್ಮಣನೊಬ್ಬ ಕೆಂಪನ ಭವಿಷ್ಯ ನುಡಿಯುತ್ತಾನೆ. ಅದರಂತೆ ಕೆಂಪನು ಶ್ರೀಮಂತನಾಗಿ, ಕೆಂಪೇಗೌಡನಾಗಿ ರಾಜ್ಯವನ್ನಾಳುವ ಯೋಗ ಪಡೆಯುತ್ತಾನೆಂಬ ಜನಪದ ಕತೆಯನ್ನು ಕವಿಗಳು ಪದ್ಯವಾಗಿಸಿದ್ದಾರೆ. ಬೆವರಿನ ಮೂಲದ ಶ್ರಮಸಂಸ್ಕೃತಿಯ ಕಡೆ ಬೆಳಕು ಚೆಲ್ಲುವ ಕವಿತೆ ಜೀತಗಾರನ ಕತೆಯನ್ನು ಹೇಳುತ್ತಲೇ ನಗರ ಸಂಸ್ಕೃತಿಯ ಕಡೆಗೂ ಬೆಳಕು ಚೆಲ್ಲುತ್ತದೆ. ಸೀರೆಯ ಸೆರಗಲ್ಲಿ ಬಚ್ಚಿಟ್ಟುಕೊಂಡಿರುವ ನಗರದ ನರಕಮಯ ದೃಶ್ಯಗಳ, ದನಿ ಇಲ್ಲದವರ, ಸೂರಿಲ್ಲದವರ, ಅಮಾಯಕರ, ಬಡಪಾಯಿಗಳ ನೋವಿನುಂಡೆ ಕೆಂಡಗಳು ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತಿಭಟಿಸಲು ಕೇಳುವ ಪ್ರಶ್ನೆಯಂತಿದೆ ಈ ಕವಿತೆ. ಬೆಂಗಳೂರು ಸುಂದರವಾಗಿ ಕಂಡರೂ ಆ ಸುಂದರತೆಯ ಹಿಂದಿರುವ ನೋವು ನಲಿವು ದೀಪದ ಕೆಳಗಿನ ಕತ್ತಲೆಯಂತಿರುತ್ತದೆ ಎಂಬುದನ್ನು ಧ್ವನಿಸುತ್ತದೆ.

೧೦. ಹುಡುಕಿದರು ಸಿಗಲೊಲ್ಲದು

–ಬಿ.ಟಿ. ಲಲಿತಾ ನಾಯಕ್

ಇಸವಿಗಳಡಿಯಲ್ಲಿ
ಕಳೆದುಹೋಗಿದೆ ನನ್ನ ನಗೆಯು
ಕೆದಕೆದಕಿ ಹುಡುಕುತ್ತಿದ್ದೇನೆ – ಸಿಗಲೊಲ್ಲದು !

ಅಕ್ಕಿ ಬೇಳೆ ಡ್ಯೆರಿ ಹಾಲು
ಎಣ್ಣೆಡಬ್ಬಿ ತರಕಾರಿ ಪುಟ್ಟಿಗಳಲ್ಲಿ
ಸಾರಿಗೆ ವಾಹನ ರೈಲಿನಿಂಧನದ ಉರಿ ಧಗೆಯಲ್ಲಿ
ಅಂಗಡಿ ಕಾರ್ಖಾನೆ ಹೋಟೆಲು ಸಿನಿಮಾ ಆಸ್ಪತ್ರೆಗಳಲ್ಲಿ

ಕಚೇರಿ ಸೌಧಗಳಲ್ಲಿ
ಹಲವು ಹತ್ತು ಸಂಕೇತಗಳಡಿಯಲ್ಲಿ
ಹುಡುಕೇ ಹುಡುಕುತ್ತೇನೆ – ಸಿಗಲೊಲ್ಲದು !
ಮಕ್ಕಳ ಶಾಲೆ ಕಾಲೇಜು ಶಿಕ್ಷಣದಲ್ಲಿ
ಅವರಂಗಿ ಬಟ್ಟೆ ಪುಸ್ತಕ ಚಾಕು ಚೂರಿಗಳಡಿಯಲ್ಲಿ
ಮನೆ ಬಾಡಿಗೆ ಕಂತು ಗೋಡೆ ಬಿರುಕುಗಳಲ್ಲಿ
ಕುಸಿದ ಕಟ್ಟಡಗಳ ಹುಡಿ ಧೂಳಿನಲ್ಲಿ
ಬಾರಿಬಾರಿಗೂ ಉಡಾಯಿಸುವ ಉಪಗ್ರಹಗಳಲ್ಲಿ
ಮೇಲೆ ಮಿನುಗುವ ಚುಕ್ಕೆ ಚಂದ್ರಮರಲ್ಲಿ
ನನ್ನ ನಗೆಯನು ಹುಡುಕುತ್ತಿದ್ದೇನೆ–ಸಿಗಲೊಲ್ಲದು !

ಸೊಸೆಯೆಂದಿರು ಸೀದುಹೋದ ಬೂದಿ ಕಣದಲ್ಲಿ
ದಿಟ್ಟ ಲೇಖನಿಗೆ ಹಲ್ಲಯಿಸಿ ಇರದು
ಸುರಿಸಿದ ರಕ್ತದೋಕುಳಿಯಲ್ಲಿ
ಹಲವು ಮಾದರಿಯ ಚಳುವಳಿಗಳ ಬಸಿರಲ್ಲಿ
ಕೊಳಚೆಗೇರಿಯ ಗುಡಿಸಲ ತಣ್ಣನೆಯ ನರಳುವಿಕೆಯಲ್ಲಿ
ನನ್ನ ನಗೆಯನು ಹುಡುಕುತ್ತಿದ್ದೇನೆ – ಸಿಗಲೊಲ್ಲದು

****

ಕವಿ–ಕಾವ್ಯ ವಿಚಾರ

೧೯೪೮ರಲ್ಲಿ ಜನಿಸಿದ ಬಿ.ಟಿ. ಲಲಿತಾ ನಾಯಕ್‌ರವರ ಹುಟ್ಟೂರು ಕಡೂರು ತಾಲ್ಲೂಕಿನ ತಂಗಲಿ ಗ್ರಾಮದ ತಾಂಡ್ಯ. ತಂದೆ ಬಾಲಾಜಿ ನಾಯಕ್,

ತಾಯಿ ಗಂಗಾಬಾಯಿ, ಪತಿ ಚಂಪ್ಲಾನಾಯಕ್. ಇವರು ಸಾಹಿತ್ಯ, ಸಮಾಜ ಮತ್ತು ರಾಜಕೀಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ೧೯೮೬ ರಿಂದ ೧೯೯೨ರವರೆಗೆ ಕರ್ನಾಟಕ ರಾಜ್ಯ ವಿಧಾನಸಭೆಯ ನಾಮಕರಣ ಸದಸ್ಯರಾಗಿದ್ದರು. ಅಖಿಲ ಕರ್ನಾಟಕ ಲಂಬಾಣಿ ಮಹಾ ಒಕ್ಕೂಟದ ಅಧ್ಯಕ್ಷರಾಗಿಯೂ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಉತ್ತಮ ಶಾಸಕಿ ಪ್ರಶಸ್ತಿಯೂ, ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ದೊರೆತಿವೆ. ಚಂದ್ರ ಪರಾಭವ, ಭಟ್ಟನ ಕನಸು, ನಂರೂಪ್ಲಿ, ಇದೇ ಕೂಗು ಮತ್ತೆ ಮತ್ತೆ, ನೆಲೆಬೆಲೆ, ಗತಿ, ಹಬ್ಬ ಮತ್ತು ಬಲಿ ಇವರ ಕೃತಿಗಳು. ಪ್ರಸ್ತುತ 'ಹುಡುಕಿದರು ಸಿಗಲೊಲ್ಲದು' ಪದ್ಯವನ್ನು ಅವರ 'ಇದೇ ಕೂಗು ಮತ್ತೆ ಮತ್ತೆ' ಎಂಬ ಪದ್ಯ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

"ಹೋಗುವುದೇ ಒಳ್ಳೆಯ ಕಾಲ, ಬರುವುದೇ ಕೆಟ್ಟ ಕಾಲ" ಎನ್ನುವ ಮಾತಿನಂತೆ ಕಳೆದುಹೋದ ದಿನಗಳಲ್ಲಿ ಇದ್ದ ನಗೆ ನೆಮ್ಮದಿಗಳನ್ನು ಸಮಕಾಲೀನ ಸಮಾಜದಲ್ಲಿ ಕಾಣುವುದು ಕಷ್ಟಸಾಧ್ಯವೆಂಬುದನ್ನು ಕವಿತೆ ಧ್ವನಿಸುತ್ತದೆ. ಅವುಗಳ ಹುಡುಕಾಟದಲ್ಲಿ ತೊಡಗಿರುವ ಈ ಕವಿತೆ ಕೊನೆಗೆ ವಾಸ್ತವವನ್ನು ಅರಿತು ನಗೆ ನೆಮ್ಮದಿಗಳ ಹುಡುಕಾಟಕ್ಕಿಂತ ಬದುಕಿನಲ್ಲಿ ಬರುವ ನೋವಿನ ನಿಜದ ಮೂಲಗಳನ್ನು ತಿಳಿಯುವುದೇ ಸುಖ ಎನ್ನುವ ನೆಲೆಗೆ ಬಂದು ನಿಲ್ಲುತ್ತಾರೆ. ಮನುಷ್ಯ ಹುಟ್ಟಿನಿಂದ ಸಾವಿನವರೆಗಿನ ಬದುಕನ್ನು ಅನಿವಾರ್ಯವಾಗಿ ಕ್ರಮಿಸಲೇಬೇಕಾಗಿದೆ. ಅಲ್ಲಿ ಎದುರಾಗುವ ನೂರಾರು ಸಮಸ್ಯೆಗಳಿಗೆ ಎದುರಾಗಲೇಬೇಕು. ಸಾಮಾನ್ಯನಂತೂ ತನ್ನ ದಿನನಿತ್ಯದ ಬದುಕಿನ ಜಂಜಾಟದಲ್ಲಿ ಅಕ್ಕಿ ಬೇಳೆ ಡೈರಿಹಾಲು ಎಣ್ಣೆ ಡಬ್ಬಿ ತರಕಾರಿ ಪುಟ್ಟಿಗಳಲ್ಲಿ, ಬಸ್ಸು, ರೈಲು, ಅಂಗಡಿ, ಕಾರ್ಖಾನೆ, ಹೋಟೆಲು, ಸಿನಿಮಾ, ಆಸ್ಪತ್ರೆಗಳಲ್ಲಿ ನರಳುತ್ತಿದ್ದಾನೆ ಕಾಣದ ಸುಖ ನೆಮ್ಮದಿ ನಗೆಗಾಗಿ. ವ್ಯವಸ್ಥೆಯ ಭಾಗವಾದ ಕಛೇರಿ, ಸೌಧ, ಶಾಲೆ ಕಾಲೇಜುಗಳೂ ಇದಕ್ಕೆ ಹೊರತಲ್ಲ. ಪ್ರತಿಯೊಬ್ಬನೂ ಒಂದಲ್ಲಾ ಒಂದು ಸಮಸ್ಯೆಯಿಂದ ನರಳುತ್ತಿದ್ದಾನೆ.

೧೧. ನಿವೃತ್ತೋಪನಿಷತ್ತು

–ನಲ್ಲೂರು ಪ್ರಸಾದ್

ನಾನೀಗ ನಿವೃತ್ತ
ಗೋಡೆ ಗಡಿಯಾರದ ಮುಳ್ಳುಮೊನೆ
ನೋಡಿ ನಡೆದೂ ನಡೆದೂ
ನವೆದು ವೃತ್ತಿಸಾಗರ ಈಜಿ
ಕಡೆಗೂ ದಡ ಸೇರಿದ ಸಂಭ್ರಮ

ನಿಜ
ನಿನ್ನೆಯಂತೆ ಇಂದಿಲ್ಲವೆಂದರೆ
ಕೊಂಚ ಭಯ ಸಹಜ
ಆದರೂ ಎಲ್ಲಾ ಹೋಯಿತಲ್ಲ ಎಂಬ ಹಳಹಳಿಕೆ ಸಲ್ಲ
ಅತ್ತು ಕೊರಗಬೇಕಿಲ್ಲ ಸತ್ತು ಹೋಗಬೇಕಿಲ್ಲ
– ಕಾರಣ ಅದು ನನ್ನಪ್ಪನ ಆಸ್ತಿಯಲ್ಲ

ನನಗೇನೋ ಹಾಗೆ
ನೋಡುವ ನನ್ನವರಿಗೆ? ಸ್ನೇಹ ಸಂತೋಷಿಗಳಿಗೆ?
ಅಂಟಿ ಕೂತ ಆಪ್ತರಿಗೆ ಬಂಧುಗಳಿಗೆ
ಪಾಪ ಅನುತಾಪ ಧಗೆ ಅನಾಥ ನಗೆ
ನಿವೃತ್ತನಾದ ಆ ದಿನ
ಮನೆಗೆ ಬಂದಾಗ ನೋಡಬೇಕಿತ್ತು ನನ್ನವಳ !
ಮುಖದಲಿ ಮಡುಗಟ್ಟಿದ ಕಳವಳ
'ಸ್ಕೂಲ್ ಮಾಸ್ಟರ್' ಸಿನಿಮಾದ ಮೇಷ್ಟ್ರ ಹೆಂಡತಿಯ ತಳಮಳ !
ಕಾಲೇಜಿಗೆ ಹೊರಟು ನಿಂತ ಮಗಳ ಕಣ್ಗಳ !
ಹೆಂಡತಿಗೇನೋ ಗಾಬರಿ ಸರಿ
ಮನೆ ನಡೆಯುವುದು ಹೇಗೆ? ನಿಂತು ಹೋಯ್ತಲ್ಲ ಸಂಬಳ !
ಮಗಳಿಗೆ, ದೂರದಲ್ಲಿರುವ ಅಣ್ಣನಿಗೆ ನನಗೆ
ಅಪ್ಪ ಕೊಟ್ಟಾನೆಯೇ ಹಣ ತಿಂಗಳ ತಿಂಗಳ?

ಇನ್ನು ನನ್ನ ಹುಡುಗರು :
'ಸಾರ್', ಇರಿ ಸಾರ್ ಈ ವರ್ಷದ ಕಡೆವರೆಗೆ

ಕನಿಷ್ಠ ನಾವಿರೋವರ್ಗೆ'
ಹನಿಸುತ್ತಾ ಕಣ್ಣೀರು ಉಸುರುತ್ತವೆ ಪ್ರಾಣ ಪದಕಗಳು

ಸುತ್ತಲ ಸ್ನೇಹ ಸಂಬಂಧಿ ಉವಾಚ,
ಅಯ್ಯೋ ಪಾಪ ನಿವೃತ್ತಿಯಾಯಿತಂತೆ
ಈಗೇನ್ಮಾಡ್ತಿರಿ?

ಛೇ, ಬೆಳೆದ ಮಗಳು ಮಗನ ಓದು
ವಯಸ್ಸಾಯ್ತು, ಕಾಯ್ಲೆ ಕಸಾಲೆ ಬೇರೆ
ಮನೆಸಾಲ ಅಬ್ಬಬ್ಬಾ ಹೇಗೆ ಸಂಭಾಳಿಸ್ತೀರಿ?
ಎಂದು ಊದುತ್ತಾ ಭಯದ ತುತ್ತೂರಿ
ನನ್ನ ಸಮಸ್ಯೆಯ ಬಾಲ ಅವರಾಡಿಸುತ್ತಾ
ನನ್ನ ಹೆರಿಗೆಗೆ ಅವರೇ ತಿಣುಕಿ ಬೇನೆ ತಿನ್ನುತ್ತಾ
ಒಳಗೊಳಗೇ 'ಏನ್ ಉರದಾರ್‍ರೀ, ರಿಟೈರ್ ಆಗಿದ್ದೇ ಸರಿ'
ಎಂದು ಮನಸಲ್ಲಾಡುತ್ತಾ
ಸಂಕಟವೋ ಸಂತಸವೋ ಲೊಟ್ಟೆ ಹೊಡೆಯುತ್ತಾ
ಮೇಲುಗಣ್ಣಾಗಿ ಮುಲುಕುತ್ತಾರೆ

ನನಗೋ ಈಗ ಕಟ್ಟು ಕಳಚಿ ನಿಂತ ಪರಿ
ಗಗನದೆತ್ತರದಲ್ಲಿ ಗರುಡ ವಾಯುವಿಹಾರಿ
ಎಲ್ಲ ಕಿತ್ತು ಬಿಸುಟುನಿಂತ ಬಾಹುಬಲಿ
ಬಯಲಲ್ಲಿ ಬಯಲಾದ ಅಕ್ಕ ನಡೆದ ದಾರಿ

ಇನ್ನು ನನ್ನಷ್ಟಕ್ಕೆ ನಾನು,
ಸುಖವಾಗಿ ಹಾಸಿಗೆಯಲಿ ಬಿದ್ದು
ಬೇಕೆಂದಾಗ ಎದ್ದು ಆನಂದ ಮುಕ್ಕಳಿಸುತ್ತೇನೆ.
ಕಟ್ಟಕಟ್ಟಳೆಯೇ ಇಲ್ಲ,
ಬೆಳೆದ ಗಡ್ಡ ಬೋಳಿಸಬೇಕಿಲ್ಲ
ಕಾಫಿ ಕುಡಿಯಲು ಹಲ್ಲುಜ್ಜಲೇಬೇಕಿಲ್ಲ
ಸ್ನಾನ ಈಗ ನನಗೆ ಕಡ್ಡಾಯವಲ್ಲ
ಹತ್ತಕ್ಕೆ ಹಾಜರಾಗಿ ಗುಜರಾಯಿಸಿ ಸಹಿ
ಅಪರಾಧಿ ನಾನಲ್ಲ ಎಂದು ಹಾಡಬೇಕಿಲ್ಲ
ಪುಸ್ತಕ, ಪೆನ್ನು, ಕರ್ಚೀಫು, ಕೀ

ಬಾಚಣಿಗೆ, ಕಡೆಗೆ ಹಾಕಿಕೊಂಡ ಕನ್ನಡಕ
ಈಗ ಹುಡುಕಬೇಕಿಲ್ಲ.

ಎಲ್ಲೇ ಹರಿದ ಅಂಗಿಗೆ ಹೊಲಿಗೆ ಹಾಕಿಲ್ಲ
ನೀರು ಬಿಸಿಯಾಗಿಲ್ಲ ಅನ್ನ ಬೆಂದಿಲ್ಲ
ಎಂದು ಮಡದಿಯೊಂದಿಗೆ
ಅದಿಲ್ಲ ಇದಿಲ್ಲ ರೇಗಿ ಮುನಿಸಿಕೊಳ್ಳಬೇಕಿಲ್ಲ
ಕುಡಿವ ಕಾಫಿ ಕಹಿಯಾಗಬೇಕಿಲ್ಲ
ಮಾತು ಬಿರುಸಾಗಬೇಕಿಲ್ಲ

ಈಗ ಎಲ್ಲ ಖುಲ್ಲಂ ಖುಲ್ಲಾ
ಗಡಿಯಾರದ ಮುಳ್ಳುಮೊನೆ ತೋರುಬೆರಳಿಗೆ ನಾನಾಳಲ್ಲ
ವೇಳಾಪಟ್ಟಿ ನೊಗ ಹೊತ್ತು ಗಾಣದೆತ್ತಾಗಬೇಕಿಲ್ಲ
ಯಾರ ಅಂಜಿಕೆಯಿಲ್ಲ ಅಂಕುಶವಿಲ್ಲ ಸರ್ವತಂತ್ರ ಸ್ವತಂತ್ರ

ಅದಕ್ಕೇ ಸ್ವಾಮಿ ನಾನು ಹೇಳುವುದು
ನಿವೃತ್ತ ಎಂದರೆ ಮೃತ ಅಲ್ಲ
ಅದು ಮೊಸರು ಕಡೆದು ತೆಗೆದ ನವನೀತ
ಸಮುದ್ರ ಮಥನದ ಸೃಷ್ಟಿಯ ಅಮೃತ
ಶಾಂತ ಶಾಂತ ಈ ನಿವೃತ್ತ.

****

ಕವಿ–ಕಾವ್ಯ ವಿಚಾರ

ಮೇಷ್ಟ್ರಾಗಿ ನಿವೃತ್ತರಾಗಿರುವ ನಲ್ಲೂರು ಪ್ರಸಾದ್ ಅವರು ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ಸುಮಾರು ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ವರ್ಷಗಳ ಕಾಲ ಅಧ್ಯಾಪಕ, ಪ್ರವಾಚಕ, ಪ್ರಾಧ್ಯಾಪಕ ವೃತ್ತಿಯಲ್ಲಿದ್ದು ಹಲವು ಸುಖ–ಸಂತೋಷಗಳನ್ನು ಕಂಡವರು. ವೃತ್ತಿ ಬದುಕಿನ ಜೊತೆಗೆ ಕರ್ತವ್ಯದ ದಿನಚರಿಗೆ ಮನುಷ್ಯ ಒಗ್ಗಿಕೊಳ್ಳಬೇಕಾದದ್ದು ಅನಿವಾರ್ಯ, ಸಮಾಜಕ್ಕೆ ಮಾದರಿಯಾಗಿರುವ ಮೇಷ್ಟ್ರನ್ನು ನೋಡುವ ಪರಿಕ್ರಮ ಸಹಜವೇ ಸರಿ. ವೃತ್ತಿಯಿಂದ ನಿವೃತ್ತರಾದ ಮೇಲೆ ಮನಸ್ಸಿನಲ್ಲಿ ಉಳಿಯುವ ಶಿಷ್ಯ ಸಮೂಹ, ಕಂಡ ಅನುಭವ, ಪ್ರೀತಿ–ವಾತ್ಸಲ್ಯ, ಸದಾ ಒಂದೇ ವಯಸ್ಸಿನ ವಿದ್ಯಾರ್ಥಿಗಳಿಗೆ ಪಾಠ ಮಾಡಿದ್ದು ಸುಯೋಗವೇ

ಸರಿ. ನಲ್ಲೂರು ಪ್ರಸಾದರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ಬೆಂಗಳೂರು ವಿಶ್ವವಿದ್ಯಾಲಯ ಅಕೆಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. 'ಕರ್ನಾಟಕದ ಒಕ್ಕಲಿಗರಲ್ಲಿ ಗಂಗಡಿಕಾರರು' ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. ರಾಜ್ಯೋತ್ಸವ ಪ್ರಶಸ್ತಿಗೂ ಪಾತ್ರರಾಗಿದ್ದಾರೆ. 'ಜಾನಪದ ತಜ್ಞ' ಮನ್ನಣೆ ಪಡೆದಿದ್ದಾರೆ. ಕನ್ನಡನುಡಿ, ಅನಿಕೇತನ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಇವರ ಕೆಲವು ಮುಖ್ಯಕೃತಿಗಳು: ದಗ್ಧ, ಸೋನೆ ಮುಗಿಲು, ನಿವೃತ್ತೋಪನಿಷತ್ತು, ನವಿಲ ಜಾಗರ, ನಲ್ಲೂರು ದೊರೆಕಾಳಿ.

ಕವಿತೆ ನಿವೃತ್ತ ಅಧ್ಯಾಪಕರೊಬ್ಬರ ವೈಯಕ್ತಿಕ ದಿನಚರಿಯನ್ನು ಹೇಳುತ್ತದೆ. ಅಂತಹ ಸಾವಿರಾರು ಮನಸ್ಸುಗಳು ಪ್ರಾತಿನಿಧಿಕವಾಗಿ ವಿಸ್ತಾರಗೊಳ್ಳುತ್ತವೆ. ಕರ್ತವ್ಯ ನಿಷ್ಠೆಯ ಜೊತೆಗೆ ನಿವೃತ್ತಿ ನಂತರ ಸಿಗುವ ಸ್ವಾತಂತ್ರ್ಯ, ಮನಸ್ಸು ಉಲ್ಲಸಿತವಾಗುವ ಬಗೆ, ಆನಂತರದ ಬದುಕಿನ ಬಗ್ಗೆ ಕಾಡುವ ಪ್ರಶ್ನೆ, ಕೆಲವರಿಗೆ ನಿವೃತ್ತಿಯ ನಂತರ ಕಾಡುವ ಪಾಪಪ್ರಜ್ಞೆ, ಸುತ್ತಿಕೊಳ್ಳುವ ವೈಯಕ್ತಿಕ ಯೋಚನಾ ಲಹರಿಯ ಕಡೆಗೆ ಪದ್ಯ ಹರಿಯುತ್ತದೆ. ನಿವೃತ್ತನೆಂದರೆ ಕೇವಲ ವೃತ್ತಿಗಷ್ಟೇ ಅಲ್ಲ, ಅದರ ಜೊತೆಗೆ ಮಾಗುವ ದೇಹ, ಓಡುವ ಬದುಕಿನ ಕಡೆಗೆ ಕಾವ್ಯ ಪದ್ಯ ಸರಳತೆಯಿಂದ ಸಂಕೀರ್ಣತೆಯತ್ತ ಓದುಗರನ್ನು ಕರೆದೊಯ್ಯುತ್ತದೆ. ಮೂರ್ತದಿಂದ ಅಮೂರ್ತದ ಕಡೆಗೆ ಸಾಗುತ್ತದೆ.

೧೨. ಮನೆ

– ಅಗ್ರಹಾರ ಕೃಷ್ಣಮೂರ್ತಿ

ಮನೆಯ ಬೇಲಿಗೆ ಬೇಗೆ ಹೊಗೆ
ಬೇಯುತ್ತಿವೆ ಹೊಲದ ಬಣವೆ ಹೊರಗೆ
ದಾಳಿಗರ ಅಟ್ಟಹಾಸ ನಗೆ
ಹೊಸಿಲು ದಾಟಲಿ ಹೇಗೆ
ಹೊರಗೆ ಹೋಗಲಿ ಹೇಗೆ

ಮನೆಯಲ್ಲೆ ರೂಮಿನಿಂದ ಹಾಲಿಗೆ ಬರಲು ಭಯ
ಅಡಿಗೆ ಮನೆಯಲ್ಲಿ ಈಗತಾನೆ ಕಾಯಿಸಿಟ್ಟ
ಹಾಲು ಒಡೆದಿರಬಹುದೆಂಬ ಭಯ

ಹಳ್ಳಿಯಿಂದ ಬಂದ ಅಣ್ಣನ ಕುಶಲ
ವಿಚಾರಿಸುವ ಬಯಕೆಯ ಸುತ್ತ ಭಯ
ತಮ್ಮನ ಒಡಲ ಸಂಚು ಬೆಂಕಿಯ ಕೊಳ್ಳಿ
ಅಂಗಳದ ಮಂಚದ ಅಂಚಿಗೆ ಮುದುಡಿ
ಒಂಟಿ ಕುಂತ ಅವ್ವ, ದಾಹ ಎನುವ ಮುದುಕಿ
ಎದ್ದು ನೀರು ಕೊಡುವ ಕರ್ತವ್ಯಕ್ಕೆ ಭಯದ ಕುತ್ತು
ಭೂತ ಹೊಕ್ಕು ಬೇರು ಬಿಟ್ಟ ಮನೆ ನನ್ನದಾಯಿತು
ಈ ರಾತ್ರಿ ಈ ಮನೆಯಲ್ಲಿ
ಯಾರಿಗೂ ನಿದ್ರೆ ಬಂದಂತಿಲ್ಲ
ಆ ಕಡೆ ಇವಳು ಹೊರಳುತ್ತಾಳೆ ಸುಮ್ಮನೆ
ನಾನು ಮಲಗಿರಬಹುದೆಂದು ತಿಳಿದು
ಎಚ್ಚರವಿರುವುದು ಇಬ್ಬರೂ ಖಚಿತ ಆದರೂ
ಭಯ ಒಟ್ಟಿಗೆ ಮಾತಾಡಲು ಏನಾದರೂ
ನಮ್ಮ ಮನೆ ಸಂಸಾರ ಕುರಿತು
ನನ್ನ ಬಗೆಗೆ ಅವಳ ಅನುಮಾನ ಕುರಿತು
ಅವಳ ಬಗೆಗೆ ನನ್ನ ಆಕ್ಷೇಪಣೆ ಕುರಿತು
ಪ್ರೀತಿ ಮಾತಾಡಿ ಕತ್ತಲ ಕಳೆಯಲು ಭಯ

ಈ ರಾತ್ರಿ ಈ ಮನೆಯಲ್ಲಿ
ಯಾರಿಗೂ ನಿದ್ರೆ ಬಂದಂತಿಲ್ಲ
ಮಗ ರವಿ ಮೆಲ್ಲನೆ ಅಮ್ಮಾ ಅಂದ
ದನಿಗೆ ಹುಂ ಅನ್ನುತ್ತಾಳೆ ಇವಳು
ಮತ್ತೆ ಮಾತು ಮುಂದುವರಿಸದೆ ಅವನು

ಇವಳೆಚ್ಚರವ ಖಾತ್ರಿ ಮಾಡಿಕೊಳ್ಳುತ್ತಾನೆ
ಮಗಳು ಮುಖದಡವಿ ಮೀಸೆ ಮುಟ್ಟಿ
ಅಪ್ಪ ಹೌದೆಂದು ಕೊರಳ ಬಳಸುತ್ತಾಳೆ
ಎಳೆನವಿರು ತೋಳಿಗೆ ಮುತ್ತಿಡಬೇಕೆಂಬ
ಒತ್ತಿ ಬರುವ ವಾತ್ಸಲ್ಯದ ಸುತ್ತ ಭಯ

ಭೂತ ಹೊಕ್ಕು ಬೇರುಬಿಟ್ಟ ಮನೆಯ ಕತ್ತಲು
ಬೆರಳು ಬಿಗಿಯುತ್ತದೆ ಕೊರಳ ಸುತ್ತಲು

****

ಕವಿ–ಕಾವ್ಯ ವಿಚಾರ

ಅಗ್ರಹಾರ ಕೃಷ್ಣಮೂರ್ತಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಚೆಟ್ಟಿ ಅಗ್ರಹಾರದಲ್ಲಿ ೧೯೫೩ರಲ್ಲಿ ಜನಿಸಿದರು. ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಿಂದ ಬಿ.ಎ. ಆನರ್ಸ್ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡದ ಅಧ್ಯಯನ ಕೇಂದ್ರದಿಂದ ಕನ್ನಡ ಎಂ.ಎ. ಪದವಿ ಪಡೆದರು. ಬೆಂಗಳೂರು ಮತ್ತು ಧಾರವಾಡ ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ, ಬೆಂಗಳೂರಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ದಕ್ಷಿಣ ವಲಯ ಪ್ರಾದೇಶಿಕ ಕೇಂದ್ರದ ಕಾರ್ಯದರ್ಶಿಯಾಗಿ, ಪ್ರಸ್ತುತ ದೆಹಲಿಯಲ್ಲಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಳ್ದಿಂಗಳಪ್ಪನ ಪೂಜೆ, ದಾರಾಶಿಖೊ, ನೀರು ಮತ್ತು ಪ್ರೀತಿ, ಸಂಸ್ಕೃತಿ ಕಥನ, ಬಹುವಚನ – ಇವು ಅಗ್ರಹಾರರು ಪ್ರಕಟಿಸಿರುವ ಕೃತಿಗಳಲ್ಲಿ ಕೆಲವು. ಇವರ ಕವಿತೆಗಳು ಇಂಗ್ಲಿಷ್ ಮತ್ತು ಸ್ವೀಡಿಷ್ ಭಾಷೆಗಳಿಗೆ ಅನುವಾದಗೊಂಡಿವೆ. ಜಾತಿವಿನಾಶ ಸಮ್ಮೇಳನ, ಬೂಸಾ ಚಳುವಳಿ, ಜೆ.ಪಿ. ಚಳುವಳಿ, ಗೋಕಾಕ್ ಚಳುವಳಿ ಮುಂತಾದ ಪ್ರಗತಿಪರ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿರುವ ಅಗ್ರಹಾರ ಕೃಷ್ಣಮೂರ್ತಿ ಕೆಂಪೇಗೌಡ ಪ್ರಶಸ್ತಿ, ಎಸ್.ಆರ್. ಪಾಟೀಲ್ ಪ್ರಶಸ್ತಿ ಮುಂತಾದ ಗೌರವಗಳಿಗೆ ಪಾತ್ರರಾಗಿದ್ದಾರೆ. ಸ್ವೀಡನ್, ಫ್ರಾನ್ಸ್, ಇಂಗ್ಲೆಂಡ್ ಮುಂತಾದ ದೇಶಗಳಿಗೆ ಭೇಟಿ ನೀಡಿದ್ದಾರೆ.

೧೩. ಅನ್ವೇಷಣೆ

– ಕೆ. ಷರೀಫಾ

ಕವಿತೆ ಬರೆಯುತ್ತೇನೆ
ಸಂಘರ್ಷದ ಹಾದಿಯಲಿ
ನೋವಿನ ಎಳೆ ಎಳೆಗೆ
ಚೀತ್ಕಾರದ ಧ್ವನಿಗಳಿಗೆ
ಮಾಧ್ಯಮ ಹುಡುಕುತ್ತೇನೆ

ನಾನು ಇದ್ದುದಕ್ಕೆ
ಸಾಕ್ಷಿ – ಪುರಾವೆಗಳ
ಒಂದೊಂದೇ ದಾಖಲಿಸುತ್ತೇನೆ
ಗೋರಿಯಿಂದ ಎದ್ದೆದ್ದು ಬರುವ
ಪ್ರಶ್ನೆಗಳಿಗೆ ಉತ್ತರ ಹುಡುಕುತ್ತೇನೆ

ಭೂಮಿಯಲಿ ಬೇರುಗಳ
ಬಿಳಲುಗಳ ಭದ್ರಗೊಳಿಸಿ
ನೆಲೆಯ ಕಾಣಲು
ದಾರಿ ಹುಡುಕುತ್ತೇನೆ
ಮತ್ತೆ ಮತ್ತೇ ಬರೆಯುತ್ತೇನೆ

ಹೆಣ್ಣಿನ ನೋವುಗಳು
ನಿಟ್ಟುಸಿರುಗಳು ಅವುಚಿಕೊಳ್ಳುತ್ತ
ಅಸಹಾಯಕ–ಹಸಿವಿನಿಂದ ಆರ್ತತೆ
ದಯನೀಯ ಧ್ವನಿಯಿಲ್ಲದ
ಸ್ಥಿತಿಗಳ ಬಗ್ಗೆ

ಧ್ವನಿಯಾಗಿ ಹೊರಹೊಮ್ಮದೇ
ಕೊರಳಲಿ ಇಂಗಿದ ಹಾಡುಗಳ ಬಗ್ಗೆ
ವಾಸ್ತವಕ್ಕಿಳಿಯದೇ ಕತ್ತಲಲ್ಲೇ
ಕರಗಿದ ಕನಸುಗಳ ಬಗ್ಗೆ
ಅರಳಿ ಘಮಘಮಿಸದೇ
ಕಮರಿಹೋದ ಹೂವುಗಳ ಬಗ್ಗೆ

ಅಗ್ರಹಾರ ಕೃಷ್ಣಮೂರ್ತಿಯವರ 'ಮನೆ' ಕವಿತೆಯಲ್ಲಿ ಲೇಖಕರ ಮನೆಗೆ ಬಂದ ಅಣ್ಣ, ಅಣ್ಣನೊಂದಿಗೆ ಮನಬಿಚ್ಚಿ ಮಾತಾಡಲು ಮುಜುಗರಪಟ್ಟ ಲೇಖಕರ ಮನಃಸ್ಥಿತಿಯ ತಲ್ಲಣಗಳು ವ್ಯಕ್ತವಾಗಿವೆ. ಬದಲಾದ ಇಂದಿನ ಸಮಾಜದಲ್ಲಿ ಮನೆ ಎಂಬುವುದು ಕೇವಲ ಹೆಂಡತಿ–ಮಕ್ಕಳ ಹಿತ ಕಾಯುವ ಕೇಂದ್ರವಾಗಿದೆ. ದೈನಂದಿನ ಬದುಕಿನಲ್ಲಿ ಕೇವಲ ಸ್ವಾರ್ಥ ಪರಾಕಾಷ್ಠೆ ಮುಟ್ಟಿದೆ. ಅಣ್ಣ–ತಮ್ಮಂದಿರ ಪ್ರೀತಿ, ತಂದೆ–ತಾಯಿಯರ ಪ್ರೀತಿ, ಮನೆ ಮಂದಿಯ ಪ್ರೀತಿಯ ಬೆಸುಗೆಯಲ್ಲಿ ಬೆಳೆದುಬಂದ ಲೇಖಕರಿಗೆ ಅಣ್ಣ ಮನೆಗೆ ಬಂದಾಗ ಅವನೊಂದಿಗೆ ಮನಬಿಚ್ಚಿ ಮಾತನಾಡಲು ಹೆಂಡತಿಯ ಭಯ. ಇಳಿವಯಸ್ಸಿನ ಅವ್ವ ನೀರು ಕೇಳಿದಾಗ ಕೊಡುವುದಕ್ಕೆ ಭಯ. ಮನೆಯಲ್ಲಿ ರಾತ್ರಿ ಯಾರಿಗೂ ನಿದ್ದೆ ಬಂದಂತಿಲ್ಲ. ಆದರೂ ಲೇಖಕರಿಗೆ ಮುಜುಗರ. ಬೆನ್ನು ಬಿಡದ ಬೇತಾಳನಂತೆ ಆವರಿಸಿಕೊಂಡ ಹೆಂಡತಿಯ ಆಕ್ಷೇಪಣೆಗಳ ಸರಮಾಲೆ. ಎಚ್ಚರವಾಗಿದ್ದರೂ ಅಮ್ಮ ಎಂದು ಕರೆಯಲು ಮಗುವಿಗೆ ಮುಜುಗರ. ಮುದ್ದು ಮಗುವಿಗೆ ಮುತ್ತು ನೀಡಲು ಮುಜುಗರ. ಹೀಗೆ 'ಮನೆ' ಕವಿತೆಯಲ್ಲಿ ಹಲವು ಮುಜುಗರಗಳ ಮಧ್ಯೆ ಲೇಖಕರು ತಮ್ಮ ಮುಜುಗರದ ಮನೆಯ ಸನ್ನಿವೇಶವನ್ನು ವಿವರಿಸಿದ್ದಾರೆ.

೧೪. ಒಲೆ

– ಕವಿತಾ ರೈ. ಬಿ.ಆರ್.

ನಾನೇನು ಕಾಣದ್ದಲ್ಲ
ನಾನಿರುವಂತಹ ಮನೆಗಳನ್ನು
ಹಜಾರ ಅಡುಗೆ ಬಚ್ಚಲು ಮಲಗಲು
ಬೆರಳೆಣಿಕೆಯ ಕೋಣೆಗಳು
ಗಾಳಿ ಬೆಳಕಿಗೆ ಎರಡು ಬಾಗಿಲು
ದಿಕ್ಕಿಗೊಂದರಂತೆ ಕಿಟಕಿ

ಅಡುಗೆ ಮನೆಯ ಕೇಂದ್ರ ಒಲೆ
ಅಜ್ಜಿ ಅಮ್ಮ ಈಗ ಸರದಿಯಲ್ಲಿ ನಾನು
ಕುಳಿತ ಭಂಗಿಗಳೆಷ್ಟು ಊದಿ
ಊದಿ ಹೊಗೆ ಹೀರಿದ್ದೆಷ್ಟು
ಹೊಸ್ತಿಲು ಹಿತ್ತಲು ಹಜಾರ
ಎಲ್ಲವೂ ಇರಲಿ ಮಲಗುವ
ಕೋಣೆಗಳ ಪಿಸಿ ಪಿಸಿ
ಹುಸಿ ಬಿಸಿ ಒಣ ಒಡಕು
ಮಾತು ಕತೆಗಳಿಗೆಲ್ಲ ಒಲೆ
ಮುಂದಿನ ನಿಟ್ಟುಸಿರೇ ಪರಿಹಾರ.

ಇಲ್ಲಿ ಏನೆಲ್ಲ ಬೆಂದಿಲ್ಲ !
ಹಸಿ ಹಸಿರು ಕಾಯಿಪಲ್ಲೆಗಳೆಲ್ಲ
ಕಂದು ಕಪ್ಪಾಗಿ ಮಾಗಿಲ್ಲ !
ಹಿಟ್ಟು ರೊಟ್ಟಿಯಾಗಿ ರುಚಿಗಟ್ಟಿಲ್ಲ
ಅಪರೂಪಕ್ಕೆ ಮಾಂಸವೂ ಬೆಂದಿಲ್ಲ !

ಇಲ್ಲವೆನ್ನುವವರು ಯಾರು
ಅಜ್ಜಿ ಅವಳಮ್ಮ ನನ್ನಮ್ಮ
ನಾನು ಹೇಳುತ್ತೇನೆಯೇ
ಹೋಗಲಿ ಒಲೆ ಹೇಳುತ್ತದೆಯೇ
ಅದು ಕೇಳಿದ ಕತೆಗಳನ್ನು
ಒಲೆ ತಾನೆ ಏನು ಹೇಳೀತು

ಸಾಕ್ಷಿ ಪುರಾವೆಗಳ ಹುಡುಕುತ್ತೇನೆ
ಮತ್ತೆ ಮತ್ತೆ ಬರೆಯುತ್ತೇನೆ
ಸಂಘರ್ಷದ ಹಾದಿಯಲಿ
ನೋವಿನ ಎಳೆಎಳೆಗೆ
ಚೀತ್ಕಾರದ ಧ್ವನಿಗಳಿಗೆ
ಮಾಧ್ಯಮ ಹುಡುಕುತ್ತೇನೆ

******

ಕವಿ–ಕಾವ್ಯ ವಿಚಾರ

ಕಲುಬುರ್ಗಿಯಲ್ಲಿ ಜನಿಸಿದ ಕೆ. ಷರೀಫಾ ಹರಿಹರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಲೆಕ್ಕಿಗ ವೃತ್ತಿಯಲ್ಲಿದ್ದರು. ಈಗ ಬೆಂಗಳೂರಿನಲ್ಲಿದ್ದಾರೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಇವರು ಆ ಸಮುದಾಯದ ವಿಭಿನ್ನ ಬದುಕನ್ನು ತಮ್ಮ ಬರಹಗಳಲ್ಲಿ ಅನಾವರಣಗೊಳಿಸಿದ್ದಾರೆ. ಉರ್ದು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕಿಯಾಗಿಯೂ ಕೆಲಸ ಮಾಡಿದ್ದಾರೆ. ಸ್ತ್ರೀ ಸಂವೇದನೆ, ಪ್ರತಿಭಟನೆ, ಶೋಷಣೆಯ ವಿರುದ್ಧದ ಕೂಗು ಇವರ ಬರಹಗಳ ಕೇಂದ್ರ ಕಾಳಜಿಯಾಗಿದೆ. ನೂರೇನಳ ಅಂತರಂಗ, ಪಾಂಚಾಲಿ, ಮುಮ್ತಾಜಳ ಮಹಲು ಮುಂತಾದವು ಇವರ ಕವನ ಸಂಕಲನಗಳಾದರೆ, ಮಹಿಳೆ ಮತ್ತು ಸಮಾಜ, ಬಂಡಾಯ, ಮುಸ್ಲಿಂ ಸಂವೇದನೆ ಗದ್ಯಕೃತಿಗಳಾಗಿವೆ.

ಬಂಡಾಯ ಮನೋಭಾವನೆಯಿಂದ ಬರೆಯುವ ಕೆ. ಷರೀಫಾ ವರು ಕಲೆ ಕಲೆಗಾಗಿ ಅಲ್ಲ, ಜೀವನಕ್ಕಾಗಿ ಎನ್ನುವಂತೆ ಕವಿತೆ ಕೇವಲ ಕವಿತೆಯಾಗಬಾರದು ಎನ್ನುವ ಧ್ವನಿಯನ್ನು ಎತ್ತಿದ್ದಾರೆ. ಕವಿತೆ ಎನ್ನುವುದು ಮೂಲಭೂತವಾಗಿ ಅನ್ವೇಷಣೆಯಾಗಿರಬೇಕು ಎಂಬುದು ಈ ಕವಿತೆಯ ಆಶಯ. ಈ ಹಿನ್ನೆಲೆಯಲ್ಲಿ ಬದುಕಿನ ಸಂಘರ್ಷಗಳು, ಚೀತ್ಕಾರಗಳು, ನೋವು ನಲಿವುಗಳು, ದುಃಖ–ದುಮ್ಮಾನಗಳು, ಅಸಹಾಯಕತೆಗಳು ಅಭಿವ್ಯಕ್ತಿಯನ್ನು ಪಡೆದುಕೊಳ್ಳಬೇಕು. ಆಗಲೇ ಕವಿತೆಗೆ ಒಂದು ಅಂತಃಸತ್ವ ಬರುವುದು. ಅದು ಮನುಷ್ಯರಲ್ಲಿನ ತಮಂಧಕ್ಕೆ ಜ್ಯೋತಿಯಾಗುವುದು ಎನ್ನುವ ನಿಲುವನ್ನು ಷರೀಫಾ ವ್ಯಕ್ತಪಡಿಸಿದ್ದಾರೆ.

ಖಾ೦ಡ

ಹುಚ್ಚು ಹುರುಪಿನ ನೂಕುನುಗ್ಗುಲಲ್ಲಿ–
ಅಚ್ಚುಕಟ್ಟಿನ ಹಾಗೆ
೪೦ ಮಾದರಿಯ ಬೆಂಗಳೂರಿನ ಹಾಗೆ
ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು "ಅಯ್ಯೋ" ಎಂದಿದ್ದೇನೆ;
ಎನ್ನುತಿರುವಂತೆಯೆ ಕೈಯ ಮುಗಿದಿದ್ದೇನೆ.

ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ,
ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು
ಎಸೆಯುತಿವೆ ಪ್ರತಿಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲು

–೩–

ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು – ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು :
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ
ಟೈಲರನ ಎಡಗಾಲನುಳುಕಿಸಿದ್ದು ;
ರಾತ್ರಿ ಪುರಭವನದಲಿ ಸಂಗೀತ ಸಾಮ್ರಾಜ್ಞಿ
ಶಂಕರಾಭರಣದಲ್ಲಿ ಪಲುಕಿಸಿದ್ದು ;
ಅಬ್ದುಲನ ಹೈಕೋರ್ಟು ರಿಟ್ಟು ವಜಾ ಆದದ್ದು ;
ಖೋಟಾ ನೋಟ್ ಕೃಷ್ಣನಿಗೆ ಕಠಿಣ ಸಜಾ ಆದದ್ದು ;
ಬದರಿ ನಾದಿನಿಗೊಬ್ಬ ಒಳ್ಳೆ ವರ ಸಿಕ್ಕಿದ್ದು ;
ರಷ್ಯ ಚೀನಾ ಕ್ಯೂಬ ಅಮೇರಿಕ ವಾರ್ತೆ ಮಿಕ್ಕಿದ್ದು –
ಅದೂ ಇದೂ ಇಪ್ಪತ್ತೆಂಟನಾಡುವುದು
ನಡುವೆ ತಪ್ಪಾಡಿದರೆ ಎದುರಾಳಿಯಲ್ಲೊಬ್ಬ
ಮನೆಯ ಕಿರಿಸೊಸೆಯಂತೆ ಮುಖವನೂದಿಸಿ ಬೀಗಿ
ಗೊಣಗುವುದು.

ಇನ್ನಿವರ ಜೀವನ? ಅದು ಕೂಡ ಹೀಗೆಯೇ, ಎಲ್ಲ ಖಿಲ್ಲ ;
ಖುಷಿಗಷ್ಟೆ ನಫೆಗಲ್ಲ
ಗಂಟೆಗಟ್ಟಲೆ ಕಲಸಿದರು ಕೈ
ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.

ಎಲ್ಲವೂ ಉರಿದು ಬೂದಿಯಾಗಿದೆ
ಬೂದಾಗಿದೆ ಬಣ್ಣ ಕಳೆದುಕೊಂಡಿದೆ
ಪಡೆದುಕೊಂಡದ್ದೂ ಇದೆ.
ಇತ್ತೀಚೆಗೆ ಮಾವ ಬೇಡವೆಂದರೂ
ಇವರು ಒಲೆ ತೆಗೆಸಿದ್ದು
ಕಟ್ಟೆ ಹಾಕಿಸಿದ್ದು ಗ್ಯಾಸ್ ಕೊಂಡದ್ದು

ಈಗ ಹೊಗೆ ಇಲ್ಲ ಧಗೆಯಿಲ್ಲ
ಕೊತ ಕೊತ ಕುದಿ ಕಾಣುವುದಿಲ್ಲ
ಇಕ್ಕಳವಿದೆಯಲ್ಲ ಕೈಸುಡುವುದಿಲ್ಲ
ಒಲೆಯ ಜೊತೆಗೆ ಬದಲಾಗಿದೆ
ಬಚ್ಚಲಿನಿಂದ ಎಲ್ಲವೂ ಹಜಾರದವರೆಗೆ
ಎರಡು ಬಾಗಿಲಿದ್ದರೇನು ಹೊಸ ಗಾಳಿ
ಬೆಳಕಿನ ವ್ಯವಸ್ಥೆ ಎಲ್ಲಾ
ಮನೆಯೊಳಗೆ ಇದೆ
ಬದಲಾದ ಬಗ್ಗೆ ಮತ್ತೆ ಮಾವನ ಮಾತಿಲ್ಲ

ಇಂದು ಇವರು ಹೇಳುತ್ತಾರೆ
ನಾನು ನಿನ್ನ ಜೊತೆಗೆ ಇದ್ದೇನೆ
ಅಡುಗೆ ಮನೆಯಲ್ಲಿ ನಿನ್ನ ಸೆರಗು ಹಿಡಿದಿಲ್ಲ
ಕೈಗೆ ಕಾಲಿಗೆ ಬೇಕುಬೇಕಾದ್ದು ಇದೆಯಲ್ಲ
ಕೆಲಸಕ್ಕೆ ಜೊತೆ ಸೇರಿದ್ದೇನೆ ಸಖಿ ನೀನು
ನಮ್ಮಜ್ಜಿ ನಿನ್ನಜ್ಜಿ ಅಮ್ಮಂದಿರಿಗಿಂತ

ಒಳಗೆ ಕುಕ್ಕರು ಕೂಗುತ್ತಿದೆ ಒತ್ತಡದಿಂದ
ಒಲೆ ಬದಲಾದರೇನು ಉರಿ ಬದಲಾಗಿದೆಯೆ?
ಅಡುಗೆಯ ಅನುಭವ ಇಬ್ಬರಿಗೂ ಇದೆ
ಉಷ್ಣತೆಯ ತಾಪಕ್ಕೆ ಮುಚ್ಚಳ ಹಾರೀತು
ಕುಕ್ಕರಲ್ಲವೇ ತಾನೇ ತಣಿಯಲೆಂದು ಕಾಯಲಾಗುವುದಿಲ್ಲ
ಆವಿ ಹೋಗಲೇಬೇಕು ಹೊರಗೆ

****

ಕವಿ–ಕಾವ್ಯ ವಿಚಾರ

ಡಾ. ಕವಿತಾ ರೈ ಕನ್ನಡದ ಅತ್ಯುತ್ತಮ ಕವಯತ್ರಿಗಳಲ್ಲಿ ಒಬ್ಬರು. ಹಕ್ಕಿ ಹರಿವ ನೀರು, ನೀರತೇರು, ಇವು ಇವರ ಕವನ ಸಂಕಲನಗಳು. ಮಹಿಳೆ ಅಸ್ಮಿತ್ವದ ಸಂಕಥನ, ಅರಿವಿನ ನಡೆ, ನವವಿಸರ್ಗ, ವಿವಾಹ ಮತ್ತು ಕುಟುಂಬ ಇವು ವಿಮರ್ಶಾ ಕೃತಿಗಳು. ಇವರಿಗೆ ಎಂ.ವಿ. ಇನಾಂದಾರ್ ಪ್ರಶಸ್ತಿ, ಬೇಂದ್ರೆ ದತ್ತಿ ಪ್ರಶಸ್ತಿ, ಗುಡಿಬಂಡೆ ಪೂರ್ಣಿಮಾ ದತ್ತಿನಿಧಿ ಬಹುಮಾನ ಬಂದಿದೆ. ಪ್ರಸ್ತುತ ಇವರು ಮಂಗಳೂರು ವಿಶ್ವವಿದ್ಯಾಲಯಲದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕವಿತಾ ರೈ ಮೂಲತಃ ಮಹಿಳಾವಾದಿ ಚಿಂತಕಿ. ತಮ್ಮ ಎಲ್ಲಾ ಬರಹಗಳಲ್ಲಿ ಸ್ತ್ರೀಪರ ಕಾಳಜಿಯನ್ನು ವ್ಯಕ್ತಪಡಿಸುತ್ತಲೇ ಸಮಕಾಲೀನ ಸಮಾಜದಲ್ಲಿ ಸ್ತ್ರೀಯ ಬದುಕಿನ ಒಳನೋಟಗಳನ್ನು ಸೆರೆ ಹಿಡಿಯುವುದರಲ್ಲಿ, ಅವಳ ಮಾನಸಿಕ ತಲ್ಲಣಗಳನ್ನು, ತಳಮಳಗಳನ್ನು, ನೋವು ನಲಿವುಗಳನ್ನು ಬಹಳ ಸೂಕ್ಷ್ಮವಾಗಿ ಕವಿತೆಗೆ ಇಳಿಸುವ ಶೈಲಿ ಮೆಚ್ಚುವಂತಹುದು. ಪ್ರಸ್ತುತ ಪದ್ಯದಲ್ಲಿ 'ಒಲೆ' ಎನ್ನುವುದು ಮನೆಯ ಕೇಂದ್ರ 'ಒಲೆ' ಇಲ್ಲದ ಮನೆ ಇಲ್ಲ. ಒಲೆ ಯಾವುದೇ ರೂಪದಲ್ಲಿರಬಹುದು ಹೆಣ್ಣಿನ ಬದುಕು ತಲೆತಲಾಂತರದಿಂದ ಈ 'ಒಲೆ'ಯನ್ನು ಅವಲಂಬಿಸಿಕೊಂಡು ಬರುತ್ತಿದೆ. ಅಜ್ಜಿ, ಅಮ್ಮ, ನಾನು – ಹೀಗೆ ತನ್ನೆಲ್ಲಾ ನೋವು ಗೋಳಾಟಗಳನ್ನು ಈ 'ಒಲೆ' ಮೌನವಾಗಿಯೇ ನೋಡಿಕೊಂಡು ಬಂದಿದೆ. ತನ್ನ ಗರ್ಭದಲ್ಲಿ ಬೂದಿಯಾಗಿಸಿದೆ.

ವರ್ತಮಾನದಲ್ಲಿ 'ಒಲೆ' ಮಾಯವಾಗಿ ಗ್ಯಾಸ್ ಬಂದಿದೆ. ಈಗ ಹೊಗೆ ಇಲ್ಲ, ಧಗೆ ಇಲ್ಲ, ಕೊತಕೊತ ಕುದಿ ಕಾಣುವುದಿಲ್ಲ, ಏನೆಲ್ಲಾ ಬದಲಾಗಿದೆ ಎಂಬ ಸಂತೋಷ ಒಂದು ಕಡೆಯಾದರೆ ಗಂಡು ಹೆಣ್ಣು ಇಬ್ಬರೂ ದುಡಿಮೆಯಲ್ಲಿ ತೊಡಗಿದ್ದರಿಂದ ಮತ್ತೊಂದು ಸಮಸ್ಯೆ ಕಾಡುತ್ತದೆ ಎನ್ನುತ್ತಾರೆ. 'ಒಳಗೆ ಕುಕ್ಕರು ಕೂಗುತ್ತಿದೆ' ಒತ್ತಡದಿಂದ ಒಲೆ ಬದಲಾದರೇನು ಉರಿ ಬದಲಾಗಿದೆಯೇ? ಅಡುಗೆಯ ಅನುಭವ ಇಬ್ಬರಿಗೂ ಇದೆ. ಆದರೆ ಆ ಉಷ್ಣತೆಯ ಶಾಖಕ್ಕೆ ಮುಚ್ಚಳ ಹಾರಿದರೆ ಕಷ್ಟ ಎಂದು ಬಹಳ ಮಾರ್ಮಿಕವಾಗಿ ಬದಲಾದ ಮಹಿಳೆಯ ಸ್ಥಾನಮಾನ/ ಸಾಂಸಾರಿಕ ಜಂಜಾಟವನ್ನು ಇನ್ನೊಂದು ರೂಪದಲ್ಲಿ ಎದುರಿಸಬೇಕಾದ ಅನಿವಾರ್ಯತೆಯನ್ನು ಪ್ರಸ್ತಾಪಿಸುತ್ತಿದ್ದಾರೆ. ಆಧುನಿಕತೆ, ಶಿಕ್ಷಣ, ಉದ್ಯೋಗ ಇವುಗಳು ಮಹಿಳೆಗೆ ಏನೆಲ್ಲಾ ಸೌಲಭ್ಯ ತಂದುಕೊಟ್ಟರೂ ಅವಳ ಅಂತರಂಗದ ತುಮುಲಗಳು ಹಾಗೂ ಸಾಂಸಾರಿಕ ನೋವುಗಳು ಹೊಸ ಸ್ವರೂಪದ ಸಮಸ್ಯೆಗಳಿಗೆ ಈಡಾಗುತ್ತಿರುವುದನ್ನು ಈ ಕವಿತೆ ವಿವರಿಸುತ್ತದೆ.

ಉಅ

ಗದ್ಯ ಭಾಗ

೧. ಅಜ್ಜಯ್ಯನ ಅಭ್ಯಂಜನ

– ಕುವೆಂಪು

ಮಲೆನಾಡಿನ ಜೀವನವನ್ನು ಸಾಮಾನ್ಯವಾಗಿ ನಿರುದ್ವಿಗ್ನ ಎಂದು ಕರೆಯಬಹುದು. ನಗರಗಳಲ್ಲಿರುವಂತೆ ದ್ರುತಪದಸಂಚಾರವಿಲ್ಲ ; ಮೋಟಾರು ಮೊದಲಾದ ಆತುರದ ಯಾನಗಳ ಗಡಿಬಿಡಿಯಿಲ್ಲ ; ಸಿನಿಮಾ ನಾಟಕಶಾಲೆಗಳ ಉದ್ವೇಗವಿಲ್ಲ ; ಚಿತ್ರವಿಚಿತ್ರವಾದ ವರ್ತಮಾನ ಸಂಕುಲದಿಂದ ಸಮಾಚ್ಛನ್ನವಾಗಿ ಶಾಂತಿಭಂಗಕಾರಿಗಳಾಗಿರುವ ಚಿತ್ರಗುಪ್ತನ ದಫ್ತರದಂತಿರುವ ಪತ್ರಿಕೆಗಳ ಗಲಭೆಯಂತೂ ಬಹಳಮಟ್ಟಿಗೆ ಸೊನ್ನೆ. ಸಾಯಂಕಾಲದಲ್ಲಿ ದಿನದ ಬೇಸರವನ್ನು ಪರಿಹರಿಸಿಕೊಳ್ಳಲೆಂದು ಉಪನ್ಯಾಸಮಂದಿರಗಳಿಗೆ ಹೋಗಿ ನೀರಸವಾದ ಭಾಷಣಗಳನ್ನು ಕೇಳಿ ಬೇಜಾರಿಗೆ ಬದಲಾಗಿ ಅಶಾಂತಿಯನ್ನು ತುಂಬಿಕೊಂಡು ಗೊಣಗುತ್ತ ಹಿಂತಿರುಗುವ ಪ್ರಸಂಗಗಳಂತೂ ಒದಗುವುದೇ ಇಲ್ಲ. ಅಲ್ಲಿರುವುದು ಕೇವಲ ಶಾಂತಿ ; ವನ್ಯವಾದರೂ ಅನಾಗರಿಕವಲ್ಲದ ಶಾಂತಿ. ಸುತ್ತ ನೋಡಿದರೆ ಮಾಲೆಮಾಲೆಯಾದ ಮಲೆಗಳು, ದಟ್ಟವಾದ ಕಾಡುಗಳು; ಅಲ್ಲಿ ಮೌನವನ್ನೇ ಮಲಗಿಸುವ ಜೋಗುಳದಂತಿರುವ ಹಕ್ಕಿಗಳ ಸವಿದನಿ. ಮೇಲೆ ತಲೆಯೆತ್ತಿ ನೋಡಿದರೆ ಆಕಾಶ, ನೀಲಾಕಾಶ ; ಅನಂತ, ಅಪಾರ, ಪ್ರಶಾಂತ. ಅಲ್ಲಿ ಸುತ್ತುವ ಬೆಳ್ಮುಗಿಲಿನ ತುಂಡುಗಳೂ ಕೂಡ ಮೆಲ್ಲಗೆ ಚಲಿಸುತ್ತ ಜಗತ್ತನ್ನು ಸ್ವಪ್ನದಿಂದ ಹೊದಿಸುವಂತೆ ತೋರುತ್ತವೆ. ದಾರಿಯಲ್ಲಿ ತೊರೆಗಳೇನೋ ಬಂಡೆಯಿಂದ ಇಳಿದು ಜಾರಿ ಹರಿಯುತ್ತಿರುತ್ತವೆ. ಆದರೆ ಹರಿದಾಟದಲ್ಲಿರುವುದು ತತ್ತ್ವಜ್ಞನ ಔದಾಸೀನ್ಯ ; ಯೋಗಿಯ ನಿಷ್ಕಾಮಕರ್ಮ. ಜನಗಳ ನಿತ್ಯಜೀವನದಲ್ಲಿ ಹಲಕೆಲವು ಕ್ಷುದ್ರಕ್ಷುದ್ರ ಉದ್ವೇಗಗಳಿರಬಹುದು ; ಬಡಸಂಸಾರದ ಸಾಲದ ಶೂಲೆ ; ಮನೆಯಲ್ಲಿ ಮಗುವಿಗೆ ಜ್ವರ ; ಒಂದು ಎತ್ತನ್ನು ಹುಲಿ ಹಿಡಿದುದರಿಂದ ಈ ಸಾರಿ ಉಳಲು ಒಂದು ಎತ್ತು ಸಾಲದು; ಮಳೆಗಾಲಕ್ಕೆ ಬೇಕಾದ ಕಟ್ಟಿಗೆ ಇನ್ನೂ ಮನೆಗೆ ಬಂದಿಲ್ಲ ; ಕೋರ್ಟಿನಲ್ಲಿ ಕೇಸು ; ದನಕರುಗಳಿಗೆ ಜಕ್ಕಿಣಿಯ ಕಾಟ – ಇತ್ಯಾದಿ.

ಇಂತಹ ಶಾಂತಿಪ್ರಪಂಚದಲ್ಲಿಯೂ ಕ್ರಾಂತಿಕಾಲಗಳಿವೆ. ಜನನ ಸಮಯದಲ್ಲಿ, ಮರಣ ಸಮಯದಲ್ಲಿ, ವಿವಾಹಕಾಲದಲ್ಲಿ, ಬೇಟೆಯಲ್ಲಿ ಮನೆಯ ಜನಗಳೆಲ್ಲ ತುಂಬ ಚಟುವಟಿಕೆಯಿಂದಿರುತ್ತಾರೆ. ಪೊಲೀಸರ ಕಾಟ, ಜಮಾಬಂದಿಯ ಊಟ ಇವುಗಳನ್ನು ಉತ್ಕ್ರಾಂತಿಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಚಾರವಾಗಿ ಮುಂದೆ ಹೇಳುತ್ತೇನೆ.

ಮೇಲೆ ಹೇಳಿದ ವಿಷಯಗಳನ್ನು ಬಿಟ್ಟರೆ ಇನ್ನೊಂದು ಕ್ರಾಂತಿವಿಷಯವಿದೆ. ಅದು ಯಾವುದೆಂದು ಊಹಿಸಬಲ್ಲಿರೇನು? ಇಲ್ಲ ; ನಿಮ್ಮಿಂದಾಗುವುದಿಲ್ಲ. ನೀವು ಬಯಲು ಸೀಮೆಯವರು. ಐದೇ ನಿಮಿಷದಲ್ಲಿ ಸ್ನಾನಮಾಡಿ, ಎರಡೇ ನಿಮಿಷದಲ್ಲಿ ಊಟ ಮಾಡುವ ಜಾತಿಗೆ ಸೇರಿದವರು! ಹೋಗಲಿ, ನೀವು ಊಹಿಸಲಾಗದಿದ್ದರೆ ನಾನೇ ಹೇಳಿಬಿಡುತ್ತೇನೆ – ಅಭ್ಯಂಜನ! ಬೆರಗಾಗಬೇಡಿ. ನಿಮಗೆ ಗೊತ್ತಿಲ್ಲ. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ಮಹಾಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ ! ಯಾರು ಉಳಿಯುತ್ತಾರೆ ! ಯಾರು ಮೂರ್ಛೆಬೀಳುತ್ತಾರೆ ! ಹೇಳುವುದು ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ !

ನಾನು ಚಿಕ್ಕವನಾಗಿದ್ದಾಗ – ಏಕೆಂದರೆ ಈಗ ನಾಗರಿಕತೆ ಬಂದುದರಿಂದ ಹಿಂದಿನ ಆಚಾರಗಳೆಲ್ಲ ಪರಿವರ್ತನೆಯಾಗಿ ಹೋಗಿವೆ – ನಾನು ಚಿಕ್ಕವನಾಗಿದ್ದಾಗ ನಮ್ಮ ಮನೆಯಲ್ಲಿ 'ಅಭ್ಯಂಗ' ಎಂದರೆ ನಮಗೆಲ್ಲ ಜನನ, ಮರಣ, ವಿವಾಹ, ಪೋಲೀಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದ ಹಾಗೆ ಅನುಭವವಾಗುತ್ತಿತ್ತು. ನಾವಾಗ ವಿದ್ಯಾರ್ಥಿಗಳಷ್ಟೆ? ಐಗಳು ನಮ್ಮ ಮನೆಯಲ್ಲಿಯೇ ಕೂಲಿಕೆಲಸ ಮಾಡುತ್ತಿದ್ದರು. ನಮಗೆ ಅವರು ಮೇಷ್ಟರಾದರೂ ನಮ್ಮ ಹಿರಿಯರಿಗೆ ಅವರು ಕೂಲಿಯಾಳು. ಐಗಳು ನಮಗೆ ಅ ಆ ಇ ಈ ಹೇಳಿಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು ; ಸಮಯಬಿದ್ದರೆ ಬಟ್ಟೆ ಒಗೆದುಕೊಡುವುದು ; ಪ್ರಸಂಗ ಒದಗಿದರೆ ಗುಡಿಸುವುದು ; ಸನ್ನಿವೇಶ ಪ್ರಾಪ್ತವಾದರೆ ಯಜಮಾನರ ಕೂಸನ್ನು ಆಡಿಸುವುದು ; ಅವರ ವೃತ್ತಿಯಲ್ಲಿ ಅದೂ ಒಂದು ಭಾಗವಾಗಿದ್ದುದರಿಂದ – ಆಳುಲೆಕ್ಕ ಇಡುವುದು; ಪುಣ್ಯಕಾರ್ಯವಾದ್ದರಿಂದ ದೇವರಪೂಜೆ ಮಾಡುವುದು ; ಇತ್ಯಾದಿ ಇತ್ಯಾದಿ ಚಿಲ್ಲರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ನಮಗೆ ಭಾನುವಾರ ರಜಾ ; ಜೊತೆಗೆ ಅಭ್ಯಂಜನದ ಸಜಾ. ಆ ದಿನ ಎಲ್ಲಿಯಾದರೂ ತಿರುಗಾಡಿ, ಹಣ್ಣುಗಿಣ್ಣು ಕಿತ್ತು, ಮರಗಿರ ಹತ್ತಿ, ಕಲ್ಲುಗಿಲ್ಲು ಹೊಡೆದು, ತಲೆಗಿಲೆ ಒಡೆದು, ಏನಾದರೂ ಒಂದು ಸಾಹಸಗೀಹಸ ಮಾಡಿ ಬೇಜಾರು ಕಳೆದುಕೊಳ್ಳೋಣ ಎಂದರೆ, ಹಾಳು ಅಭ್ಯಂಜನ ಬಂದು ನಮಗೆಲ್ಲ ಬಹಳ ತೊಂದರೆಯಾಗುತ್ತಿತ್ತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆ ಸ್ನಾನದ ತೀರ್ಥಯಾತ್ರೆ ! ಅದೇನು ಒಬ್ಬರೇ? ಇಬ್ಬರೇ? ಮನೆಯ ಮಂದಿಗೆಲ್ಲ 'ಅಭ್ಯಂಗ'!

ಅದರಲ್ಲಿಯೂ ನಮ್ಮ ಅಜ್ಜಯ್ಯನ ಅಭ್ಯಂಗವೇ ಅರ್ಧದಿನವನ್ನು ಆಪೋಶನ ಮಾಡುತ್ತಿತ್ತು. ಅವರು ವಯಸ್ಸಾದವರು, ದೇವರಲ್ಲಿ ಬಹಳ ಭಕ್ತಿ ; ಕಳ್ಳನ್ನು ಬಹಳ ಮಿತವರಿತು ತೀರ್ಥದಂತೆ ಪಾನ ಮಾಡುತ್ತಿದ್ದರು. ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ ಎನ್ನುವುದು ಅವರ ಧ್ಯೇಯೋಕ್ತಿಯಾಗಿತ್ತು. ಅಭ್ಯಂಜನ ಮಾಡಿ ಮಾಡಿ ದೇಹ

ಸ್ವಲ್ಪ ಸ್ಥೂಲತೆಯ ಕಡೆಗೆ ಒಲೆದಿತ್ತು. ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವ ಲಭಿಸುವುದೆಂದು ಅವರು ತಿಳಿದಿದ್ದಂತೆ ತೋರುತ್ತದೆ. ಆದರೆ ಪಾಪ, ಕೆಲವು ವರುಷಗಳ ಹಿಂದೆ ಅವರು ತೀರಿಕೊಂಡೇಬಿಟ್ಟರು. ಅವರು ಸ್ವರ್ಗಕ್ಕೆ ಹೋದರು ಎಂದು ನಾನು ತಿಳಿದಿದ್ದೇನೆ. ಅಲ್ಲೇನು ಕಡಮೆ ! ಎಣ್ಣೆ, ಸೀಗೆಕಾಯಿ, ನೀರು, ಬೆಂಕಿ ಬೇಕಾದಷ್ಟಿವೆ ! ಅಪ್ಸರಿಯರೂ ಮಂದೆಮಂದೆ ಇದ್ದಾರೆ. ಅಭ್ಯಂಜನ ಮಾಡಿದ್ದೇ ಮಾಡಿದ್ದು ! ಅವರೇನು ಸ್ವರ್ಗದಲ್ಲಿ ದಿನಕ್ಕೆ ಇಪ್ಪತ್ತುನಾಲ್ಕು ಸಾರಿ ಅಭ್ಯಂಜನ ಮಾಡುತ್ತಾರೋ ಏನೋ ! ಮಾಡಲಿ, ಪಾಪ, ಬೇಕಾದಷ್ಟು ಮಾಡಲಿ ! ಮಾನವನ ಈಶ್ವರಪ್ರೇಮಕ್ಕೆ ಅಷ್ಟಾದರೂ ಪ್ರತಿಫಲ ಬೇಡವೇ ! ಒಂದಿಷ್ಟು ಅಭ್ಯಂಜನವನ್ನೂ ಕೊಡಲಾರದ ದೇವರ ಅಮೃತತ್ವವನ್ನು ಕೊಡಬಲ್ಲನೆ?

ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೆ ಪ್ರತ್ಯೇಕವಾಗಿತ್ತು. ಯಾರಿಗೋ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ. ಪರಂಪರೆಯಿಂದ ಬಂದುದು. ಮಾಮೂಲನ್ನು ತಪ್ಪದೆ ನಡೆಯುತ್ತಿದ್ದ ನಮ್ಮವರು, ಬರುವ ಆದಾಯ ತನ್ನ ಮಾಮೂಲನ್ನು ತಪ್ಪಿ ನಡೆದರೂ ಅಭ್ಯಂಜನದ ಮಾಮೂಲನ್ನು ಮಾತ್ರ ಬಿಟ್ಟಿರಲಿಲ್ಲ. 'ಬಚ್ಚಲು ಮನೆಯೇ' ಬೇರೆ, ಇದೇನು? ಕಣ್ಣುಕಣ್ಣು ಬಿಡುತ್ತಿದ್ದೀರಿ? ನಾನು ಮೊನ್ನೆ ಹೇಳಿದ್ದನ್ನು ಮರೆತಂತಿದೆ ! ನೀವು ಹೀಗೆಲ್ಲ ಮರೆತರೆ ನನ್ನ ಹರಟೆ ತುಂಡುಗಡಿದು ಹೋಗುತ್ತದೆ. ನಮ್ಮ ಕಡೆ ಸ್ನಾನದ ಮನೆಗೆ 'ಬಚ್ಚಲು' ಎಂದು ಕರೆಯುತ್ತಾರೆ. ಬಚ್ಚಲಿನಲ್ಲಿ ಒಂದು ದೊಡ್ಡ ಒಲೆ. ಕಬ್ಬಿಣವನ್ನು ಬೇಕಾದರೂ ಕರಗಿಸಬಹುದು ಅದರಲ್ಲಿ. ಆ ಒಲೆಯ ಬಾಯಿ ಮೂರು ಅಡಿ ಎತ್ತರ, ಮೂರು ಅಡಿ ಅಗಲ. ಒಲೆಯ ಮೇಲೆ ಎರಡು ದೊಡ್ಡ ಹಂಡೆಗಳನ್ನು ಹೂಳಿರುತ್ತಾರೆ. ಅವುಗಳನ್ನು ತೂತು ಬೀಳುವವರೆಗೂ ತೆಗೆಯುವಂತಿಲ್ಲ. ಹೊರಗೆ ತೆಗೆಯಬೇಕಾದರೆ ಅರ್ಧ ಒಲೆಯನ್ನೇ ಕೀಳಬೇಕು. ಆ ಹಂಡೆಗಳ ತುಂಬಾ ನೀರು ಹಾಕಿ ಕಾಯಿಸುತ್ತಾರೆ ನೋಡಿ, ತಕಪಕ ತಕಪಕ ಕುದಿಯುವವರೆಗೆ. ಅಕ್ಕಿ ಹಾಕಿದರೆ ತಕ್ಷಣ ಅನ್ನ ಆಗಿಹೋಗುತ್ತೆ. ಆ ಒಲೆಯ ಬೆಂಕಿಯೆ ಮೂರುನಾಲ್ಕು ಹೆಣಗಳನ್ನು ಆರೇಳು ನಿಮಿಷಗಳಲ್ಲಿ ಸುಟ್ಟು ಬೂದಿಮಾಡಿಬಿಡಬಹುದು ! ಕಟ್ಟಿಗೆಗೇನು ಮಲೆನಾಡಿನಲ್ಲಿ ! ನಾನು ನೀವೂ ಇಬ್ಬರೇ ಹೊರಟರೆ ಹತ್ತೇ ನಿಮಿಷಗಳ ಒಳಗೆ ಏನು ಕಡಿಮೆ ಎಂದರೂ ಒಂದು ಗಾಡಿ ಕಟ್ಟಿಗೆ ಒಟ್ಟು ಮಾಡಬಹುದು. ಸಣ್ಣಕಡ್ಡಿಗಳನ್ನಲ್ಲ ; ಮೈಸೂರಿನ ಬೀದಿಯ ಸಾಲುಮರಗಳಲ್ಲಿ ಕತ್ತಿ ದೋಟಿಯಿಂದ ಕ್ಷಯರೋಗ ಹಿಡಿದ ಗಿಡಗಳ ತುದಿಯ ಕೊಂಬೆಗಳನ್ನು ಮುರಿದು ತೆಗೆದುಕೊಂಡು ಹೋಗುತ್ತಾರಲ್ಲಾ, ಅಂಥಾ ಕಡ್ಡಿಗಳನ್ನಲ್ಲ ; ದೊಡ್ಡ ದೊಡ್ಡ ಕುಂಟೆಗಳನ್ನು ! ನಮ್ಮ ಬಚ್ಚಲು ಮನೆಯ ಬೆಂಕಿ ಎಂದರೆ ಏನೆಂದು ತಿಳಿದಿದ್ದೀರಿ, ಸ್ವಾಮಿ? ಬಡಬಾಗ್ನಿಯ ಮರಿ ! ಸಾಕ್ಷಾತ್ ಬಡಬಾಗ್ನಿಯ ಮರಿ.

ಭಾನುವಾರ ಅಭ್ಯಂಜನ ಎಂದರೆ ಅರ್ಧ ಡಬ್ಬ ಹರಳೆಣ್ಣೆ, ಎರಡು ಬುತ್ತಿ ಸೀಗೆಪುಡಿ ಮನೆಲೆಕ್ಕಕ್ಕೆ ಖರ್ಚು. ನಾವು ಏಳೆಂಟು ಜನ ಹುಡುಗರು ನಮ್ಮ ಮನೆಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ನಮ್ಮ ಪ್ರಿನ್ಸಿಪಾಲರೆ ನಮ್ಮಲ್ಲಿ ಎಣ್ಣೆ ಸವರಿಕೊಳ್ಳುವುದಕ್ಕೂ ಬರದ ಅಂಡರ್ ಗ್ರಾಜುಯೇಟ್‌ಗಳಿಗೆ ಎಣ್ಣೆ ಹಚ್ಚುವುದು. ಉಪಾಧ್ಯಾಯರು ವಿದ್ಯಾರ್ಥಿಗಳು ಎಂದರೆ ಹಾಗಿರಬೇಕು. ಏನು ಮೈತ್ರಿ ! ಏನು ಸೇವೆ? ಎಷ್ಟು ಕರುಣೆ ! ಈಗ ಎಲ್ಲೆಲ್ಲಿಯೂ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಸಂಬಂಧ ಹೋಯಿತು ಎಂದು ಕೂಗಿಕೊಳ್ಳುತ್ತಿದ್ದಾರೆ. ನಮ್ಮ ಈ ಸನಾತನ ಪುರಾತನ ಪವಿತ್ರ ಪುಣ್ಯಭೂಮಿಯಾದ ಭಾರತವರ್ಷದ ಮಾತಂತಿರಲಿ, ಸಮಗ್ರ ಜಗತ್ತಿಗೇ ಕ್ಷೇಮ ಉಂಟಾಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ! ನಗಬೇಡಿ, ಸ್ವಾಮಿ ನಗಬೇಡಿ; ನನ್ನ ಮಾತಿನ ಅಂತರ ಅರ್ಥವನ್ನು ಗ್ರಹಿಸಿ ನೋಡಿ ಆಗ ವಿಷಯ ಗೊತ್ತಾಗುತ್ತದೆ. – ಹುಡುಗರ ಜೊತೆಗೆ ದೊಡ್ಡವರು : ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣ ಚಿಕ್ಕಯ್ಯ, ದೊಡ್ಡ ಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ ಇತ್ಯಾದಿ ! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆ ಅಂದರೆ ! ಇನ್ನೆರಡು ಆಳುಗಳು ನೀರು ಸರಿಮಾಡುವುದು.

ಹಾಗೆಂದರೆ ಏನು ಅನ್ನುವಿರೋ? ಹೇಳುತ್ತೇನೆ ! ಲಾಲಿಸಬೇಕು ! ಎರಡು ಹಂಡೆಗಳಲ್ಲಿ ನೀರು ಕುದಿಯುವುದು ಒತ್ತಟ್ಟಿಗಿರಲಿ. ಅದು ನೀರಿನ ಉಗ್ರಾಣವಾಯ್ತು. ಅಲ್ಲಿಂದ ನೀರನ್ನು ತೆಗೆದು, ಬೇರೆ ಕಡಾಯಿಗಳಿಗೆ ಹಾಕಿ ತಣ್ಣೀರು ಬೆರೆಸಿ ಹದಮಾಡುವರು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ ; ಅಲ್ಲದೆ ಒಂದು ದೋಣಿ, ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟು ಉದ್ದದ್ದು. ಆ ದೋಣಿ ಏಕೆ ಅನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದ ಮೇಲೆ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಒಂದು ಮುಖ್ಯವಾದ ಅಂಗ. ಆ ನೀರು ಬಿಸಿಬಿಸಿಯಾಗಿರುವುದು. ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಹೆಚ್ಚು ಸಮೀಪ. ಅಭ್ಯಂಜನದಲ್ಲಿ ಬಿಸಿ ನೀರನ್ನು ಉಪಯೋಗಿಸುವುದೇ ಇಲ್ಲ ; ಎಲ್ಲ ಸುಡುನೀರೆ ! ಎಷ್ಟೋ ಸಾರಿ ಹುಡುಗರನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ ಅವರು ಕಿಟ್ಟನೆ ಕಿರಿಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ ಅಂದರೆ ! ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕುಸಾಕಾಗಿ ಹೋಗುತ್ತದೆ.

ಅತ್ತ ಆಳುಗಳು ಅಭ್ಯಂಜನದ ನಾಟಕಕ್ಕೆ ಬೇಕಾದ ಸಲಕರಣೆಗಳನ್ನು ಸಿದ್ಧ ಮಾಡುತ್ತಿರಲು, ಇತ್ತ ಪಾತ್ರದಾರರು ಎಣ್ಣೆ ಹಚ್ಚಿಕೊಳ್ಳುತ್ತಿರುವುದೊಂದು ಸುಮನೋಹರ ದೃಶ್ಯ. ಮಸಿಯಲ್ಲಲ್ಲ, ಹರಳೆಣ್ಣೆಯಲ್ಲಿ. ಅದನ್ನು ಬರೆದರೂ ಆ ವರ್ಣನೆ ಸರಿಯಾಗಿ

ಆವಿರ್ಭವಿಸುವುದು ಅಸಾಧ್ಯ. ಪ್ರಿನ್ಸಿಪಾಲರಾದ ನಮ್ಮ ಐಗಳು ಕಿರಿಯರಿಗೆ ಎಣ್ಣೆ ಹಚ್ಚಿಹಚ್ಚಿ ಬಿಡುತ್ತಿರುವರು. ಅದೊಂದು ದೊಡ್ಡ ಗೋಳು. ತಿಮ್ಮು ಎಣ್ಣೆ ಹಚ್ಚಿಸಿಕೊಳ್ಳುತ್ತಾ ಕಿಟ್ಟನೆ ಕೂಗಿಕೊಂಡನು. ಏಕೆ ಎಂದರೆ, ಮೊನ್ನೆ ಮಾವಿನಮರದಿಂದ ಕೆಳಗೆ ಹಾರಿದಾಗ ಬಿದ್ದು ಗಾಯವಾಗಿದ್ದನ್ನು ಯಾರಿಗೂ ಹೇಳದೆ ಮುಚ್ಚಿಟ್ಟಿದ್ದನು. ಐಗಳು ಅದನ್ನು ಅರಿಯದೆ ಕುದುರೆಗೆ ಮಾಲೀಸು ಮಾಡುವಂತೆ ಎಣ್ಣೆ ತಿಕ್ಕಿಯೇ ತಿಕ್ಕಿದರು. ಹಾಗೆ ಮಾಡುವಾಗ ಕೀತುಹೋದ ಗಾಯ ಹಿಸಿದುಕೊಂಡು ಇದ್ದಕ್ಕಿದ್ದಂತೆ ದೃಗ್ಗೋಚರವಾಯ್ತು. ಅಂತೂ ಗಾಯದ ನೋವಿಗೋ, ಗುಟ್ಟು ಬಯಲಾಯಿತಲ್ಲಾ ಎಂದೋ ಗೊಳೋ ಎಂದು ಅಳುತ್ತಿದ್ದಾನೆ. ಅವನನ್ನು ಸಮಾಧಾನಮಾಡಿದ್ದೇ ತಡ, ವಾಸು ಕೂಗುತ್ತಿದ್ದಾನೆ. ಏನು? ತಲೆಗೆ ಹಾಕಿದ ಎಣ್ಣೆ ಶಿವನ ತಲೆಯ ಜಡೆಗಳಿಂದ ಹೊರಟ ಶ್ರೀಮದ್ ಗಂಗೆಯಂತೆ ಮೆಲ್ಲನೆ ಕೇಶರಾಶಿಗಳಿಂದ ಉಚ್ಚಳಿಸಿ ಲಲಾಟದ ಮಾರ್ಗವಾಗಿ ಭ್ರೂಮಧ್ಯೆ ಇಳಿದು ಕಮಲನಯನಗಳನ್ನು ಪ್ರವೇಶಿಸಿಬಿಟ್ಟಿತು ! ನೆಗೆನೆಗೆದು ಬಿದ್ದು ಬಿದ್ದು ಕಿರಿಚಿಕೊಳ್ಳುತ್ತಿದ್ದಾನೆ. ಸರಿ; ಐಗಳು ಓಬುಗೆ ಎಣ್ಣೆ ಹಚ್ಚುವುದನ್ನು ನಿಲ್ಲಿಸಿ ವಾಸುವಿನ "ರಿಲೀಫ್ ವರ್ಕ್"ಗೆ ಹೊರಟರು. ಬಟ್ಟೆಯಿಂದ ಕಣ್ಣು ಜಜ್ಜಿಹೋಗುವಂತೆ ಒರಸಿದ್ದಾಯಿತು. ಆದರೆ ಆ ಗಲಾಟೆಯಲ್ಲಿ ತಲೆಯಲ್ಲಿದ್ದ ಕಜ್ಜಿಯ ಜ್ಞಾಪಕವೇ ಅವರಿಗಾಗಲಿಲ್ಲ. ಅದನ್ನು ಎಡಗೈಯಿಂದ ಬಲವಾಗಿ ಅದುಮಿದ್ದರಿಂದ ಅವನು ಮತ್ತೂ ಕುಣಿದು ಕೂಗತೊಡಗಿದನು. ಅಲ್ಲಿ ನೋಡಿ ! ಅಲ್ಲಿ ನೋಡಿ ! ಮಾನು ಎಣ್ಣೆಯ ಕುಡಿಕೆಯನ್ನೇ ಮಗುಚಿ ಹಾಕಿದನು ! ಅವನಿಗೂ ಭೂದೇವಿಗೂ ಸ್ಪರ್ಧೆ ತೊಡಗಿದೆ. ಭೂದೇವಿ ತೈಲವನ್ನು ಪಾನಮಾಡಲು ಯತ್ನಿಸುತ್ತಿದ್ದಾಳೆ ; ಮಾನು ಆದಷ್ಟನ್ನು ಬಳಿದು ಬಳಿದು ಮೈಗೆ ಬಳಿಯುತ್ತಿದ್ದಾನೆ. ಆ ಭರದಲ್ಲಿ ಮಣ್ಣೆಲ್ಲಾ ಮೈಗಾಗಿ ಹೋಗಿದೆ ! ಈ ಅನಾಹುತವನ್ನು ನೋಡಿದ ಚಿಕ್ಕಯ್ಯ ರೇಗಿ ಎದ್ದು ಮಾನುಗೆ ದಿಡ್ ಎಂದು ಒಂದು ಗುದ್ದು ಕೊಟ್ಟರು. ಅವನು ಮೌನವಾಗಿ ರೋದಿಸುತ್ತ ಮೂಲೆ ಸೇರಿ ಪೊರಕೆಯಾಗಿಬಿಟ್ಟನು. ಹುಡುಗರ ಗುಂಪಿನಲ್ಲಿ ಹೀಗೆ ಘಟನೆಗಳ ಮೇಲೆ ಘಟನೆಗಳು ಪ್ರಾಪ್ತವಾಗುತ್ತಿರಲಾಗಿ ದೊಡ್ಡವರ ಮೈಗೆ ಆಳುಗಳು ಎಣ್ಣೆ ಉಜ್ಜುತ್ತಿದ್ದಾರೆ. ಕೆಲವರು ಗರಡಿಯಲ್ಲಿ ಕಸರತ್ತು ಮಾಡುವಂತೆ ಹುಂ ಉಸ್ ಹುಂ ಉಸ್ ಎನ್ನುತ್ತಿದ್ದಾರೆ. ಅಜ್ಜಯ್ಯ ದೂರದಲ್ಲಿ ಕುಳಿತು ಎಣ್ಣೆ ಉಜ್ಜಿಸಿಕೊಳ್ಳುತ್ತಿದ್ದಾರೆ. ಅವರ ಮೈಯೆಲ್ಲ ತೈಲಮಯ. ಆಳು ತಲೆಗೆ ಎಣ್ಣೆ ಹಾಕಿ ಪಟ್ ಪಟ್ ಎಂದು ಮದ್ದಲೆ ಬಡಿಯುವಂತೆ ಬಿಡುವಿಲ್ಲದೆ ಬಡಿಯುತ್ತಿದ್ದಾನೆ. ಆ ಏಟಿಗೆ ಅಭ್ಯಾಸವಿಲ್ಲದವರಾಗಿದ್ದರೆ ಮೆದುಳು ಕದಡಿಹೋಗುತ್ತಿದ್ದರು. ಆದರೆ ಅಜ್ಜಯ್ಯ ಅಚಲದಂತೆ ಧೀರವಾಗಿ ಕುಳಿತಿದ್ದಾರೆ.

ಈ ಮಧ್ಯೆ ಅವರು ಎಣ್ಣೆ ಹಚ್ಚಿಕೊಳ್ಳುವುದನ್ನು ಪ್ರಾರಂಭಿಸುವಾಗ ಮಾಡುವ ಕರ್ಮಕ್ರಿಯೆಗಳನ್ನು ಹೇಳಿದರೆ ಅಪ್ರಕೃತವಾಗದು. ಅಲ್ಲಿ ನೋಡಿ! ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ. ಅವು ಅಶ್ವತ್ಥಾಮ

ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕತೈಲಬಿಂದುಗಳು. ಆದಾದ ಮೇಲೆ ಅವರು ಏನೇನೋ ಬಾಯಲ್ಲಿ ಮಟಗುಟ್ಟುತ್ತ ಬಂಗಾಳದ ವೈಷ್ಣವರು ನಾಮಗಳನ್ನು ಬಳಿದುಕೊಳ್ಳುವಂತೆ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬಟ್ಟುಗಳನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಉಜ್ಜಲು ಅಪ್ಪಣೆ ಕೊಡುವರು. ಈ ಪ್ರಾರಂಭೋತ್ಸವವನ್ನು ನಾವು ಬಹಳ ಭಯ ಭಕ್ತಿಗಳಿಂದ ದೇವರಿಗೆ ಮಾಡುವ ಮಂಗಳಾರತಿಯನ್ನು ನೋಡುವಂತೆ ನೋಡುತ್ತಿದ್ದೆವು.

ಇಷ್ಟು ಹೊತ್ತಿಗೆ ದೊಡ್ಡ ಬೋಗುಣಿಯಲ್ಲಿ ಪಾನಕ ಸಿದ್ಧವಾಗುವುದು. ಎಣ್ಣೆ ಹಚ್ಚಿ ಆಯಾಸಪಟ್ಟವರಿಗಲ್ಲ ; ಹಚ್ಚಿಸಿಕೊಂಡು ಆಯಾಸಪಟ್ಟವರಿಗೆ ; ಅಲ್ಲದೆ ಅಭ್ಯಂಜನದ ನಡುವೆ ಬಿಸಿನೀರು ಮಿಂದು ಶಕ್ತಿಗುಂದಿದವರಿಗೂ ಪಾನಕವಿತ್ತು ಪುನಃ ಸಶೇಷವಾದ ಸ್ನಾನವನ್ನು ಪೂರ್ತಿಯಾಗಿ ಪೂರೈಸಲು ಶಕ್ತಿ ಬರುವಂತೆ ಮಾಡುವುದು ರೂಢಿಯಾಗಿತ್ತು. ಅಷ್ಟು ಬಿಸಿಬಿಸಿಯಾದ ಸುಡುನೀರನ್ನು ಹೇಗೆ ಮೀಯುತ್ತಿದ್ದೆವೋ ನಾನರಿಯೆ. ಈಗ ಅದನ್ನು ನೆನೆದರೆ ಸಾಕು ನನಗೆ ಬೆವರು ಬರುವ ಹಾಗೆ ಆಗುತ್ತದೆ! ಆ ಬಿಸಿನೀರಿನ ದೋಣಿಯಲ್ಲಿ ಅರ್ಧಗಂಟೆ ಮಲಗಿ ಅಲ್ಲಿಂದ ಕೆಳಗೆ ಇಳಿಯಲು ಶಕ್ತಿ ಸಾಲದೆ ಇತರರ ಸಹಾಯದಿಂದ ಕೆಳಗಿಳಿದರೆ, ಕೂಡಲೆ ಕಡಾಯಿಯಲ್ಲಿ ಸಿದ್ಧವಾಗಿದ್ದ ಸುಡುನೀರನ್ನು ತಲೆಯ ಮೇಲೆ ರಫ್ ರಫ್ ಎಂದು ಹಾಕುವರು. ಶಿಥಿಲವಾಗಿದ್ದ ಜೀವ ಮತ್ತೂ ಶಿಥಿಲವಾಗಿ ನಿಲ್ಲಲಾರದೆ ಕೊಣದ ಕಲ್ಲಿನ ಮೇಲೆ ಕುಳಿತರೆ, ಒಬ್ಬರಲ್ಲ ಇಬ್ಬರು ಸೀಗೆಯಿಂದ ಮೈಯುಜ್ಜಲು ತೊಡಗುವರು. ಅವರ ತಿಕ್ಕಾಟ ಎಳೆದಾಟದಲ್ಲಿ ಮೂರ್ಛೆಬರುವಷ್ಟಾಗುವುದು. ಆಮೇಲೆ ತಲೆಯಲ್ಲಿದ್ದ ಹರಳೆಣ್ಣೆ ಸಂಪೂರ್ಣವಾಗಿ ಹೋಗುವಂತೆ ತಲೆಯುಜ್ಜುವರು. ಆ ಸಮಯದಲ್ಲಿ ಅಳದೆ ಇರುವ ಹುಡುಗರೇ ಇಲ್ಲ. ಕಣ್ಣನ್ನು ಎಷ್ಟು ಬಲವಾಗಿ ಮುಚ್ಚಿದರೂ ಸೀಗೆಯ ನೀರು ಹೇಗಾದರೂ ಮಾಡಿ ಒಳಗೆ ನುಗ್ಗಿಯೇ ನುಗ್ಗುವುದು. ಸ್ನಾನ ಮುಗಿಯುವಷ್ಟರಲ್ಲಿ ಮೈಯೆಲ್ಲ ಹಣ್ಣಾಗಿ ಹುಣ್ಣಾಗಿ ಕಣ್ಣಿನಂತೆಯೇ ಕೆಂಪಾಗಿ, ನಿಲ್ಲಲಾರದಷ್ಟು ಶಕ್ತಿಗುಂದದೆ ಇದ್ದರೆ ಅದು ನಿಜವಾದ ಅಭ್ಯಂಜನ ಅಲ್ಲವೇ ಅಲ್ಲ ಎಂದು ನಮ್ಮವರ ನಂಬುಗೆ. ಸ್ನಾನ ಮುಗಿಯಿತು. ಐಗಳು ಹುಡುಗನನ್ನು ಮೆಲ್ಲನೆ ಕೈಹಿಡಿದು ನಡೆಯಿಸಿಕೊಂಡು ಹೋಗಿ ಸಿದ್ಧವಾಗಿದ್ದ ಹಾಸಿಗೆಯ ಮೇಲೆ ಮಲಗಿಸುವರು. ಚೆನ್ನಾಗಿ ಬೆವರಲಿ ಎಂದು ಶಾಲು, ಕಂಬಳಿ, ರಗ್ಗು ಎಲ್ಲವನ್ನೂ ಮುಖ ಮುಚ್ಚಿ ಹೊದಿಸುವರು. ಒಳಗೆ ಪ್ರಾಣಿ ಬೆವತೂ ಬೆವತೂ ಹಾಸಿಗೆಯಲ್ಲ ತೊಯ್ದುಹೋಗುತ್ತದೆ. ಹೀಗೆ ಹುಡುಗರನ್ನು ಒಬ್ಬೊಬ್ಬರನ್ನಾಗಿ ಹಣ್ಣು ಹಣ್ಣು ಮಾಡಿ ಹಾಸಿಗೆಗೆ ತಳ್ಳಿದ ಮೇಲೆ ದೊಡ್ಡವರ ಸ್ನಾನ ಪ್ರಾರಂಭವಾಗುತ್ತದೆ. ಕಡೆಯಲ್ಲಿ ನಮ್ಮ ಅಜ್ಜಯ್ಯನವರ ಅಭ್ಯಂಜನ, ಎಲ್ಲರಿಗೂ ಹೆದರಿಕೆ !

ಅಜ್ಜಯ್ಯಗೆ ಎಲ್ಲರಿಗಿಂತಲೂ ಹೆಚ್ಚು ಬಿಸಿಯಾದ ನೀರು ಬೇಕು. ಅವರು ಮೀಯುವ ನೀರಿಗೆ ನಾವು ಕೈಯಿಟ್ಟರೆ ಫಕ್ಕನೆ ಹೊರಗೆ ಎಳೆದುಕೊಳ್ಳುವಂತಾಗುತ್ತಿತ್ತು.

ಅಭ್ಯಂಜನದ ಕಾಲದಲ್ಲಿ ಅವರು ಎರಡು ಮೂರು ಸಾರಿಯಾದರೂ ಮೂರ್ಛೆಹೋಗದೆ ಇರುತ್ತಿರಲಿಲ್ಲ. ಅಷ್ಟೊಂದು ಬಿಸಿಯಾದ ನೀರನ್ನು ಮಿಂದರೆ ಯಾರಿಗೆ ತಾನೆ ಮೂರ್ಛೆ ಬರುವುದಿಲ್ಲ? – ಅದರಲ್ಲಿಯೂ ಸ್ವಲ್ಪ ವಯಸ್ಸು ಹೋದವರು. ಅವರು ದೋಣಿಯಲ್ಲಿ ದೀರ್ಘಕಾಲ ಮಲಗುವರು. ಏಳುವಾಗ ಒಂದು ಲೋಟ ಪಾನಕ ಕುಡಿಯುವರು. ಆಮೇಲೆ ಕೊಣದಲ್ಲಿ ಕುಳಿತು ತಲೆಯ ಮೇಲೆ ಸುಡುನೀರು ಹಾಕಿಸಿಕೊಳ್ಳುವರು. ಒಬ್ಬರಲ್ಲ ಇಬ್ಬರು, ಚೊಂಬುಗಳಲ್ಲಿ ಕಡಾಯಿಯಿಂದ ಮೊಗೆಮೊಗೆದು ಎಡೆಬಿಡದೆ ನೀರನ್ನು ಎತ್ತರದಿಂದಲೇ ರಫ್ ರಫ್ ಎಂದು ನೆತ್ತಿಗೆ ಹೊಡೆಯುವರು. ಈ ದ್ವಿತೀಯ ಕರ್ಮವಾದ ಮೇಲೆ ಒಂದು ಲೋಟ ಪಾನಕ ಖರ್ಚಾಗುತ್ತಿತ್ತು. ಆಮೇಲೆ ಆಳುಗಳು ಮೈಕೈಗಳನ್ನೂ ತಲೆಯನ್ನೂ ಸೀಗೆಯಿಂದ ಗಸಗಸ ಉಜ್ಜುವರು. ಪುನಃ ಸುಡುನೀರು ಜಲಪಾತದಂತೆ ತಲೆಯ ಮೇಲೆ ಬೀಳುತ್ತಿತ್ತು. ಇಷ್ಟು ಹೊತ್ತಿಗೆ ಮೂರ್ಛೆಹೋಗಿ ಕೊಣದ ಕಲ್ಲಿನ ಮೇಲೆ ಮಲಗಿಬಿಡುತ್ತಿದ್ದರು. ಆಗ ಹಾಹಾಕಾರವೆದ್ದು ಜನಗಳು ಹಿಂದೆಮುಂದೆ ಓಡಾಟ ಮಾಡುವುದೇ ಕಾರ್ಯದಕ್ಷತೆಯ ಚಿಹ್ನೆ ಎಂದು ತಿಳಿದುಕೊಂಡಂತೆ ತೋರುತ್ತಿತ್ತು. ಒಳಗಿನಿಂದ ಅಜ್ಜಮ್ಮ ಬರುತ್ತಿದ್ದರು. ಕೆಲವರು ಪಾನಕ ಕುಡಿಸುವರು; ಕೆಲವರು ತಣ್ಣೀರನ್ನು ತಲೆಗೆ ತಟ್ಟುವರು ; ಕೆಲವರು ಗಾಳಿ ಬೀಸುವರು ; ಕೆಲವರು ತೋಟದಾಚೆಯ ಭೂತರಾಯನಿಗೆ ಅಡ್ಡಬಿದ್ದು ಅಜ್ಜಯ್ಯನನ್ನು ಸಂರಕ್ಷಿಸುವಂತೆ ಅಂಗಲಾಚಿ ಬೇಡುವರು. ಅಂತೂ ಸ್ವಲ್ಪ ಹೊತ್ತಿಗೆ ಅಜ್ಜಯ್ಯನ ಮೂರ್ಛೆ ಕೊನೆಗೊಂಡು 'ಅಮ್ಮಯ್ಯ' 'ನಾರಾಯಣ' ಮೊದಲಾದ ಶಬ್ದಗಳು ಅವರ ಬಾಯಿಂದ ಹೊರಬಿದ್ದು ಎಲ್ಲರಿಗೂ ಧೈರ್ಯವನ್ನುಂಟುಮಾಡುತ್ತಿದ್ದವು. ಸರಿ ; ಮತ್ತೆ ಜಳಕ, ಮತ್ತೆ ಮೂರ್ಛೆ! ಹೀಗಾಗಿ ಕೊನೆಗೆ ಸ್ನಾನ ಕೊನೆಗಾಣುವಾಗ ಅವರು ಗಂಗೆ ಯಮುನೆ ಮೊದಲಾದ ಪುಣ್ಯ ನದಿಗಳ ಹೆಸರಿನ ಪಟ್ಟಿಯೊಂದನ್ನು ಗಟ್ಟಿಯಾಗಿ ಉಚ್ಚರಿಸಿ ನಾಲ್ಕು ದಿಕ್ಕುಗಳಿಗೂ ಕೈ ಮುಗಿಯುತ್ತಿದ್ದರು, ಇಬ್ಬರು ಎರಡು ಕೈಗಳನ್ನು ಹಿಡಿದು ಹಾಸಿಗೆಗೆ ಕರೆದೊಯ್ಯುತ್ತಿದ್ದರು. ಹೋಗುವಾಗ ಅವರ ಮೈ ಹೊಗೆಯಾಡುವಂತೆ ಕಾಣುತ್ತಿತ್ತು. ಅಲ್ಲಿ ಸಿದ್ಧವಾಗಿದ್ದ ಕಂಬಳಿ ಮೊದಲಾದವುಗಳನ್ನು ಮೈತುಂಬಾ ಹೊದೆದುಕೊಂಡು ಮಲಗಿ ಬೆವರಿಸಿಕೊಳ್ಳುತ್ತಿದ್ದರು. ಅವರು ಆ ದಿನ ರಾತ್ರಿ ಊಟ ಮಾಡುತ್ತಿರಲಿಲ್ಲ. ಬರಿಯ ಹಾಲನ್ನೇ ಕುಡಿದು ಮಲಗಿಬಿಡುವರು.

ಅವರ ಕಾಲ ಮುಗಿದುಹೋಯಿತು. ಅವರೊಡನೆ ಅಭ್ಯಂಜನ ಮಹೋತ್ಸವವೂ ಮರೆತುಹೋಯಿತು.

*****

ಪರಿಚಯ :

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿ ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮಟ್ಟದಲ್ಲಿ ಬೆಳಗಿದ ಕವಿಗಳು. ದಾರ್ಶನಿಕರು,

ಶಿಕ್ಷಣತಜ್ಞರು, ಆಡಳಿತಗಾರರು. ಈ ಶತಮಾನದ ಮೇರುಕೃತಿ 'ಶ್ರೀರಾಮಯಣ ದರ್ಶನಂ' ಮಹಾಕಾವ್ಯವನ್ನು ಸೃಷ್ಟಿಸಿದವರು. ೧೯೨೨ರಲ್ಲೇ ಇಂಗ್ಲೀಷ್‌ನಲ್ಲಿ 'ಬಿಗಿನರ್ಸ್ ಮ್ಯೂಸ್' ಎನ್ನುವ ಕವನ ಸಂಕಲನ ಪ್ರಕಟಿಸಿದವರು. ಕನ್ನಡ ನಾಡು ನುಡಿಗಳ .... ಹೋರಾಟ ಮಾಡಿದವರು. ಅಗಾಧವಾದ ಪ್ರತಿಭೆ, ಸಾಹಿತ್ಯ ಮತ್ತು ವ್ಯಾಪಕವಾದ ಜೀವನಾನುಭವದಿಂದ ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನಚಿತ್ರ, ಮಕ್ಕಳ ಸಾಹಿತ್ಯ, ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಮಹಾಕಾವ್ಯ ಮುಂತಾದ ನಾನಾ ಪ್ರಕಾರಗಳಲ್ಲಿ ಅರವತ್ತಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಮೌಢ್ಯತೆಯ ವಿರುದ್ಧ ಸಿಡಿದ ಕುವೆಂಪು ಅವರ ಸಾಹಿತ್ಯದ ಜೀವನಾಡಿ ವೈಚಾರಿಕತೆ, ಜಾತಿ, ಮತ, ಪಂಥ, ಗುಂಪು, ವರ್ಗವ್ಯವಸ್ಥೆ, ವರ್ಣವ್ಯವಸ್ಥೆ ಮುಂತಾದ ನಾನಾ ದೃಷ್ಟಿಯ ಅಡ್ಡಗೋಡೆಗಳನ್ನು ಕೆಡವಿ ಅಜ್ಞಾನದ ಕತ್ತಲೆಯನ್ನು ಭೇದಿಸಿ, ಮಾನವ ಮತವನ್ನು ಹಿಡಿದು ವಿಶ್ವಪಥದಲ್ಲಿ ನಡೆಯಬೇಕೆಂಬ ಹಿರಿಯ ಸಂದೇಶ ಇವರದು. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಕೊಳಲು, ಕೋಗಿಲೆ, ಮತ್ತು ಸೋವಿಯತ್ ರಷ್ಯಾ, ಬೆರಳ್ಗೆ ಕೊರಳ್, ಶ್ಮಶಾನ ಕುರುಕ್ಷೇತ್ರ ಶೂದ್ರತಪಸ್ವಿ, ತಪೋನಂದನ, ದ್ರೌಪದಿಯ ಶ್ರೀಮುಡಿ, ಸ್ವಾಮಿ ವಿವೇಕಾನಂದ ಚಿತ್ರಾಂಗದಾ ಇವು ಕುವೆಂಪು ಅವರ ಕೆಲವು ಮುಖ್ಯ ಕೃತಿಗಳು. ವಿನೋಬಾ ಭಾವೆ ಅವರು ಕುವೆಂಪು ಅವರನ್ನು ಸಂತ ಕವಿಗಳೆಂದೂ ಆಧುನಿಕ ವಾಲ್ಮೀಕಿಗಳೆಂದೂ ಕರೆದಿದ್ದಾರೆ. ಇವರ ಶ್ರೀರಾಮಯಣ ದರ್ಶನಂ ಮಹಾಕಾವ್ಯ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತವಾಗಿದೆ.

ಕುವೆಂಪು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಕುಪ್ಪಳಿಯಲ್ಲಾದರೂ ತಮ್ಮ ಜೀವಿತಾವಧಿಯ ಬಹುಪಾಲನ್ನು ಕಳೆದದ್ದು ಮೈಸೂರಿನಲ್ಲಿ. ಹೀಗಿದ್ದೂ ಮಲೆನಾಡಿನ ದಟ್ಟ ಕಾಡಿನ ನಡುವಿನ ಬಾಲ್ಯದಿನಗಳನ್ನು ಮತ್ತೆ ಮತ್ತೆ ನೆನಪಿಗೆ ತಂದುಕೊಂಡು ಅವುಗಳನ್ನು ಅತ್ಯಂತ ಸಂತೋಷದಿಂದ ಬರಹ ರೂಪಕ್ಕಿಳಿಸಿದ್ದಾರೆ. ಅಂಥವರಲ್ಲಿ ಒಂದು 'ಅಜ್ಜಯ್ಯನ ಅಭ್ಯಂಜನ' ಮಲೆನಾಡೊನ ಶಾಂತಿಪ್ರಪಂಚದಲ್ಲಿ ಸಂಭವಿಸುವ ಹಲವು ಬಗೆಯ ಕ್ರಾಂತಿಗಳಲ್ಲಿ ಬಯಲುಸೀಮೆಯವರಿಗೆ ಅಚ್ಚರಿಯುಂಟುಮಾಡುವ ಕ್ರಾಂತಿ ಎಂದು ಕುವೆಂಪು ಅಭ್ಯಂಜನವನ್ನು ಗುರುತಿಸಿದ್ದಾರೆ. 'ಅಭ್ಯಂಜನ' ಎಂದರೆ ಎಣ್ಣೆಯನ್ನು ಮೈಗೆಲ್ಲ ಒತ್ತಿಕೊಂಡು ಸ್ವಲ್ಪಹೊತ್ತು ಹಾಗೆಯೇ ಇರಲು ಬಿಟ್ಟು ನಂತರ ಸ್ನಾನ ಮಾಡಿ ಬೆಚ್ಚಗೆ ಕಂಬಳಿ ಹೊದ್ದು ಬೆವರುವ ತನಕ ಮಲಗುವುದು. ಅಭ್ಯಂಜನದ ವಿಧಿಗಳೆಲ್ಲ ಪೂರೈಸುವಷ್ಟರಲ್ಲಿ ಯಾರೂ ಮೂರ್ಛೆಹೋಗುತ್ತಾರೆ, ಯಾರು ಸಾಯುತ್ತಾರೆ, ಯಾರು ಉಳಿಯುತ್ತಾರೆ ಎಂದು ಹೇಳುವುದು ಕಷ್ಟ. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆಸ್ನಾನದ ತೀರ್ಥಯಾತ್ರೆ ಎಂದರೆ ಮಕ್ಕಳಿಗೆಲ್ಲ ಬಹಳ ತೊಂದರೆ. ಇದರಲ್ಲಿ ಅಜ್ಜಯ್ಯನ ಅಭ್ಯಂಜನವೇ ಅರ್ಧದಿನವನ್ನು

ನುಂಗಬಿಡುತ್ತಿತ್ತು. ಮಲೆನಾಡಿನ ಮನೆಯಲ್ಲಿ ಸ್ನಾನದ ಇಲಾಖೆಯೇ ಪ್ರತ್ಯೇಕವಾಗಿದ್ದರೆ ಅಲ್ಲಿನ ಬಚ್ಚಲುಮನೆಯ ಬೆಂಕಿಯಂತಲೂ ಸಾಕ್ಷತ್ ಬಡಬಾಗ್ನಿಯ ಮರಿಯಂತೆಯೇ ಇರುತ್ತಿತ್ತು. ಅಜ್ಜಯ್ಯನ ತಲೆಗೆ ಎಣ್ಣೆ ಹಾಕಿ ಆಳುಗಳು 'ಪಟ್‌ಪಟ್' ಎಂದು ಮದ್ದಲೆಯಂತೆ ಬಿಡುವಿಲ್ಲದೆ ಬಡಿಯುತ್ತಿದ್ದರೂ ಅಜ್ಜಯ್ಯ ಮಾತ್ರ ಪರ್ವತದಂತೆ ಧೀರರಾಗಿ ಕುಳಿತಿದ್ದರು. ಮಕ್ಕಳು, ದೊಡ್ಡವರದೆಲ್ಲ ಮುಗಿದ ಮೇಲೆಯೇ ಅಜ್ಜಯ್ಯನ ಅಭ್ಯಂಜನ ಎಲ್ಲರಿಗೂ ಹೆದರಿಕೆ ಹುಟ್ಟಿಸುವಂತೆ ಶುರುವಾಗುತ್ತಿತ್ತು. ಸುಡುನೀರಿನಲ್ಲಿ ಅವರನ್ನು ಮೀಯಿಸುವಾಗ ಎರಡು ಮೂರು ಬಾರಿಯಾದರೂ ಮೂರ್ಛೆ ಹೋಗುತ್ತಿದ್ದರು. ಮಧ್ಯೆ ಮಧ್ಯೆ ಪಾನಕ ಸೇವಿಸುತ್ತಿದ್ದರು. ಅಜ್ಜಯ್ಯ ಮೂರ್ಛೆ ಹೋದಾಗಲೆಲ್ಲ ಮನೆಮಂದಿಯಲ್ಲಿ ಹಾಹಾಕಾರವೇಳುತ್ತಿತ್ತು. ಜಳಕ ಮತ್ತು ಮೂರ್ಛೆ ಒಂದಾನೊಂದು ಹಿಂಬಾಲಿಸುತ್ತಿದ್ದವು. ಸ್ನಾನ ಮುಗಿಸಿ ಬರುವಾಗ ಅವರ ಇಡೀ ದೇಹ ಹೊಗೆಯಾಡುವಂತೆ ಕಾಣುತ್ತಿತ್ತು. ಅಜ್ಜಯ್ಯನೊಂದಿಗೆ ಅಂಥ ಅಭ್ಯಂಜನ ಮಹೋತ್ಸವವೂ ಮರೆಗೆ ಸರಿದುಹೋದುದನ್ನು ಈ ಪ್ರಬಂಧ ವಾಸ್ತವ ವಿವರಗಳ ನಡುವೆಯೇ ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದೆ.

೨. ನಮ್ಮ ಎಮ್ಮೆಗೆ ಮಾತು ತಿಳಿಯುವುದೆ?

– ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಮ್ಮ ನಾಡು ಎಮ್ಮೆಯ ನಾಡು. ಮಹಿಷಮಂಡಲವೆಂಬುದು ನಾವು ಹೆಮ್ಮೆಯಿಂದ ಹೇಳಿಕೊಳ್ಳುವ ಹೆಸರು. ನಮ್ಮ ರಾಜರಿಗೆ ಮಹಿಷಾಸುರ ಮರ್ದಿನಿ ದೇವರು, ನಾವೆಲ್ಲ ಎಮ್ಮೆಯ ಹಾಲಿನಿಂದಲೇ ಬೆಳೆದವರು. ಎಮ್ಮೆ ಹೀಗೆ ನಮಗೆ ದೇವರಾದುದರಿಂದಲೇ ನಮ್ಮ ದೇಶದಲ್ಲಿ ಇತರ ದೇಶಗಳಿಗಿಂತ ಎಮ್ಮೆಯ ಪ್ರಾಬಲ್ಯ ಹೆಚ್ಚು.

ಇದು ನಮ್ಮ ಮನೆಯ ಮಾತು. ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ. ಎಮ್ಮೆ ಇಲ್ಲದ ಕಾಲ ನಮ್ಮಲ್ಲಿ ಇಲ್ಲವೇ ಇಲ್ಲ. ಮನೆಯ ಯಜಮಾನರ ವಂಶವನ್ನೂ ಹಿರಿಯರನ್ನೂ ಮೂರು ತಲೆ ನಾಲ್ಕು ತಲೆಗಳಿಂದ ಗುರುತಿಸುವಂತೆ ನಮ್ಮ ಮನೆಯ ಎಮ್ಮೆಯ ಮೂಲವನ್ನೂ ನಾಲ್ಕು ತಲೆಗಳಿಂದ ಗುರುತಿಸಬಹುದು. ಇದು ಹಿರೇಗೌಡ್ನಹಳ್ಳಿ ಎಮ್ಮೆ. ಇದರ ಹೆಸರು ದೊಡ್ಡಿ. ಇದು ಒಂಬತ್ತು ಕರು ಹಾಕಿದೆ. ಇದರ ನಾಲ್ಕನೆಯ ಕರು ಬಿಳಿ ಕೋಡಿನ ಎಮ್ಮೆ. ಅದರ ಮೂರನೆಯ ಕರು ಸಣ್ಣ ಎಮ್ಮೆ. ಅದರ ಎರಡನೆಯ ಕರು ಕಡಸು. ಸಣ್ಣೆಮ್ಮೆಯ ಮೊದಲನೆ ಕರು ಈಗಾಗಲೇ ಎರಡು ಕರು ಹಾಕಿದೆ. ಹೀಗೆ ನಮ್ಮ ಮನೆಯ ಎಮ್ಮೆಯ ವಂಶವೃಕ್ಷ ರಾಜಮಹಾರಾಜರ ವಂಶವೃಕ್ಷಗಳಿಗಿಂತ ಹೆಚ್ಚು ಸ್ಪಷ್ಟವೂ ಶುದ್ಧವೂ ನೇರವೂ ಆಗಿದೆ. ಸಣ್ಣ ಎಮ್ಮೆಯ ಸಾಧುಸ್ವಭಾವವನ್ನೂ ಅಂದವಾದ ಕೋಡುಗಳನ್ನೂ ಅಷ್ಟು ಸಣ್ಣ ಕೆಚ್ಚಲಿಗೆ ಅಷ್ಟೊಂದು ಹಾಲನ್ನೂ ನೋಡಿ ಅನೇಕರು ಅದರ ಅಪ್ಪ, ಅಮ್ಮ, ತಳಿ ಯಾವುದೆಂದು ಪದೇಪದೇ ವಿಚಾರಿಸಿಕೊಂಡು ಹೋಗುತ್ತಾರೆ. ಈ ಕಾರಣಗಳಿಗಾಗಿ ನಮ್ಮ ಎಮ್ಮೆಯ ವಂಶವೃಕ್ಷವನ್ನಿಡುವುದು ನನಗೆ ಆವಶ್ಯಕ.

ನಮ್ಮ ಮನೆಗೆ ಎಮ್ಮೆ ಪ್ರಕೃತಿಯಂತೆ ಶಾಶ್ವತ ಎಂದು ಹೇಳಿದೆ. ನಮ್ಮ ಮನೆಯಲ್ಲಿ ಯಾವಾಗಲೂ ಎಮ್ಮೆಗಳು ಇದ್ದೇ ಇರುತ್ತವೆ. ಆದರೆ ಈ ಎಲ್ಲಾ ಎಮ್ಮೆಗಳೂ ಹಿರೇಗೌಡ್ನಹಳ್ಳಿಯ ದೊಡ್ಡ ಎಮ್ಮೆಯ ತಳಿಗಳೇ ಎಂದು ನಮ್ಮ ಹಿರಿಯರು ಹಟದಿಂದ ವಾದಿಸುತ್ತಾರೆ. ಹಿರೇಗೌಡ್ನಹಳ್ಳಿಯಲ್ಲಿ ಆ ದೊಡ್ಡ ಎಮ್ಮೆಗೆ ಈಗಾಗಲೇ ಮೂವತ್ತು ನಲವತ್ತು ವರುಷಗಳಾಗಿರಬೇಕು. ಆದರೆ ಅದರ ತಳಿಗಳ ಸಂಖ್ಯೆ ಹೆಚ್ಚಾಗಿ ಬೆಳೆದಿರುವುದರಿಂದ ಯಾವುದರ ಅಪ್ಪ ಅಜ್ಜ ಯಾರು ಎಂದು ಗುರುತಿಸುವುದು

ಅಸಾಧ್ಯವಾಗುತ್ತಿದೆ. ಆದರೆ ಇಷ್ಟು ಖಂಡಿತ – ನಮಗೆ ಗಾಳಿ, ನೀರು, ನದಿ, ಮರ, ಕೆರೆ, ಹೂವು, ಕಾಡು ಹೇಗೆ ಪ್ರಕೃತಿಯೋ ಹಾಗೆಯೇ ಎಮ್ಮೆಯೂ ಪ್ರಕೃತಿ. ಜನ ಬರಬಹುದು; ಜನ ಹೋಗಬಹುದು; ಜನ ಹುಟ್ಟಬಹುದು; ಜನ ಸಾಯಬಹುದು; ರಾಜ ಬದಲಾಯಿಸಬಹುದು; ರಾಜ್ಯದಲ್ಲಿ ಕ್ರಾಂತಿಯಾಗಬಹುದು. ಆದರೆ ನಮ್ಮ ಕೊಟ್ಟಿಗೆಯಲ್ಲಿ ಮಾತ್ರ ಎಮ್ಮೆ ನಿತ್ಯ; ಪುರಾತನ; ಅಚಲ.

ಪ್ರಕೃತಿಯನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಸುಮ್ಮನೆ ನೋಡಬೇಕು. ಸಾಧ್ಯವಾದಷ್ಟು ಅನುಸರಿಸಬೇಕು. ನಮ್ಮ ಪೂರ್ವದ ಋಷಿಗಳು ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಿಲ್ಲ, ಅದನ್ನು ಅನುಸರಿಸಿದರು. ಅದರ ಪೂಜಾರಿಗಳಾದರು. ಎಮ್ಮೆ ಪ್ರಕೃತಿಯಂತೆ; ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ; ಅದನ್ನು ಸುಮ್ಮನೆ ಅನುಸರಿಬೇಕು, ಮಹಾತ್ಮ ಗಾಂಧಿಯಂತಹ ಭಾರತ ಭಾಗ್ಯವಿಧಾತರಿಗೆ ಸಹ ಎಮ್ಮೆ ಅರ್ಥವಾಗಲಿಲ್ಲ. "ಎಮ್ಮೆ ಗೋಜಾತಿಗೆ ಸೇರಿದುದಲ್ಲ. ಇದರ ಬೆಳವಣಿಗೆಯಿಂದ ಭಾರತದಲ್ಲಿ ಗೋವುಗಳ ಪ್ರಾಬಲ್ಯ ಕಡಿಮೆಯಾಗಿದೆ. ಸಾಧ್ಯವಾದಷ್ಟು ಬೇಗ ಎಮ್ಮೆಗಳನ್ನು ಇಲ್ಲದಂತೆ ಮಾಡಬೇಕು. ಇದರ ಹಾಲು ಜನಕ್ಕೆ ಆರೋಗ್ಯವಲ್ಲ. ಹಸುವಿನ ಹಾಲಿನಲ್ಲಿರುವ ತ್ರಾಣ ಪುಷ್ಟಿ ಎಮ್ಮೆಯ ಹಾಲಿನಲ್ಲಿ ಇಲ್ಲ. ಆದುದರಿಂದ ಎಮ್ಮೆಗಳನ್ನು ಇಲ್ಲದಂತೆ ಮಾಡಿ ಒಳ್ಳೆಯ ಜಾತಿಯ ಗೋವುಗಳನ್ನು ವೃದ್ಧಿಪಡಿಸುವುದೇ ಗೋಸೇವೆ" ಎಂದು ಮಹಾತ್ಮ ಗಾಂಧಿಯವರು ಸಾರಿ ಸಾರಿ ಹೇಳಿದ್ದಾರೆ. ನಮ್ಮ ಮನೆಯ ಎಮ್ಮೆಯ ಮುಖವನ್ನು ನೋಡಿದರೆ ಅದು ನನ್ನನ್ನು ನೋಡಿ ಕನಿಕರದಿಂದ "ಪಾಪ, ಋಷಿಗಳಿಗೆ ಪ್ರಕೃತಿ ಅರ್ಥವಾಗಲಿಲ್ಲ. ಹಾಗೆಯೇ ಗಾಂಧಿಗೂ ನಾವು ಅರ್ಥವಾಗಿಲ್ಲ. ನಮ್ಮನ್ನು ಇಲ್ಲದಂತೆ ಮಾಡಬೇಕಂತೆ; ಹೇಗೆ ಮಾಡುತ್ತೀರಿ? ಬೆಟ್ಟಗಳನ್ನು ಇಲ್ಲದಂತೆ ಮಾಡುತ್ತೀರಾ? ನದಿಗಳನ್ನೂ ಕಾಡುಗಳನ್ನೂ ಇಲ್ಲದಂತೆ ಮಾಡುತ್ತೀರಾ? ಪಾಪ, ಗಾಂಧಿಗೆ ಏನು ಗೊತ್ತು?" ಎಂದು ಹೇಳುವಂತೆ ತೋರುತ್ತದೆ. ಗಾಂಧಿಯವರ ತತ್ತ್ವವನ್ನು ತಿಳಿದುದೇ ನನ್ನ ತಪ್ಪು ಎಂಬ ಭಾವ ನನ್ನಲ್ಲಿ ಮೂಡಿ ನಾನು ಈ ಎಮ್ಮೆಗೆ ಅಪರಾಧಿ ಎಂದುಕೊಳ್ಳುತ್ತೇನೆ.

ನಮ್ಮ ದೇಶದ ಜನಗಳಂತೆಯೇ ನಮ್ಮ ದೇಶದ ರಾಸುಗಳೂ. ಈಗಾಗಲೇ, ಪುಷ್ಟರಾದ ಜನ ನಮ್ಮಲ್ಲಿ ಎಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಎಲ್ಲರೂ ಗುಜ್ಜಾರಿಗಳೇ, ವಾಮನರೇ. ಇನ್ನು ಕೆಲವು ಕಾಲ ಕಳೆದರೆ ಇವರು ಮನುಷ್ಯರೋ ಎಂಬುದನ್ನು ಕುರಿತು ನೋಡಬೇಕಾಗುತ್ತದೆ. ಹೊಟ್ಟೆ ತುಂಬ ಆಹಾರವಿಲ್ಲದವನು ಬೆಳೆಯುವುದು ಹೇಗೆ? ಜನಕ್ಕೆ ಹೊಟ್ಟೆಗಿಲ್ಲದೆ ತಿರುಗುವಾಗ ದನಕ್ಕೆ ಏನು ಸಿಕ್ಕೀತು? ನಮ್ಮ ಹಸುಗಳು ಆಡು ಕುರಿಗಳಂತೆ ಆಗುತ್ತಿವೆ. ಆಹಾರನಿಪುಣರ ಸಲಹೆ ಪ್ರಕಾರ ನಮ್ಮಲ್ಲಿ ಪ್ರತಿಯೊಬ್ಬರೂ ಪ್ರತಿದಿನವೂ ಹತ್ತು ಔನ್ಸು ಹಾಲನ್ನಾದರೂ ಕುಡಿಯಬೇಕೆಂತೆ. ಇಲ್ಲದಿದ್ದರೆ ನಮ್ಮ ಆರೋಗ್ಯ ಸರಿಯಾಗಿರುವುದಿಲ್ಲವಂತೆ. ಹಾಲು ಇರಲಿ, ಈ ನಲವತ್ತು ಕೋಟಿ ಜನಕ್ಕೆ

ನಿತ್ಯ ಹತ್ತು ಔನ್ಸು ಗಂಜಲ ಸಹ ದೊರೆಯುವಷ್ಟು ಒಳ್ಳೆಯ ಹಸುಗಳು ನಮ್ಮ ದೇಶದಲ್ಲಿ ಇಲ್ಲ. ಎಮ್ಮೆ ವಿಶ್ವಾಮಿತ್ರನ ಸೃಷ್ಟಿಯೆಂದು ಹೇಳುತ್ತಾರೆ. ವಿಶ್ವಾಮಿತ್ರ ಕಾರುಣ್ಯ ಸೇಡು ಛಲ ಮನುಷ್ಯತ್ವ ಮಾನ ರಸಿಕತೆಗಳ ಪ್ರತಿಬಿಂಬ. ವಸಿಷ್ಠನಂತೆ ಅವನು ಬರಿಯ ಒಣಕಾಷ್ಠವಲ್ಲ. ಅವನು ಅಂತಹ ಕರುಣಾಮೂರ್ತಿಯಾದುದರಿಂದಲೇ ತಾಯಿತಂದೆಗಳಿಬ್ಬರಿಗೂ ಬೇಡವಾದ ಶುನಶ್ಶೇಫನನ್ನು ಯಜ್ಞಬಲಿಯಿಂದ ಉಳಿಸಿದನು. ಅವನು ಕರುಣಾಮೂರ್ತಿಯಾದುದರಿಂದಲೇ ವಸಿಷ್ಠನ ಮತ್ತು ಅವನ ಮಕ್ಕಳ ಕ್ರೋಧಕ್ಕೆ ತುತ್ತಾಗಿ ಚಂಡಾಲನಾಗೆಂದು ಶಪಿಸಲ್ಪಟ್ಟ ತ್ರಿಶಂಕುವಿನಿಂದ ಯಜ್ಞ ಮಾಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದನು. ಹೀಗೆ ಸಂಪ್ರದಾಯಗಳಿಗೆಲ್ಲಾ ವಿರೋಧವಾಗಿ ಕ್ರಾಂತಿಯನ್ನೆಬ್ಬಿಸಿದ ವಿಶ್ವಾಮಿತ್ರನ ಶಿಷ್ಯ ತ್ರಿಶಂಕುವಿಗೆ, ಈ ಸಂಪ್ರದಾಯಶರಣನಾದ ಇಂದ್ರ, ತನ್ನ ಸಂಸ್ಥಾನದಲ್ಲಿ ಸ್ಥಳ ಕೊಡಲಿಲ್ಲ. ತ್ರಿಶಂಕು ತಲೆಕೆಳಗಾಗಿ ಭೋ ಎಂದು ಕೂಗುತ್ತಾ ಭೂಮಿಗೆ ಬಿದ್ದನು. ಆ ಆರ್ತನಾದವನ್ನು ಕೇಳಿ ಕರುಣಾಮಯನಾದ ವಿಶ್ವಾಮಿತ್ರ ಅವನಿಗೆ ಒಂದು 'ಪಾಕಿಸ್ತಾನ'ವನ್ನೇ ನಿರ್ಮಿಸಿದನು. ಹೊಸ ಜಗತ್ತನ್ನೇ ಸೃಷ್ಟಿ ಮಾಡಿದನು. ತೆಂಗಿನಮರಕ್ಕೆ ಬದಲು ಈಚಲುಮರವನ್ನು ಸೃಷ್ಟಿಸಿದನು ; ಹಸುವಿಗೆ ಬದಲು ಎಮ್ಮೆಯನ್ನು ಸೃಷ್ಟಿಸಿದನು. ವಿಶ್ವಾಮಿತ್ರ ಮಾಡಿದುದೇ ಸರಿ ಎಂಬಂತೆ ತೆಂಗಿನಮರದಿಂದಲೂ ಹೆಂಡವನ್ನೇ ತೆಗೆಯುತ್ತಿದ್ದಾರೆ. ವಿಶ್ವಾಮಿತ್ರ ಎಮ್ಮೆಯನ್ನು ಸೃಷ್ಟಿಸಲು ಅವನಿಗೆ ಹಸುವಿನ ಮೇಲೆ ಉಂಟಾದ ಒಂದು ತಿರಸ್ಕಾರವೂ ಕಾರಣ. ವಸಿಷ್ಠ ಋಷಿ ತನ್ನಲ್ಲಿದ್ದ ನಂದಿನೀ ಧೇನುವನ್ನು ವಿಶ್ವಾಮಿತ್ರನಿಗೆ ಕೊಡಲಿಲ್ಲ. ವಿಶ್ವಾಮಿತ್ರ ಕೋಪದಿಂದ ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನೇ ಸೃಷ್ಟಿಸಿದನು. ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕು. ಆದುದರಿಂದಲೇ ಇಲ್ಲಿ ಎಮ್ಮೆಗಳು ಹೆಚ್ಚು. ಈ ದೇಶಕ್ಕೂ ಎಮ್ಮೆಯ ದೇಶವೆಂದು ಹೆಸರು.

ನಮ್ಮಲ್ಲಿ ಸ್ವಲ್ಪ ಬುದ್ಧಿ ಮಂಕಾಗಿರುವವರನ್ನು 'ಎಮ್ಮೆಯ ಹಾಲು ಕುಡಿದವನು' ಎಂದು ಹಾಸ್ಯ ಮಾಡುತ್ತಾರೆ. ಹಾಲು ಬೆಳ್ಳಗಿದೆಯೋ ಕಪ್ಪಾಗಿದೆಯೋ ಎಂಬುದನ್ನು ನಮ್ಮ ದೇಶದ ಅನೇಕ ಹಳ್ಳಿಗಳವರು ಕಾಣರು. ಹಾಲು ಹಸುವಿನಿಂದ ಬರುತ್ತದೆ ಎಂಬುದೇ ಅನೇಕರಿಗೆ ಗೊತ್ತಿಲ್ಲ. ನಮ್ಮೂರಿನಿಂದ ಕೊಡಗಿಗೆ ಒಂದು ಸಲ ಬಸ್‌ನಲ್ಲಿ ಹೋಗುತ್ತಿದ್ದೆ. ಬಸ್ಸಿನ ಪ್ರಯಾಣಿಕರ ಪೈಕಿ ಒಬ್ಬ ಹೆಂಗಸು ಒಂದು ಚಿಕ್ಕ ಮಗುವನ್ನು ಎತ್ತಿಕೊಂಡು ಕುಳಿತಿದ್ದಳು. ಮಗು ಸಾಯುವಂತೆ ಇತ್ತು. ಹತ್ತು ಹದಿನೈದು ದಿನಗಳಿಂದ ಜ್ವರ ಬರುತ್ತಿದೆ ಎಂದು ಆಕೆ ಮತ್ತೊಬ್ಬರೊಂದಿಗೆ ಹೇಳುತ್ತಿದ್ದಳು. ಮಧ್ಯಾಹ್ನ ಒಂದು ಗಂಟೆಯ ಉರಿಬಿಸಿಲಿನಲ್ಲಿ ಬಸ್ಸು ಒಂದು ಹಳ್ಳಿಯ ಮುಂದೆ ನಿಂತಿತು. ತಾಯಿ ಎತ್ತಿಕೊಂಡಿದ್ದ ಮಗು ಮೆತ್ತಗೆ ಸಣ್ಣ ದನಿಯಲ್ಲಿ ಅಳಲು ಪ್ರಾರಂಭಿಸಿತು. ಅದರ ಗಂಟಲಿನಿಂದ ಧ್ವನಿ ಹೊರಡುವುದೇ ಕಷ್ಟವಾಗಿತ್ತು. ತಾಯಿ ಸ್ವಲ್ಪ ಹಾಲು ಕುಡಿಸಬೇಕು ಎಂದುಕೊಂಡು ಮೇಲೆ ಇಟ್ಟಿದ್ದ ಬುಟ್ಟಿಯನ್ನು ಕೆಳಕ್ಕೆ ತೆಗೆಸಿಕೊಂಡಳು. ಬುಟ್ಟಿಯಲ್ಲಿ ಒಂದು ಸೀಸೆಯಲ್ಲಿ ಇಟ್ಟಿದ್ದ ಹಾಲು ಚೆಲ್ಲಿ ಬುಟ್ಟಿಯ ಬಟ್ಟೆ ನೆನೆದಿದ್ದಿತು. ಹಾಲು ಇರಲಿಲ್ಲ, ಮಗು ಹಸಿವಿನಿಂದ ಸಾಯುವಂತೆ ಅರಚುತ್ತಾ ಕೈಕಾಲು ಬಡಿಯುತ್ತಿದ್ದಿತು.

ನಮಗೆಲ್ಲಾ ಅದು ಹಾಲಿಲ್ಲದಿದ್ದರೆ ಸಾಯುವುದೆಂದು ಖಂಡಿತವಾಗಿದ್ದಿತು. ಆ ಹಳ್ಳಿಯಲ್ಲಿ ಮುವ್ವತ್ತು ಮನೆಗಳಿವೆ. ನಾವೆಲ್ಲಾ ಇಳಿದು ಊರಿನೊಳಕ್ಕೆ ಹೋದೆವು. ಮುವ್ವತ್ತು ಮನೆಗಳನ್ನೂ ವಿಚಾರಿಸಿದೆವು. ಸೇರಿಗೆ ಒಂದು ರೂಪಾಯಿ ಕೊಡುವುದಾಗಿ ಹೇಳಿದೆವು. ಆದರೆ ಹಾಲು ಸಿಕ್ಕಲಿಲ್ಲ. ಒಂದು ಮನೆಯಲ್ಲಿಯೂ ಕರೆಯುವ ಹಸುವಾಗಲಿ ಎಮ್ಮೆಯಾಗಲಿ ಇರಲಿಲ್ಲ. ಹಳ್ಳಿಗರು ತಿಂಗಳಿಗೆ ಒಂದು ದಿನವೂ ಮಜ್ಜಿಗೆ ಕುಡಿಯುತ್ತಿರಲಿಲ್ಲ.

ಇಂತಹ ದೇಶದಲ್ಲಿ – "ಎಮ್ಮೆಯ ಹಾಲು ಕುಡಿದರೆ ಬುದ್ಧಿ ಮಂದ, ಹಸುವಿನ ಹಾಲು ಕುಡಿ" ಎಂದು ಹೇಳುವುದು ಹೊಟ್ಟೆಗೆ ಅನ್ನ ಒದಗಿಸಲು ಚೈತನ್ಯವಿಲ್ಲದವನ ಮಗುವಿಗೆ "ಶಕ್ತಿ ಬರುವುದಕ್ಕಾಗಿ ಗ್ಲೂಕೋಸ್, ಓವಲ್ಟೀನ್ ಸೇವಿಸು" ಎಂದಂತೆ. ವಸಿಷ್ಠ ಶ್ರೀಮಂತ (ಅರಿಸ್ಟೋಕ್ರಾಟ್) ಪಂಗಡಕ್ಕೆ ಸೇರಿದವನು. ಆತನ ಗೋವು ನಂದನೀಧೇನು ಯಜ್ಞಕ್ಕೆ ಹಾಲನ್ನೂ ಘೃತವನ್ನೂ ಒದಗಿಸುವುದು. ದೇವತಾರಾಧನೆಗೆ ಅಮೃತವನ್ನು ಒದಗಿಸುವುದು. ಆದರೆ ಅದರ ಹಾಲು ಎಲ್ಲರಿಗೂ ಸಾಲದು ; ಗೋವಿನ ಹಾಲು ಅತಿ ಸಾತ್ವಿಕ, ವಸಿಷ್ಠ ಋಷಿಗಳಂತೆಯೇ. ಮೇನಕೆಯ ನರ್ತನವನ್ನು ನೋಡಿ ಮುಗ್ಧನಾಗಿ ಇಂದ್ರಿಯಗಳ ಮೇಲಿನ ಹಿಡಿತವನ್ನು ಸಡಿಲಿಸಿ ಆಕೆಯೊಂದಿಗೆ ಹತ್ತು ವರುಷ ವಿಲಾಸಿಯಾಗಿ,–ನೀನು ಇಲ್ಲಿ ಬಂದುದು ನೆನ್ನೆ ಅಲ್ಲವೇ ಎಂದು ಆಕೆಯನ್ನು ಕೇಳಿದ. ರಸಿಕತೆ, ಕಾವು, ರಾಜಸ ಗುಣಗಳುಳ್ಳ ರಾಜಋಷಿಯ ಸೃಷ್ಟಿ ಎಮ್ಮೆಯ ಹಾಲು. ವಸಿಷ್ಠನ ಎದುರಿಗೆ ನೂರು ಮೇನಕೆಯರು ನೂರು ಭಾವಭಂಗಿಗಳಲ್ಲಿ ನೂರು ವರುಷ ಕುಣಿದಿದ್ದರೂ ಆ ಕಾಷ್ಠ ಚಿಗುರುತ್ತಿರಲಿಲ್ಲ. ಆದರೆ ಮನುಷ್ಯನೇ ಆಗಿದ್ದ ವಿಶ್ವಾಮಿತ್ರ ಮೇನಕೆಗೆ ಮನಸೋತನು. ಅದೇ ರಾಜಸ ಗುಣ. ಈ ಕಲಿಯುಗದಲ್ಲಿ ಬೇಕಾದುದು ಶುದ್ಧ ಸಾತ್ವಿಕವಲ್ಲ ; ಅದು ಅತಿ ಬಿಳುಪು; ಶುದ್ಧ ತಾಮಸವೂ ಅಲ್ಲ ; ಅದು ಅತಿ ಕಪ್ಪು. ಬೇಕಾದುದು ಕೆಂಪು ರಾಜಸ ಗುಣ. ಕಲಿಯುಗದಲ್ಲಿ ಧರ್ಮಕ್ಕೆ ಮೂರು ಕಾಲು ಇಲ್ಲವೆಂಬಂತೆ, ಸಾತ್ವಿಕ ಗುಣಕ್ಕೆ ಸ್ಥಾನವೇ ಇಲ್ಲ. ಅದು ರಸ. ಆದರೆ ತಾಮಸ ಗುಣ ಬೇಕಾಗಿಲ್ಲ ; ಅದು ವಿರಸ. ಬೇಕಾದುದು ಸಮರಸ. ಅದೇ ರಾಜಸ. ಕಾಫಿ ಈ ರಾಜಸ ಗುಣದ ಗುರುತು. ಅದು ಕೃತಯುಗದ ಅಮೃದಂತಹ ಸಾತ್ವಿಕ ವಸ್ತುವೂ ಅಲ್ಲ. ಕಲಿಯುಗದ ಕಳ್ಳು ಸಾರಾಯಿನಂತಹ ತಾಮಸ ವಸ್ತುವೂ ಅಲ್ಲ. ಕಲಿಯುಗದ ನಾಗರಿಕತೆಯ ಶಿಖರ ಕಾಫಿ. ಸ್ವಭಾವದಿಂದ ಋಷಿಯಾದ ವಿಶ್ವಾಮಿತ್ರನಿಗೆ ಈ ರಹಸ್ಯ ಭವಿಷ್ಯ ತಿಳಿಯಿತು. ಆತ ರಾಜಸ ಕಾಫಿಗೆ ಅನುಗುಣವಾದ ರಾಜಸ ಎಮ್ಮೆಗಳನ್ನು ಸೃಷ್ಟಿ ಮಾಡಿದ. ಎಮ್ಮೆಯ ಹಾಲು ಸೇರದ ಕಾಫಿ ಕಾಫಿಯೇ ಅಲ್ಲ ; ಸ್ವರ್ಗಲೋಕದಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಬಂದು ಎಲ್ಲೆಲ್ಲೂ ಪಾನನಿರೋಧದ ಕಾನೂನು ಜಾರಿಯಾಯಿತಷ್ಟೆ. ಅಮೃತವನ್ನೆಲ್ಲಾ ಉಗ್ರಾಣಗಳಲ್ಲಿ ಹಾಕಿ 'ಸೀಲು' ಮಾಡಿಬಿಟ್ಟರು. ಅಮೃತಪಾನದಿಂದ ಮತ್ತರಾಗುವುದರಲ್ಲಿ ನಿರತರಾಗುತ್ತಿದ್ದ ಇಂದ್ರಾದಿಗಳು ಸಹ ಗುಟ್ಟಿನಲ್ಲಿ ಎಮ್ಮೆಯ ಹಾಲನ್ನು ತರಿಸಿ ಕಾಫಿ ಮಾಡಿಕೊಂಡು ಕುಡಿದು, ಸ್ವಲ್ಪ ತುಷ್ಟರಾದರಂತೆ.

ಇಂತಹ ಪೂರ್ಣಪುರುಷ ವಿಶ್ವಾಮಿತ್ರನಿಂದ ಪ್ರತಿಜಗತ್ತಾಗಿ ಸೃಷ್ಟಿಯಾದುದರಿಂದಲೇ ಎಮ್ಮೆ ಮೂಲ ಜಗತ್ತಿನ ಹಸುವಿಗಿಂತ ಹೆಚ್ಚು ಬಲವಾಗಿದೆ. ಹೆಚ್ಚು ಒರಟಾಗಿದೆ. ಹೆಚ್ಚು ಕಪ್ಪಾಗಿದೆ. ಹೆಚ್ಚು ದಪ್ಪನಾಗಿದೆ. ಎಮ್ಮೆಯಲ್ಲಿ ಹಾಲೂ ಹೆಚ್ಚು. ಬೆಣ್ಣೆಯೂ ಹೆಚ್ಚು. ಇಂತಹ ಪ್ರಾಣಿಯ ಹಾಲನ್ನು ತೆಗೆದುಕೊಳ್ಳುವವರಿಗೆ ಬುದ್ಧಿ ಮಂಕು ಎಂದು ಹೇಳುವವರ ಬುದ್ಧಿಗೆ ಏನು ಹೇಳೋಣ? ನಮ್ಮ ಮೈಸೂರಿನವರ ಬುದ್ಧಿ ಮಂಕೆ? ಇವರನ್ನು ನೋಡಿದ ಕೂಡಲೇ ಇವರು ಎಮ್ಮೆಯ ಹಾಲನ್ನು ಕುಡಿದವರೆಂಬುದು ಗೊತ್ತಾಗುವುದಿಲ್ಲವೆ? ಎಮ್ಮೆಯ ಹಾಲನ್ನು ಕುಡಿಯವವರ ಬುದ್ಧಿ ಇರಲಿ, ಸ್ವತಃ ಎಮ್ಮೆಯೇ ಬಹು ಚುರುಕಾದ ತೀಕ್ಷ್ಣಬುದ್ಧಿಯ ಪ್ರಾಣಿ. ಎಮ್ಮೆಯನ್ನು ಅನುಸರಿಸಿಕೊಂಡು ಅದರ ಜೊತೆಯಲ್ಲಿ ಓಡಾಡುತ್ತಿರುವವರಿಗೆ ಇದು ಗೊತ್ತಾಗುವುದೇ ಹೊರತು ಎಲ್ಲಿಯೋ ದೂರದಿಂದ ಅದರ ಕಪ್ಪು ಮೈಯನ್ನು ನೋಡುವವರಿಗೆ ಖಂಡಿತ ಗೊತ್ತಾಗುವುದಿಲ್ಲ. ಬುದ್ಧಿಯ ವಿಷಯ ಒಂದೇ ಅಲ್ಲ. ಎಮ್ಮೆಗೆ ಮಾತು ಸಹ ತಿಳಿಯುವುದು. ಒಂದು ಉದಾಹರಣೆ ಕೇಳಿ.

ನಮ್ಮ ಮನೆಯ ಎಮ್ಮೆ–ಇದು ಸಾಧಾರಣವಾಗಿ ಕರು ಹಾಕಬೇಕಾದರೆ ನಿಂತುಕೊಂಡೇ ಕರುವನ್ನು ಎಸೆದುಬಿಡುತ್ತಿದ್ದಿತು. ಅಂತಹ ಒರಟು ಪ್ರಾಣಿ ! ಹೊಟ್ಟೆಯಿಂದ ಹೊರಕ್ಕೆ ಬರುವಾಗಲೇ ಅಂತಹ ಒದೆತದೊಂದಿಗೆ ರಭಸದಿಂದ ಭೂಮಿಗೆ ಬಿದ್ದ ಹೊಸ ಎಳೆಗರು ಪಾಪ, ಚೇತರಿಸಿಕೊಳ್ಳುವುದಕ್ಕೇ ಎರಡು ಮೂರು ಗಂಟೆ ಬೇಕಾಗುತ್ತಿದ್ದಿತು. ಪ್ರಪಂಚ ಏನೂ ಸುಖವಿಲ್ಲ. ಇಲ್ಲಿ ಒದೆತಗಳೇ ಜಾಸ್ತಿ. ತಾಯಿ ತಂದೆ ಅಣ್ಣ ತಮ್ಮ ಹೆಂಡತಿ ಅಪ್ಪ ಮಗ ಎಲ್ಲರೂ ಒಬ್ಬರನ್ನೊಬ್ಬರು ಒದೆಯುತ್ತಾರೆ, ಬಡಿಯುತ್ತಾರೆ. ಜಗತ್ತಿಗೆ ಬರುವುದು ಸುಖಕ್ಕಲ್ಲ ಎಂಬುದು ಆ ಬಡಪಾಯಿ ಎಳೆಗರುವಿಗೆ ಜಗತ್ತಿಗೆ ಬರುವಾಗಲೇ ಗೊತ್ತಾಗುತ್ತದೆ. ಹೋಗು, ನಿನ್ನ ಪಾಪಗಳಿಗೆ ಅಲ್ಲಿ ಅನುಭವಿಸು ಎಂದು ತನ್ನನ್ನು ತಂದು ಹೊರಕ್ಕೆ ದೂಡಿದಂತಾಗಿ ಕರು ಭೂಮಿಯ ಮೇಲೆ ಎರಡು ಗಂಟೆ ಬಿದ್ದಿದ್ದು ಮುಂದಿನ ಕಷ್ಟಗಳಿಗೆ ಸಿದ್ಧವಾಗುತ್ತದೆ. ಹೀಗೆ ಎಮ್ಮೆ ಎರಡು ಮೂರು ಸಲ ಕರುವನ್ನು ಎಸೆದುದನ್ನು ನೋಡಿ ನನ್ನ ಆಳು ತೂರ "ಮುಂದಿನ ಸಲ ಕರ ಎಸೆಯೋದಕ್ಕೆ ಬಿಡಕೂಡದು. ಗೋಣಿಚೀಲ ಹಿಡಿದುಕೊಂಡು ಕರ ಆತುಕೊಬೇಕು" ಎಂದ. ಎಮ್ಮೆ ಮುಂದಿನ ಸಲ ಗಬ್ಬವಾಗಿ ಈಯುವ ಕಾಲವೂ ಬಂದಿತು.

ಆ ಬೆಳಗ್ಗೆ ತೂರ ನನ್ನೊಂದಿಗೆ "ಇವತ್ತು ಸಾಯಂಕಾಲ ಎಮ್ಮೆ ಕರ ಹಾಕುತ್ತೆ' ಎಂದ. ಆ ವಿಷಯ ಅವನಿಗೆ ಚೆನ್ನಾಗಿ ಅನುಭವ. ಈ ವಿಚಾರಗಳು ಇವನಿಗೆ ಇಷ್ಟು ಖಂಡಿತವಾಗಿ ಹೇಗೆ ಗೊತ್ತಾಗುವುದೆಂದು ನಾನು ಅನೇಕ ಬಾರಿ ಆಶ್ಚರ್ಯಪಟ್ಟಿದ್ದೇನೆ. ತೂರ ಎಮ್ಮೆಗೆ ಕೇಳಿಸುವಂತೆ "ಇರಲಿ, ನಿನಗೆ ಮಾಡುತ್ತೇವೆ, ಕರ ಎಸೀತೀಯ' ಎಂದ. ನನ್ನೊಂದಿಗೆ "ಗೋಣಿ ಚೀಲ ಹಿಡಿದುಕೊಂಡು ಆತುಕೋಬೇಕು" ಎಂದ. ಆ ಮಾತನ್ನು ಕೇಳಿ ಎಮ್ಮೆ ಸರ್ರನೆ ಒಂದು ಸಲ ನನ್ನ ಕಡೆ ತಿರುಗಿತು. ಆ

ನೋಟವನ್ನು ನೋಡಿ ನಾನು ಬೆಚ್ಚಿಬಿದ್ದೆ. ಒಬ್ಬನನ್ನು ನೀವು ಮನಸ್ಸಿನಲ್ಲಿಯೇ ಬೈದುಕೊಂಡು ಹೋಗುತ್ತಿರುವಾಗ ಆತ ನಿಮ್ಮ ಎದುರಿಗೆ ಬಂದು ನಿಂತರೆ ಹೇಗಾಗುವುದೋ ಹಾಗೆ ಆಯಿತು. ಆ ಕ್ಷಣದಲ್ಲಿ "ಇದಕ್ಕೆ ಬುದ್ಧಿ ಇದೆ, ಮಾತೂ ತಿಳಿಯುತ್ತದೆ ; ಕಿವಿಯೂ ಕೇಳಿಸುತ್ತದೆ" ಎಂಬ ಭಾವವುಂಟಾಯಿತು. ಇದರಿಂದ ನನ್ನ ಮನಸ್ಸಿನಲ್ಲಿ ಹೇಗೆ ಹೇಗೋ ಆಯಿತು. ಹಿಂದೆ ಹಾಲಿವುಡ್ ಸಿನಿಮಾ ತಾರೆಯರು, ನೀಗ್ರೋ ಪುರುಷರನ್ನು ಪುರುಷರಾಗಿಯೇ ಪರಿಗಣಿಸದೆ ಅವರ ಎದುರಿಗೆ ಅಸ್ತವ್ಯಸ್ತವಾಗಿ ಉಡುಪುಗಳನ್ನು ಧರಿಸಿ ಅಂತಃಪುರದಲ್ಲಿ ತಿರುಗಾಡುತ್ತಿದ್ದರಂತೆ. ನೀಗ್ರೋಗಳು ನಾಗರಿಕ ಜನಾಂಗ ಎಂದು ಆದ ಮೇಲೆ ಅವರಿಗೆ ಬಹಳ ಬೇಜಾರಾಯಿತಂತೆ. ನನ್ನ ವಿಷಯವೂ ಹಾಗೆಯೇ ಆಯಿತು. ಎಮ್ಮೆಗೆ ಮಾತು ತಿಳಿಯುವುದಿಲ್ಲ ಎಂದು ಅದರ ಎದುರಿಗೆ ಮನಸ್ಸಿಗೆ ಬಂದುದನ್ನು ಹರಟುತ್ತಿದ್ದ ನನಗೆ ಎಮ್ಮೆಯ ಆ ನೋಟವನ್ನು ನೋಡಿ ಗಾಬರಿಯಾಯಿತು. ಎಮ್ಮೆ 'ಆಗಲಿ' ಎನ್ನುವಂತೆ ನನ್ನ ಕಡೆ ನೋಡಿತು. ಆ ನೋಟ ಅದರ ಮುಖದಲ್ಲಿ ಕಂಡುದು ಒಂದೇ ಕ್ಷಣ. ಮರುಕ್ಷಣ ಎಮ್ಮೆ ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡಿತು. ಅದರ ಕಣ್ಣಿನಲ್ಲಿ ನನಗೆ ಆ ಮೊದಲಿನ ತಿಳಿವಿನ ನೋಟ ಈಗ ಕಾಣಲಿಲ್ಲ.

ಸಾಯಂಕಾಲವಾಯಿತು. ಎಮ್ಮೆಗೆ ಪ್ರಸವ ವೇದನೆ ಪ್ರಾರಂಭವಾಗಿದೆ ಎಂದು ತೂರ ಸೂಚಿಸಿದ. ಎಮ್ಮೆ ನಿಂತುಕೊಂಡೇ ಇದ್ದಿತು. "ಇದು ಮಲಗಿಕೊಂಡು ಕರ ಹಾಕುವುದಿಲ್ಲ. ಅದೇ ಇದರ ಕೆಟ್ಟ ಚಾಳಿ" ಎಂದ ತೂರ. ನಾವು ಅಂದಾಜು ಮಾಡಿ ಎಮ್ಮೆ ನಿಂತಿದ್ದ ನೇರದಿಂದ ಒಂದು ಮಾರು ಆಚೆಗೆ ಪ್ರಾಯಶಃ ಕರುವನ್ನು ಇಲ್ಲಿಗೆ ಎಸೆಯಬಹುದು ಎಂದುಕೊಂಡು, ಗೋಣಿಚೀಲದ ಆಚೆ ಈಚೆ ಹಿಡಿದುಕೊಂಡು ನಿಂತುಕೊಂಡೆವು. ಎಮ್ಮೆ ಒಂದು ವಾರು ಬಲಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿಕೊಂಡು ನಿಂತಿತು. ನಾವು ಸರ್ರನೆ ಚೀಲದೊಂದಿಗೆ ಅದರ ನೇರಕ್ಕೆ ಹಾರಿ ನಿಂತುಕೊಂಡೆವು. ಎಮ್ಮೆ ಕೂಡಲೆ ಎರಡು ಮಾರು ಎಡಗಡೆಗೆ ತನ್ನ ಹಿಂಭಾಗವನ್ನು ತಿರುಗಿಸಿತು. ನಾವೂ ಗೋಣಿಚೀಲದೊಂದಿಗೆ ಹಾರಿದೆವು. ಎಮ್ಮೆ ನಿಮಿಷ ನಿಮಿಷಕ್ಕೂ ತಿರುಗತೊಡಗಿತು. ನಾವೂ ನಿಮಿಷ ನಿಮಿಷಕ್ಕೂ ಕೊಕ್ಕಿನ ಆಟದಲ್ಲಿಯಂತೆ ಹಾರತೊಡಗಿದೆವು. ಸರ್ಕಸ್‌ನಲ್ಲಿ ಮೇಲುಗಡೆ ಒಬ್ಬ ಆಟಗಾರ ಸಾಧನೆ ಮಾಡುತ್ತಿರುವಾಗ ಅವನ ಕೈಕಾಲು ಜಾರೀತೆಂಬ ಭಯದಿಂದ ಕೆಳಗಡೆ ಹತ್ತಾರು ಜನ ಬಂದು ಜಮಖಾನ ಹಿಡಿದುಕೊಂಡು ಅವನ ನೇರದಲ್ಲಿ ತಿರುಗುವುದನ್ನು ನೀವು ಕಂಡಿದ್ದೀರಿ. ನಮಗೂ ಎಮ್ಮೆಗೂ ಉಂಟಾದ ಸ್ಪರ್ಧೆ ಈ ಬಗೆಯದಾಯಿತು. ಬರಬರುತ್ತಾ ಎಮ್ಮೆ ನಿಮಿಷಕ್ಕೆ ಎರಡು ಸಲ ತಿರುಗಲು ಪ್ರಾರಂಭಿಸಿತು. ಅದು ಈ ವಿನೋದದಲ್ಲಿ, ಕರು ಹಾಕಬೇಕೆಂಬುದನ್ನೇ ಪೂರ್ಣವಾಗಿ ಮರೆತಂತೆ ತೋರಿತು. ಈ ಓಡಾಟದಲ್ಲಿ ಎಮ್ಮೆಗಿಂತ ನಮಗೇ ಹೆಚ್ಚು ಸುಸ್ತಾಗಿ ನಮ್ಮ ಅಳ್ಳೆಗಳು ಹೊಡೆದುಕೊಳ್ಳತೊಡಗಿದವು. ಎಮ್ಮೆ ಮಾತ್ರ ಹಿಂದಿನ ಚೇಷ್ಟೆಯ ನಗುವಿನಿಂದ ಮತ್ತೆ ನನ್ನ ಕಡೆ ನೋಡಿತು. ಇದು ಸದ್ಯಕ್ಕೆ

ಕರುಹಾಕುವುದಿಲ್ಲ, ಇನ್ನು ಒಂದು ಗಂಟೆ ಬಿಟ್ಟು ಬರೋಣವೆಂದು ನಾನೂ ತೂರನೂ ಚೀಲವನ್ನು ಒಂದು ಮೂಲೆಗಿಟ್ಟು ಒಳಕ್ಕೆ ಹೋದೆವು. ಒಂದು ನಿಮಿಷದೊಳಗಾಗಿ ಕೊಟ್ಟಿಗೆಯಲ್ಲಿ ಧೊಪ್ಪೆಂದು ಸದ್ದಾಯಿತು. ಹೋಗಿ ನೋಡಿದರೆ ಎಮ್ಮೆ ಪದ್ಧತಿಯಂತೆ ನಿಂತುಕೊಂಡೇ ಎರಡು ಮಾರು ಆಚೆಗೆ ಕರುವನ್ನು ಎಸೆದಿದ್ದಿತು.

ಹೀಗೆ ತನ್ನನ್ನು ಅವಮಾನ ಮಾಡಿದುದರಿಂದಲೋ ಎಂಬಂತೆ ಪ್ರತಿಸಲವೂ ಸರಾಗವಾಗಿ ಹಾಲು ಕೊಡುತ್ತಿದ್ದ ಎಮ್ಮೆ ಈ ಕರು ಹಾಕಿದ ಮೇಲೆ, ಹಾಲು ಕರೆಯುವುದಕ್ಕೆ ಹೋದರೆ ಒದೆಯುವುದನ್ನು ಪ್ರಾರಂಭಿಸಿತು. ಆಗ ಅದಕ್ಕೆ ತವುಡು, ಹಿಂಡಿ, ಹತ್ತಿಯ ಬೀಜ ಮುಂತಾದ ತಿಂಡಿಗಳನ್ನು ಎರಡು ಹೊತ್ತೂ, ಕರೆಯುವ ವೇಳೆಯಲ್ಲಿ ಇಡತೊಡಗಿದೆವು. ತಿಂಡಿಯನ್ನು ತನ್ನ ಮುಂದೆ ಇಟ್ಟಾಗ ಎಮ್ಮೆ "ತನ್ನಿ, ನೀವೇನು ಪರೋಪಕಾರ ದೃಷ್ಟಿಯಿಂದಲೂ ಗೋಸೇವಾ ಬುದ್ಧಿಯಿಂದಲೂ ತರುತ್ತಿಲ್ಲ. ನನ್ನ ಹಾಲು ಬೇಕಾಗಿದೆ, ಅದಕ್ಕಾಗಿ ತರುತ್ತಿದ್ದೀರಿ" ಎನ್ನುವಂತೆ ನಮ್ಮ ಕಡೆ ನೋಡುತ್ತಿದ್ದಿತು. ಬೆಳಗಿನ ಕಾಫಿ ನಮಗೆ ಹೇಗೆ ಸಕಾಲಕ್ಕೆ ಆಗಬೇಕೋ ಹಾಗೆ ಎಮ್ಮೆಗೆ ತಿಂಡಿ ಸಕಾಲಕ್ಕೆ ಆಗಬೇಕಾಗಿದ್ದಿತು. ಒಂದು ದಿವಸ ತಿಂಡಿ ಇಟ್ಟು ಹಾಲು ಕರೆಯುವುದಕ್ಕೆ ತನ್ನ ಹೆಂಡತಿ ಬರುವುದು ಬೆಳಗ್ಗೆ ಹತ್ತು ಗಂಟೆಯಾಯಿತು. "ಇಷ್ಟು ಹೊತ್ತು ಯಾಕೆ? ಹೊತ್ತಿಗೆ ಮುಂಚೆ ಕರೆಯುವುದಕ್ಕೇನು? ಈಗ ಕೊಡುತ್ತದೆಯೆ?" ಎಂದೆ. ನನ್ನ ಹೆಂಡತಿ "ಕೊಡದೆ ಅದಕ್ಕೇನು ರೋಗ? ಹೊಟ್ಟೆ ಬಿರಿಯುವ ಹಾಗೆ ತಿಂಡಿ ತಿನ್ನುತ್ತಿಲ್ಲವೆ?" ಎಂದಳು. ಎಮ್ಮೆ ಒಂದು ಸಲ ಸರ್‍ರನೆ ಅವಳ ಕಡೆ ನೋಡಿತು. ಆ ನೋಟದಲ್ಲಿ ಆ ಹಿಂದಿನ ತಿಳಿವು ಕಾಣುತ್ತಿದ್ದಿತು. ಎಮ್ಮೆಯ ಭಾಷೆ ನನಗೆ ಅರ್ಥವಾಯಿತು. ನನ್ನ ಹೆಂಡತಿ ಅದರ ಮೊಲೆಯನ್ನು ಎಷ್ಟು ಹೀಜಿದರೂ ಎಮ್ಮೆ ಸೋರು ಬಿಡಲಿಲ್ಲ. ಬಾಂಡಲೆಯಲ್ಲಿದ್ದ ತಿಂಡಿಯೆಲ್ಲಾ ಮುಗಿಯಿತು. "ತಿಂಡಿ ಹೊಡೆಯುವುದಕ್ಕೆ ಇದೊಳ್ಳೆ ಅಭ್ಯಾಸ ಮಾಡಿಕೊಂಡಿತು, ಹಾಳು ಮುಂಡೇದು" ಎಂದುಕೊಂಡು ನನ್ನ ಹೆಂಡತಿ ಮತ್ತೊಂದು ಬಾಂಡಲೆ ತಿಂಡಿ ತರಲು ಒಳಕ್ಕೆ ಹೋದಳು. ಅವಳು ಒಳಗಿನಿಂದ ತಿಂಡಿ ತರುತ್ತಿರುವಾಗ ಎಮ್ಮೆ ಮತ್ತೆ ದುರದುರನೆ ನೋಡಿತು. "ತನ್ನಿ ತನ್ನಿ, ಇಲ್ಲದಿದ್ದರೆ ನೀವು ತರುತ್ತೀರಾ" ಎಂಬಂತೆ ಕಣ್ಣು ಮಿಟಿಕಿಸಿತು. "ಇದು ಈ ಉಪಾಯ ಮಾಡಿಕೊಳ್ಳದೆ ಸುಮ್ಮನೆ ಸಾಧುವಾಗಿ ಹಾಲು ಕೊಟ್ಟಿದ್ದರೆ ನೀವು ಹೀಗೆ ನಿತ್ಯಾ ಇದಕ್ಕೆ ಎರಡು ಹೊತ್ತೂ ತಿಂಡಿ ಇಡುತ್ತಿದ್ದಿರಾ" ಎಂದು ನಾನು ನಕ್ಕೆ. ಹೀಗೆ ಅಂದು ಎಮ್ಮೆಗೆ ತಿಂಡಿ ಎರಡು ಸಲ ಇಡಬೇಕಾಗಿ ಬಂದುದರಿಂದ ಅಲ್ಲಿಂದ ಮುಂದೆ ನನ್ನ ಹೆಂಡತಿ ಎಮ್ಮೆಗೆ ಸಕಾಲದಲ್ಲಿ ಇಟ್ಟು ಹಾಲು ಕರೆಯುತ್ತಿದ್ದಳು.

ಈ ಎಮ್ಮೆಯನ್ನು ಸಾಧಾರಣವಾಗಿ ನನ್ನ ಹೆಂಡತಿಯೇ ಕರೆಯುವ ಅಭ್ಯಾಸವಿದ್ದಿತು. ಒಂದು ಸಲ ಎಂಟು ದಿವಸ ಅವಳು ನರಸೀಪುರದ ತೇರಿಗೆ ಹೋದಳು. ನಾನೇ ತಿಂಡಿ ಕಲಸಿ ಎಮ್ಮೆಗೆ ತೆಗೆದುಕೊಂಡು ಹೊರಟೆ. ತೂರ "ಹಿಂಡಿ ಸಾಲದು, ಇನ್ನೊಂದು ಹಿಡಿ ರಾಗಿಹಿಟ್ಟು ಹಾಕಿ" ಎಂದ. ನಾನು "ಸರಿ ಸರಿ, ಜನರಿಗೇ

ತಿನ್ನುವುದಕ್ಕೆ ರಾಗಿ ಇಲ್ಲ ; ಹನುಮಂತರಾಯ ಹಗ್ಗ ಮೇಯ್ತಿರೋವಾಗ ಪೂಜಾರಿ ಶಾವಿಗೆ ಬೇಡಿದ ಹಾಗೆ ಆಯಿತು, ನಡಿ ಸಾಕು" ಎಂದೆ. ತಿಂಡಿಯನ್ನು ತೆಗೆದುಕೊಂಡು ಹೋಗಿ ಎಮ್ಮೆಯ ಮುಂದೆ ಇಟ್ಟು, ನಾನೇ ಹಾಲು ಕರೆಯಲು ಕುಳಿತೆ. ಎಮ್ಮೆ ಒಂದು ಸಲ ತಿಂಡಿ ಮೂಸಿ ನೋಡಿತು. ನಾನು ಹಾಲು ಕರೆಯಲು ಕೈಯಲ್ಲಿ ಹಿಡಿದಿದ್ದ ಪಾತ್ರೆ ಕೆಳಕ್ಕೆ ಬೀಳುವಂತೆ ಪಟಾರನೆ ಒದೆಯಿತು. ನಾನು ತೂರನಿಗೆ "ನಿನ್ನ ಮಾತು ನಿಜ. ಇದಕ್ಕೆ ರಾಗಿ ಹಸಿಹಿಟ್ಟಿನ ರಸ ಹಲ್ಲಿಗೆ ಇಳಿದು ಅಭ್ಯಾಸವಾಗಿದೆ. ಇನ್ನಷ್ಟು ಹಸಿಹಿಟ್ಟು ಹಾಕಿಕೊಂಡು ಇನ್ನೊಂದು ಗಳಿಗೆ ಬಿಟ್ಟು ಬರೋಣ. ಎಲ್ಲಾ ಕೆಟ್ಟಭ್ಯಾಸ" ಎಂದು ಒಳಕ್ಕೆ ಬಂದೆ. ಮತ್ತೆ ತಿಂಡಿ ಸರಿಮಾಡಿಕೊಂಡು ಹೋಗುವುದಕ್ಕೆ ಮುಂಚೆ ತೂರ "ಇದಕ್ಕೆ ಅಮ್ನೋರು ಕರ ಬಿಟ್ಟು ಪಾಟ. ನಿಮಗೆ ಕೊಡೋಕಿಲ್ಲ. ಖಂಡಿತ ಒದೀತದೆ" ಎಂದ. ಆಗ ನಾನು ಒಂದು ಉಪಾಯವನ್ನು ಮಾಡಿದೆ. ಇದನ್ನು ಓದುವ ವಾಚಕರು ನಗಬೇಕಾಗಿಲ್ಲ. ನನ್ನ ಹೆಂಡತಿಯ ಒಂದು ಸೀರೆಯನ್ನು ಮೈ ತುಂಬ ಹೊದೆದುಕೊಂಡು ಎಮ್ಮೆಯ ಮುಂದೆ ಕುಳಿತೆ. ಎಮ್ಮೆ ಈ ಮೋಸಕ್ಕೆ ಬಿದ್ದಿತು. ಹಾಲು ಕೊಟ್ಟಿತು. ಹೀಗೆ ನಾನು ಐದು ದಿನ ಅಭಿನವ ಸೈರಂಧ್ರಿಯಾಗಿ ರಾಗಿಹಿಟ್ಟು ಹಿಂಡಿಗಳನ್ನು ಪೂರಾ ಹಾಕಿ ಹಾಲು ಕರೆದುಕೊಳ್ಳುತ್ತಿದ್ದೆ. ನನ್ನ ಹೆಂಡತಿ ಹಿಂದಿರುಗುವುದು ನಾಳೆ ಎನ್ನುವಾಗ, ನಾನು ಎಮ್ಮೆಯ ಮುಂದೆ ಹಾಲು ಕರೆಯುತ್ತಾ ಕುಳಿತಿದ್ದೆ. ತೂರ "ಹಸು ಆಗಿದ್ರೆ ವಾಸನೆ ಮೇಲೆ ಹಿಡಿದು ಒದ್ದು ಬಿಡೋದು. ಇದು ಎಮ್ಮೆ ಜಾತಿ. ದೆಯ್ಯದಂತ ಮುಂಡೇದು, ಬುದ್ಧಿ ಇಲ್ಲ" ಎಂದ. ನಾನು ನನ್ನ ಹೆಂಡತಿಯ ದನಿಯಂತೆ ದನಿಮಾಡಿಕೊಂಡು "ಇದಕ್ಕೆ ಬುದ್ಧಿ ಇದೆ" ಎಂದೆ. ಎಮ್ಮೆ ಒದ್ದೇಬಿಟ್ಟಿತು.

ಈ ಎಮ್ಮೆಗೆ ಒಂದು ಸಲ ಕಾಲುಜ್ವರ ಬಾಯಿಜ್ವರ ಆಯಿತು. ಆಳು ತೂರ ಎಲ್ಲಾ ಹಸುಗಳನ್ನೂ ಬೋರೆಗೆ ಬಿಡುತ್ತಿದ್ದ. "ಎಮ್ಮೆ ಬಿಡಬೇಡ. ದನಿನ ಆಸ್ಪತ್ರೆಯಿಂದ ಔಷಧಿ ತರಿಸಿ ಹುಯ್ಯಿಸುತ್ತೇನೆ" ಎಂದೆ. ಆ ಮಾತು ಅಲ್ಲೇ ನಿಂತಿದ್ದ ಎಮ್ಮೆಗೆ ಕೇಳಿಸಿರಬೇಕು. ನಾವು ಒಳಕ್ಕೆ ಹೋದಾಗ ಎಮ್ಮೆ ಕಿತ್ತುಕೊಂಡು ಬೋರೆಗೆ ಓಡಿಬಿಟ್ಟಿತು. ಈ ಎಮ್ಮೆಗೆ ರಾಗಿಯ ಅಂಬಲಿ ಬಹಳ ಇಷ್ಟ. ಕಾಯಿಲೆಯಾದಾಗಲೂ, ಬೇರೆ ಹುಲ್ಲು ತಿಂಡಿಗಳನ್ನು ಮುಟ್ಟದಿದ್ದರೂ, ಇದು ರಾಗಿಯ ಅಂಬಲಿಯನ್ನು ಮಾತ್ರ ಯಾವಾಗಲೂ ಕುಡಿಯುತ್ತದೆ. ಇದಕ್ಕೆ ಕಾಲುಜ್ವರ ಬಾಯಿಜ್ವರವಾದಾಗ "ಇದನ್ನು ಹಿಡಿದುಕೊಂಡು ಗಂಟಲಿಗೆ ಗೊಟ್ಟ ಹಾಕಿ ಔಷಧಿ ಹುಯ್ಯುವುದು ಕಷ್ಟ. ಅಂಬಲಿಗೆ ಸೇರಿಸಿ ಕೊಟ್ಟುಬಿಡೋಣ" ಎಂದಳು, ನನ್ನ ಹೆಂಡತಿ. ಮೊದಲನೆಯ ಸಲ ಹಾಗೆ ಮಾಡಿ ಎಮ್ಮೆಯ ಮುಂದೆ ಇಟ್ಟೆವು. ಅದು ಏನೂ ತಿಳಿಯದ ಪ್ರಾಣಿಯಂತೆ ಸುಮ್ಮನೆ ಅಂಬಲಿ ಕುಡಿಯಿತು. ಆ ಸಾಯಂಕಾಲ, ದನದ ವೈದ್ಯರು ಮನೆಗೆ ಬಂದು ಎಮ್ಮೆ ನೋಡಿದರು. "ಇದಕ್ಕೆ ಔಷಧಿ ಹೇಗ ಕುಡಿಸುತ್ತೀರಿ" ಎಂದರು. ಆಳು ತೂರ "ಅಂಬಲಿ ಒಳಗೆ ಕುಡೀತದೆ" ಎಂದ. ಆ ಮಾತು ಎಮ್ಮೆಗೆ ಕೇಳಿಸಿತು. ಆ

ಸಂಧ್ಯಾಕಾಲದಿಂದಲೇ ಅದು ಅಂಬಲಿ ಕುಡಿಯುವುದನ್ನು ಬಿಟ್ಟಿತು. ಮರುದಿನ ಬೆಳಗ್ಗೆ ಬಂದ ವೈದ್ಯರು "ಇದಕ್ಕೆ ಔಷಧಿ ಕುಡಿಸಲೇಬೇಕು" ಎಂದರು. ಆಗ ಎಮ್ಮೆ ಮಲಗಿದ್ದಿತು. ಆಳು ತೂರ "ಮಲಗಿರುವಾಗ ಕಾಲುಕಟ್ಟಿ ಗೊಟ್ಟದಲ್ಲಿ ಹುಯ್ಯಬೇಕು" ಎಂದನು. ಎಮ್ಮೆ ಎದ್ದು ನಿಂತುಕೊಂಡಿತು. ತೂರ ಮನೆಯಲ್ಲಿರುವವರೆಗೆ ಅದು ಮಲಗುತ್ತಲೇ ಇರಲಿಲ್ಲ. ಹುಷಾರಿಲ್ಲದಿದ್ದರೂ ನಿಂತೇ ಇರುತ್ತಿದ್ದಿತು. ತೂರ ಹನ್ನೊಂದು ಗಂಟೆಗೆ ದನಗಳನ್ನು ಬೋರೆಗೆ ಹೊಡೆದುಕೊಂಡು ಹೋದ ಮೇಲೆಯೇ ಅದು ಮಲಗುತ್ತಿದ್ದಿತು. ಅನಂತರ ತೂರ ಬೋರೆಯಿಂದ ಸಾಯಂಕಾಲ ಬಂದನಂತರ ಉಳಿದ ದನಗಳೆಲ್ಲಾ ಒಳಕ್ಕೆ ಬಂದ ಕೂಡಲೇ ಎದ್ದು ನಿಂತುಕೊಂಡುಬಿಡುತ್ತಿದ್ದಿತು. ರಾತ್ರಿ ನಾವೆಲ್ಲಾ ಮಲಗಿದ ಮೇಲೆ ಮಲಗುತ್ತಿದ್ದಿತು. ಬೆಳಗ್ಗೆ ನಮ್ಮ ಮುಖ ಕಂಡ ಕೂಡಲೇ ಎದ್ದು ನಿಂತುಬಿಡುತ್ತಿದ್ದಿತು.

ಹೀಗೆ ನಮ್ಮ ಎಮ್ಮೆ ನಮ್ಮ ಮನೆಯಲ್ಲಿ ಒಂದು ಅದೃಶ್ಯ ಶಕ್ತಿಯಾಗಿದೆ. ಭಗವಂತ ಕಣ್ಣಿಗೆ ಕಾಣದಿದ್ದರೂ ನಮ್ಮ ಕಾರ್ಯಗಳ ಮೇಲೆ ತನ್ನ ಪ್ರಭಾವವನ್ನು ಬೀರುವಂತೆ ಎಮ್ಮೆ ಮೂಕ ಪ್ರಾಣಿಯಾದರೂ ನಮ್ಮ ಆಚರಣೆ, ಮಾತುಗಳಿಗೆ ಒಂದು ವಿಧವಾದ ಅಂಕುಶವಾಗಿದೆ. ಈ ಎಮ್ಮೆ ಮಾತ್ರವೇ ಅಲ್ಲ. ಯಾವ ಮೂಕ ಪ್ರಾಣಿಯ ಎದುರಿಗೂ ಮನಸ್ಸಿಗೆ ಬಂದಂತೆ ಮಾತನಾಡಲು ನಮಗೆ ಭಯವಾಗಿದೆ. ಯಾಕೆಂದರೆ ಯಾವ ಪ್ರಾಣಿಗೆ ಯಾವ ಶಕ್ತಿ ಇದೆಯೋ ಬಲ್ಲವರಾರು? ಹೀಗಿರುವಲ್ಲಿ ಎಮ್ಮೆಗೆ ಬುದ್ಧಿ ಇಲ್ಲ ಎಂದು ಹೇಳಿದರೆ ನಂಬುವುದಕ್ಕೆ ಆಗುತ್ತದೆಯೇ, ಆ ಎಮ್ಮೆಯ ಹಾಲು ಕುಡಿದ ನಮ್ಮನ್ನೇ ನೋಡಿ !

*****

ಪರಿಚಯ :

ಅರಕಲಗೂಡು ತಾಲ್ಲೂಕಿನ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಆಧುನಿಕ ಕನ್ನಡ ಸಾಹಿತ್ಯಕ್ಕೆ ಆಳ–ವಿಸ್ತಾರಗಳನ್ನು ವೈವಿಧ್ಯ–ವೈಶಿಷ್ಟ್ಯಗಳನ್ನು ತಂದುಕೊಟ್ಟ ಗಣ್ಯ ಲೇಖಕರಲ್ಲೊಬ್ಬರು. ಸುಪ್ರಸಿದ್ಧ ಪ್ರಬಂಧಕಾರರು, ಗಾಂಧೀವಾದಿಗಳು. ಹೈಸ್ಕೂಲಿನ ಐದನೇ ಫಾರಂನಲ್ಲಿ ಓದುತ್ತಿದ್ದಾಗಲೇ ಗಾಂಧೀಜಿಯವರ ಅಸಹಕಾರ ಚಳುವಳಿಯಿಂದ ಆಕರ್ಷಿತರಾಗಿ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಗಾಂಧೀಜಿಯವರ ನಿಕಟಸಂಪರ್ಕ ಪಡೆದು ದೇಶಸೇವೆ ಮಾಡಲು ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಂಡರು. ಇವರು ಸಮಾಜಸೇವೆ, ಖಾದಿ ಪ್ರಚಾರ, ಅಪ್ಪಟ ಗಾಂಧೀವಾದ ಇವೆಲ್ಲವನ್ನು ಮೀರಿ ಶಾಶ್ವತವಾಗಿ ನಿಲ್ಲುವಂಥದ್ದೆಂದರೆ ನಿರಂತರವಾಗಿ ಅರ್ಧಶತಮಾನ ನಡೆಸಿದ ಸಾಹಿತ್ಯಸೇವೆ. ಹೊಸಗನ್ನಡ ಸಾಹಿತ್ಯದಲ್ಲಿ ನಿರ್ಮಲವಾದ, ತಿಳಿಯಾದ, ಹಾಸ್ಯವನ್ನು ಹರಿಯಬಿಟ್ಟವರೆಂಬ ಕೀರ್ತಿಗೆ ಇವರು ಪಾತ್ರರಾಗಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃತಿ ರಚನೆ ಮಾಡಿದ್ದಾರೆ. ಜನಸಾಮಾನ್ಯರಲ್ಲಿ ಬೆರೆತು ಸಾಹಿತ್ಯ ಮತ್ತು ಸಮಾಜಸೇವೆ

ಮಾಡಿದ ಗೊರೂರರಿಗೆ ರಾಜ್ಯಸಾಹಿತ್ಯ ಅಕಾಡೆಮಿಯ ಗೌರವ, ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್, ಪದವಿಯ ಗೌರವಗಳು ಪ್ರಾಪ್ತವಾಗಿವೆ. ಗೊರೂರರ ಬಹುಮುಖ್ಯ ಕೃತಿಗಳಲ್ಲಿ ಕೆಲವು – ಹೇಮಾವತಿ, ಮೆರವಣಿಗೆ, ಗರುಡಗಂಬದ ದಾಸಯ್ಯ, ನಮ್ಮ ಊರಿನ ರಸಿಕರು, ಸಾಹಿತ್ಯ ರಶ್ಮಿ, ಹಳ್ಳಿಯ ಹಾಡುಗಳು, ಹಳ್ಳಿಯ ಬಾಳು.

ಭಾರತದಲ್ಲಿ ಪೂಜಾರ್ಹವೆಂದೇ ಭಾವಿಸಲಾಗಿರುವ ಬೆಳಗ್ಗೆ ಎದ್ದೊಡನೆ ನೋಡಬಯಸುವ, ದಾರಿಯಲ್ಲಿ ಎದುರಾದಾಗ ಮೈಮುಟ್ಟಿ ಕಣ್ಣಿಗೊತ್ತಿಕೊಳ್ಳುವ ಗೋವುಗಳ ನಡುವೆ ಮರ್ಯಾದೆಹೀನವಾಗಿ, ತಿರಸ್ಕಾರಯೋಗ್ಯವಾಗಿ ಕಾಣುವುದು ಎಮ್ಮೆಗಳ ದೌರ್ಭಾಗ್ಯ. ಇಂಥ ಎಮ್ಮೆಗಳ ನಡುವೆ ಗೊರೂರವರು ಅವರ ಮನೆಯಲ್ಲಿತ್ತೆಂದು ಹೇಳುವ ಹೀರೇಗೌಡ್ನಹಳ್ಳಿ ಸಂತಾನಕ್ಕೆ ಸೇರಿದ ಎಮ್ಮೆ ಭಿನ್ನವಾಗಿ ಕಾಣುತ್ತದೆ. ಎಮ್ಮೆಯ ಹಿರಿಮೆಯನ್ನು ಲೇಖಕರು ಪುರಾಣ, ಇತಿಹಾಸಗಳ ಕಾಲಕ್ಕೂ ಕೊಂಡೊಯ್ಯುತ್ತಾರೆ, ವಿಶ್ವಾಮಿತ್ರನಿಗೂ ಗಂಟುಹಾಕುತ್ತಾರೆ. ವಸಿಷ್ಠನ ನಂದಿನೀಧೇನು ತನ್ನ ಕೈವಶವಾಗದ ಕೋಪದಿಂದ ವಿಶ್ವಾಮಿತ್ರ ಅದಕ್ಕೆ ಪ್ರತಿಯಾಗಿ ಹಸುವಿಗಿಂತ ಹೆಚ್ಚು ಹಾಲು ಕೊಡುವ ಎಮ್ಮೆಯನ್ನು ಸೃಷ್ಟಿಸಿದನಂತೆ. ಮೈಸೂರಿನ ಎಮ್ಮೆಗಳ ಹೆಚ್ಚು ಹಾಲು ಕೊಡುವುದರಿಂದ ವಿಶ್ವಾಮಿತ್ರ ಮೈಸೂರಿನವನೇ ಆಗಿರಬೇಕೆಂದೂ ಸ್ಥಾಪಿಸಿರುತ್ತಾರೆ. ಎಮ್ಮೆಯ ಹಾಲನ್ನು ಕುಡಿಯವವರಿಗೆ ಬುದ್ಧಿಮಂಕು ಎನ್ನುವ ಮಾತನ್ನು ಗೊರೂರರು ಬಿಲ್‌ಕುಲ್ ಒಪ್ಪುವುದಿಲ್ಲ. ಎಮ್ಮೆ ಹಸುವಿನಷ್ಟೇ ಅಥವಾ ಹಸುವಿಗಿಂತಲೂ ಹೆಚ್ಚು ಬುದ್ಧಿ ಇರುವ ಪ್ರಾಣಿ ಎಂದು ಸಾಬೀತಪಡಿಸಲು ಅವರ ಮನೆಯ ಎಮ್ಮೆಯ ವರ್ತನೆಯನ್ನು ಬಣ್ಣಿಸಿದ್ದಾರೆ. ವಿಚಾರವನ್ನು ಗ್ರಹಿಸುವ ಕ್ರಮದಲ್ಲಿ ಯಾವ ಉತ್ಪ್ರೇಕ್ಷೆಯಾಗಲೀ, ಅವಾಸ್ತವವಾಗಲೀ ಇಲ್ಲ. ಆದರೆ ಸಂಗತಿಯನ್ನು, ಅನುಭವವನ್ನು ನಿರೂಪಿಸುವ ಕ್ರಮ ಮಾತ್ರ ಎಂಥವರನ್ನಾದರೂ ಹೊಟ್ಟೆ ತುಂಬಾ ನಗಿಸುತ್ತದೆ. ಹೃದಯದ ಒತ್ತಡವನ್ನೆಲ್ಲಾ ಕಳೆಯುತ್ತದೆ. ಕರು ಹಾಕಬೇಕಾದಾಗ ನಿಂತುಕೊಂಡೇ ಎಸೆದುಬಿಡುತ್ತಿದ್ದ ಗೊರೂರು ಮನೆಯ ಒರಟು ಎಮ್ಮೆಯಿಂದ ಕರುವನ್ನು ಕಾಪಾಡುವ ಉಪಾಯವನ್ನು ಗೊರೂರರು ಆಳು ತೂರನೊಂದಿಗೆ ಸೇರಿ ಸಮಾಲೋಚಿಸುತ್ತಾರೆ. ಅದನ್ನು ಕೇಳಿಸಿಕೊಂಡು, ಅರ್ಥಮಾಡಿಕೊಂಡ ಎಮ್ಮೆ ಅವರ ಉಪಾಯಕ್ಕೆ ವಶವಾಗದೆ ಕರುವನ್ನು ನಿಂತುಕೊಂಡೇ ಎಸೆಯುತ್ತದೆ. ಅವರ ಮಾತು ತನಗೆ ಅರ್ಥವಾಗುತ್ತದೆಂದು ಹಲವಾರು ಸಂದರ್ಭಗಳಲ್ಲಿ ಸ್ಪಷ್ಟಪಡಿಸುತ್ತದೆ. ಮನೆಯಲ್ಲಿನ ಒಂದು ಅದೃಶ್ಯ ಶಕ್ತಿಯಾಗಿ ಮನೆಯವರ ಆಚರಣೆ ಮಾತುಗಳಿಗೆ ಅಂಕುಶವಾಗುತ್ತದೆ. ಎಮ್ಮೆಗೆ ಬುದ್ಧಿ ಇಲ್ಲ ಎನ್ನುವ ನಿರಾಕರಿಸುವಂತೆ ಮಾಡುತ್ತದೆ.

೩. ಹೆಂಡತಿಯ ಹೆಸರು

– ಎ.ಎನ್. ಮೂರ್ತಿರಾವ್

ನಮ್ಮಲ್ಲಿ ಮದುವೆಯ ದಿನ ಧಾರೆಯಾದ ಮೇಲೆ ವರನು ವಧುವಿನ ಕೈಹಿಡಿದು ದೇವರ ಮನೆಗೆ ಕರೆದುಕೊಂಡು ಹೋಗಿ ದೇವರಿಗೂ ಹಿರಿಯರಿಗೂ ನಮಸ್ಕಾರಮಾಡಿ ಬರುವ ಪದ್ಧತಿ. ಸಾಧಾರಣವಾಗಿ ದೇವರ ಸನ್ನಿಧಿಗೆ ಹೋಗುವ ಮಾರ್ಗ ಸುಗಮವಾದದ್ದಲ್ಲ. ಈ ಸಂದರ್ಭದಲ್ಲೂ ಹಾಗೆಯೇ. ದೇವರ ಮನೆಯ ಹೊಸಲ ಬಳಿ ನಿಮ್ಮನ್ನು ಅಡ್ಡಗಟ್ಟುವ ಯುವತಿಯರ ಸೈನ್ಯವೊಂದು ನಿಂತಿರುತ್ತದೆ. ಈ ಪ್ರಮೊಳೆಯರಿಗೆ ಹಿಂಗಾವಲಾಗಿ ಮಧ್ಯ ವಯಸ್ಸಿನ ಹೆಂಗಸರೂ ಕೆಲವರು ಸೇರಿರುತ್ತಾರೆ. ಗುಂಪಿನಲ್ಲಿ ಮುಕ್ಕಾಲುಪಾಲು ಜನ ನಿಮಗೆ ಅಪರಿಚಿತರು ; ನೀವು ಧೂರ್ತರಾಗಿ ಅವರನ್ನು ತಳ್ಳಿಕೊಂಡು ಒಳಗೆ ಹೋಗುವುದು ಸಾಧ್ಯವಿಲ್ಲ. ಇಂಥ ಕಷ್ಟ ಕಾಲದಲ್ಲಿ ನಿಮಗೆ ಸಹಾಯಮಾಡಬಹುದಾದ ನಿಮ್ಮ ತಾಯಿ ಮತ್ತು ಅಕ್ಕತಂಗಿಯರೂ ಸಹ ತಾತ್ಕಾಲಿಕವಾಗಿ ಶತ್ರುಪಕ್ಷವನ್ನೇ ಅವಲಂಬಿಸಿರುತ್ತಾರೆ. ನಿಮ್ಮ ಜೀವನದ ಗೆಳತಿಯಾಗಿರಲು ಒಪ್ಪಿ ಕೈಹಿಡಿದು ನಿಂತಿರುವ ಆ ಹುಡುಗಿಯ ಬೆಂಬಲವನ್ನೂ ನೀವು ನೆಚ್ಚುವಹಾಗಿಲ್ಲ. ನೀವು ಹೆಂಡತಿಯ ಹೆಸರು ಹೇಳುವವರೆಗೆ ಹೊಸಲು ದಾಟಕೂಡದೆಂದು ಆ ಯುವತಿಯರ ಷರತ್ತು. ಅದಕ್ಕೆ ಒಪ್ಪಿದರೇ ನಿಮಗೆ ದೇವರ ಸಾನ್ನಿಧ್ಯ ದೊರಕೀತು. ವಧು ಗಂಡನ ಹೆಸರು ಹೇಳಬೇಕೆಂಬ ನಿಯಮವೂ ಉಂಟು. ಆದರೆ ಆ ಹೆಂಗಸರು ಸ್ವಜಾತಿವಾತ್ಸಲ್ಯದಿಂದ ಅವಳನ್ನು ಅಷ್ಟೊಂದು ಪೀಡಿಸುವುದಿಲ್ಲ. ಅವಳು ತಲೆ ತಗ್ಗಿಸಿಕೊಂಡು ಏನೋ ಗೊಣಗಿದರೂ ತೃಪ್ತರಾಗಿ ಅವಳ ಗೊಡವೆ ಬಿಟ್ಟು ತಮ್ಮ ಶಕ್ತಿಯನ್ನೆಲ್ಲಾ ನಿಮ್ಮ ಮೇಲೆಯೇ ಪ್ರಯೋಗಿಸುತ್ತಾರೆ. "ಹೆಂಡತಿಯ ಹೆಸರು ಹೇಳುವ ಧೈರ್ಯವಿದೆಯೇ ಈ ಗಂಡಿಗೆ?" ಎಂದು ಪರೀಕ್ಷೆಮಾಡಿ ನೋಡುವುದು ಮದುವೆಯ ಕಲಾಪದಲ್ಲಿ ಅವಶ್ಯವಾದ ಅಂಗವಾಗಿ ಹೋಗಿದೆ. ಹೆಸರು ಹೇಳುವುದು ಅಷ್ಟೇನೂ ಕಷ್ಟವಲ್ಲ. ಆ ಹೆಸರಿಗೆ ಹೆದರಬೇಕಾದ ಪ್ರಮೇಯವೇನೋ ಮುಂದೆ ಬರಬಹುದು, ಆದರೆ ಈಗಲೇ ಅಲ್ಲ. ಅವಳು ನಮ್ಮನ್ನು ಕಾಡಿ ಪ್ರಾಣ ತೆಗೆಯಬೇಕಾದರೆ ಒಂದೆರಡು ವರ್ಷ ಕಳೆದು ಈಗ ಮುಗ್ಧೆಯಾಗಿರುವವಳು ಪಳಗಿದ ಗೃಹಿಣಿಯಾಗಬೇಕು ; ಅಲ್ಲಿಯವರೆಗೆ ಭಯವಿಲ್ಲ. ಆದರೂ ಬಾಗಿಲಿನಲ್ಲಿ ನಿಮ್ಮನ್ನು ತಡೆದು ನಿಂತಿರುವ ಈ ಕೇವಲ ಹೆಂಗಸರ ಆಜ್ಞಾಧಾರಕರಾಗಿ ಅವರು ಹೇಳಿದಂತೆ ಕುಣಿದರೆ ಗಂಡಸಿನ

ಮಾನ ಏನಾಗಬೇಕು ! ಅಲ್ಲದೆ ನಿಮ್ಮ ಹೆಂಡತಿಯ ಹೆಸರು ಅವರಿಗೇನು ತಿಳಿಯದೆ ಇಲ್ಲ. ಹೆಸರು ಹೇಳಲು ನಾಚುವ ಯುವಕರನ್ನು ಪೀಡಿಸಿ, ಗೇಲಿಮಾಡಿ, ಅವರ ಬಾಯಿಂದ ಅದನ್ನು ಹೊರಡಿಸುವುದರಲ್ಲಿ ಅವರಿಗೆ ಸ್ವಲ್ಪ ವಿನೋದ. ನೀವು ಸ್ವಲ್ಪವೂ ಅನುಮಾನಿಸದೆ ಅವರ ಕೇಳಿದ ಕ್ಷಣವೇ ಹೆಸರನ್ನು ಕೂಗಿಬಿಟ್ಟರೆ ಆ ವಿನೋದಕ್ಕೆ ಭಂಗ ಬಂದೀತು. ಕದನದಲ್ಲಿ ಸ್ವಲ್ಪ ಹೊತ್ತು ಹೋರಾಟ ನಡೆದ ಮೇಲೆ ಸೋಲಾದರೆ ಅವಮಾನವಿಲ್ಲ. ಯುದ್ಧಕ್ಕೆ ನಿಲ್ಲದೆಯೇ ಹೋದರೆ ನಿಮಗೆ ಮಾನವಿಲ್ಲ. ಎದುರಾಳಿಗೆ ಗೆಲುವಿನ ಸಂತೋಷವೂ ಇಲ್ಲ. ಆದ್ದರಿಂದ ಆ ಸನ್ನಿವೇಶದಲ್ಲಿ ಹೆಂಡತಿಯ ಹೆಸರು ಹೇಳಲು ಸಂಕೋಚಪಡುವುದು ಅಥವಾ ಸಂಕೋಚವನ್ನು ನಟಿಸುವುದು ನಮ್ಮ ಕರ್ತವ್ಯವೆಂದರೂ ಎನ್ನಬಹುದು.

ಇನ್ನು ಮೊದಲಬಾರಿ ದೀಪಾವಳಿಗೆ ಅವಳ ಮನೆಗೆ ಹೋದಾಗ, ಮನೆಯವರೆಲ್ಲ ಬೇರೆ ಕೆಲಸದಲ್ಲಿದ್ದು ಮಧ್ಯಾಹ್ನದ ಕಾಫಿಯನ್ನು ಅವಳೇ ತಂದುಕೊಟ್ಟರೆ, ನೀವು ಅರ್ಧ ನಾಚಿಕೆಯಿಂದ, ಅರ್ಧ ಯಾರಾದರೂ ಕಂಡಾರೆಂಬ ಭಯದಿಂದ, ಹಿಂದೆ ಮುಂದೆ ನೋಡಿ ಕೊನೆಗೆ ಹೇಗೋ ಧೈರ್ಯ ತಂದುಕೊಂಡು ಅವಳ ಕೈಹಿಡಿದು, ಹೆಸರಿಟ್ಟು ಕೂಗಿ, ಕುಳಿತುಕೊ ಎನ್ನಬಹುದು. ಆದರೆ ಅತ್ತೆ ಮಾವಂದಿರ ಎದುರಿಗೆ "ನೀವೆಲ್ಲಾ ಹಿಂದಿನ ಕಾಲದವರು, ನಾವು ಹಳೆಯ ಪದ್ಧತಿಗೆ ಸೊಪ್ಪು ಹಾಕುವವರಲ್ಲ" ಎನ್ನುವಂತೆ ನಿರ್ಲಕ್ಷ್ಯವಾಗಿ ನಿಮ್ಮವಳ ಹೆಸರನ್ನು ಕೂಗಿ ನಿಮ್ಮ ಯುವನಾಗರಿಕತೆಯನ್ನು ಮೆರೆಸುವುದು ನ್ಯಾಯವಲ್ಲ. ಆದ್ದರಿಂದ ಅವರೆದುರಿಗೆ "ಅವಳು" ಅವಳಾಗಿಯೇ ಉಳಿಯುತ್ತಾಳೆ. ಆಕೆ ನಿಮ್ಮ ಮನೆಗೇ ಬಂದಮೇಲೆಯಾದರೂ ತಂದೆತಾಯಿಯರೆದುರಿಗೆ ಅವಳೊಡನೆ ಅಷ್ಟು ಸಲಿಗೆಯಿಂದ ವರ್ತಿಸುವುದು ಧರ್ಮವಲ್ಲ. ಅದಕ್ಕಿಂತಲೂ ಹೆಚ್ಚಾಗಿ ಲೌಕಿಕವಲ್ಲ. ಯಾವಾಗಲೂ ಅವಳ ಹೆಸರು ಉಚ್ಚರಿಸಿ ಅಭ್ಯಾಸವಿಲ್ಲದ್ದರಿಂದ ಅವಳೊಡನೆ ಏಕಾಂತದಲ್ಲಿರುವಾಗಲೂ ಅದು ಸ್ವಲ್ಪ ವಿಚಿತ್ರವಾಗಿಯೇ ಕಾಣುತ್ತದೆ. ಆದ್ದರಿಂದ ಬಹುಮಟ್ಟಿಗೆ ಜನರು ಆ ಹೆಸರು ಹೇಳದೆಯೇ ಸಂಭಾಷಣೆ ನಡೆಸುವ ಅಭ್ಯಾಸಮಾಡಿಕೊಂಡಿರುತ್ತಾರೆ.

ಹಿಂದಿನ ಕಾಲದವರಿಗೆ ತಮ್ಮ ಸಹಧರ್ಮಿಣಿಯನ್ನು ಹೆಸರಿಟ್ಟು ಕರೆಯುವುದು ಅವಮಾನಕರ, ನಾಚಿಕೆಗೇಡು, ಇಲ್ಲವೆ ಶೀಲಕ್ಕೆ ತಕ್ಕುದಲ್ಲ ಎಂಬ ಭಾವನೆ ಹೇಗೋ ಬಂದುಹೋಗಿರಬೇಕು. ಇಲ್ಲದಿದ್ದರೆ ಆ ನಿಯಮವನ್ನು ಅಷ್ಟು ನಿಷ್ಠುರವಾಗಿ ಪಾಲಿಸಿಕೊಂಡು ಬರುತ್ತಿರಲಿಲ್ಲ. ಒಂದೊಂದು ವೇಳೆ ಅವರ ಹಿಂಜರಿಕೆಯನ್ನು ನೋಡಿದರೆ ನಿಜವಾಗಿಯೂ ಕನಿಕರ ಹುಟ್ಟುತ್ತದೆ. ನನ್ನ ಬಂಧುಗಳೊಬ್ಬರು, ವಯಸ್ಸಾದವರು, ಐದಾರು ಮಕ್ಕಳ ತಂದೆ, ಹೆಂಡತಿಯೊಡನೆ ಮೂವತ್ತು ವರ್ಷಕಾಲ

ಸಂಸಾರಮಾಡಿ ಜೀವನದ ಸುಖ ದುಃಖಗಳನ್ನೆಲ್ಲಾ ಜೊತೆಯಾಗಿ ಅನುಭವಿಸಿದ್ದರು– ಇಷ್ಟಾದರೂ ಅವರು ಆಕೆಯ ಹೆಸರು ಹಿಡಿದು ಕೂಗುವುದು ಹಾಗಿರಲಿ ನೇರವಾಗಿ ಅವರನ್ನುದ್ದೇಶಿಸಿ ಮಾತು ಸಹ ಆಡುವುದಿಲ್ಲ. ಆಕೆಯ ಭಾಗ್ಯಕ್ಕೆ ತಂದೆ ತಾಯಿಯರಿಟ್ಟ ಹೆಸರಿಲ್ಲದೆ ಹೋದರೂ ಪತಿಯ ಬಾಯಿಂದ 'ನೀನು' ಎಂಬ ಸರ್ವನಾಮ ಪದವನ್ನು ಕೇಳುವ ಭಾಗ್ಯ ಸಹ ಇಲ್ಲ. ಹೆಂಡತಿಗೆ ಏನಾದರೂ ತಿಳಿಸಬೇಕಾದರೆ ಅವರು ಎದುರಿಗಿಲ್ಲದ ಮತ್ತೆ ಯಾರನ್ನಾದರೂ ಉದ್ದೇಶಿಸಿ ಮಾತನಾಡುತ್ತಾರೆ. ಅವರ ಮಕ್ಕಳೆಲ್ಲರೂ ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಕುಡಿಯಲು ನೀರು ಬೇಕಾದಾಗ, "ಲೋ ರಾಮು, ಒಂದು ಪಂಚಪಾತ್ರೆ ಗಂಗಾಮೃತ ತಗೊಂಡು ಬಾ ಅನ್ನೋ" ಎಂದು ಕೂಗುತ್ತಾರೆ. ರಾಮು ಮನೆಯಲ್ಲಿಲ್ಲವೆಂದು ಅವರಿಗೂ ಗೊತ್ತು. ಹೆಂಡತಿಗೂ ಗೊತ್ತು. ಆದರೆ ಅವನು ಇದ್ದರೆ ಹೇಗೋ ಹಾಗೆಯೇ ಭಾವಿಸಿ ಇಬ್ಬರೂ ಈ ಬಗೆಯ ನಾಟಕವನ್ನಾಡುತ್ತಾರೆ. ಪತಿಯ ಮಾತು ನೇರವಾಗಿ ಹೆಂಡತಿಗೆ ತಲುಪಿದ ದಿನವೇ ಇಲ್ಲ ; ಯಾವುದೋ ಊರಿನಲ್ಲಿರುವ ಮಗನನ್ನು ಸುತ್ತುಹಾಕಿಕೊಂಡು ಆಕೆಯ ಕಿವಿಗೆ ಬಂದು ಬೀಳಬೇಕು. ಯಾರಾದರೂ ಹೊರಗಿನವರೆದುರಿಗೆ ಹೆಂಡತಿಯ ವಿಷಯ ಮಾತಾಡಬೇಕಾಗಿ ಬಂದಾಗ ಆಕೆಯನ್ನು "ನಮ್ಮ ಮನೆಯಲ್ಲಿ" ಎಂದೋ, ಇಲ್ಲವೆ "ಯಜಮಾನಿತಿ" ಎಂದೋ ಕರೆಯುತ್ತಾರೆ. ಕೆಲವು ದಿನಗಳ ಹಿಂದೆ ಅವರು ನನ್ನನ್ನು ಕರೆದು "ನಿನ್ನ ಯಜಮಾನಿತಿಯನ್ನು ಯಾವಾಗಲಾದರೂ ನಮ್ಮ ಮನೆಗೆ ಕರೆದುಕೊಂಡು ಬಾ" ಎಂದಾಗ ನನಗೆ ಸ್ವಲ್ಪ ಅಸಮಾಧಾನವಾಯಿತು. ಲಲಿತೆಗೆ ನನ್ನ ಮೇಲೆ ಯಜಮಾನಿಕೆ ಕೊಟ್ಟವರು ಯಾರು ! ಅವಳನ್ನು ನನಗೆ ಕೊಟ್ಟು ಮದುವೆ ಮಾಡಿದರೇ ಹೊರತು ನನ್ನನ್ನು ಅವಳಿಗೆ ಕೊಡಲಿಲ್ಲ. ಈ ವಿಷಯದಲ್ಲಿ ಯಾರಿಗಾದರೂ ಸಂದೇಹವಿದ್ದರೆ ಅದರ ಪರಿಹಾರಕ್ಕೆ ಲಗ್ನಪತ್ರಿಕೆಯ ಸಾಕ್ಷ್ಯವೇ ಇದೆ. ಯಾವ ಹೆಂಗಸಿನ ಯಜಮಾನಿಕೆಗೂ ತಲೆಬಾಗಿ ನಡೆಯುವ ಸ್ವಭಾವವಲ್ಲ, ನನ್ನದು. ಇದುವರೆಗೂ ನಾನು ಲಲಿತೆಯ ಮಾತಿಗೆ ಪ್ರತಿಯಾಗಿ ನಡೆದಿಲ್ಲ, ನಿಜ. "ಇದಂ ಕೃಷ್ಣಂ ಕೃಷ್ಣಂ ನನು ಶ್ವೇತಮಥ ಕಿಂ" ಎನ್ನುವ ಹುಚ್ಚಿಗೆ ಹೋಗದಿದ್ದರೂ ಒಬ್ಬರು ಶ್ವೇತ ಎಂದದ್ದನ್ನು ಇನ್ನೊಬ್ಬರು ಬೇಕುಬೇಕಾಗಿ, ಕೇವಲ ಯಜಮಾನಿಕೆಯ ಪ್ರದರ್ಶನಕ್ಕಾಗಿ ಕೃಷ್ಣ ಎನ್ನುವುದಿಲ್ಲ. ಅಲ್ಲದೆ ಲಲಿತೆ ಏನೇ ಆಗಲಿ ನನ್ನವಳು; ಮೃದುವಾದ ಅವಳ ಮನಸ್ಸು ನೋಯದಿರಲೆಂದು ಕರುಣೆಯ ದೃಷ್ಟಿಯಿಂದ, ಪ್ರೇಮದ ದೃಷ್ಟಿಯಿಂದ ಅವಳ ಮಾತಿಗೆ ಮನ್ನಣೆ ಕೊಡುತ್ತೇನೆಯೇ ಹೊರತು, ಅವಳಿಗೆ ಯಜಮಾನಿತಿಯ ಪಟ್ಟವನ್ನು ಕಟ್ಟಿದರೆ ಆತ್ಮಗೌರವಕ್ಕೆ ಚ್ಯುತಿ ಬಂದೀತು. ಒಂದು ವೇಳೆ ಯಜಮಾನಿಕೆ... ಹೆಂಡತಿಯದೇ ಆದರೂ ಅದನ್ನು ಪ್ರಪಂಚಕ್ಕೆಲ್ಲಾ ಡಂಗೂರ ಹೊಡೆಯಲಾಗುತ್ತದೆಯೆ!

ಹಿಂದಿನ ಸಮಾಜದ ಕಟ್ಟು ಸಡಿಲವಾಗಿರುವ ಈ ಕಾಲದಲ್ಲಿ ಕೂಡ ಹೊಸ ಪ್ರಾಯದ ರಸಿಕರು ತಮ್ಮ ನಲ್ಲೆಯ ನಾಮಾಕ್ಷರಗಳನ್ನು ಏಕಾಂತದಲ್ಲಿ ಎಷ್ಟು ಪಾರಾಯಣ ಮಾಡಿದರೂ ಎಲ್ಲರೆದುರಿಗೆ ಧೈರ್ಯವಾಗಿ ಹೇಳಲು ನಾಚುವುದುಂಟು. ಆದರೆ ಇದಕ್ಕೆ ಕಾರಣ ಬೇರೆ ; ನಮಗೆ ಹೆಂಗಸರ ವಿಷಯದಲ್ಲಿ ಲಘುಭಾವನೆಯೇನೂ ಇಲ್ಲ. ಬಲ್ಲವರು ತಮಗೆ ಪ್ರಿಯವಾದ ವಸ್ತುವನ್ನು ಅಪರೂಪಕ್ಕೆ ಒಂದೊಂದು ಬಾರಿ ಉಪಯೋಗಿಸಿ ಅದರ ಸವಿ ಇಳಿಯದಂತೆ ನೋಡಿಕೊಳ್ಳುತ್ತಾರೆ. ನಮ್ಮ ನಲ್ಲೆಯ ಹೆಸರು ದಿನಚರಿಯ ಸಾವಿರ ಮಾತುಗಳಲ್ಲಿ ಒಂದಾಗಿ ಬೆರೆದುಹೋಗಬಾರದು. ಅದು ನಾಲಗೆಗೆ ಅಷ್ಟು ಸವಿ, ಕಿವಿಗೆ ಅಷ್ಟು ಇಂಪು. ಹೊಸದಾಗಿ ಮದುವೆಯಾದ ಹೆಂಡತಿಯನ್ನು ತಾತ್ಕಾಲಿಕವಾಗಿ ಅಗಲಿದವರಿಗಂತೂ ಅದರ ಬೆಲೆ ನೂರು ಮಡಿ ಹೆಚ್ಚುತ್ತದೆ. ಒಬ್ಬರೇ ಇರುವಾಗ ಆ ಹೆಸರನ್ನು ನಮಗೆ ನಾವೇ ಮೆಲುದನಿಯಿಂದ ಹೇಳಿಕೊಂಡು ಸಾವಧಾನವಾಗಿ ಆಸ್ವಾದಿಸಿ ಮೆಲುಕು ಹಾಕುತ್ತೇವೆ. ಅನ್ಯಮನಸ್ಕರಾಗಿ ಮೇಜಿನ ಬಳಿ ಕುಳಿತು ಸಿಕ್ಕಿದ ಕಾಗದದ ಮೇಲೆ ಅದನ್ನು ನೂರು ಬಾರಿ ಬರೆದು, ಆ ನಾಮಾವಳಿ ಪ್ರಪಂಚದ ಕೀಳು ದೃಷ್ಟಿಗೇನಾದರೂ ಬಿದ್ದೀತೆಂಬ ಶಂಕೆಯಿಂದ ಕೂಡಲೆ ಅದನ್ನು ನಾಶಮಾಡುತ್ತೇವೆ. ಒಂದೊಂದು ವೇಳೆ ರಸ್ತೆಯಲ್ಲಿ ಯಾರೊಡನೆಯೊ ಮಾತಾಡುತ್ತಿರುವಾಗ ನಮಗೇ ತಿಳಿಯದಂತೆ ಉಂಗುಷ್ಠವು ನೆಲದ ಮೇಲೆ ಪ್ರಿಯಳ ಹೆಸರನ್ನು ಚಿತ್ರಿಸುತ್ತಿರುತ್ತದೆ. ಪೂರ್ವಕಾಲದ ಪ್ರೇಮಕಥೆಗಳಲ್ಲಿ ಬರುವ ನಾಯಕರು ಮರದ ತೊಗಟೆಯ ಮೇಲೆಲ್ಲಾ ತಮ್ಮ ಪ್ರೇಯಸಿಯರ ಹೆಸರು ಕೆತ್ತುತ್ತಿದ್ದರಂತೆ. ಕೆಲವರು ಇದನ್ನೆಲ್ಲಾ ಅತಿಶಯೋಕ್ತಿಯೆನ್ನಬಹುದು–ಪ್ರೇಮರಹಿತುಲಕು ನಾಮರುಚಿ ದೆಲುಸನಾ ! ನಾಮಾಮೃತದ ರುಚಿ ಪ್ರಣಯಿಗಳಿಗೆ ಗೊತ್ತು, ಭಕ್ತರಿಗೆ ಗೊತ್ತು. ಇವರಿಬ್ಬರ ಹೃದಯದಲ್ಲೂ ಅದರ ಪಾಕ ಒಂದೇ ಬಗೆಯದು. ಕೆಲವು 'ಅನಾಗರಿಕ' ಜನಾಂಗಗಳಲ್ಲಿ ತಮಗೆ ಅತ್ಯಂತ ಪ್ರಿಯವಾದ ಹೆಸರನ್ನು ಉಚ್ಚರಿಸಬಾರದೆಂಬ ವಿಧಿಯುಂಟಂತೆ. ನಮ್ಮ ಹೆಂಡತಿಯ ಹೆಸರು ಪವಿತ್ರವೂ ಹೌದು, ಪ್ರಿಯವೂ ಹೌದು. ಅದನ್ನು ಮಳೆಯಲ್ಲಿ ನೆನೆಸಿ ಬಿಸಿಲಲ್ಲಿ ಒಣಗಿಸುವುದು ಅಷ್ಟೇನೂ ನಾಗರಿಕತೆಯ ಚಿಹ್ನೆಯಲ್ಲ. ನಾಲಗೆ ಮೊದಲು ಆ ಹೆಸರನ್ನು ನುಡಿದಾಗ ನಮ್ಮ ಹೃದಯದಲ್ಲಾದ ಅಲ್ಲೋಲಕಲ್ಲೋಲ, ಮೈಯ ರೋಮಾಂಚ, ಬಹುಶಃ ನಮ್ಮೆಲ್ಲರ ನೆನಪಿನಲ್ಲಿದೆ. ಅದನ್ನು ದಿನಸಾಮಾನ್ಯದ ಬಳಕೆಗಿಟ್ಟುಕೊಂಡರೆ ಆ ಮೋಹಕ ಶಕ್ತಿ ನಾಶವಾಗುತ್ತದೆ. ಅದಕ್ಕಾಗಿಯೇ ಸುವರ್ಣ ಪಾತ್ರೆಗಳನ್ನೂ ಮುತ್ತು ರತ್ನಗಳನ್ನೂ ಜೋಪಾನವಾಗಿಡುವಂತೆ ನಾವು ಅದನ್ನು ಹೃದಯದ ಸಂದಕದಲ್ಲಿಟ್ಟು ಉತ್ಸವಕಾಲದಲ್ಲಿ ಮಾತ್ರ ಬಳಸಿಕೊಳ್ಳುತ್ತೇವೆ.

ಅಂತೂ ಕಾರಣವೇನಾದರೂ ಇರಲಿ ಕನ್ನಡಿಗರಿಗೆ ಹೆಂಡತಿಯ ಹೆಸರು ಇದ್ದೂ ಇಲ್ಲವಾಗಿದೆ. ಅನೇಕ ವೇಳೆ ತಂದೆತಾಯಿಯರು ಇಡುವ ಹೆಸರುಗಳು

ಉಪಯೋಗಕ್ಕೆ ಅರ್ಹವೂ ಅಲ್ಲ. ಕಮಲ, ಶಾರದ, ಲಲಿತ ಮೊದಲಾದ ಎಷ್ಟು ಮನೋಹರವಾಗಿದ್ದರೂ ಔಚಿತ್ಯವರಿಯದ ಜನರ ಕೈಗೆ ಸಾವಿರ ಬಾರಿ ಸಿಕ್ಕಿ ತಮ್ಮ ಸತ್ವವನ್ನೆಲ್ಲಾ ಕಳೆದುಕೊಂಡಿವೆ. ಮತ್ತೆ ಕೆಲವು ಹಳೆಯಕಾಲದ ಹೆಸರುಗಳಂತೂ ಕೇಳಿದರೆ ಕಿವಿ ನೋಯುವಂಥವು ; ಅವುಗಳ ಒಡತಿಯರಿಗೆ ಅಪ್ಸರೆಯರ ಸೌಂದರ್ಯವಿದ್ದರೂ ಅವರನ್ನು ಹೆಸರಿಟ್ಟು ಕರೆಯುವುದಕ್ಕೆ ಬೇಸರವಾಗುತ್ತದೆ. ಹೆಂಡತಿ ಎಂಬ ಪದದಲ್ಲಿಯೇ ಸ್ತ್ರೀ ಸಹಜವಾದ ಸರಳತೆಯಿಲ್ಲ, ಮಾರ್ದವವಿಲ್ಲ. ಈ ವಿಷಯದಲ್ಲಿ ಬಂಗಾಳಿಗಳು ನಮಗಿಂತ ಎಷ್ಟೋ ಮುಂದುವರಿದಿದ್ದಾರೆ. ನಮ್ಮವರಿಗೆ ಧಾರ್ಮಿಕ ಶ್ರದ್ಧೆ ಹೆಚ್ಚಾದ್ದರಿಂದಲೋ ಏನೋ, ನಾಮಕರಣ ಸಮಯದಲ್ಲಿ ಅವರ ಗಮನ ಶಬ್ದ ಮಾಧುರ್ಯದ ಕಡೆಗೆ ಹರಿಯುವುದೇ ಇಲ್ಲ. ಬಂಗಾಳಿ ಕಥೆಗಳನ್ನೋದುವಾಗ ಕಥೆಯ ಸ್ವಾರಸ್ಯ ಹೇಗಾದರೂ ಇರಲಿ, ಅಲ್ಲಿಯ ಸ್ತ್ರೀಯರ ಹೆಸರುಗಳೇನೋ ನಮ್ಮನ್ನು ಸೆಳೆಯುತ್ತವೆ. ಲಾವಣ್ಯ, ಹೇಮಾಂಗಿನಿ, ಹೇಮಲತಾ, ಕಿರಣಮಾಲಾ, ರೂಪಲೇಖಾ – ನಮ್ಮಲ್ಲಿಯೂ ಇಂಥ ಹೆಸರುಗಳನ್ನೇಕೆ ಉಪಯೋಗಕ್ಕೆ ತರಬಾರದು !

ತಂದೆತಾಯಿಯರು ನಾಮಕರಣಕಾಲದಲ್ಲಿ ಮಾಡಿದ ತಪ್ಪನ್ನು ಸರಿಪಡಿಸುವ ಭಾರ ಪ್ರಿಯನ ಮೇಲೆ ಬೀಳುತ್ತದೆ. ಅವನು ಅದನ್ನು ಉತ್ಸಾಹದಿಂದ ವಹಿಸುತ್ತಾನೆಂದೂ ಹೇಳಬಹುದು. ಏಕೆಂದರೆ ಹೆಂಡತಿಯ ಹುಟ್ಟುಹೆಸರು ಎಷ್ಟೇ ಸುಂದರವಾಗಿರಲಿ, ಲಲಿತವಾಗಿರಲಿ, ಅದು ಪ್ರಿಯನ ಮನಸ್ಸೊಪ್ಪುವಷ್ಟು ಭಾವಪೂರಿತವಾಗಿರಲಾರದು. ಹೆಸರು ಕೇವಲ ಗುರುತಿಸುವುದಕ್ಕೆ ಸಾಧನ ಮಾತ್ರವಾದರೆ ಯಾವ ಹೆಸರಿಟ್ಟರೂ ಸಾಕು. ಆದರೆ ನಮಗೆ ಬೇಕಾದದ್ದು ಅಷ್ಟು ಮಾತ್ರವಲ್ಲ. ಅವಳನ್ನು ಕಂಡಾಗ, ಅವಳ ಯೋಚನೆ ಬಂದಾಗ, ಕೊನೆಗೆ ಅವಳು ಧರಿಸಿದ ವಸ್ತ್ರದ ನೆನಪಾದಾಗ, ನಮ್ಮ ಆದ್ಯಂತ ದೇಹವನ್ನು ಕಂಪಿಸಿ ಹೃದಯವನ್ನು ದಹಿಸುವಂತೆ ಬರುವ ಒಲುಮೆಯ ಉದ್ವೇಗಕ್ಕೆ ನಾವು ಶಬ್ದ ರೂಪವನ್ನು ಕೊಡಬೇಕು. ಆದ್ದರಿಂದ ನಾವು ಪ್ರಿಯೆಗೆ ಬೇರೆ ಮುದ್ದಿನ ಹೆಸರೊಂದನ್ನು ಇಟ್ಟುಕೊಳ್ಳುವುದು ಅನಿವಾರ್ಯ. ಅದು ಹುಟ್ಟು ಹೆಸರಿನ ರೂಪಾಂತರವಿರಬಹುದು ; ಅದಕ್ಕಿಂತ ಕರ್ಕಶವಾಗಿ ಕಂಡರೂ ಕಾಣಬಹುದು ; ನಮ್ಮ ಮೆಚ್ಚುಗೆ ಪಡೆದ ಯಾವುದೋ ವಸ್ತುವಿನ, ಪ್ರಾಣಿಯ, ಹಕ್ಕಿಯ ಹೆಸರಿರಬಹುದು. ಯಾವುದೇ ಆಗಲಿ ಅದರ ರೂಪವನ್ನು ಬೇರೊಬ್ಬರು ಯಾರೂ ನಿರ್ಣಯಿಸಲಾರರು. ಆ ಹೆಸರು ಪ್ರೇಮದ ಕುಲುಮೆಯಿಂದಾಗಿ ತಾನಾಗಿ ಹಾರಿದ ಕಿಡಿ ; ಮೇಘಮಿಲನದಿಂದ ಮಿಂಚು ಹೊಳೆದಂತೆ ಪ್ರಿಯಪ್ರೇಯಸಿಯರ ಹೃದಯ ಮಿಲನದಿಂದ ಮೂಡಿಬರುತ್ತದೆ. ಇತರರಿಗೆ ಅದರಲ್ಲಿ ಯಾವ ವಿಧವಾದ ವೈಶಿಷ್ಟ್ಯವೂ ಕಾಣದಿರಬಹುದು. ಆದರೆ ನಮ್ಮಲ್ಲಿರುವ ಭಾವೋದ್ರೇಕದಿಂದ ಅದಕ್ಕೆ ಶಕ್ತಿ ಸೌಂದರ್ಯಗಳು ಕೂಡಿಬರುತ್ತವೆ. ಚಿನ್ನ ಎಂಬ ಪದದಲ್ಲಿ ಏನಿದೆ ! ಸುಸಂಸ್ಕೃತರಿಗೆ ಚಿನ್ನ ನಿಕೃಷ್ಟವಾದ ಪದಾರ್ಥವೆಂದರೂ

ಎನ್ನಬಹುದು. ಆದರೆ ನಾನು ನನ್ನ ಜೀವದ ಗೆಳತಿಯನ್ನು ಚಿನ್ನಾ ಎಂದು ಕರೆಯುವಾಗ ನನಗೆ ಆ ಲೋಹದ ನೆನಪಿಲ್ಲ. ನನ್ನೆದುರಿಗೆ ಆಗ ರೂಪುಗೊಳ್ಳುವುದು ಕೇವಲ ಒಂದು ಸ್ತ್ರೀ ರೂಪವೂ ಅಲ್ಲ, ಚಿನ್ನದಂತಿರುವ ಅವಳ ಮುಖರಾಗ ಮಾತ್ರವಲ್ಲ, ಅವಳ ನಿಲುವಿನ ಬೆಡಗು, ನಡಗೆಯ ವಿಲಾಸ, ವಸ್ತ್ರಭೂಷಣಗಳು, ಸುಗಂಧದ್ರವ್ಯ, ಕೊರಳದನಿ – ಇಷ್ಟು ಮಾತ್ರವೂ ಅಲ್ಲ, ಆ ಮುದ್ದಿನ ಹೆಸರು ಇಂದ್ರಿಯಗಳಿಗೆ ಗೋಚರವಾದ ವಸ್ತುಗಳ ಸಂಕೇತ ಮಾತ್ರವಲ್ಲ. ಇವೆಲ್ಲವನ್ನೂ ಒಳಗೊಂಡು, ಜಗತ್ತೆಲ್ಲವನ್ನೂ ಆವರಿಸಿ, ವೇದಾಂತಿಗಳು ಪರವಸ್ತುವಿನಲ್ಲಿ ಕಾಣುವ ಆನಂದವನ್ನು ನಮ್ಮ ಹೃದಯಲ್ಲಿ ತುಂಬಿ, ತನ್ನದೇ ಒಂದು ಲಯಕ್ಕೆ ನಮ್ಮನ್ನು ಕುಣಿಸುತ್ತಿರುವ ಅದ್ಭುತ ಶಕ್ತಿಯೊಂದರ ಸಂಕೇತ.

ಮುದ್ದಿನ ಹೆಸರುಗಳೂ ಕನ್ನಡದಲ್ಲಿ ನಮಗೆ ಸಿಕ್ಕುವುದು ಅಪರೂಪ. ಸಂಸ್ಕೃತದಲ್ಲಿ ದಿವ್ಯವಾದ ಪದಗಳೇನೊ ಇವೆ. ರಾಮನು ಸೀತೆಯನ್ನು ಪ್ರಿಯದರ್ಶಿನಿ, ವರವರ್ಣಿನಿ ಎಂದು ಮುಂತಾಗಿ ಕರೆದಿದ್ದಾನೆ. ಆ ಕಾಲದಲ್ಲಿ ಇಂಥ ಪದಗಳು ಮನೆಮಾತಾಗಿದ್ದು ಅವುಗಳಲ್ಲಿ ಭಾವ ತುಂಬಿ ತುಳುಕುತ್ತಿದ್ದಿತೋ ಏನೋ. ಆದರೆ ಈಗ ಅವನ್ನು ಕಾವ್ಯದ ಕಳಂಕ ಮುಸುಕಿದೆ. ಸಂಸ್ಕೃತದಲ್ಲಿ ಓದಲು ಸೊಗಸೇ ಹೊರತು ಕನ್ನಡದಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಪ್ರಿಯೆ, ಕಾಂತೆ, ನಲ್ಲೆ ಮುಂತಾದ ಪದಗಳು ಬಳಕೆಯಲ್ಲಿದ್ದರೂ ಅವು ಸಹ ಭಾವಗೀತೆಗಳ, ನಾಟಕಗಳ ಪಾಲಾಗಿಹೋದವು. ಯಾರನ್ನಾದರೂ ಪ್ರಿಯೆ ಎಂದು ಕರೆಯಬೇಕಾದರೆ ನಾವು ಚಮಕಿ ಅಂಗಿಯನ್ನು ತೊಟ್ಟು 'ಹೊಸ ಡ್ರೆಸ್ಸು ಹೊಸ ಸೀನರಿ'ಗಳಿಂದ ಮೆರೆಯುವ ರಂಗಸ್ಥಳದ ಆವರಣದಲ್ಲಿ ಹೋಗಿ ನಿಲ್ಲಬೇಕು. ಇಂಗ್ಲಿಷಿನವರೇನೋ ಡಾರ್ಲಿಂಗ್, ಡಿಯರ್, ಸ್ವೀಟ್, ಲವ್ ಮುಂತಾದ ಪದಗಳನ್ನು ಸ್ವಾಭಾವಿಕವಾಗಿ ಉಪಯೋಗಿಸುತ್ತಾರೆ. ಆದರೆ ನಾವು ಅಂಥ ಪದಗಳನ್ನು ಬಹಳ ಕಷ್ಟಪಟ್ಟರೆ ಪ್ರಣಯಪತ್ರಗಳಲ್ಲಿ ಉಪಯೋಗಿಸಬಹುದಾದರೂ ಅವುಗಳ ಬಳಕೆ ಸ್ವಾಭಾವಿಕ ಜೀವನಕ್ಕೆ ಹೊರತು. ಇಲ್ಲ, ನಮ್ಮ ನಲ್ಲೆಯರು ಒಳ್ಳೆಯ ಸವಿನುಡಿಗಳಿಂದ ಕರೆಸಿಕೊಳ್ಳುವ ಭಾಗ್ಯವನ್ನು ಪಡೆದು ಬರಲಿಲ್ಲ. ಕೊನೆಗೆ ಇಂಥ ಪದಗಳು ನಮಗೂ ಇಲ್ಲದೆ ನಾಟಕದವರಿಗೂ ಇಲ್ಲದೆ ನಿಘಂಟಿನಲ್ಲಿ ಗೋರಿಯಾಗುವ ಕಾಲ ಸಮೀಪಿಸುತ್ತಾ ಇದೆ.

ಕನ್ನಡಿಗರೆಲ್ಲರಿಗೂ ಇರುವಂತೆ ನನಗೂ ಮಾತೃಭಾಷೆಯಲ್ಲಿ ಅಮಿತವಾದ ಭಕ್ತಿ. ಆದರೂ ಇದೊಂದು ವಿಷಯದಲ್ಲಿ ಮಾತ್ರ ಕನ್ನಡಮಾತೆಯನ್ನು ದೂರದೆ ಇರಲಾರೆ. ಆಕೆಯನ್ನು ವರ್ಷಗಟ್ಟಲೆ ಅರ್ಚಿಸಿಯಾಯಿತು ; ಹುಟ್ಟಿದಾರಭ್ಯ ಆಕೆ ಕಲಿಸಿದ ಮಾತುಗಳನ್ನು ತೊದಲಿಯಾಯಿತು. ಆದರೂ ಹೆಂಡತಿಯನ್ನು ಕರೆಯುವುದಕ್ಕೆ

ಒಂದು ಪದ ಬೇಕಾದರೆ ನಾವು ಇಂಗ್ಲಿಷಿನ ಶರಣು ಹೋಗಬೇಕು. ತನ್ನ ಮೇಲಿರುವ ಪ್ರೇಮ ಸೊಸೆಯ ಕಡೆ ತಿರುಗುತ್ತಿರುವುದನ್ನು ನೋಡಿದರೆ ತಾಯಿಗೆ ಅಸಹನೆ ಬರುತ್ತದೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಕನ್ನಡಮ್ಮನಿಗೂ ನಮ್ಮ ಹೆಂಡತಿಯನ್ನು ಕಂಡರೆ ಈ ಬಗೆಯ ಮಾತ್ಸರ್ಯವಿರಬಹುದು. ಅಂತೂ ತಾಯ್ನುಡಿಯಲ್ಲಿ ಅವರನ್ನು ಸಂಬೋಧಿಸುವುದು ಕಷ್ಟವಾಗಿದೆ.

*****

ಪರಿಚಯ :

ಕನ್ನಡದ ಪ್ರಸಿದ್ಧ ಲಲಿತ ಪ್ರಬಂಧ ಲೇಖಕರಲ್ಲಿ ಒಬ್ಬರಾದ ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾವ್ ಅವರು ಎ.ಎನ್. ಮೂರ್ತಿರಾವ್ ಎಂದೇ ಪ್ರಸಿದ್ಧರು. ಹಗಲುಗನಸುಗಳು. ಅಲೆಯುವ ಮನ, ಮಿನುಗುಮಿಂಚು ಎನ್ನುವ ಮೂರು ಪ್ರಬಂಧ ಸಂಕಲನಗಳಲ್ಲಿ ಇವರ ವಿಚಾರವಾಹಿನಿ ಮಧುರವಾಗಿ ಹರಿದಿದೆ. ಲಲಿತ ಪ್ರಬಂಧಗಳ ಜೊತೆಗೆ ಅನುವಾದ, ವಿಮರ್ಶೆ, ಕಿರಿಚಿತ್ರ, ಪತ್ರಸಾಧನೆ, ಪ್ರವಾಸ ಕಥನಗಳಲ್ಲೂ ಕೃಷಿಮಾಡಿರುವ ಮೂರ್ತಿರಾಯರ ಬರಹಗಳಲ್ಲಿ ಮಾತುಗಾರಿಕೆಯ ಹದ, ಔಚಿತ್ಯ, ನವುರು ವೈವಿಧ್ಯಗಳಲ್ಲಿ ಎದ್ದುಕಾಣುತ್ತವೆ. ಇಂಗ್ಲಿಷ್ ಪ್ರಾಧ್ಯಪಕರಾಗಿದ್ದ ಮೂರ್ತಿರಾಯರ ಪ್ರಬಂಧಗಳಲ್ಲಿ ಮಾನವೀಯತೆ, ಅಪ್ತತೆ, ಆತ್ಮೀಯತೆ, ಆತ್ಮನಿಷ್ಠತೆ, ವ್ಯವಹಾರ ಜ್ಞಾನ, ಅದಮ್ಯ ಉತ್ಸಾಹಗಳು ಮೇಳೈಸಿವೆ. ವರ್ಣನೆಯ ವಿವರಗಳು ತೋಟದಲ್ಲಿನ ಎಲೆ, ಹೂವು, ಹಣ್ಣು, ಮರಗಳ ಕಂಪಿನಂತೆ ಮನಸ್ಸಿನಾಳಕ್ಕಿಳಿದು ಕಾವ್ಯದ ಲೇಪ ಪಡೆಯುತ್ತವೆ. ಪ್ರಬಂಧಗಳ ಮೂಲದ್ರವ್ಯವಾಗಿರುವ ಹಾಸ್ಯವಾಹಿನಿ ನವಿರಾದ ಅಲೆಗಳನ್ನು ಮಿಡಿಸುತ್ತ ಸಾಗುತ್ತದೆ. ಓದುಗರ ಮನಸ್ಸಿಗೆ ಕಚಗುಳಿ ಇಡುತ್ತ ಸಾಗುವ ಪ್ರಸನ್ನಗುಣ ಮೂರ್ತಿರಾಯರ ಪ್ರಬಂಧಗಳಲ್ಲಿ ಯಥೇಚ್ಛವಾಗಿದೆ. ಅವರ ಪ್ರಬಂಧಗಳಲ್ಲಿ ತುಂಬ ಆರೋಗ್ಯಕರವಾದ ದೃಷ್ಟಿ, ತುಂಬ ಚಟುವಟಿಕೆಯ ವೈವಿಧ್ಯಮಯ ಜೀವನದ ಹಂಬಲವಿದ್ದು ಅವರು ವಿಸ್ತಾರವಾದ ಹಾಸಿನ ಮೇಲೆ ಕುಂಚವಾಡಿಸಿದ್ದಾರೆ. ಚಿತ್ರವಾಡಿಸಿದ್ದಾರೆ. ಚಿತ್ರಗಳು ಪತ್ರಗಳು, ಅವರ ವಯಸ್ಸಿನ ಅಮೆರಿಕಾ ಯಾತ್ರೆ, ಸಾಹಿತ್ಯ ಮತ್ತು ಸಸ್ಯ, ಸಂಜೆಗಣ್ಣಿನ ಹಿನ್ನೋಟ, ಸಾಕ್ರಟೀಸ್‌ನ ಕೊನೆಯ ದಿನಗಳು, ಚಂಡಮಾರುತ, ಅಮೆರಿಕನ್ ಸಾಹಿತ್ಯ – ಇವು ಎ.ಎನ್. ಮೂರ್ತಿರಾಯ ಇನ್ನಿತರ ಮುಖ್ಯ ಸಾಹಿತ್ಯ ಕೃತಿಗಳು. 'ಚಿತ್ರಗಳು ಪತ್ರಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಅಪರ ವಯಸ್ಕನ ಅಮೆರಿಕಾ ಯಾತ್ರೆ'ಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವಗಳು ಪ್ರಾಪ್ತವಾಗಿವೆ.

ಹಿಂದೆಲ್ಲಾ ಮದುವೆಯ ದಿನ ಧಾರೆಯಾದ ಮೇಲೆ ವರನು ದೇವರ ಮನೆಗೆ ವಧುವಿನ ಜೊತೆಯಲ್ಲಿ ಪೂಜೆ ಸಲ್ಲಿಸಲು ಹೋಗುವಾಗ ಅಲ್ಲಿದ್ದ ಪ್ರಮದೆಯರೆಲ್ಲ ಸೇರಿ ಗಂಡಿನ ಹೆಸರನ್ನು ಕೇಳಿಸಲು ಪೀಡಿಸಿ ಕಾಡುತ್ತಿದ್ದರು. ಆ ಗುಂಪಿನಲ್ಲಿ ಹೆಂಗಸರೇ ಇರುತ್ತಿದ್ದುದರಿಂದ ಹೆಣ್ಣಿಗೆ ಗಂಡನ ಹೆಸರು ಹೇಳುವುದರಿಂದ ವಿನಾಯಿತಿ ದೊರೆತು, ಗಂಡು ಹೆಂಡತಿಯ ಹೆಸರು ಹೇಳುವವರೆಗೆ ಹೊಸಲು ದಾಟಲು ಬಿಡುತ್ತಿರಲಿಲ್ಲ. ಹಾಗೆ ಹೆಣ್ಣಿನ ಹೆಸರನ್ನು ಹೇಳಲೇಬೇಕಾದ ಅನಿವಾರ್ಯತೆಗೆ ಒಳಗಾದ ಗಂಡಿನ ಪಿಕಲಾಟವನ್ನು ಈ ಪ್ರಬಂಧದಲ್ಲಿ ಬಣ್ಣಿಸಲಾಗಿದೆ. ಧಾರೆಯ ದಿನ ವಿನೋದವೋ ಗೇಲಿಯೋ ಆಗಿ ಪ್ರಾರಂಭವಾದ ಇದು ಮುಂದೆ ಗಂಡ–ಹೆಂಡತಿಯರು ಜೀವಮಾನದಲ್ಲಿ ಒಮ್ಮೆಯೂ ಪರಸ್ಪರರ ಹೆಸರನ್ನು ಉಚ್ಚಾರಣೆ ಮಾಡಲಾಗದ ಸಂಕೋಚಕ್ಕೋ, ಬಿಗುಮಾನಕ್ಕೋ, ಮುಜುಗರಕ್ಕೋ ಒಳಗುಮಾಡಿರುವುದುಂಟು. ಹೆಂಡತಿಯರಿಗೆ ಅವರ ತಂದೆ ತಾಯಿಯರು ಪ್ರೀತಿಯಿಂದ ಇಟ್ಟ ಒಂದು ಹೆಸರಿದ್ದರೂ ಗಂಡಂದಿರು ಅದನ್ನು ಬಿಟ್ಟು 'ನೀನು' ಎಂಬ ಸರ್ವನಾಮ ಬಳಸುತ್ತಾರೆ. ಎದುರಿಗಿಲ್ಲದ ಮಗನನ್ನೋ ಮಗಳನ್ನೋ ಉದ್ದೇಶಿಸಿ ಮಾತಾಡುತ್ತಾರೆ. ಹೊರಗಿನವರೆದುರಿಗೆ ಹೆಂಡತಿಯನ್ನು ಕುರಿತು ಮಾತಾಡುವಾಗ 'ಮನೆಯವರು' 'ನಮ್ಮ ಮನೆಯಲ್ಲಿ' 'ಯಜಮಾನಿತಿ' ಇತ್ಯಾದಿಯಾಗಿ ಸುತ್ತಿ ಬಳಸುತ್ತಾರೆ. ಹಿಂದಿನ ಸಮಾಜದ ಕಟ್ಟುಪಾಡು ಎಷ್ಟೇ ಸಡಿಲವಾಗಿದ್ದರೂ ಹೊಸ ಪ್ರಾಯದ ರಸಿಕ ಗಂಡಸರು ತಮ್ಮ ಹೆಂಡತಿಯ ಹೆಸರನ್ನು ಏಕಾಂತದಲ್ಲಿ ತಮಗೆ ಖುಷಿಯಾಗುವಂತೆ ಪಾರಾಯಣ ಮಾಡಿದರೂ ಅದನ್ನೇ ಎಲ್ಲರೆದುರಿಗೆ ಹೇಳಲು ನಾಚುತ್ತಾರೆ. ಪೂರ್ವಕಾಲದ ಪ್ರೇಮಕಥೆಗಳಲ್ಲಿ ಬರುವ ನಾಯಕರು ಮರದ ತೊಗಟೆಯ ಮೇಲೆಲ್ಲಾ ತಮ್ಮ ಪ್ರೇಯಸಿಯರ ಹೆಸರು ಕೆತ್ತುತ್ತಿದ್ದರಂತೆ. ಇವತ್ತು ಪ್ರಾಚೀನ ಸ್ಮಾರಕಗಳಲ್ಲಿ, ಪ್ರೇಕ್ಷಣೀಯ ಸ್ಥಳಗಳಲ್ಲಿ, ಗೋಡೆಗಳ ಮೇಲೆ, ಬಂಡೆಗಳ ಮೇಲೆ, ಪಾಪಸುಕಳ್ಳಿಯ ಎಲೆಗಳ ಮೇಲೂ ವಿವಿಧ ವಿನ್ಯಾಸಗಳಲ್ಲಿ ಪ್ರಿಯತಮೆಯರ ಹೆಸರು ಶೇಖರಿಸಿರುವುದುಂಟು. ಇಷ್ಟೆಲ್ಲ ಆದರೂ ಹೆಂಡತಿ–ಪ್ರೇಯಸಿಯ ಹೆಸರನ್ನು ಸಾರ್ವಜನಿಕವಾಗಿ ಧೈರ್ಯವಾಗಿ ಹೇಳಲು ಗಂಡಸರಿಗೆ ಇನ್ನೂ ಸಾಧ್ಯವಾಗಿಲ್ಲ. ಆದುದರಿಂದಲೇ ಕನ್ನಡಿಗರಿಗೆ ಹೆಂಡತಿಯ ಹೆಸರೂ ಇದ್ದೂ ಇಲ್ಲದಂತಾಗಿದೆ. ಮುದ್ದಿನ ಹೆಸರುಗಳು ಕನ್ನಡದಲ್ಲಿ ಸಿಗುವುದು ಅಪರೂಪವಾದ್ದರಿಂದ ಹೆಂಡತಿಯುನ್ನು ಕರೆಯಲು ಇಂಗ್ಲಿಷ್‌ಗೇ ಶರಣು ಹೋಗಬೇಕಾಗುತ್ತದೆಂಬುದು ಮೂರ್ತಿರಾಯರ ಖಚಿತ ಅಭಿಪ್ರಾಯ.

೪. ಮಾಸ್ತಿ ಮತ್ತು ಬೈರ

– ಪೂರ್ಣಚಂದ್ರ ತೇಜಸ್ವಿ

ನಾನು ಮೊದಲ ಸಾರಿ ಅವನನ್ನು ನೋಡಿದಾಗ ನನಗೆ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ !

ಭೂತನಕಾಡು ಕಾಡಿನಲ್ಲಿ ಒಮ್ಮೆ ನಾನು ನಡೆದು ಬರುತ್ತಿರಬೇಕಾದರೆ ಕಿವಿ ಸಮೀಪದ ಕಾಡೊಳಗೆ ಹೆಬ್ಬುಲಿಯನ್ನೇ ನೋಡಿದಂತೆ ತಾರ ಸ್ವರದಲ್ಲಿ ಬೊಗಳುತ್ತಾ ಗಲಾಟೆ ಮಾಡಿತು. ನಾನು ಕಾಡೊಳಗೆ ನುಗ್ಗಿ ಅದರ ಗಲಾಟೆಗೆ ಕಾರಣವೇನೆಂದು ನೋಡಹೋದಾಗ ಅವನು ನಿಂತಿದ್ದ.

ಕಿವಿ ಮನುಷ್ಯರನ್ನು ಕಂಡರೆ ಅಷ್ಟೊಂದೇನೂ ಗಲಾಟೆ ಮಾಡುತ್ತಿರಲಿಲ್ಲ. ಅದೂ ನಾಗರಿಕ ಉಡುಪಿನಲ್ಲಿ ಯಾರಾದರೂ ಬಂದರೆ ಸುಮ್ಮನೆ ಗುರುಗುಟ್ಟುತ್ತಿತ್ತೇ ವಿನಃ ತುಂಬಾ ಗಲಾಟೆ ಮಾಡುತ್ತಿರಲಿಲ್ಲ. ಅದಕ್ಕೆ ಕಳ್ಳರಿಗೂ, ಸುಳ್ಳರಿಗೂ, ಒಳ್ಳೆಯವರಿಗೂ ವ್ಯತ್ಯಾಸ ಗೊತ್ತಿತ್ತೋ ಇಲ್ಲವೋ ಸಂಶಯ. ಆದರೆ ಬಡವರಿಗೂ, ಶ್ರೀಮಂತರಿಗೂ ಇರುವ ವ್ಯತ್ಯಾಸ ಅದಕ್ಕೆ ಚೆನ್ನಾಗಿ ಗೊತ್ತಿತ್ತು. ಸೂಟು ಪ್ಯಾಂಟು ಹಾಕಿಕೊಂಡು, ಕಾರಿನಲ್ಲಿ ಬಂದು ಇಳಿಯುವವರನ್ನು ಕಂಡರೆ ಸುಮ್ಮನೆ ಗುರುಗುಟ್ಟಿ ಅಸಹನೆ ಪ್ರದರ್ಶಿಸುತ್ತಿತ್ತು. ಆದರೆ ಕೊಂಚ ಮಾಸಲಾದ ಅಥವಾ ಹರಿದ ಬಟ್ಟೆಗಳನ್ನು ಹಾಕಿಕೊಂಡು, ಸರಿಯಾಗಿ ತಲೆಬಾಚದೆ ಕೂದಲು ಕೆದರಿಕೊಂಡು, ಚಪ್ಪಲಿ ಮೆಟ್ಟಿಕೊಂಡು, ಒಟ್ಟಿನಲ್ಲಿ ಬಡವರಂತೆ ತೋರಿಸಿಕೊಳ್ಳುವವರನ್ನು ಕಂಡಕೂಡಲೇ ರೋಷಾವೇಶದಿಂದ ಆತ ನಮ್ಮ ಮನೆ ಬಳಿ ಬಂದುದೇ ಮಹಾಪರಾಧವೆನ್ನುವಂತೆ ಬೆನ್ನ ಮೇಲಿನ ಕೂದಲು ನಿಮಿರಿಸಿಕೊಂಡು ತನ್ನ ಕರಾಳ ದಂತಪಂಕ್ತಿಗಳನ್ನು ಪ್ರದರ್ಶಿಸುತ್ತಾ ಬಂದವನು ಹೆದರಿ ಓಡಿಹೋಗುವಂತೆ ಅಬ್ಬರಿಸಿ ಕೂಗುತ್ತಿತ್ತು. ನನ್ನಂಥಾ ಸಮಾಜವಾದಿಯ ನಾಯೇ ಈ ತರ ಬೂರ್ಷ್ವಾ ಗುಣಗಳನ್ನು ಮೈಗೂಡಿಸಿಗೊಂಡಿರಬೇಕಾದರೆ ಇನ್ನು ಕಮ್ಯುನಿಸ್ಟ್ ರಾಜ್ಯಗಳಲ್ಲಿ ಬೂರ್ಷ್ವಾ ಪ್ರತಿಕ್ರಾಂತಿ ಸಂಭವಿಸಿದ್ದೇನೂ ದೊಡ್ಡದಲ್ಲ. ಗರೀಬಿ ಹಟಾವೋ ಎನ್ನುವ ಇಂದಿರಾ ಗಾಂಧಿಯವರ ವೇದವಾಕ್ಯವನ್ನು ಕಿವಿ ಈ ತರಹ ತಪ್ಪಾಗಿ ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತಂದಿದ್ದು ನಿಜಕ್ಕೂ ವಿಷಾದನೀಯ.

ಕಿವಿ ಆವತ್ತು ಕಾಡೊಳಗೆ ಘೋರವಾಗಿ ಗಲಾಟೆ ಮಾಡಿದ್ದೂ ಹೀಗೇ. ನಾನು ಒಳನುಗ್ಗಿ ನೋಡಿದಾಗ ಕಂಡ ಮನುಷ್ಯ ಮೊದಮೊದಲಿಗೆ ನನಗೆ ನರ ಮನುಷ್ಯನಂತೆ ಕಾಣಲಿಲ್ಲ. ಆಗ ತಾನೆ ನಾವು ಶಿವಮೊಗ್ಗಾದ ಆನವೇರಿ ಬಳಿ ನವ ಶಿಲಾಯುಗದ ಶಿಲಾಯುಧಗಳನ್ನು, ಚಾಲುಕ್ಯರ ಕಾಲದ ಇಟ್ಟಿಗೆಗಳನ್ನೂ

ಸಂಶೋಧಿಸಿದ್ದೆವು. ಈ ಸಂಬಂಧದಲ್ಲಿ ನಾನು ಶಿಲಾಯುಗದ ಮಾನವರ ರೂಪ, ಆಕಾರ, ಸಂಸ್ಕೃತಿಗಳ ಬಗ್ಗೆ ವಿಪರೀತ ಓದಿಕೊಂಡಿದ್ದೆ. ಅದೇ ಗುಂಗಿನಲ್ಲಿದ್ದ ನನಗೆ ಕಾಡಿನಲ್ಲಿ ಕಂಡ ಮಾನವ ಸಾಕ್ಷಾತ್ತಾಗಿ ಶಿಲಾಯುಗದಿಂದ ನೇರವಾಗಿ ಅಲ್ಲಿ ಬಂದು ಅವತರಿಸಿದಂತೆ ಕಂಡ.

ಅವನನ್ನು ಹಠಾತ್ತಾಗಿ ಕಾಡಿನಲ್ಲಿ ನೋಡಿದ್ದರಿಂದ ನನಗೆ ಒಂದು ಅಪಾಯಕಾರಿ ಪ್ರಾಣಿಯನ್ನು ನೋಡಿದಷ್ಟೆ ಹೆದರಿಕೆ ಗಾಬರಿಗಳಾದವು. ಬೊಗಳುತ್ತಿದ್ದ ನಾಯಿಗೆ ಕಲ್ಲು ತಗೊಂಡು ಹೊಡೆಯಲು ಕೈ ಎತ್ತಿದ್ದವ ನನ್ನನ್ನು ಕಂಡು ಹಾಗೇ ನಿಂತ. ನಾನು ಅವನನ್ನೂ ಅವನು ನನ್ನನ್ನೂ ನೋಡಿದ್ದನ್ನು ಕಿವಿ ನೋಡಿ ಇನ್ನು ತನ್ನ ಜವಾಬ್ದಾರಿ ಮುಗಿಯಿತು ಎನ್ನುವಂತೆ ಸುಮ್ಮನಾಯ್ತು.

ಚರ್ಮದ ಉಡುಪಿನಂತೆ ಕಾಣುತ್ತಿದ್ದ ಹರುಕಲು ಗೋಣಿತಾಟಿನಂಥದೇನನ್ನೋ ಅವನು ಸೊಂಟಕ್ಕೆ ಸುತ್ತಿಕೊಂಡಿದ್ದ. ಎಂದೂ ಸ್ನಾನ ಕಾಣದ ಅವರ ಮೈಮೇಲೆ ಪಾಚಿಯಂತೆ ಕೊಳೆ ಧೂಳು ಕುಳಿತಿತ್ತು. ತಲೆಕೂದಲೆಲ್ಲಾ ಜಟೆಗಟ್ಟಿ ಹೋಗಿತ್ತು. ಕೈಕಾಲಿನ ಉಗುರುಗಳು ಚಿರತೆ ಉಗುರಿನಂತೆ ಉದ್ದಕ್ಕಿತ್ತು. ಎಲ್ಲಕ್ಕಿಂತ ಕರಿಯ ಮುಖದಲ್ಲಿನ ಅವನ ಕಣ್ಣುಗಳು ಕಾಡು ಮೃಗದ ಕಣ್ಣುಗಳಂತೆ ಮಿಂಚುತ್ತಿದ್ದವು. ಸುಮ್ಮನೆ ನನ್ನತ್ತ ನೋಡುತ್ತ ನಿಂತ ಅವನನ್ನು ಹೇಗೆ ಮಾತಾಡಿಸುವುದೆಂದು ಯೋಚಿಸಿದೆ. ಅವನ ಸ್ಥಿತಿ ನೋಡಿದರೆ ಭಾಷೆ ರೂಪುಗೊಳ್ಳುವುದಕ್ಕಿಂತ ಮೊದಲಿದ್ದ ಮನುಷ್ಯನಂತೆ ಕಾಣುತ್ತಿದ್ದ. ನನಗೆ ಅವನೆದುರು ಕನ್ನಡ ಮಾತಾಡಲು ಧೈರ್ಯ ಬಂದಿದ್ದು ಅವನು ಕಾಲಲ್ಲಿ ಮೆಟ್ಟಿಕೊಂಡಿದ್ದ ಟೈರು ಚಪ್ಪಲಿಯನ್ನು ನೋಡಿದ ಮೇಲೆ.

"ಯಾರೋ ನೀನು?" ಎಂದು ಕೇಳಿದೆ.

"ನಾವು" ಎಂದ.

ಎಲ ಇವನ ! ಇರೋದು ಒಬ್ಬನೇ ! ಆದರೂ ಜಗದ್ಗುರುಗಳ ತರ ಬಹುವಚನ ಆರೋಪಿಸಿಕೊಳ್ಳುತ್ತಿದ್ದಾನಲ್ಲ ಎನ್ನಿಸಿತು. ಆದರೆ ಅವನ ಬಾಯಲ್ಲಿ ಕನ್ನಡ ಭಾಷೆ ಬಂದುದೇ ನನಗೆ ಇನ್ನೂ ಅಚ್ಚರಿ ತಂದಿದ್ದು.

"ನಾವು ಅಂದರೆ ಯಾರೋ?"

"ನಾವು, ತೋಟದಲ್ಲಿ ಕೆಲಸಕ್ಕಿರೋರು,"

"ಯಾರ ತೋಟದಲ್ಲಿ?"

"ಭೂತನಕಾಡು"

"ವಾಸು ತೋಟದಲ್ಲೇನೊ?"

"ಹೂಂ"

"ನಿನ್ನ ಹೆಸರೇನು?"

"ಮಾಸ್ತಿ"

ನಾನು ಗುಡ್ಡಗಾಡಿನ ಜನರನ್ನೂ, ಕಾಡು ಜನರನ್ನೂ ಬಹಳಷ್ಟು ನೋಡಿದ್ದೇನೆ. ಅವರೆಲ್ಲಾ ನಮಗಿಂತ ಕೊಂಚ ಬೇರೆಯಾಗಿ ಕಾಣುತ್ತಿದ್ದರೇ ಹೊರತು ಮಾಸ್ತಿಯ ತರ ವಾನರಾಕೃತಿಗೆ ಹತ್ತಿರವಾಗಿರಲಿಲ್ಲ. ಇವನ ಮುಖ ಸಹ ಶಿಲಾಯುಗದವರಂತೆಯೇ ಕಾಣುತ್ತಿತ್ತು. ಆದರೂ ಅವನು ಕನ್ನಡ ಭಾಷೆ ಮಾತಾಡಿದ ಮೇಲೆ, ಎಲ್ಲ ನಾಗರಿಕರಂತೆ ಒಂದು ಹೆಸರನ್ನೂ ಇಟ್ಟುಕೊಂಡ ಮೇಲೆ, ಅವನನ್ನು ಶ್ರೀಸಾಮಾನ್ಯನ ವಿಶೇಷ ರೂಪ ಎನ್ನದೆ ವಿಧಿಯಿರಲಿಲ್ಲ. ಕನ್ನಡ ಗೊತ್ತಿಲ್ಲದ ಕಿವಿ ಅವನ ಈ ರೂಪ ವಿಶೇಷವನ್ನು ನೋಡಿಯೇ ಅವನ ಮೇಲೆ ಹಾಗೆ ಎಗರಾಡಿದ್ದು.

"ಇಲ್ಲಿ ಏನು ಮಾಡುತ್ತಿದ್ದಿಯೋ?" ಎಂದೆ.

"ಏನಿಲ್ಲ ಸುಮ್ಮನೆ ಬಂದೆ" ಎಂದ.

ಬಿಡಾರದಿಂದ ಇಷ್ಟೊಂದು ದೂರದ ಕಾಡಿಗೆ ಸುಮ್ಮನೆ ಬಂದೆನೆಂದು ಅವನು ಸುಳ್ಳು ಹೇಳುತ್ತಿದ್ದುದರಲ್ಲಿ ಅನುಮಾನವಿರಲಿಲ್ಲ. ಆದರೆ ನನಗೇಕೋ ಅವತ್ತು ಅವನನ್ನು ಈ ಬಗ್ಗೆ ಹೆಚ್ಚು ಪ್ರಶ್ನಿಸುವ ಮನಸ್ಸಾಗಲಿಲ್ಲ. ಕಿವಿಯನ್ನು ಕರೆಯುತ್ತಾ ನಾನು ಮನೆ ಕಡೆಗೆ ಹೊರಟೆ. ಅವನೂ ತೋಟದ ಬಿಡಾರಗಳವರೆಗೆ ನನ್ನ ಹಿಂದೆಯೇ ಬಂದ. ನಾನು ಮಾಸ್ತಿಯನ್ನು ಮೊದಲು ಕಂಡು ಪರಿಚಯ ಮಾಡಿಕೊಂಡಿದ್ದು ಹೀಗೆ.

೨

ಮಾಸ್ತಿಗೊಬ್ಬ ಅಣ್ಣ ಇದ್ದ. ಅವರ ಹೆಸರು ಬೈರ ಎಂದು. ಅವರಿಬ್ಬರೂ ಯಾವ ಜಾತಿಯವರು, ಯಾವ ಕಡೆಯಿಂದ ಬಂದವರು ಇತ್ಯಾದಿಗಳಾವುವೂ ನನಗೆ ಸರಿಯಾಗಿ ಗೊತ್ತಿಲ್ಲ. ಎಲ್ಲಿಯವರು ಎಂದು ಕೇಳಿದರೆ ದಿನಕ್ಕೆ ಒಂದೊಂದು ದಿಕ್ಕು ತೋರಿಸುತ್ತಿದ್ದರು. ಒಂದು ದಿನ ಆಸ್ಟ್ರೇಲಿಯಾ ಕಡೆಗೆ ತೋರಿಸಿದರೆ, ಇನ್ನೊಂದು ದಿನ ಆಫ್ರಿಕಾ ಕಡೆಗೆ. ಅವರನ್ನು ಪ್ರಶ್ನಿಸಿ ಅವರು ಎಲ್ಲಿಯವರೆಂದು ತಿಳಿಯಲು ನಾನು ಮಾಡಿದ ಪ್ರಯತ್ನಗಳಿಂದ ಬೇಸತ್ತ ಅವರು ನಾನು ಕೇಳಿದ್ದಕ್ಕೆಲ್ಲಾ ಹೌದೆಂದು ತಲೆಯಾಡಿಸಿ, ನಾನು ನನ್ನ ಪ್ರಯತ್ನ ಕೈಬಿಟ್ಟೆ.

ಅವರೊಡನೆ ಮಾತಾಡುವಾಗಲೆಲ್ಲಾ ಥೇಟ್ ಶಿಲಾಯುಗದ ಜನರಂತೆಯೇ ಇದ್ದ ಇವರು ಈ ಆಧುನಿಕ ಯುಗದಲ್ಲಿ ಹೇಗೆ ಕಾಲ ಹಾಕುತ್ತಾರೆಂದು ಯೋಚಿಸುತ್ತಿದ್ದೆ. ಅವರ ಮಕ್ಕಳು ಮರಿಯ ಕತೆಯೇನು, ಅವರು ಯಾರನ್ನು ಮದುವೆಯಾಗುತ್ತಾರೆ, ಅವರಿಗೆ ನೆಂಟರಿಷ್ಟರು ಇದ್ದಾರೋ ಇತ್ಯಾದಿಗಳನ್ನು ಚಿಂತಿಸುತ್ತಿದ್ದೆ. ಕ್ಷೌರ ಮಾಡಿಸಿಕೊಳ್ಳಲು ಸಹ ಹೋಗದ ಅವರು ಕೂದಲು ಉದ್ದ ಬೆಳೆಯುತ್ತಲೂ ಕುಡುಗೋಲಿನಿಂದ ಪರಸ್ಪರ ಕತ್ತರಿಸಿಕೊಳ್ಳುತ್ತಿದ್ದರು. ಬೆಳಗ್ಗೆ ಎದ್ದು ಕೆಲಸಕ್ಕೆ ಹಾಜರಾಗಿ ಸಾಯಂಕಾಲ ಸಂಬಳ ತಗೊಂಡು ಅಕ್ಕಿ ತಂದು ಊಟ ಮಾಡುವ ಆಧುನಿಕ ಅಭ್ಯಾಸಗಳಾವುವೂ ಅವರಿಗೆ ಒಗ್ಗಿದಂತೆ ಕಾಣಲಿಲ್ಲ. ಇಷ್ಟ ಬಂದಾಗ, ಮಾಡಲು ಬೇರೇನೂ ಕೆಲಸ ಇಲ್ಲದಿದಾಗ ಮಾತ್ರ ಅವರು ಕೆಲಸಕ್ಕೆ ಹಾಜರಾಗುತ್ತಿದ್ದರು. ತೋಟದಲ್ಲಿ ಕೆಲಸಕ್ಕೆ ಇದ್ದುದರಿಂದ ಹೊಟ್ಟೆಪಾಡಿನ

ಚಿಂತೆಯಂತೂ ಅವರಿಗೆ ಏನೇನೂ ಇದ್ದಂತಿರಲಿಲ್ಲ. ಎಂತೆಂಥವೋ ಗಿಡಗಳ ಚಿಗುರು, ಬಯನೆ ಗಿಡದ ದಿಂಡು, ನೂಲೆ ಗೆಣಸು, ಹಂದಿಗೆಡ್ಡೆ, ಕಾಡುಕೆಸ, ಕಾಡುದಾಸವಾಳದ ಎಲೆ–ಹೂವು–ಮೊಗ್ಗು ಇತ್ಯಾದಿಗಳು, ಕೇರೆಹಾವು, ಹಕ್ಕಿಮೊಟ್ಟೆ, ಇಲಿಗಳು, ಹೆಗ್ಗಣ, ಇರುವೆ ಮೊಟ್ಟೆ, ಬ್ಯಾಣದಕೊಟ್ಟೆ, ಹಲಸಿನ ಗಾಳ, ಮಿಡಿ, ಹೀಗೆ ಕಣ್ಣಿಗೆ ಕಂಡದ್ದೆಲ್ಲಾ ತಿನ್ನುತ್ತಿದ್ದರು.

ನಾನೊಮ್ಮೆ ತೋಟದಲ್ಲಿ ಹೋಗುತ್ತಿದ್ದಾಗ ದೂರದಲ್ಲಿ ಮಾಸ್ತಿಯ ಮಗ ನೆಲದ ಬಿಲದಲ್ಲಿ ಇಡೀ ಕೈ ಹೋಗುವುಷ್ಟು ಆಳಕ್ಕೆ ಭುಜದವರೆಗೂ ಕೈ ತೂರಿಸಿ ನಾನು ನೋಡುತ್ತಿದ್ದಂತೆಯೇ ಏನನ್ನೋ ತೆಗೆದು ಗಬಕ್ಕನೆ ಬಾಯಿಗೆ ಹಾಕಿಕೊಂಡು ಅಗಿದು ತಿಂದ. ದೂರದಿಂದ ಇದನ್ನು ನೋಡಿದ ನಾನು ಅವನ ಬಳಿಗೆ ಹೋಗಿ ಏನನ್ನು ತಿಂದೆ ಎಂದು ಕೇಳಿದೆ. ಅವನು "ಈಚು ಸಾಮಿ" ಎಂದ. ಹಾಗೆಂದರೆ ಏನೆಂದು ನನಗೆ ಗೊತ್ತಾಗದೆ ಒಮ್ಮೆ ಮಾಸ್ತಿಯನ್ನೇ "ಈಚು" ಎಂದರೆ ಏನೆಂದು ಕೇಳಿದೆ. "ಅಯ್ಯೋ ಈಚು ಸಾಮಿ. ಈಚು ಅಂದರೆ ಗೊತ್ತಿಲ್ವಾ, ಒಂದ್ಸಾರಿ ತೋರಿಸ್ತಿನಿ ತಡೀರಿ" ಎಂದ. ಆದರೆ ನಮ್ಮ ಅಸಂಖ್ಯ ಚಟುವಟಿಕೆಗಳಲ್ಲಿ ಮಾಸ್ತಿ ಹತ್ತಿರ ಅದೇನೆಂದು ತಿಳಿದುಕೊಳ್ಳುವುದು ಮರೆತೇಹೋಯ್ತು. ನಾವು ವಿಷ ಪ್ರಾಣಿ ಎಂದು ತಿಳಿದುಕೊಂಡ ಹಾವುಗಳನ್ನು ಸಹ ತಲೆ ಕತ್ತರಿಸಿ ಅವರು ತಿಂದು ಬಿಡುತ್ತಿದ್ದರು. ಕಾಡಿನಲ್ಲಂತೂ ಕಾಡುಮೃಗಗಳಿಗೂ, ಅವರಿಗೂ ವ್ಯತ್ಯಾಸವೇ ಇರಲಿಲ್ಲ. ಒಂದು ಮೊಲ ಓಡಿಹೋದರೂ ಸಹ ಇದೇ ದಾರಿಯಲ್ಲಿ ಇಂಥ ಕಡೆಗೇ ಹೋಗಿದೆ ಎಂದು ಬೆನ್ನಟ್ಟುತ್ತಿದ್ದರು. ಸುಮಾರು ದಿನಗಳವರೆಗೆ ಶಿಕಾರಿ ಸಂಗಾತಿಗಳಾಗಿ ನನ್ನೊಡನೆ ಕಾಡು ತಿರುಗಿದ ಅವರಿಂದ ನಾನು ತಿಳಿದುಕೊಂಡ ಸಂಗತಿಗಳು ಒಂದೆರಡಲ್ಲ.

ಅವರಿಗೆ ಶಿಕಾರಿಗೆ ಕೋವಿಯ ಅಗತ್ಯವೇ ಕಂಡಿರಲಿಲ್ಲ. ಏಕೆಂದರೆ ಕಾಡಿನಲ್ಲಿ ಪ್ರಾಣಿಗಳು ದಾಟಾಡುವ ದಾರಿಯಲ್ಲಿ "ಉಳ್ಳ" ಹಾಕುವುದು, "ಸಿಡಿ" ಒಡ್ಡುವುದು. ಕಲ್ಲು ಹೇರಿ "ಅಡಸಲು" ಒಡ್ಡಿ ಪ್ರಾಣಿಗಳನ್ನು ಹಿಡಿಯುವುದು ಇವುಗಳಲ್ಲೆಲ್ಲ ಅವರು ಪಾರಂಗತರಾಗಿದ್ದರು.

ಅವರಿಗೆ ಅತ್ಯಂತ ಇಷ್ಟವಾದ ಪ್ರಾಣಿ ಎಂದರೆ ಮಂಗಗಳು. ಇವನ್ನು ಹೊಡೆಯಲು ಮಾತ್ರ ಅವರಿಗೆ ನನ್ನ ಕೋವಿ ಸಹಾಯ ಬೇಕಾಗಿತ್ತು. ಮರಗಳ ಮೇಲೆ ಓಡಿಹೋಗುವ ಇವನ್ನು ಹಿಡಿಯಲು ಅವರ ಬಳಿ ಯಾವುದೇ ಉಪಾಯವೂ ಇರಲಿಲ್ಲ. ಕೊನೆಕೊನೆಗೆ ಇವರ ಮಂಗನ ಮಾಂಸದ ಗೀಳು ಎಷ್ಟಾಯ್ತೆಂದರೆ ಕಾಡಿನಲ್ಲಿ ಎಲ್ಲಾದರೂ ದೂರದ ಮರದಲ್ಲಿ ಒಂದು ಮಂಗ "ಟರ್" ಎಂದರೆ ಸಾಕು ನಮ್ಮೊಡನೆ ಬಂದ ಉದ್ದೇಶವನ್ನು ಸಂಪೂರ್ಣ ಕಡೆಗಣಿಸಿ ಅವುಗಳನ್ನು ಬೆನ್ನಟ್ಟಿಬಿಡುತ್ತಿದ್ದರು. ಅದನ್ನು ಹೊಡೆದ ಹೊರತೂ ಇವರು ನನ್ನೊಡನೆ ಬರುತ್ತಲೇ ಇರಲಿಲ್ಲ. ಇವರ ಜೊತೆ ಸೇರಿ ಕಿವಿ ಸಹ ಮಂಗನನ್ನು ಬೆನ್ನಟ್ಟುವುದು ಅಭ್ಯಾಸ ಮಾಡಿಕೊಂಡು ನನಗೆ ತಲೆನೋವು ಕೊಡಲಾರಂಭಿಸಿತು. ಕೊನೆಕೊನೆಗೆ ಇವರ ಮಂಗನ ಗೀಳಿಗೆ ರೋಸಿಹೋದ ಶ್ರೀರಾಮ ಅವರನ್ನು ಶಿಕಾರಿಗೆ ಕರೆಯಬಾರದೆಂದು ಪ್ರತಿಭಟಿಸತೊಡಗಿದ್ದರು.

೩

ಬೈರನ ಹತ್ತಿರ ಒಂದು ಕಂತ್ರಿ ನಾಯಿ ಇತ್ತು. ಅದಕ್ಕೆ ರಾಮ ಎಂದು ಅವನು ಹೆಸರಿಟ್ಟಿದ್ದ. ಅದರ ಮೇಲೆ ಆಗಾಗ ದೆವ್ವ ಬರುತ್ತಿತ್ತಂತೆ. ಅದಕ್ಕೆ ಅವನು ಅದರ ಎರಡು ಕಿವಿಗಳನ್ನೂ ಬುಡಕ್ಕೆ ಕೊಯ್ದು ಚಿಕಿತ್ಸೆ ಮಾಡಿದ್ದ. ಅದೊಂದು ಅತ್ಯುತ್ತಮ ಶಿಕಾರಿ ನಾಯೆಂದೂ, ಅದರ ಶಿಕಾರಿ ಸಾಮರ್ಥ್ಯ ನೋಡಿದ ಅನೇಕರು ಅದಕ್ಕೆ ಎಷ್ಟು ಹಣ ಬೇಕಾದರೂ ಕೊಡುತ್ತೇವೆ ನಮಗೆ ಕೊಡು ಎಂದು ಕೇಳಿದರೆಂದೂ ತಾನು ಕೊಡಲಿಲ್ಲವೆಂದೂ ಹೇಳಿದ. ತೀರಾ ಬಡಕಲಾಗಿ ಬಾಲದ ಕೂದಲೆಲ್ಲ ಉದುರಿಹೋಗಿದ್ದ ಆ ನಾಯಿ ಪೇಟೆಯಲ್ಲಿ ವಾರಸುದಾರರಿಲ್ಲದೆ ಓಡಾಡಿಕೊಂಡು ಸರ್ವೇ ಸಾಧಾರಣ ಕಂತ್ರಿ ನಾಯಿಯಂತೆಯೇ ನನಗೆ ಕಂಡಿತು.

ಒಮ್ಮೆ "ಅವನ ನಾಯಿ ಊಳಿಡುತ್ತದೆ, ಈ ಅಪಶಕುನವನ್ನು ಓಡಿಸಿ" ಎಂದು ಅವನು ಓರಗೆಯ ಆಳುಗಳೆಲ್ಲಾ ದೂರು ಕೊಟ್ಟಿದ್ದರು. ಬೈರ ಅದನ್ನು ಅವಶ್ಯಕವಾಗಿ ಬಾಳೆನಾರಿನ ಹಗ್ಗದಲ್ಲಿ ಕಟ್ಟಿಹಾಕುತ್ತಿದ್ದುದೇ ಅದು ಊಳಿಡುತ್ತಿದ್ದುದಕ್ಕೆ ಕಾರಣ. ಬೈರನನ್ನು ಕೇಳಿದರೆ ಆ ನಾಯಿ ಈಗ ಸ್ವತಂತ್ರವಾಗಿ ಶಿಕಾರಿ ಆರಂಭಿಸಿದೆ ಎಂದೂ, ತೋಟದ ಸುತ್ತಮುತ್ತ ಇರುವ ಕೋಳಿ, ಮೊಲ ಇತ್ಯಾದಿಗಳನ್ನು ಹಿಡಿಯುವ ಪ್ರಯತ್ನದಲ್ಲಿ ಈ ನಾಯಿ ಅವುಗಳನ್ನು ದೂರದ ಕಾಡಿಗೆ ಓಡಿಸುತ್ತಿತ್ತೆಂದೂ ಹೇಳಿ ಅದನ್ನು ಕಟ್ಟಿಹಾಕಿದ್ದನ್ನು ಸಮರ್ಥಿಸಿದ. ಬೈರ ಅದನ್ನು ತನ್ನ ನಾಯಿ ಎಂದು ಹೇಳಿಕೊಳ್ಳುತ್ತಿದ್ದನೇ ಹೊರತು ಅದಕ್ಕಾಗಿ ಒಂದೇ ಒಂದು ಮುಷ್ಟಿ ಕೂಳು ಹಾಕಿದ್ದು ನೋಡಲಿಲ್ಲ. ಅಷ್ಟೇ ಅಲ್ಲ ಒಮ್ಮೆ ಮರದಿಂದ ಕೆಳಗೆ ಸತ್ತು ಉರುಳಿದ ಮಂಗನ ಬಾಲದ ತುದಿಯನ್ನು ತಿಂದಿದ್ದಕ್ಕೇ ಅದಕ್ಕೆ ಬಾಯಲ್ಲಿ ರಕ್ತ ಬರುವಂತೆ ಹೊಡೆದಿದ್ದ. ಇವನೂ ಕೂಳು ಹಾಕದೆ, ಅದಕ್ಕೂ ಅನ್ನ ಸಂಪಾದಿಸಿಕೊಳ್ಳಲು ಬಿಡದೆ ಕಟ್ಟಿಹಾಕಿದ್ದರಿಂದಲೇ ಹಸಿವಿನಿಂದ ಕಂಗಾಲಾದ ಅದು ಕಾಡಿನ ಮೌನಕ್ಕೆ ಬರೆ ಎಳೆದಂತೆ ಊಳಿಟ್ಟಿದ್ದು.

ಅದೊಂದು ಕ್ಷುದ್ರ ಜೀವಿಯಾಗಿ ಬೈರನ ಕೈಯಲ್ಲಿ ಸಿಕ್ಕಿ ನರಳುತ್ತಿದ್ದರೂ ಒಂದು ಸಾರಿ ಬೈರನ ಹೊಗಳಿಕೆಗೆ ತಕ್ಕಂತೆ ತನ್ನ ಶಿಕಾರಿಯ ನೈಪುಣ್ಯ ತೋರಿಸಿತು. ಕಾಡಿನಲ್ಲಿ ಒಮ್ಮೆ ಅದು ಮುಳ್ಳು ಹಂದಿಯನ್ನು ಅಟ್ಟಿಸಿಕೊಂಡು ಬಂದಿತು. ಅವತ್ತು ನಾನು ಕೋವಿ ತಗೊಂಡು ಹೋಗಿರಲಿಲ್ಲ. ಜೊತೆಗೆ ಕಿವಿಯೂ ಇರಲಿಲ್ಲ. ಬೈರನ ರಾಮನನ್ನೂ, ಕಿವಿಯನ್ನೂ ಒಟ್ಟಿಗೆ ಎಂದೂ ಶಿಕಾರಿಗೆ ಕರೆದೊಯ್ಯುತ್ತಿರಲಿಲ್ಲ. ಏಕೆಂದರೆ ಕಾಡಿನಲ್ಲಿ ಶಿಕಾರಿಗೆ ಬದಲು ಇವೆರಡರ ಕಚ್ಚಾಟ ಜಗಳ ಬಿಡಿಸುವುದೇ ನಮಗೆ ದೊಡ್ಡ ಕೆಲಸವಾಗುತ್ತಿತ್ತು.

ಮುಳ್ಳು ಹಂದಿ ನನ್ನೆದುರೇ ಕರಿಯ ಚಂಡಿನಂತೆ ಚಿಮ್ಮಿ ನೆಗೆಯುತ್ತಾ ಮುಳ್ಳುಗಳನ್ನು ಜಲ್ ಜಲ್ ಎಂದು ಸದ್ದು ಮಾಡುತ್ತಾ ಓಡಿತು. ನಾನು ಕಾಡಿನಲ್ಲಿ ಅದೇ ಮೊದಲ ಬಾರಿಗೆ ಮತ್ತು ಕಡೆಯಬಾರಿಗೆ ಮುಳ್ಳುಹಂದಿಯನ್ನು ನೋಡಿದ್ದು. ಹೊಳೆಯುತ್ತಿದ್ದ ಲೋಹದ ಭರ್ಜಿಗಳಂತೆ ಕಾಣುತ್ತಿದ್ದ ಮುಳ್ಳುಗಳನ್ನು ಝಳಪಿಸುತ್ತ ನನ್ನೆದುರು ಕೆಲವೇ ಮಾರುಗಳ ದೂರದಲ್ಲಿ ಮುಳ್ಳುಹಂದಿ ಗುರುಗುಟ್ಟುತ್ತ ಓಡಿತು. ಅದರ ಹಿಂದೆಯೇ ಬೈರನ ರಾಮ ಬೊಗಳುತ್ತಾ ಓಡಿ ಬಂತು. ನನಗೂ ಮಾಸ್ತಿಗೂ

ಮುಂದೇನು ಮಾಡಬೇಕೆಂದು ತೋರದೆ "ಛೂ ಛೂ" ಎಂದು ರಾಮನನ್ನು ಹುರಿದುಂಬಿಸುತ್ತಾ ಮುಳ್ಳುಹಂದಿ ಹಿಂದೆ ಕಲ್ಲು ಪೊದರುಗಳನ್ನು ಗಣಿಸದೆ ಓಡಿದೆವು.

ಮೈ ಎಲ್ಲ ಭರ್ಜಿಗಳಿರುವ ಈ ಭಯಾನಕ ಪ್ರಾಣಿಯನ್ನು ಯಾವುದೇ ಆಯುಧಗಳಿಲ್ಲದೆ ಹಿಡಿಯುವುದಿರಲಿ ಹತ್ತಿರ ಹೋಗುವುದು ಸಹ ಪ್ರಾಣಾಪಾಯಕರವಾಗಿ ಕಂಡಿತು. ನಾನು ಓಡುತ್ತಲೇ "ಅದನ್ನು ಹೇಗೆ ಹಿಡಿಯೋದು?" ಎಂದು ಮಾಸ್ತಿಯನ್ನು ಕೇಳಿದೆ. ಅದಕ್ಕೆ ಬೈರ ನನ್ನ ಹಿಂದಿನಿಂದ "ಅದೆಷ್ಟು ದೂರ ಓಡ್ತದೆ! ಇನ್ನೊಂದು ನಾಲ್ಕು ಮಾರು ಓಡಿದರೆ ಸುಸ್ತಾಗ್ತದೆ. ಕತ್ತಿ ತಗೊಂಡು ಕಾಲು ಕಡಿದು ಹಾಕುತ್ತೇನೆ" ಎಂದು ಆಶ್ವಾಸನೆ ಕೊಟ್ಟ. ನಾನಂತೂ ಪ್ರಾಣ ಹೋದರೂ ಅದರ ಹತ್ತಿರ ಸುಳಿಯಬಾರದೆಂದು ನಿರ್ಧರಿಸಿದ್ದೆ. ಸುಮ್ಮನೆ ಮುಂದೆ ನಡೆಯುವ ನಾಟಕ ನೋಡುವುದಕ್ಕಾಗಿ ಕುತೂಹಲದಿಂದ ಅವರೊಡನೆ ಓಡಿದೆ.

ಹೆಚ್ಚೂ ಕಡಿಮೆ ನಮ್ಮ ಕಣ್ಣ ಮುಂದೆಯೇ ಓಡುತ್ತಿದ್ದ ಮುಳ್ಳುಹಂದಿ ಮತ್ತು ನಾಯಿ ಎರಡೂ ಇದ್ದಕ್ಕಿದ್ದಂತೆ ಅಂತರ್ಧಾನವಾದವು. ಹಾಗೆ ಅವೆರಡೂ ಮಾಯವಾಗಿದ್ದು ನೋಡಿ ನಾವು ಮೂರು ಜನವೂ ಚಕಿತರಾಗಿ ನಿಂತೆವು.

ಎರಡು ನಿಮಿಷ ಕಳೆದಿರಲಿಲ್ಲ. ಎಲ್ಲೋ ಬೈರನ ನಾಯಿ ಬೊಗಳಿದ ಸದ್ದು ಕೇಳಿಸಿತು. ಕಣ್ಣೆದುರು ಯಾವ ನಾಯಿಯೂ ಇರಲಿಲ್ಲ. ಆದರೂ ಬೈರನ ನಾಯಿಯ ಅಶರೀರವಾಣಿ ಕೇಳುತ್ತಲೇ ಇತ್ತು. ಕೆಲವು ನಿಮಿಷಗಳವರೆಗೆ ನಮಗೆ ನಡೆದುದೇನೆಂದು ಗೊತ್ತಾಗಲಿಲ್ಲ.

ಮುಳ್ಳುಹಂದಿ ಓಡೋಡುತ್ತಲೇ ಅಲ್ಲೊಂದು ಬಂಡೆ ಸಮೀಪದಲ್ಲಿ ಅದು ಮಾಡಿಕೊಂಡಿದ್ದ ಬಿಲದೊಳಗೆ ಫಕ್ಕನೆ ನುಗ್ಗಿಬಿಟ್ಟಿತ್ತು. ಅದರೊಡನೆ ಬೈರನ ನಾಯಿಯೂ ಸಹ! ಈಗ ಬೈರನ ನಾಯಿ ನಮ್ಮ ಕಾಲಿನಡಿ ಎಲ್ಲೊ ಭೂಗರ್ಭದೊಳಗಿಂದ ಬೊಗಳುತ್ತಿತ್ತು. ನಾವು ಏನೂ ಮಾಡುವ ಹಾಗೇ ಇರಲಿಲ್ಲ. ಅದನ್ನು ಓಡಿಸಿ ಓಡಿಸಿ ದಣಿದ ಮೇಲೆ ಹಿಡಿಯುವ ಉಪಾಯದಲ್ಲಿದ್ದ ಮಾಸ್ತಿಗೂ ಬೈರನಿಗೂ ಮುಳ್ಳು ಹಂದಿ ಸರಿಯಾಗಿ ಬೇಸ್ತು ಬೀಳಿಸಿತ್ತು. ಮಾಸ್ತಿ, ನಾಯಿ ಬೊಗಳುತ್ತಿದ್ದ ಸದ್ದಿನ ಊಹೆಯ ಮೇಲೆ ಅಲ್ಲಲ್ಲಿ ತಿರುಗಾಡಿ ಒಂದು ಜಾಗ ತೋರಿಸಿ "ಇಲ್ಲಿ ಎರಡಾಳು ಆಳ ಅಗೆದರೆ ಮುಳ್ಳುಹಂದಿ ಸಿಕ್ಕೋಯ್ತದೆ. ನಾಯಿ ಇಲ್ಲೇ ಬೊಗುಳ್ತಿದೆ" ಎಂದ. ಅವರಿಬ್ಬರಿಗೂ ಮುಳ್ಳುಹಂದಿಯ ಬೆನ್ನು ಹತ್ತಿ ಭೂಗರ್ಭದೊಳಗೆ ಸಿಕ್ಕಿಕೊಂಡಿದ್ದ ನಾಯಿಯ ಚಿಂತೆ ಸುತರಾಂ ಇದ್ದಂತಿರಲಿಲ್ಲ.

ನಾವು ಇದನ್ನೆಲ್ಲಾ ಮಾತಾಡುತ್ತಿರಬೇಕಾದರೆ ಭೂಗರ್ಭದೊಳಗಿಂದಲೇ ಮುಳ್ಳುಹಂದಿ ಗೊರಗೊರ ಗುಟುರು ಹಾಕುತ್ತ ನಾಯಿಯ ಮೇಲೆ ತಿರುಗಿ ಬಿದ್ದಿದ್ದೂ, ನಾಯಿ ಕುಯ್ಯೊಯ್ಯೋ ಎಂದು ಕೂಗಿಕೊಂಡಿದ್ದೂ ಕೇಳಿಸಿತು. "ಓ ಎರಡಕ್ಕೂ ಜಟಾಪಟಿ ಹತ್ಗೊಗ್ತು ಅಂತ ಕಾಣ್ತದೆ!" ಎಂದ ಬೈರ. ಮಾಸ್ತಿ ಮುಂಜಾಗ್ರತೆ ವಹಿಸಿ, "ಬೈರಣ್ಣ ! ಓಡು ಓಡು, ಬಿಲ ನೋಡು, ಬಿಲ ನೋಡು" ಎಂದು ಕೂಗಿದ. ಬೈರ ಓಡಿಹೋಗಿ ಕತ್ತಿ ಹಿಡಿದು ಬಿಲದ ಬಾಯಲ್ಲಿ ಇನ್ನೇನು ಈಗಲೋ ಮರುಕ್ಷಣವೋ ಹೊರಬರಲಿರುವ ಮುಳ್ಳುಹಂದಿ ಸಂಹಾರಕ್ಕೆ ರೆಡಿಯಾಗಿ ನಿಂತ.

ಮುಳ್ಳುಹಂದಿ ಒಳಗೆ ಕವಲು ಕವಲಾಗಿ ಅನೇಕ ಸುರಂಗಗಳನ್ನು ತೋಡಿಕೊಂಡಿರುತ್ತದಂತೆ! ಬೈರನ ನಾಯಿ ಹಿಂದಿರುಗಿ ಬರುವಾಗ ಗಾಬರಿಯಲ್ಲಿ ಅಂಥ ಯಾವುದಾದರೂ ಅಡ್ಡ ಕವಲಿನೊಳಗೆ ನುಗ್ಗಿದರೆ ಶಾಶ್ವತವಾಗಿ ಭೂಗರ್ಭದಲ್ಲಿ ಬಂದಿಯಾಗುವ ಸಾಧ್ಯತೆ ಇತ್ತು.

ಅಷ್ಟರಲ್ಲಿ ಸುರಂಗದ ಕತ್ತಲ ಪಾತಾಳದಲ್ಲೆಲ್ಲೊ ಗಡಬಡ ಸದ್ದು ಕೇಳಿತು. ಬೈರ ಕತ್ತಿ ಎತ್ತಿ ರೆಡಿಯಾದ. ಬೈರ ಇನ್ನೇನು ಕತ್ತಿ ಬೀಸಿ ಅಪ್ಪಳಿಸಬೇಕು, ಮುಳ್ಳುಹಂದಿಯ ಬದಲು ಬೈರನ ನಾಯೇ ಚಂಡು ಪುಟ ನೆಗೆದಂತೆ ಬಿಲದಿಂದ ಹೊರಕ್ಕೆ ಚಿಮ್ಮಿತು.

ಮುಳ್ಳುಹಂದಿ ಬದಲು ನಾಯಿ ಹೊರಬಂದಿದ್ದನ್ನು ನೋಡಿ ಹತಾಶನಾದ ಬೈರ 'ತತ್' ಎಂದು ನಾಯಿ ಕಡೆಗೆ ತುಪ್ಪಿದ. ನಾಯಿಯ ಬೆನ್ನಿಗೆ ಮುಳ್ಳುಹಂದಿಯ ಮುಳ್ಳುಗಳೆರಡು ಆಳವಾಗಿ ನಾಟಿಕೊಂಡಿದ್ದವು. ನಾನೂ ಮಾಸ್ತಿಯೂ ನಾಯನ್ನು ಹಿಡಿದುಕೊಂಡು ಅದಕ್ಕೆ ನಾಟಿದ ಮುಳ್ಳುಗಳೆರಡನ್ನೂ ಬಲವಾಗಿ ಜಗ್ಗಿಸಿ ಕಿತ್ತು ತೆಗೆದವು. ಆ ಎರಡು ಮುಳ್ಳುಗಳೂ ಇನ್ನೂ ನನ್ನ ಬಳಿ ಇವೆ. ನಾಯಿ ದೇಹದಲ್ಲಿ ಮುಳ್ಳು ನಾಟಿಕೊಂಡಿದ್ದ ಪರಿಯನ್ನು ನೋಡಿ ನನಗೆ ಮುಳ್ಳುಹಂದಿಯ ತಂಟೆಯೇ ಬೇಡವೆಂದೆನ್ನಿಸಿತು.

ಮುಳ್ಳು ಕಿತ್ತಮೇಲೆ ಬೈರನೂ, ಮಾಸ್ತಿಯೂ ನಾಯನ್ನು ಮತ್ತೆ ಬಿಲದೊಳಗೆ ಛೂ ಬಿಡಲು ತುಂಬಾ ಪ್ರೋತ್ಸಾಹಿಸಿ ಪ್ರಯತ್ನಿಸಿದರು. ಒಮ್ಮೆ ಪ್ರಾಣ ಸಮೇತ ಕತ್ತಲ ಬಿಲದಿಂದ ಪಾರಾಗಿ ಬಂದ ಬೈರನ ನಾಯಿ ಮಾತ್ರ ಅವರು ಎಷ್ಟೇ ಪ್ರೋತ್ಸಾಹಿಸಿದರೂ ಮತ್ತೆ ಬಿಲದೊಳಗೆ ನುಗ್ಗುವ ಅವಿವೇಕಕ್ಕೆ ಹೋಗಲಿಲ್ಲ. ಬೈರ ತನ್ನ ನಾಯಿಯ ಹೆದರಿಕೆ ನೋಡಿ ರೇಗಿ ಎರಡು ಗುದ್ದು ಗುದ್ದಿ ಮುಳ್ಳುಹಂದಿಯ ಬಿಲದೊಳಗೆ ಅದರ ತಲೆ ತೂರಿಸಿ ತಳ್ಳಿದ. ಬಿಲದ ಹೊರಗೂ ಏಟು, ಬಿಲದ ಒಳಗೂ ಏಟು ತಿಂದ ನಾಯಿಗೆ ಒಮ್ಮೆಲೇ ಕೋಪ ಬಂದು ಗುರುಗುಟ್ಟುತ್ತಾ ರೇಗಿ ಬೈರನ ಮೇಲೆ ಹಾರಿ ಅನಂತರ ಸೀದ ಮನೆ ದಾರಿ ಹಿಡಿದು ಓಡಿಹೋಯ್ತು.

ಬೈರ ನಾಯನ್ನು ಮನಸಾರೆ ಬಯ್ದ. ಮಾಸ್ತಿಯಂತೂ "ಇಂಥ ನಾಯಿ ಇದ್ದರೆಷ್ಟು! ಸತ್ತರೆಷ್ಟು! ಬಿಲದ ಹೊರಗೆ ತಲೆ ಹಾಕಿದಾಗ ನೀನು ಅದನ್ನು ಕಡಿದೇ ಬಿಡಬೇಕಿತ್ತು" ಎಂದು ಬೈರನಿಗೆ ಸಲಹೆ ಕೊಟ್ಟ.

೪

ಬೈರನೂ ಮಾಸ್ತಿಯೂ ಅವರ ಶಿಕಾರಿ ನಾಯನ್ನು ನಡೆಸಿಕೊಳ್ಳುವ ರೀತಿ ನೋಡಿದರೆ ತುಂಬಾ ಕ್ರೂರಿಗಳು, ನಿರ್ದಯಿಗಳು ಎಂದೆನ್ನಿಸುತ್ತಿತ್ತು. ಅವರೊಡನೆ ಅದೂ ಕಾಡು ತಿರುಗಿ ಶಿಕಾರಿಯಲ್ಲಿ ಸಹಾಯ ಮಾಡಿದರೂ ಅದರ ಬಗ್ಗೆ ಕೊಂಚವಾದರೂ ಕರುಣೆ, ಕೃತಜ್ಞತೆ ತೋರಿಸುವುದಿಲ್ಲವಲ್ಲ ಎಂದು ವ್ಯಸನವಾಗುತ್ತಿತ್ತು. ಆದರೆ ಈಗನ್ನಿಸುತ್ತೆ ಅವರು ನಾಯಿಗೆ ನಾವು ಮಾಡುವಂತೆ ಮಾನವೀಯ ವ್ಯಕ್ತಿತ್ವವನ್ನು ಆರೋಪಿಸಿ ನಮ್ಮಂತೆಯೇ ಅದು ಎಂದು ನೋಡುವುದರಿಂದ

ಅದಕ್ಕೆ ಸಂತೋಷವಾಗಲೀ, ಪ್ರಯೋಜನವಾಗಲೀ ಉಂಟೇ ಎಂದು ನನಗೆ ಅನುಮಾನ.

ಆ ನಾಯಿಯೂ ಅನೇಕ ವೇಳೆ ಶಿಕಾರಿಯಲ್ಲಿ ಹೊಡೆದ ಚಿಕ್ಕಪುಟ್ಟ ಪ್ರಾಣಿಗಳನ್ನು ಹೊತ್ತುಕೊಂಡು ಕಾಡೊಳಗೆ ಓಡಿಬಿಡುತ್ತಿತ್ತು. ಅದನ್ನು ಕಸಿದುಕೊಳ್ಳಲು ಮಾಸ್ತಿ ಅದನ್ನು ಬೆನ್ನಟ್ಟಿದರೆ ಅದು ಓಡೋಡುತ್ತಲೇ ಅದನ್ನು ನುಂಗಿಬಿಡುತ್ತಿತ್ತು. ಆದರೂ ಅವರಿಗೂ, ಅವರ ನಾಯಿಗೂ ಇದ್ದ ನಂಟು ಯಾವ ತರದ್ದೋ ಗೊತ್ತಿಲ್ಲ. ಯಾವಾಗಲೂ ಅವರ ಬಿಡಾರದ ಎದುರು ಸುರುಳಿ ಸುತ್ತಿಕೊಂಡು ನಿದ್ದೆ ಮಾಡುತ್ತಾ ಯಾರು ಹೊಸಬರು ಮುಖ ಹಾಕಿದರೂ ಬೊಗಳಿ ಗಲಾಟೆ ಮಾಡುತ್ತಿತ್ತು. ಅವರು ಕಾಡು ತಿರುಗಲು ಹೊರಟೆಂದರೆ ಇದೂ ಅವರೊಡನೆ ಹೊರಡುತ್ತಿತ್ತು.

ಬೈರನಿಗೆ ಮಾಸ್ತಿಗಿಂತ ಕೊಂಚ ಹೆಚ್ಚು ನಾಗರಿಕ ಪ್ರಪಂಚದ ಪರಿಚಯ ಇದ್ದಹಾಗಿತ್ತು. ಅವನು ಪಟಾಸು ಮದ್ದು ಮತ್ತು ಧಡಾಕಿ ಮದ್ದು ತಂದು ನಾಡು ಬಾಂಬುಗಳಂಥ ಸಿಡಿಮದ್ದಿನ ಉಂಡೆಗಳನ್ನು ಮಾಡುತ್ತಿದ್ದ. ಬೆಣಚು ಕಲ್ಲುಗಳನ್ನು ತುಂಬಿ ಅವನು ಮಾಡುತ್ತಿದ್ದ ಉಂಡೆಗಳನ್ನು ಅಮುಕಿದರೆ ಸಾಕು ಅವು ದಢೀರೆಂದು ಸಿಡಿಯುತ್ತಿದ್ದವು. ಅವನ್ನು ಮಂಗನ ಕರುಳಿನಲ್ಲೋ ಅಥವಾ ದುರ್ನಾತ ಹೊಡೆಯುವ ಚರ್ಮದಲ್ಲೋ ಸುತ್ತಿಟ್ಟರೆ ಕಾಡುಹಂದಿಗಳು ಅದನ್ನು ದವಡೆಯಲ್ಲಿ ಅಗಿದಾಗ ಸಿಡಿದು ಅವು ಸತ್ತು ಬೀಳುತ್ತಿದ್ದವು.

"ಬೈರ ಏನೋ ಉಂಡೆ ಮಾಡಿದ್ದಾನೆ, ಅದರಲ್ಲಿ ಕಾಡುಹಂದಿ ಬೀಳುತ್ತದಂತೆ" ಎಂದು ಇತರ ತೋಟದ ಆಳುಗಳು ಮಾತಾಡುವುದನ್ನು ಕೇಳಿದ್ದೆ. ಆದರೆ ನಾನು ಅವನ ಉಂಡೆಯನ್ನಾಗಲೀ ಅದನ್ನು ಅಗಿದು ಸತ್ತ ಹಂದಿಯನ್ನಾಗಲೀ ನೋಡಿರಲಿಲ್ಲ. ಅವರ ಬಳಿ ಇಂಥವು ಲಕ್ಷಾಂತರ ಶಿಕಾರಿ ವರಸೆಗಳಿದ್ದುದರಿಂದ ಅವುಗಳಲ್ಲಿ ಯಾವುದನ್ನು ಅಂತ ನಾನು ಕೇಳಿ ತಿಳಿದುಕೊಳ್ಳಲಿ?

ಆದರೆ ಒಮ್ಮೆ ನಾನು ಮೈಸೂರಿಗೆ ಹೋಗಿದ್ದಾಗ ರಾತ್ರಿ ಭೂತನಕಾಡು ತೋಟದಲ್ಲಿ ಢಮಾರೆಂದು ಸದ್ದಾಯ್ತು. "ಹಂದಿ ಬಿತ್ತು" ಎಂದುಕೊಂಡ ಬೈರ, ಮಾಸ್ತಿ ಇಬ್ಬರೂ ಟಾರ್ಚ್ ಕೇಳಲು ಮನೆಗೆ ಬಂದರು. ಸರಿ ಸುದ್ದಿ ಎಲ್ಲರಿಗೂ ಗೊತ್ತಾಯ್ತು.

ಎಲ್ಲ ಗುಂಪು ಕೂಡಿ ತೋಟಕ್ಕೆ ಹೋಗಿ ಟಾರ್ಚ್ ಹಾಕಿ ನೋಡಿದಾಗ ಬೈರ ಉಂಡೆ ಇಟ್ಟ ಜಾಗದಲ್ಲಿ ದೊಡ್ಡ ಹಂದಿಯೊಂದು ಕುಳಿತಿದೆ. ಇನ್ನೂ ಕಣ್ಣು ಮಿಟುಕಿಸುತ್ತಿದ್ದ ಅದನ್ನು ನೋಡಿ ಯಾರಿಗೂ ಅದರ ಹತ್ತಿರ ಹೋಗಲು ಧೈರ್ಯ ಬರಲಿಲ್ಲ. ಬೈರ ಹೇಳಿದ "ನಾಳೆ ಬೆಳಗಾಗೋದ್ರೊಳಗೆ ಅದು ಪೈಸಲ್ ಆಗೋಗ್ತದೆ ಬನ್ನಿ" ಎಂದು. ಅವನ ಆಶ್ವಾಸನೆಯಿಂದ ಸಮಾಧಾನಗೊಂಡ ಎಲ್ಲರೂ ಹಿಂದಿರುಗಿದರು. ಹೋದ ಗುಂಪೆಲ್ಲಾ ಇನ್ನೂ ಅವರವರ ಮನೆ ಕದ ದಾಟಿಲ್ಲ. ಅಷ್ಟರೊಳಗೆ ಢಮಾರೆಂದು ಇನ್ನೊಂದು ಸದ್ದು! ಈ ಸಾರಿ ಬೇರೆ ದಿಕ್ಕಿನಿಂದ.

ಮತ್ತೆ ಅತ್ತ ಕಡೆಗೆ ಎಲ್ಲರೂ ಹೋದರು. ಅಲ್ಲೂ ಇನ್ನೊಂದು ದೊಡ್ಡ

ಹಂದಿ ಏನೂ ಆಗದ ಹಾಗೆ ಪಿಳಿಪಿಳಿ ಕಣ್ಣು ಬಿಡುತ್ತ ಕುಳಿತಿತ್ತು. ಸರಿ ಇದೂ ಬೆಳಗ್ಗೆ ಸತ್ತಿರುತ್ತೆ ಎಂದುಕೊಂಡು ಎಲ್ಲ ಹಿಂದಿರುಗಿದರು. ಎರಡೂ ಭಾರಿ ಹಂದಿಗಳು! ತೋಟದಲ್ಲಿ ರಾತ್ರಿ ಯಾರಿಗೂ ನಿದ್ದೆ ಬಂದಿಲ್ಲ. ಕೆಲವರಂತೂ ಹಂದಿ ಸಾರಿಗೆ ಕಾರ ಸಹ ಕಡೆದಿದ್ದಾರೆ!

ಅದರ ಬೆಳಗ್ಗೆ ಹೋಗಿ ನೋಡಿದರೆ ಹಂದಿ ಸತ್ತು ಬೀಳುವುದರ ಬದಲು ದವಡೆಗಾದ ಆಸ್ಫೋಟನೆಯ ಗಾಯವನ್ನು ಹೇಗೋ ಸುಧಾರಿಸಿಕೊಂಡು ತೆವಳಿಕೊಂಡು ಹೆಜ್ಜೆ ಮೇಲೆ ಹೆಜ್ಜೆ ಇಡುತ್ತಾ ಕಾಡಿಗೆ ಪರಾರಿಯಾಗಿದ್ದವು. ತುಂಬಾ ದೂರದವರೆಗೆ ಬೈರನೂ, ಮಾಸ್ತಿಯೂ ಅವುಗಳ ಹೆಜ್ಜೆ ಮೆಟ್ಟು ನೋಡಿಕೊಂಡು ಸಾಯಂಕಾಲದವರೆಗೂ ಹುಡುಕಾಡಿದರಂತೆ. ಆದರೆ ಅವು ಅವರಿಗೆ ಸಿಕ್ಕಲಿಲ್ಲ.

ನಾನು ಹಿಂದಿರುಗವ ವೇಳೆಗೆ ಇದೊಂದು ರೋಮಾಂಚಕ ವಾರ್ತೆಯಾಗಿದೆ! ಎಷ್ಟು ಸುಲಭದಲ್ಲಿ ಸಿಕ್ಕ ಎರಡು ದೊಡ್ಡ ಹಂದಿಗಳು ತಪ್ಪಿ ಹೋದವು ಎಂದು ದಾರಿಯಲ್ಲಿ ಎದುರಾದವರೆಲ್ಲ ಹೊಟ್ಟೆ ಉರಿದುಕೊಳ್ಳುತ್ತಾ ನನಗೆ ವರದಿ ಮಾಡುವವರೇ.

"ಎಂಥಾ ಮಾಲು ಕಳೆದುಹೋಯ್ತು! ನೀವಿದಿದ್ದರೆ ಅವೆರಡಕ್ಕೂ ಒಂದೊಂದು ಗುಂಡು ಉಡಾಸಿ ಬಿಡಬಹುದಿತ್ತು" ಎಂದು ಬೈರ ನನ್ನ ಬಳಿ ಕೈ ಕೈ ಹಿಸುಕಿಕೊಳ್ಳುತ್ತ ಹೇಳಿದ. ಸಾಲದ್ದಕ್ಕೆ ಅವೆರಡು ಹಂದಿಗಳು ಬೇರೆ ಯಾರದೋ ತೋಟದಲ್ಲಿ ಸತ್ತು ಬಿದ್ದಿದ್ದುವಂತೆ ಎಂದು ಮಾರನೆ ದಿನ ಗಾಯದ ಮೇಲೆ ಬರೆ ಎಳೆದಂತೆ ವಾರ್ತೆ ಬಂತು.

ಇದೆಲ್ಲಾ ಆದ ಒಂದು ವಾರದ ತರುವಾಯ ಬೈರ ಉಂಡೆ ಇಡಲು ಹೊರಟಿದ್ದವ ಸಂಜೆ ತೋಟದಲ್ಲಿ ನನಗೆ ಎದುರಾದ. ಅವನ ಬಳಿ ಇನ್ನೊಂದೇ ಉಂಡೆ ಉಳಿದಿತ್ತು. ಹಂದಿ ಖಾತರಿಯಾಗಿ ಓಡಾಡುವ ಜಾಗ ಒಂದನ್ನು ನೋಡಿ ಅಲ್ಲಿ ಉಂಡೆ ಇಟ್ಟುಬರಲು ಹೊರಟಿದ್ದ ಅವನೊಡನೆ ನಾನೂ ಹೊರಟೆ. ಕೋವಿ ಹಿಡಿದ ನನ್ನನ್ನು ನೋಡಿ ಶಿಕಾರಿಗೆ ಹೊರಟರೆಂದೇ ತಿಳಿದು ಬೈರನ ನಾಯಿ ರಾಮು ಚಕ್ರಾಕಾರವಾಗಿ ಬಾಲ ತಿರುಗಿಸುತ್ತಾ ಬೂದಿಗುಡ್ಡೆಯ ಹೊಂಡದಿಂದ ಮೇಲೆದ್ದು ಬಂತು. ಬೈರ ಜೋರು ಮಾಡಿ ಅದನ್ನು ಹಿಂದಕ್ಕೆ ಕಳಿಸಿದ.

ಬೈರನ ಜೊತೆ ಕಂಪೆನಿ ಕೊಡುವುದು ಅಸಾಧ್ಯವಾಗಿತ್ತು. ಉಂಡೆಗೆ ಸುತ್ತಿದ್ದ ಕೊಳೆತ ಕರುಳಿನ ದುರ್ವಾಸನೆ ಹೊಟ್ಟೆ ತೊಳೆಸುವಂತೆ ಅವನಿಂದ ಹೊಮ್ಮಿತ್ತು. ಭೂತನಕಾಡು ಗುಡ್ಡ ಹತ್ತಿ ಅದರ ನೆತ್ತಿಯಲ್ಲಿದ್ದ ಕೋಡುಗಲ್ಲಿನ ಬಳಿಗೆ ಬರುವ ವೇಳೆಗಾಗಲೇ ಅವನ ಉಂಡೆಯ ದುರ್ನಾತ ನನಗೆ ಅಸಹನೀಯವಾಗತೊಡಗಿತ್ತು. ನನ್ನ ಕಿವಿ ಕಣ್ಣುಗಳೆಲ್ಲ ಮಂದವಾಗುವಂತೆ ಉಂಡೆಯ ವಾಸನೆ ನನ್ನ ಇಂದ್ರಿಯಗಳ ಮೇಲೆ ಉಗ್ರ ದಾಳಿ ಆರಂಭಿಸಿತ್ತು.

ನನ್ನನ್ನು ಬಂಡೆಯ ಬಳಿಯೇ ನಿಲ್ಲಲು ಬೈರ ಹೇಳಿದ. "ಯಾಕೋ? ಅಕಸ್ಮಾತ್ ಹಂದಿ ಬಿದ್ದರೆ ನಾನೇನು ಕದ್ದುಕೊಂಡು ಹೋಗುತ್ತೇನಾ?" ಎಂದು

ಕೇಳಿದೆ. "ಹಾಗವಲ್ಲ ಅದು ಮುಷ್ವ" ಅಂದ. ಅವನ ಡಿಕ್ಷ್ನರಿಯಲ್ಲಿ ಮುಷ್ವ ಎಂದರೆ ಏನರ್ಥವೋ ಯಾರಿಗೆ ಗೊತ್ತು? ಅವನಿಂದ ಹೊಮ್ಮುತ್ತಿದ್ದ ದುರ್ವಾಸನೆಯ ಪರಿವೇಷದಿಂದ ಪಾರಾದರೆ ಸಾಕೆಂದು ಆ ಪದದ ಅರ್ಥ ಕೇಳದೆ ಸಂತೋಷದಿಂದಲೇ ಆಯ್ತೆಂದು ಸಮ್ಮತಿಸಿದೆ. ಅವನು ಮುಂದೆ ಹೋದ.

ಅವನು ಮುಂದೆ ತುಂಬ ದೂರ ಹೋಗಿರಬೇಕು. ಎಷ್ಟು ಹೊತ್ತು ಕಾದರೂ ಅವನು ಬರಲೇ ಇಲ್ಲ. ಸಂಜೆಯಾಗುತ್ತಾ ಇತ್ತು. ಮುಳುಗುವ ಸೂರ್ಯನಿಗೆ ಅಡ್ಡಾಗುತ್ತಿದ್ದ ದೂರದ ಬೆಟ್ಟಗಳ ಕಾಡಿನ ನೆರಳು ಕವಿಯಲಿರುವ ಕತ್ತಲೆಗೆ ಮುನ್ನುಡಿ ಎನ್ನುವಂತ ಕಣಿವೆ ಕಾಡುಗಳನ್ನೆಲ್ಲ ಆವರಿಸುತ್ತಿತ್ತು. ಕಾಜಾಣ ಹಕ್ಕಿಗಳು ಸಮೀಪದಲ್ಲೇ ಯಥೇಚ್ಛವಾಗಿ ಬೆಳೆದಿದ್ದ ವಾಟೆ ಬಿದರಿನ ಮೇಲೆ ಕುಳಿತುಕೊಂಡು ಸಿಳ್ಳಿನ ರಾಗಾಲಾಪನೆ ಆರಂಭಿಸಿದ್ದವು. ಕುಟುರಗಳು ಸರ್ವಾಂತರ್ಯಾಮಿಗಳಂತೆ ಎಲ್ಲ ಮರಗಳಿಂದಳೂ "ಟುರ್ರೊ ಕುಟುರ್" ಎಂದು ಛಂದೋಬದ್ಧವಾಗಿ ಕೂಗತೊಡಗಿದ್ದವು. ದೂರದ ಕಣಿವೆಯಲ್ಲಿ ಧುಮ್ಮಿಕ್ಕುತ್ತಿದ್ದ ಜಲಪಾತದ ಸದ್ದು ಗಾಳಿ ನನ್ನ ಕಡೆಗೆ ಬೀಸಿದಾಗ ಕೇಳಿಸುತ್ತಿತ್ತು. ಕಾಡುಕೋಳಿಗಳು ಕಾಡೊಳಗೆ ಪಟ್ ಪಟ್ ಎಂದು ಗಟ್ಟಿ ಸದ್ದು ಮಾಡುತ್ತ ಮರಗಳ ಮೇಲೆ ಹಾರಿ ಕುಳಿತು ಕೂಗಿದವು. ಈವರೆಗೂ ಅವನ ಉಂಡೆಯ ಉಸಿರು ಕಟ್ಟಿಸುವ ದರಿದ್ರ ವಾಸನೆಯಲ್ಲಿ ಮುಳುಗಿ ಹೋಗಿದ್ದ ನನ್ನ ಯಾವ ಇಂದ್ರಿಯಗಳಿಗೂ ಇದು ಗಮನಕ್ಕೆ ಬಂದಿರಲಿಲ್ಲ.

ಬೈರ ಬರಲಿಲ್ಲ. ಕಾಡಿನ ಸೊಳ್ಳೆಗಳು ನನ್ನ ಇರವನ್ನು ಪತ್ತೆಮಾಡಿಕೊಂಡು ಕುಯ್ಗುಡುತ್ತಾ ಒಂದೊಂದಾಗಿ ಬಂದು ನನ್ನ ಕೈಕಾಲುಗಳಿಗೆ ಕಚ್ಚತೊಡಗಿದವು. ಕೆಲವಂತೂ ಅಂಗಿಯ ಮೇಲಿಂದಲೇ ಚರ್ಮಕ್ಕೆ ಇಂಜಕ್ಷನ್ ಕೊಟ್ಟವು. ಇನ್ನೂ ತಡ ಮಾಡುತ್ತಿರುವ ಬೈರನ ಮೇಲೆ ನನ್ನ ಅಸಮಾಧಾನ ಹೆಚ್ಚುತ್ತಾ ಹೋಯ್ತು.

ನಾನು ಬೈರನನ್ನು ಗಟ್ಟಿಯಾಗಿ ಕೂಗಿ ಕರೆಯಲು ಯೋಚಿಸಿದ್ದೆ. ಅಷ್ಟರಲ್ಲಿ ಗಿರಿಕಾನನಗಳೆಲ್ಲ ನಡುಗುವಂತೆ ಢಮಾರೆಂದು ಆಸ್ಫೋಟನೆಯ ಸದ್ದು ಮೊಳಗಿ ದೂರದ ಕಣಿವೆಗಳಿಂದ ಅನುಕರಣಿತವಾಯ್ತು.

ನಾನು ಕುಳಿತಲ್ಲೆ ಬೆಚ್ಚಿಬಿದ್ದೆ!

ನನಗೆ ಮುಂದೇನು ಮಾಡುವುದೆಂದು ತೋರಲಿಲ್ಲ. ಕ್ಷಣಾರ್ಧದಲ್ಲಿ ನೂರಾರು ಭಯಂಕರ ಕಲ್ಪನೆಗಳು ನನ್ನ ತಲೆಯೊಳಗೆ ಹಾದುಹೋದವು.

ಬೈರ ಇಟ್ಟ ಉಂಡೆಯನ್ನು ಇಷ್ಟು ಬೇಗ ಕಾಡುಹಂದಿ ಬಂದು ಅಗಿಯಲು ಸಾಧ್ಯವೇ ಇರಲಿಲ್ಲ. ಹಾಗಾದರೆ ಉಂಡೆ ಇಡುವಾಗ ಅದು ಬೈರನ ಕೈಯಲ್ಲೇ ಆಸ್ಫೋಟಿಸಿತೆ! ಇಡುತ್ತ ಇವನು ಅದನ್ನು ಎತ್ತಿಹಾಕಿರಬೇಕು! ಅಥವಾ ಇಟ್ಟ ಜಾಗ ಮರೆತು ಹಿಂದಿರುಗುತ್ತ ಅದನ್ನು ಕಾಲಲ್ಲಿ ತುಳಿದಿರಬೇಕು! ಒಟ್ಟಿನಲ್ಲಿ ಭಯಂಕರ ಅನಾಹುತ ಒಂದು ಖಂಡಿತ ಸಂಭವಿಸಿದೆ! ಇವನ ಮನೆ ಹಾಳಾಗ! ನಾನು ಯಾಕಾದರೂ ಆ ಅವಿವೇಕಿಯ ಜೊತೆ ಬಂದೆನೋ! ಈಗ ಮುಂದೇನು ಮಾಡುವುದು? ಅವನಿಗೆ ಪ್ರಾಣಾಂತಿಕ ಗಾಯವಾಗಿ ಕೈಯ್ಯೋ ಕಾಲೋ

ತುಂಡಾಗಿದ್ದರೆ ಯಾವ ಡಾಕ್ಟರ ಹತ್ತಿರ ಕೊಂಡೊಯ್ಯುವುದು? ಶಿಕಾರಿಯಲ್ಲಿ ಸಂಭವಿಸಿದ ಆಕಸ್ಮಿಕ ಎಂದ ಕೂಡಲೇ ಯಾವ ಡಾಕ್ಟರೂ ಇಲಾಜು ಮಾಡಲು ಸಮ್ಮತಿಸುವುದಿಲ್ಲ. ಸರ್ಕಾರಿ ಆಸ್ಪತ್ರೆಗೆ ಒಯ್ಯುವುದಾದರೆ ಮೊದಲು ಪೊಲೀಸು ಕೇಸು ದಾಖಲಾಗಬೇಕು. ಆಮೇಲೆ ಸಾಕ್ಷ್ಯ ಹೇಳಲಿಕ್ಕೆ ಮತ್ತೊಂದಕ್ಕೆಂದು ನಾನು ಕೋರ್ಟು ತಿರುಗಬೇಕು.

ಮುಳುಗುತ್ತಿದ್ದ ಸೂರ್ಯನ ಹಳದಿ ಬೆಳಕಿನಲ್ಲಿ ಇದನ್ನೆಲ್ಲಾ ಯೋಚಿಸಿ ವಿಷಣ್ಣವದನನಾಗಿ ನಾನು ಕುಳಿತೆ. ನನ್ನ ಶಕ್ತಿ ಎಲ್ಲ ಇಂಗಿಹೋದಂತೆ ಭಾಸವಾಗಿ ಬಂಡೆಯ ಆಚೆಗೆ ಇಣುಕಲೂ ಹೆದರಿಕೆಯಾಯ್ತು. ನನ್ನ ಕಾಡು ತಿರುಗುವ ಚಾಳಿಗಾಗಿ ನನ್ನನ್ನೇ ನಾನು ಹಳಿದುಕೊಂಡೆ. ಗಾಯಗೊಂಡ ಬೈರನ ಆರ್ತನಾದ ಇನ್ನೇನು ಕೇಳಬಹುದೆಂದು ನಿಃಶಬ್ದವಾಗಿ ಆಲಿಸಿದೆ. ಆದರೆ ಈ ಹಾಳು ಶನಿಯ ಸೊಲ್ಲೇ ಕೇಳಲಿಲ್ಲ.

ಹಾಗಾದರೆ ಇವನು ಒಂದೇ ಹೊಡೆತಕ್ಕೆ ತುಟಿಪಿಟಕ್ಕೆನ್ನದೆ ಪರಂಧಾಮಕ್ಕೆ ಹೋಗಿದ್ದಾನೆಂದು ತೀರ್ಮಾನಿಸಿ ಮುಂದೇನಾಯ್ತೆಂದು ತಿಳಿಯಲು ಮೇಲೆದ್ದೆ. ನನ್ನ ಪಾಲಿಗೆ ಬೇರೆ ವಿಧಿಯೇ ಇರಲಿಲ್ಲ. ಬೈರ ಹೋದ ದಾರಿಯಲ್ಲಿ ಅವನನ್ನು ಕೂಗುತ್ತ ಮುಂದುವರಿದೆ. ಅವನು ಯಾವ ದಿಕ್ಕಿಗೆ ಹೋಗಿದ್ದಾನೆಂದೂ ನನಗೆ ಸರಿಯಾದ ಅಂದಾಜು ಇರಲಿಲ್ಲ.

ಕೊಂಚ ದೂರದಲ್ಲಿ ಎಲ್ಲೊ ಕಾಡೊಳಗೆ ಬೈರ ಓಕೊಂಡ ಸದ್ದು ಕೇಳಿತು. ಅವನ ದನಿಯಲ್ಲಿ ಯಾವ ನರಳಾಟದ ಛಾಯೆಯೂ ಇರಲಿಲ್ಲ. ಅವನಿಗೇನೂ ಆಗಿಲ್ಲವೆಂದೆನ್ನಿಸಿ ನನಗೆ ಬೆಟ್ಟ ತಲೆಯ ಮೇಲಿಂದ ಇಳಿದಷ್ಟು ಸಮಾಧಾನ ಆಯ್ತು.

ಹಾಗಾದರೆ ಉಂಡೆ ಸಿಡಿದದ್ದು ಯಾಕೆ? ಅವನು ಇಡುತ್ತಿದ್ದಂತೆಯೇ ಕಾಡುಹಂದಿ ಅಗಿಯಿತೆ?

ನನ್ನ ಗಾಬರಿ ಎಲ್ಲ ಮಾಯವಾಗಿ ಕುತೂಹಲ ಇಮ್ಮಡಿಸಿತು. "ಏನಾಯ್ತೋ? ಉಂಡೆ ಸಿಡೀತಲ್ಲ?" ಎಂದು ಕೇಳುತ್ತ ಅವನು ಕೂಗಿದ ಜಾಗದತ್ತ ಧಾವಿಸಿದೆ. ಸೂರ್ಯನ ಬೆಳಕು ಮಸುಕು ಮಸುಕಾಗತೊಡಗಿತ್ತು. ಬೈರ ನನ್ನ ಪ್ರಶ್ನೆಗಳಿಗೆ ಉತ್ತರಿಸದಿದ್ದುದನ್ನು ನೋಡಿ ನನಗೆ ಸಂಶಯವೂ ಸುಳಿಯುತ್ತಿತ್ತು.

ಅವನು ನಿಂತ ಜಾಗ ತಲುಪಿದಾಗ ಬೈರ ಪಕ್ಕನೆ ಬಾಯಿ ಬಿಡದೆ ನಿಂತಿದ್ದೇಕೆಂದು ಗೊತ್ತಾಯ್ತು. ಬೈರನಿಗೆ ಏನೂ ಆಗಿರಲಿಲ್ಲ. ಆದರೆ ಅವನ ನಾಯಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿತ್ತು. ಅದು ಕೈಕಾಲುಗಳನ್ನು ಹೊಡೆದುಕೊಳ್ಳುತ್ತಿದ್ದ ರಭಸಕ್ಕೆ ಧೂಳೆದ್ದಿತ್ತು. ಆಸ್ಫೋಟನೆಯಲ್ಲಿ ಅದರ ಮೂತಿ ಕಣ್ಣಿನವರೆಗೂ ಒಡೆದು ಛಿದ್ರವಾಗಿ, ಮುಸುಡಿ ಅರಳಿದ ದಾಸವಾಳದ ಹೂವಿನಂತೆ ಕಾಣುತ್ತಿತ್ತು. ಬದುಕಲು ಸಾಧ್ಯವೇ ಇರಲಿಲ್ಲ.

ಬೈರ ಉಂಡೆ ಇಟ್ಟು ಅರ್ಧ ದಾರಿ ಹಿಂದಕ್ಕೆ ಬಂದಿದ್ದನಂತೆ. ಅಷ್ಟರಲ್ಲಿ ಢಮಾರೆಂದು ಉಂಡೆ ಸಿಡಿದ ಸದ್ದು ಕೇಳಿ ನನ್ನಂತೆಯೇ ಗಾಬರಿಯಾಗಿ ಅವನೂ ಏನಾಯ್ತೆಂದು ನೋಡಲು ಓಡಿದನಂತೆ. ನೋಡಿದರೆ ಅವನ ನಾಯಿಯೇ ಆಹುತಿಯಾಗಿದೆ!

ನಮ್ಮ ಹಿಂದೆಯೇ ಹೊರಟಿದ್ದ ನಾಯನ್ನು ಬೈರ ಹಿಂದಕ್ಕೆ ಓಡಿಸಿದ್ದನೇ ಹೊರತು ಕಟ್ಟಿಹಾಕಲಿಲ್ಲ. ಬೈರನ ಉಂಡೆಯ ಸುವಾಸನೆ ಹಿಡಿದು ರಾಮ ಪೊದೆಗಳ ಮರೆಯಲ್ಲೇ ನಮಗೆ ಸುಳಿವು ಕೊಡದೆ ನಮ್ಮನ್ನೇ ಹಿಂಬಾಲಿಸಿತ್ತು. ಬೈರ ಉಂಡೆ ಇಟ್ಟು ಹಿಂದಿರುಗಿದ ಕೂಡಲೆ ಸುಲಭದಲ್ಲಿ ತಿಂಡಿ ಸಿಕ್ಕಿತೆಂದು ಉಂಡೆಗೆ ಬಾಯಿ ಹಾಕಿತ್ತು.

"ಥು ಇದ್ದದ್ದು ಒಂದು ಉಂಡೇನೂ ಹಾಳ್ಮಾಡ್ತು" ಎಂದು ಸಾಯುತ್ತಿದ್ದ ನಾಯಿಗೆ ಶಪಿಸಿದ ಬೈರ. ನಾಯಿಯ ದುಃಸ್ಥಿತಿಯನ್ನು ಕೊಂಚವೂ ಪರಿಗಣಿಸದೆ ಉಂಡೆ ಹಾಳಾಗಿದ್ದನ್ನೇ ಅವನು ಚಿಂತಿಸಿದ್ದು ಕಂಡು ನನಗೆ ಕೋಪ ಬಂತು. ಕೊನೇಪಕ್ಷ ನನ್ನೆದುರು ತೋರಿಸಿಕೊಳ್ಳಲಾದರೂ ಅವನು ಸಾಯುತ್ತಿದ್ದ ನಾಯಿ ಬಗ್ಗೆ ದುಃಖ ನಟಿಸಬಹುದೆಂದು ತಿಳಿದಿದ್ದೆ.

ನಾಯಿ ಕೈಕಾಲು ಬಡಿಯುವುದನ್ನು ನಿಲ್ಲಿಸುತ್ತಾ ಬಂದಿತ್ತು. ಬೈರ ನನ್ನತ್ತ ತಿರುಗಿ, "ಹೋಗೋಣ ನಡೀರಿ"ಎಂದ. "ಅಲ್ವೊ, ಅದನ್ನ ಹೂತಾಕೋದಿಲ್ವೇನೋ?" ಎಂದು ಕೇಳಿದೆ. "ಸೊತ್ತೋದ್ಮೇಲೆ ಅದ್ಕೇನು ಗೊತ್ತಾಗ್ತದೆ. ನಾಯೋ ನರೀನೋ ತಿನ್ಕೊತದೆ, ನಡೀರಿ" ಎಂದ.

ಹಿಂದಿರುಗುತ್ತ ದಾರಿಯಲ್ಲಿ "ನಾಳಿನಿಂದ ಮೂರ್‍ದಿನ ರಜ ಸಾಮಿ ನಾನು" ಎಂದ.

"ಯಾಕೋ?" ಎಂದೆ.
"ನಂಗೆ ಸೂತಕ!"
"ಏನಾಯ್ತು ನಿಂಗೆ?"
"ರಾಮ ಹೋದ್ನಲ್ಲ!"

ನಸುಗತ್ತಲಲ್ಲಿ ಅವನ ಕಣ್ಣುಗಳಲ್ಲಿ ನೀರು ತುಂಬಿದಂತೆ ಕಂಡಿತು. ಅದೇನು ರಾಮ ಸತ್ತಿದ್ದಕ್ಕೆ ನಿಜಕ್ಕೂ ಸಂತಾಪಪಡಲು ಮೂರುದಿನ ಸೂತಕ ಆಚರಿಸುತ್ತಿದ್ದಾನೋ ಅಥವಾ ಕೆಲಸಕ್ಕೆ ತಪ್ಪಿಸಿಕೊಳ್ಳಲು ನೆವ ಹೇಳುತ್ತಿದ್ದಾನೋ! ಇದ್ದ ಒಂದೇ ಉಂಡೆ ಹಾಳುದುದಕ್ಕೆ ದುಃಖಪಡುತ್ತಿದ್ದಾನೋ ಅಥವಾ ರಾಮ ಸತ್ತಿದ್ದಕ್ಕೆ ನಿಜಕ್ಕೂ ಅವನಿಗೆ ದುಃಖವಾಗಿತ್ತೋ! ಯಾರಿಗೆ ಗೊತ್ತು? ಆದುದರ ಆಧಾರದ ಮೇಲೆ ಆಲೋಚಿಸಿದರೆ, ಹೇಗೆ ಯೋಚಿಸಿದರೂ ಅದೇ ಸರಿ ಅನ್ನುವಂತೆ ಕಾಣುತ್ತದೆ. ಬೈರ, ಮಾಸ್ತಿ ಇವರೆಲ್ಲ ಒಳ್ಳೆಯವರೋ ಕೆಟ್ಟವರೋ ತೀರ್ಮಾನಿಸುವ ಜವಾಬ್ದಾರಿ ಬಿಟ್ಟು ಬರೀ ನಡೆದುದಷ್ಟನ್ನೇ ಹೇಳುವುದು ಒಳ್ಳೆಯದು.

*****

ಪರಿಚಯ :

ತಂದೆ ಕುವೆಂಪು ಅವರ ಚಿಂತನೆ, ದರ್ಶನ, ಸಾಹಿತ್ಯ ಕಲೆಯ ಪ್ರಭಾವಲಯದಿಂದ ಹೊರಬಂದು ತಮಗೆ ವಿಶಿಷ್ಟವಾದ ಚಿಂತನೆ, ಆದರ್ಶ, ಅನುಭವಗಳ ಅಭಿವ್ಯಕ್ತಿಯಿಂದ ಅನನ್ಯತೆಯನ್ನು ಮೆರೆದವರು ಪೂರ್ಣಚಂದ್ರ ತೇಜಸ್ವಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಬಿ.ಎ.ಆನರ್ಸ್ ಮತ್ತು ಎಂ.ಎ. ಪದವಿ ಪಡೆದ ಸ್ವತಂತ್ರ ಪ್ರವೃತ್ತಿಯ ತೇಜಸ್ವಿ ಚಿಕ್ಕಮಗಳೂರಿನ ಮೂಡಿಗೆರೆಯ ಪರಿಸರದಲ್ಲಿ ಕೃಷಿ ತೋಟಗಾರಿಕೆಯ ಆಸಕ್ತಿಯಿಂದ ನೆಲೆ ನಿಂತರು. ಬರವಣಿಗೆಯನ್ನು ಗಂಭೀರವಾಗಿ ಸ್ವೀಕರಿಸಿ ಸಾಹಿತ್ಯದಲ್ಲಿ ಹೊಸ ಅನುಭವಗಳನ್ನು ಅಭಿವ್ಯಕ್ತಿಸಿದರು. ಪರಂಪರಾಗತ ಮೌಢ್ಯಗಳನ್ನು ಪ್ರತಿಭಟಿಸಿ ಸ್ವತಂತ್ರ ಮನೋಧರ್ಮವನ್ನು ವ್ಯಕ್ತಗೊಳಿಸಿದರು. ನಿಸರ್ಗ ಮತ್ತು ಬದುಕಿನ ಅನಂತ ಮಗ್ಗಲುಗಳ ಅನ್ವೇಷಣೆಯಲ್ಲಿ ಅವರ ರಚನೆಗಳು ಆಳ ಮತ್ತು ಸಂಕೀರ್ಣತೆಯನ್ನು ಒಳಗೊಂಡಿವೆ. ನವೋತ್ತರ ಸಾಹಿತ್ಯದ ಅವಧಿಯಲ್ಲಿ ಬರೆದರೂ ತೇಜಸ್ವಿ ನವ್ಯಕ್ಕಿಂತ ಸಂಪೂರ್ಣ ಭಿನ್ನವಾದ ಮೌಲ್ಯಗಳ ದೃಷ್ಟಿ ಮತ್ತು ಅಭಿವ್ಯಕ್ತಿಯ ಮಾರ್ಗವನ್ನು ಕಂಡುಕೊಂಡು ಪ್ರತ್ಯೇಕವಾಗಿ ನಿಲ್ಲುತ್ತಾರೆ. ಅವರು ಅಂಕಣಕಾರರಾಗಿ ಪ್ರಕೃತಿ ಮತ್ತು ಪರಿಸರ ಜ್ಞಾನದ ಮಹತ್ವವನ್ನು ವಿಜ್ಞಾನದ ಅದ್ಭುತಗಳನ್ನು, ವಿಶ್ವದ ರಹಸ್ಯಾತ್ಮಕ ವೈಚಿತ್ರ್ಯಗಳನ್ನು ಜನಮನಕ್ಕೆ ಮುಟ್ಟಿಸಿದ ಗಂಭೀರ ವಿಚಾರವಾದಿ. ಅಂಡಮಾನ್ ದ್ವೀಪಗಳ ಪ್ರವಾಸ ಕಥನ ಕನ್ನಡ ಪ್ರವಾಸ ಸಾಹಿತ್ಯದಲ್ಲಿ ವಿಶಿಷ್ಟರೀತಿಯ ಬರಹ. ಅವರ ಆಸಕ್ತಿಯ ಮತ್ತೊಂದು ಕ್ಷೇತ್ರ ಛಾಯಾಗ್ರಹಣ ವಿಜ್ಞಾನ ಮತ್ತು ಪರಿಸರ–ಜೀವಿ ಜ್ಞಾನಗಳ ಅಧ್ಯಯನ ಮತ್ತು ವೀಕ್ಷಣೆಯ ಫಲವಾಗಿ ಅವರ ಕೃತಿಗಳಿಗೆ ಕನ್ನಡ ಸಾಹಿತ್ಯದಲ್ಲಿ ಬೇರೆಯದೇ ಆದ ಆಯಾಮ ಪ್ರಾಪ್ತವಾಗಿದೆ. ತೇಜಸ್ವಿಯವರ 'ಅಬಸೂರಿನ ಪೋಸ್ಟಾಫೀಸು' ಮತ್ತು 'ತಬರನ ಕತೆ' ಎಂಬ ಸಣ್ಣಕತೆಗಳು ಸಿನಿಮಾಗಳಾಗಿ ಪ್ರಶಸ್ತಿ ಪಡೆದುಕೊಂಡಿವೆ. 'ಚಿದಂಬರ ರಹಸ್ಯ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅವರಿಗೆ 'ಗೌರವ ಪ್ರಶಸ್ತಿ' ನೀಡಿ ಪುರಸ್ಕರಿಸಿದೆ. ಸ್ವಭಾವತಃ ಸೊಗಸಾದ ಹಾಸ್ಯಪ್ರಜ್ಞೆ, ಲವಲವಿಕೆಯ ತೇಜಸ್ವಿಯವರ ಕೆಲವು ಮುಖ್ಯ ಕೃತಿಗಳು; ಯಮಳ ಪ್ರಶ್ನೆ, ಕಿರಗೂರಿನ ಗಯ್ಯಾಳಿಗಳು, ನಿಗೂಢ ಮನುಷ್ಯರು, ಕರ್ವಾಲೋ, ಜುಗಾರಿ ಕ್ರಾಸ್, ಪರಿಸರದ ಕತೆ, ಅಣ್ಣನ ನೆನಪು, ಮಿಸ್ಸಿಂಗ್ ಲಿಂಕ್, ಮಾಯಾಲೋಕ.

ಭೂತನಕಾಡು ಕಾಡಿನಲ್ಲಿ 'ಕಿವಿ;(ನಾಯಿ)ಯ ಜೊತೆ ಒಮ್ಮೆ ಪೂರ್ಣಚಂದ್ರ ತೇಜಸ್ವಿಯವರು ನಡೆದು ಬರುತ್ತಿದ್ದಾಗ ಶಿಲಾಯುಗದ ಮಾನವನೇ ಸಾಕ್ಷಾತ್ತಾಗಿ ಅವತರಿಸಿದಂಥ ವಿಲಕ್ಷಣ ವ್ಯಕ್ತಿಯ ದರ್ಶನವಾಯಿತು. ಚರ್ಮದಂಥ ಗೋಣಿತಾಟನ್ನು ಸೊಂಟಕ್ಕೆ ಮೆತ್ತಿಕೊಂಡಿದ್ದ; ಸ್ನಾನವನ್ನೇ ಕಾಣದ ಮೈಮೇಲೆ ಪಾಚಿಯಂತೆ ಸೂಳು ಕುಳಿತಿತ್ತು. ತಲೆಗೂದಲು ಜಟೆ ಕಟ್ಟಿಕೊಂಡಿತ್ತು. ಕೈಕಾಲಿನ ಉಗುರುಗಳು ಉದ್ದಕ್ಕೆ

ಬೆಳೆದುಕೊಂಡಿದ್ದವರು. ಕಣ್ಣುಗಳು ಮೃಗದ ಕಣ್ಣುಗಳಂತೆ ಮಿಂಚುತ್ತಿದ್ದವು. ಅವನೆದುರು ಮಾತಾಡಲು ತೇಜಸ್ವಿಯವರಿಗೆ ಧೈರ್ಯ ಬಂದದ್ದೇ. ಅವನ ಬಾಯಿಂದ ಕನ್ನಡ ಶಬ್ದಗಳು ಜಾರಿಬಿದ್ದುದರಿಂದ ಅವನೇ ಮಾಸ್ತಿ. ಅವನಿಗೆ ಒಬ್ಬ ಅಣ್ಣನೂ ಇದ್ದ. ಅವನ ಹೆಸರು ಬೈರ. ಥೇಟ್ ಶಿಲಾಯುಗದ ಜನರಂತೆಯೇ ಇದ್ದ ಅವರು ಈ ಆಧುನಿಕ ಯುಗದಲ್ಲಿ ಹೇಗೆ ಕಾಲ ಹಾಕುತ್ತಾರೆಂದು ವಿವರಿಸುವುದೇ ಈ ಪ್ರಬಂಧದ ಉದ್ದೇಶ. ಮಾಸ್ತಿ ಮತ್ತು ಬೈರ ತಲೆಗೂದಲು ಉದ್ದ ಬೆಳೆದಾಗ ಕುಡುಗೋಲಿನಿಂದ ಕತ್ತರಿಸಿಕೊಳ್ಳುತ್ತಿದ್ದರು. ಗಿಡಗಳ ಚಿಗುರು, ಗೆಣಸು, ಗೆಡ್ಡೆ, ದಾಸವಾಳದ ಎಲೆ ಮೊಗ್ಗು ಹೂವು, ಕೇರೆ ಹಾವು, ಹಕ್ಕಿಮೊಟ್ಟೆ, ಇಲಿ, ಹೆಗ್ಗಣ, ಇರುವೆ ಮೊಟ್ಟೆ ಇತ್ಯಾದಿಗಳೆಲ್ಲ ಅವರು ಉಪಯೋಗಿಸುವ ಆಹಾರಪದಾರ್ಥಗಳಾಗಿದ್ದವು. ನಿಸ್ಸೀಮ ಬೇಟೆಗಾರರಾದ ಅವರು ಕಾಡಿನಲ್ಲಿರುವಾ ಕಾಡುಮೃಗಗಳಂತೆಯೇ ವರ್ತಿಸುತ್ತಿದ್ದರು. ಮಂಗನ ಮಾಂಸದ ಗೀಳು ಅವರಿಗೆ ಬಹಳವಾಗಿತ್ತು. ಬೈರನೂ ಮಾಸ್ತಿಯೂ ಅವರ ಶಿಕಾರಿ ನಾಯನ್ನು ಅತ್ಯಂತ ಕ್ರೂರವಾಗಿಯೂ ನಿರ್ದಯವಾಗಿಯೀ ನಡೆಸಿಕೊಳ್ಳುತ್ತಿದ್ದರು. ಬೇಟೆಯಲ್ಲಿ ಸಹಾಯ ಮಾಡುತ್ತಿದ್ದ ಅದಕ್ಕೆ ಸಣ್ಣಪಾಲನ್ನು ಕೊಡದಷ್ಟು ಕಟುಕರಾಗಿದ್ದರು. ಇಮ್ಮೆ ಕಾಡಹಂದಿ ಬೇಟೆಗಾಗಿ ದುರ್ನಾತ ಹೊಡೆಯುವ ಚರ್ಮದಲ್ಲಿ ಸುತ್ತಿಟ್ಟಿದ್ದ ಸಿಡಿಮದ್ದನ್ನು ಅಗಿದು ಅದು ಸಿಡಿದಿದ್ದರಿಂದ ನಾಯಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುವಾಗಲೂ ಬೈರ ಅದರ ದುಸ್ಥಿತಿಗೆ ಮರುಗದೆ "ಥು, ಇದ್ದ ಒಂದು ಉಂಡೇನೂ ಹಾಳಾಯ್ತು" ಎಂದು ನಾಯಿಯನ್ನೇ ಶಪಿಸುವಂತ ನಿರ್ದಯಿ. ಸುತ್ತಮುತ್ತಲ ನಾಗರಿಕ ಪ್ರಪಂಚದ ಸಂಪರ್ಕವೂ ಅವರ ಪುರಾತನ ಪರಿವೇಷದಿಂದ, ಜೀವವಿಧಾನದಿಂದ ಬದಲಿಸಲು ಶಕ್ಯವಾಗಿರಲಿಲ್ಲವಾದ್ದರಿಂದ ಅವರು ಒಳ್ಳೆಯವರೋ ಕೆಟ್ಟವರೋ ಎಂದು ತೀರ್ಮಾನಿಸುವುದೂ ಕಷ್ಟವೇ.

೫. ರಾಜಕೀಯ – ಧರ್ಮ

– ಜಿ. ರಾಮಕೃಷ್ಣ

ಸಾಮಾನ್ಯಾರ್ಥದಲ್ಲಿ ನಾವು ಬಳಸುವ 'ಧರ್ಮ' ಎಂಬ ಪದಕ್ಕೂ ಮತಧರ್ಮಕ್ಕೂ ವ್ಯತ್ಯಾಸವಿದೆ. ಯಾವುದೇ ವಸ್ತುವಿನ ಮೂಲ ಲಕ್ಷಣಗಳನ್ನು 'ಧರ್ಮ' ಎಂದು ಕರೆಯುವುದು ವಾಡಿಕೆ. ಅಂತೆಯೇ ಯಾವುದು ಸಮಾಜಕ್ಕೆ ಧಾರಣ ಸಾಮರ್ಥ್ಯವನ್ನು ನೀಡುತ್ತದೋ ಅದನ್ನು ಧರ್ಮವೆಂದು ಕರೆಯುತ್ತಾರೆ/ "ಧಾರಣಾದ್ಧರ್ಮಂ ಇತ್ಯಾಹುಃ" ಎನ್ನುವಾಗ ಇದೇ ಅರ್ಥ ಸೂಚಿತವಾಗಿರುವುದು. ಒಂದು ಸಮೂಹವನ್ನು ಯಾವುದೋ ಎಲ್ಲೆಯಲ್ಲಿ ಅಥವಾ ಕಟ್ಟುಪಾಡಿನಲ್ಲಿ ಇಡುವ ಉದ್ದೇಶವನ್ನು ಧರ್ಮವು ಹೊಂದಿದೆಯೆಂಬುದು ಇಲ್ಲಿ ಗ್ರಹಿಸಬೇಕಾದ ಅಂಶ. ಆದರೆ ಅದು ನಿರಂತರ ಅಥವಾ ಸಾರ್ವಕಾಲಿಕವಾದುದಲ್ಲ. ಏಕೆಂದರೆ ಸಮಾಜವು ಸಾರ್ವಕಾಲಿಕವಾಗಿ ಒಂದೇ ತೆರನಾಗಿ ಉಳಿಯುವಂತಹ ಘಟಕವಲ್ಲ. ಅನೇಕ ಸಾಮಗ್ರಿಗಳ ಆಧಾರದ ಮೇಲೆ ನಿಂತಿರುವ ಸಮಾಜವು ಆಯಾ ಮೂಲಭೂತ ವಸ್ತುಗಳಲ್ಲಿ ಉಂಟಾಗುವ ವ್ಯತ್ಯಾಸಗಳಿಂದಾಗಿ ತಾನೂ ಬದಲಾಗುತ್ತಿರುತ್ತದೆ. ಸಮಾಜದ ಆಂತರಿಕ ಸಂಬಂಧಗಳಲ್ಲಿ ಮತ್ತು ಇಡಿಯಾಗಿ ಅದರ ವ್ಯವಸ್ಥೆಯಲ್ಲಿ ಸಹ ಕಾಲದಿಂದ ಕಾಲಕ್ಕೆ ಇಂತಹ ಬದಲಾವಣೆಗಳು ಉಂಟಾಗಿರುವುದನ್ನು ಸುಲಭವಾಗಿ ಗಮನಿಸಬಹುದು. ಧರ್ಮದ ಆಯಾಮದಲ್ಲಿ ಕೆಲವು ಮೌಲ್ಯಗಳು ಸಾರ್ವತ್ರಿಕವಾಗಿ ಮತ್ತು ಸಾರ್ವಕಾಲಿಕವಾಗಿ ಎತ್ತಿಹಿಡಿಯಲ್ಪಟ್ಟಿವೆ ಎಂಬರ್ಥದಲ್ಲಿ ಧರ್ಮವು ಚಿರಂತನವೆಂಬ ವಿವರಣೆಯು ಸರಿಯಾಗಿದೆ.

ಅನೇಕ ಮತದ ಧರ್ಮಗಳು ವ್ಯಾಖ್ಯಾನಿಸುವಂತೆ ಧರ್ಮವು ಮಾನವ ನಿರ್ಮಿತವಾದುದಲ್ಲ; ಅದು ಶ್ರುತಿವಾಕ್ಯಗಳನ್ನಾಧರಿಸಿದ ತತ್ವ, ಸಮುದಾಯವನ್ನು ಸಲಹುವ ಸಿದ್ಧಾಂತ. ಹೀಗೆ ಹೇಳಿದಾಗ ಧರ್ಮವು ಸಂಸ್ಥೀಕರಣಗೊಂಡಿರುವ ಅಂಶವನ್ನು ಗುರುತಿಸಿದಂತಾಗುತ್ತದೆ. ಆದರೆ ಇಲ್ಲಿಯ ತೊಡಕೇನೆಂದರೆ ಅದು ಸದಾಕಾಲ ಹೀಗೆ ಸಂಸ್ಥೀಕರಣಗೊಂಡೇ ಇದ್ದಿತು ಎಂಬ ತಪ್ಪುಕಲ್ಪನೆಗೆ ಆಸ್ಪದವನ್ನುಂಟುಮಾಡುತ್ತದೆ. ಶ್ರುತಿವಾಕ್ಯವೇ ಧರ್ಮದ ಉಗಮಸ್ಥಾನವೆಂದು ಬಗೆದಾಗ ಅದು ಏಕಸ್ವರೂಪದ್ದಾಗಿರಬೇಕಾದ್ದು ಸಹಜ; ಅದಕ್ಕೆ ಮಾನವನ ಸನ್ನಿವೇಶ ಕಾರಣವಾಗುವುದಿಲ್ಲ, ವಿಕಾಸಕ್ಕೆ ಅವಕಾಶವಿರುವುದಿಲ್ಲ. ಧಾರ್ಮಿಕ ಕಟ್ಟುಪಾಡುಗಳ ನಿರ್ಬಂಧದಲ್ಲಿ ಸಮಾಜವಿರುವುದಾದರೆ ಅದಕ್ಕೆ ಚಲನೆ ಇಲ್ಲದಂತಾಗಿ ಸ್ಥಗಿತತೆ ಆವರಿಸುತ್ತದೆ. ಇಂತಹ ಪರಿಸ್ಥಿತಿಯ ಆತಂಕವಿಲ್ಲ. ಏಕೆಂದರೆ, ಸಮಾಜವು ಸ್ಥಗಿತವಲ್ಲ ಹಾಗೂ ಸಮಾಜದ ಬಹುರೂಪಿ ಸಂಬಂಧಗಳನ್ನು ಪ್ರತಿಪಾದಿಸುವ ಧರ್ಮವೂ

ಸ್ಥಗಿತವಲ್ಲ. ವಿಶ್ವದಲ್ಲಿ ಧರ್ಮವು ಏಕಪ್ರಕಾರವಾಗಿಲ್ಲ, ಬೇರೆಬೇರೆ ಹಂತಗಳಲ್ಲಿ ಆಯಾ ಕಾಲದ ಹಿನ್ನೆಲೆಗಳಿಗನುಸಾರವಾಗಿ ಧರ್ಮವು ವಿವಿಧ ರೂಪಗಳನ್ನು ತಳೆದಿರುವುದು ಇದಕ್ಕೆ ನಿದರ್ಶನವಾಗಿದೆ.

ಸ್ವತಃ ಶ್ರುತಿವಾಕ್ಯಗಳು ಕೂಡ ಅವುಗಳು ಹುಟ್ಟಿಕೊಂಡ ಹಿನ್ನೆಲೆಗಳಿಂದ ಪ್ರಭಾವಿತರಾಗಿದ್ದರೆ ಆಶ್ಚರ್ಯವಿಲ್ಲ. ಉದಾಹರಣೆಗೆ ಆಡಂ ಮತ್ತು ಈವ್‌ರ ಕತೆಯನ್ನು ನೋಡಬಹುದು. ಕೆಟ್ಟದ್ದು ಎಂಬುದರ ಲವಲೇಶದ ಲೇಪವೂ ಇಲ್ಲದ ಭಗವಂತನಿಂದ ಸೃಷ್ಟಿಸಲ್ಪಟ್ಟ ಮಾನವನಲ್ಲಿ ಕೆಟ್ಟದ್ದು ಹೇಗೆ ಮನೆಮಾಡಿಕೊಂಡಿತು? ದಯಾಮಯನಾದ ಸೃಷ್ಟಿಕರ್ತನು ಒಳಿತು–ಕೆಡಕುಗಳನ್ನು ಒಟ್ಟೊಟ್ಟಾಗಿರಿಸಿ ಮಾನವನಿಗೇಕೆ ತೊಂದರೆಯುಂಟುಮಾಡಿದ? ಇದಕ್ಕೆ ಉತ್ತರವಾಗಿ ಕ್ರೈಸ್ತಧರ್ಮದ ಪುರಾಣ ಕಲ್ಪನೆಯು ಆಡಂ ಮತ್ತು ಈವರಿಗೆ ಜನ್ಮವಿತ್ತಿದೆ. ಅದು ಎಲ್ಲಿ ಮೊದಲಿಗೆ ವ್ಯಾಪಕವಾಗಿದ್ದಿತೋ ಅದೇ ಪ್ರದೇಶದಲ್ಲಿ ಇಸ್ಲಾಂ ಮತಧರ್ಮವು ಆವಿರ್ಭಾವವಾದ್ದರಿಂದ ಅದರ ಪುರಾಣಕಲ್ಪನೆಯಲ್ಲೂ ಆದಮು ಮತ್ತು ಈವ್ ಕಾಣಿಸಿಕೊಂಡಿದ್ದಾರೆ. ದಕ್ಷಿಣ ಅಮೇರಿಕಾದಲ್ಲಿ ಪ್ರಚಾರಕ್ಕೆ ಬಂದ ಪುರಾಣ ಕಲ್ಪನೆಗಳಲ್ಲಿ ಈ ಮೊದಲ ಮಾನವ ದಂಪತಿಗಳಿಗೆ ಸ್ಥಾನವಿಲ್ಲ! ಅಥವಾ ಭಾರತದಲ್ಲಿ ಕಾಣಿಸಿಕೊಂಡ ಮತಧರ್ಮಗಳಲ್ಲೂ ಅವರಿಗೆ ಸೂರಿಲ್ಲವೆಂಬುದನ್ನು ನೋಡಬಹುದು. ಈ ಧರ್ಮಗಳ ವಿವಿಧ ನಂಬಿಕೆಗಳು ಹೇಗೆ ಬೆಳೆದುವೆಂಬುದು ಬೇರೆ ಪ್ರಶ್ನೆ; ಅದನ್ನಿಲ್ಲಿ ಚರ್ಚಿಸುವುದು ಪ್ರಸ್ತುತವಲ್ಲ. ಕಾಲ ಮತ್ತು ಪ್ರದೇಶದ ಮಿತಿಗಳನ್ನು ಮೀರಿ ಮತಧರ್ಮಗಳು ನಿಂತಿಲ್ಲವೆಂಬುದು ಮಾತ್ರ ಇಲ್ಲಿಯ ಸೂಚನೆ.

ಇನ್ನೊಂದು ಉದಾಹರಣೆಯನ್ನು ನೋಡೋಣ: ಶಾಕ್ಯ ಬುಡಕಟ್ಟು ಕಾರಣಾಂತರಗಳಿಂದ ಒಡೆದು ಛಿದ್ರವಾಗುತ್ತಿದ್ದ ಕಾಲಕ್ಕೆ ಗೌತಮನು ಅದಕ್ಕೆ ಪ್ರತಿಕ್ರಿಯಿಸುವ ಪ್ರಕ್ರಿಯೆಯಲ್ಲಿ ಬುದ್ಧನಾದ. ಆಗ್ಗೆ ಪ್ರಚಲಿತವಾಗಿದ್ದ ಮತಧರ್ಮದ ನಂಬಿಕೆ ಮತ್ತು ಆಚರಣೆಗಳನ್ನು ಅವನು ಪ್ರಶ್ನಿಸಿ ಬೇರೊಂದು ಪರ್ಯಾಯ ಪಂಥದ ಹರಿಕಾರನಾದ. (ಇದೇ ಮಾತನ್ನು ಬಸವಣ್ಣನವರ ಬಗೆಗೂ ಹೇಳುವುದು ಸಮಂಜಸವಾಗಿದೆ.) ಬುದ್ಧನ ಕಾಲಕ್ಕೂ ಅಶೋಕನ ಕಾಲಕ್ಕೂ ಎರಡು ಶತಮಾನಗಳ ಅಂತರವಿದೆ. ಆ ಶತಮಾನಗಳಲ್ಲಿ ಬೌದ್ಧಮತವು ಎಷ್ಟು ವ್ಯಾಪಕವಾಗಿತ್ತು ಮತ್ತು ಪ್ರಭಾವಶಾಲಿಯಾಗಿತ್ತು? ಅಶೋಕನು ಆ ಮತವನ್ನು ಅವಲಂಬಿಸಿದ ನಂತರ ಅದಕ್ಕೆ ದೊರೆತ ಪ್ರಾಶಸ್ತ್ಯವನ್ನಂತೂ ಅವನಿಗೆ ಮುಂಚಿನ ಎರಡು ಶತಮಾನಗಳಲ್ಲಿ ನಾವು ಕಾಣುವುದಿಲ್ಲ. ಅಂದರೆ ಬೌದ್ಧಧರ್ಮವು ಜನರನ್ನು ರಂಜಿಸಲು ಅಶೋಕನು ಬರಬೇಕಾಯಿತು ಮತ್ತು ಅವನು ಆ ಮತವನ್ನು ತನ್ನದೆಂದು ಸ್ವೀಕರಿಸಬೇಕಾಯಿತು. ಅದಕ್ಕೆ ಮುಂಚೆ ಬುದ್ಧನ ದಾರ್ಶನಿಕ ದೃಷ್ಟಿಗೆ ಅಂತಸ್ಸತ್ವವಿರಲಿಲ್ಲವೆಂದು ಇದರಿಂದ ಊಹಿಸುವಂತಿಲ್ಲ. ಏಕೆಂದರೆ ಅಶೋಕನು ಹೊಸದಾಗಿ ಆ ಮತಕ್ಕೆ ಯಾವ ದಾರ್ಶನಿಕ ತತ್ತ್ವವನ್ನೂ ಸೇರಿಸಲಿಲ್ಲ.

ಈಗ ಇನ್ನೊಂದು ಪ್ರಶ್ನೆ ನಮ್ಮ ಮುಂದೆ ಬರುತ್ತದೆ: ಯುದ್ಧವೊಂದನ್ನು

ಪ್ರಾರಂಭಿಸುವ ಮೊದಲೇ ಯುದ್ಧದ ಭೀಕರತೆಯನ್ನು ಮನಗಂಡು ಯುದ್ಧದಿಂದ ಹಿಂದಗೆಯಬೇಕೆಂದು ಆರ್ಜುನನು ಬಯಸಿದ್ದನೆಂದು ಗೀತೆಯಲ್ಲಿ ಹೇಳಲಾಗಿದೆ. ಅದಕ್ಕೆ ಅವನ ಭಯವು ಕಾರಣವೋ ಬೇರೆಯವರ ಮೇಲಿನ ಕರುಣೆ ಕಾರಣವೋ ಎಂಬುದನ್ನು ಭಗವಾನ್ ಶ್ರೀಕೃಷ್ಣ ಅರಿತಿದ್ದಿರಬೇಕು. ಅಂತೂ ಅವನಿಗೆ ಉಪದೇಶ ನೀಡಿ ಯುದ್ಧಕ್ಕೆ ಅಣಿಗೊಳಿಸಿದ. ಸಾವೆಂಬುದೇ ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಿಂದ ವಿಚಲಿತರಾಗಬೇಕಿಲ್ಲ ಎಂಬುದು ಕೃಷ್ಣನ ಉಪದೇಶಸಾರ. ಆತ್ಮನು ನಿತ್ಯನಾದ್ದರಿಂದ ಸಾವು ಎಂಬುದಿಲ್ಲ. (ಸಾವು ಅಸತ್ಯವಾದ್ದರಿಂದ ಸಾಯಿಸುವ ಕ್ರಿಯೆಯಲ್ಲಿ ತೊಡಗದಿರುವುದು ಅರ್ಜುನನಿಗೆ ಶ್ರೇಯಸ್ಕರವಾಗಬೇಕಿತ್ತು; ಆದರೆ ಕೃಷ್ಣನ ಪ್ರಕಾರ ಅರ್ಜುನನ 'ಸ್ವಧರ್ಮ' ಸಾಯಿಸುವ ಕ್ರಿಯೆಯಲ್ಲಿ ತೊಡಗುವುದೇ ಅಗಿತ್ತು. "ಸ್ವಧರ್ಮೇ ನಿಧನಂ ಶ್ರೇಯಃ" ಆದ್ದರಿಂದ ಅರ್ಜುನ ಯುದ್ಧ ಮಾಡಬೇಕು).

ಅಶೋಕನ ಹೃದಯ ಅರ್ಜುನನ ಹೃದಯದಷ್ಟು ಮಾರ್ದವವಾದುದಲ್ಲ. ಆದ್ದರಿಂದ ಯುದ್ಧದ ಭೀಕರತೆಯು ಅವನಿಗೆ ತಿಳಿಯುವುದು ಯುದ್ಧ ಮುಗಿದ ನಂತರವೇ; ಯುದ್ಧದಲ್ಲಿ ವಿಜಯವನ್ನು ಸಾಧಿಸಿದ ನಂತರವೇ ಎಂದು ಹೇಳುವುದು ಇನ್ನೂ ಉಚಿತವಾದದ್ದು. ಕಳಿಂಗರು ಅವನನ್ನು ಸದೆಬಡಿದು ಅಟ್ಟಲು ಸಮರ್ಥರಾಗಿದ್ದಿದ್ದರೆ ಅಶೋಕನನ್ನು ಕರುಣೆಯು ಆವರಿಸುತ್ತಿತ್ತೋ, ಸೇಡಿನ ಭಾವನೆಯು ಆವರಿಸುತ್ತಿತ್ತೋ ಹೇಗೆ ಹೇಳುವುದು! ಯುದ್ಧದ ಮೊದಲ ದಿನದಂದು ಸಂಭವಿಸಿದ್ದ ಸಾವುನೋವುಗಳನ್ನು ಆಶೋಕನು ನೋಡಲಿಲ್ಲವೇ? ಹಾಗಿದ್ದರೆ ಅಂದೇ ಯುದ್ಧವನ್ನು ನಿಲ್ಲಿಸುವ ಘೋಷಣೆಯನ್ನೇಕೆ ಅವನು ಮೊಳಗಿಸಲಿಲ್ಲ? ಹಾಗೇನಾದರೂ ಅವನು ಮಾಡಿದ್ದಿದ್ದರೆ ಅಶೋಕನ ಶಿಲಾಶಾಸನಗಳು ಕಳಿಂಗದ ಭುವನೇಶ್ವರದ ಬಳಿ ಇರುತ್ತಿರಲಿಲ್ಲ, ಬಿಹಾರದ ಪಾಟ್ನಾದ (ಅಂದರೆ, ಮಗಧರ ಪಾಟಲೀಪುತ್ರದ) ಬಳಿ ಇರಬೇಕಾಗುತ್ತಿತು. ಇನ್ನೂ ಒಂದು ವಿಶೇಷವಿದೆ: ಕಳಿಂಗವನ್ನು ಗೆದ್ದಾದ ಮೇಲೆ ಅಶೋಕನ ಚಕ್ರಾಧಿಪತ್ಯದ ವಿಸ್ತರಣೆ ನಿಂತಿಹೋಯಿತೆ? ಅಥವಾ ಅವನ ಸೈನ್ಯವನ್ನು ಚದುರಿಸಿಹಾಕಲಾಯಿತೆ?

ಇದಕ್ಕೆ ಎರಡು ರೀತಿಯ ಉತ್ತರ ಸಾಧ್ಯವಿದೆ:(ಅ) ಬೌದ್ಧಮತದ ತತ್ತ್ವಗಳ ಬಲದಿಂದ ವಿಸ್ತರಣೆ ಮುಂದುವರಿಯಿತು; ಅಥವಾ, (ಆ)ಕಳಿಂಗದ ಅಪಜಯವನ್ನು ಕಂಡಿದ್ದವರೆಲ್ಲಾ ಅಶೋಕನಿಗೆ ತಾವಾಗಿಯೇ ಶರಣಾಗತರಾದರು.

ಇವುಗಳಲ್ಲಿ ಮೊದಲನೆಯದು ನಿಜವಾದರೆ ನಾವು ಇನ್ನೊಂದು ತೀರ್ಮಾನಕ್ಕೆ ಬರಬಹುದೇನೋ. ಅದೇನೆಂದರೆ, ಅಶೋಕನಿಗೆ ತನ್ನ ಅಗಾಧ ಸೈನ್ಯವನ್ನು ಪೋಷಿಸಿ ಅದರ ಬಲದಿಂದ ರಾಜ್ಯವನ್ನು ವಿಸ್ತರಿಸಿಕೊಳ್ಳುವುದಕ್ಕಿಂತಲೂ ಮತಧರ್ಮದ ಬಲದಿಂದ ಅದನ್ನು ಆಗುಮಾಡಿಕೊಳ್ಳುವುದು ಕಡಿಮೆ ವೆಚ್ಚ ಮತ್ತು ಶ್ರಮಗಳಿಂದ ಸಾಧ್ಯವಾಗುವಂತಿತ್ತು. ಭುವನೇಶ್ವರದ ಬಳಿಯ ದೊಡ್ಡ ಬಂಡೆಗಳ ಮೇಲೆ ಕೆತ್ತಲಾಗಿರುವ ಶಾಸನಗಳನ್ನು ಓದಲು ಕಷ್ಟವಾಗುತ್ತದೆ. ಆ ಲಿಪಿ ಬಲ್ಲವರು ಸಹ ಅಷ್ಟು ಎತ್ತರದಲ್ಲಿರುವುದನ್ನು ಓದುವುದು ಕಷ್ಟವೆಂದು ಅನುಭವದಿಂದ ತಿಳಿಸಿದ್ದಾರೆ.

ಅಶೋಕನ ಕಾಲದಲ್ಲಿ ಜನಸಾಮಾನ್ಯರೆಲ್ಲಾ ಅಕ್ಷರಸ್ಥರಾಗಿದ್ದರೆಂದು ವಾದಿಸುವುದು ಸಾಧ್ಯವಿಲ್ಲ. ಶಾಸನಗಳನ್ನೇನೋ ಜನರ ಆಡುಭಾಷೆಯಾದ ಪಾಲಿಯಲ್ಲಿ ಬರೆಯಲಾಗಿದೆ; ಆದರೆ ಆ ಭಾಷೆಯನ್ನು ತಿಳಿದಿದ್ದವರಿಗೆ ಓದಲು ಬಾರದಿರುತ್ತಿದ್ದರೆ ಶಾಸನಗಳ ಪ್ರಯೋಜನವೇನಾಗಿದ್ದಿರಬಹುದು? ಅದರಲ್ಲಿದ್ದ ವಿಚಾರಗಳು ಬಾಯಿಂದ ಬಾಯಿಗೆ ಮುಟ್ಟಲು ಶಾಸನಗಳು ಪ್ರೇರಣೆ ನೀಡಿದ್ದುವೆಂದು ಭಾವಿಸಬೇಕಾಗಿದೆ.

ಇದೆಲ್ಲದರ ಸಾರಾಂಶವಿಷ್ಟೆ: ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿದಾಗ ಅದು ವೈಯಕ್ತಿಕ ನೆಲೆಯಲ್ಲಿ ಮಾತ್ರವೇ ನಿಲ್ಲದೆ ಅದಕ್ಕೊಂದು ಸಾರ್ವಜನಿಕ ಆಯಾಮವನ್ನು ಕೊಡಲಾಯಿತು. ಹಾಗೆ ಮಾಡಿದಾಗ ಕೇವಲ ಮತಧರ್ಮದ ಮೌಲ್ಯಗಳ ಪ್ರಚಾರವಷ್ಟೇ ಉದ್ದೇಶವಾಗಿರಲಿಲ್ಲ. ಅಪೇಕ್ಷಿತವೋ, ಅಲ್ಲವೋ ಅಂತೂ ಮತಧರ್ಮವು ಒಂದು ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸುವ ಸನ್ನಿವೇಶ ಒದಗಿ ಬಂದಿತ್ತು. ನಮ್ಮ ಚರಿತ್ರೆಯಲ್ಲಿ ಇಂತಹ ಪ್ರಸಂಗಗಳಲ್ಲಿ ಇದು ಮೊದಲನೆಯದೋ ಅಲ್ಲವೋ ನಿಖರವಾಗಿ ಹೇಳಬರುವುದಿಲ್ಲ. ಆದರೆ ಅದು ಕಡೆಯದಂತೂ ಅಲ್ಲ. ನಂತರದ ಶತಮಾನಗಳಲ್ಲಿ ಜೈನ, ಶೈವ, ವೈಷ್ಣವ ಇತ್ಯಾದಿ ಮತೀಯ ಧಾರ್ಮಿಕ ಪಂಥಗಳು ತಮ್ಮ ತತ್ವಗಳ ಬಲವನ್ನು ರಾಜಕೀಯ ಆಸಕ್ತಿಗಳ ವರ್ಧನೆಗೆ ಬಳಸಿರುವುದು ಸ್ಪಷ್ಟವಾಗಿದೆ. ಯುರೋಪಿನಲ್ಲಿ ಮತೀಯ ಘರ್ಷಣೆಗಳು ಮೂಲತಃ ಕ್ರೈಸ್ತಧರ್ಮದ ಪ್ರಾಬಲ್ಯವನ್ನು ಸಾರಲು ಹಾಗೂ ಇಸ್ಲಾಮಿನ ಪ್ರಭಾವವನ್ನು ತಡೆಗಟ್ಟಲು ನಡೆದಿದ್ದವು. ನಮ್ಮಲ್ಲಿ ಈ ರೀತಿಯ ಘರ್ಷಣೆಗಳು ಅನೇಕ ಶತಮಾನಗಳಲ್ಲಿ ನಡೆದಿವೆ. ಅವುಗಳ ಪರಿಣಾಮವಾಗಿ ಜೈನ ಬಸದಿಗಳು ಶಿವಾಲಯಗಳಾಗಿವೆ. ಶಿವಾಲಯಗಳು ವಿಷ್ಣುವಿನ ದೇವಸ್ಥಾನಗಳಾಗಿವೆ ಮತ್ತು ಈ ಪರಿಪಾಠ ವಿವಿಧರೂಪಗಳಲ್ಲಿ ಜಾರಿಗೆ ಬಂದಿದೆ. ಒಬ್ಬ ರಾಜನು ಯಾವುದೋ ಒಂದು ಮತಧರ್ಮದವನಾದರೆ ಆ ಮತಧರ್ಮಕ್ಕೆ ಪ್ರಾಶಸ್ತ್ಯ ಸಿಗುವುದು, ಆಮೇಲೆ ಅದು ಬದಲಾಗುವುದು ಇದೆಲ್ಲಾ ಅನೂಚಾನವಾಗಿ ನಡೆದುಬಂದಿದೆ. ರಾಜನು ಆಯ್ಕೆ ಮಾಡಿಕೊಂಡ ಮತಧರ್ಮದಿಂದಾಗಿ ಜನಸಾಮಾನ್ಯರಲ್ಲಿ ಆ ಮತದ ಬಗ್ಗೆ ಆಸಕ್ತಿ ವಿಶೇಷವಾಗಿ ಕೆರಳುತ್ತಿತ್ತೆಂದು ಹೇಳಲಾಗುವುದಿಲ್ಲ. ಆದಾಗ್ಯೂ ಮತಧರ್ಮವು ರಾಜಕೀಯ ಉದ್ದೇಶಗಳಿಗೆ ಸಾಧನವಾಗಿದ್ದುದಂತೂ ನಿಜ. ನಮ್ಮ ರಾಷ್ಟ್ರದಲ್ಲಿ ೧೯೯೨ರ ಡಿಸೆಂಬರ್ ೬ರಂದು ಜರುಗಿದ ಘಟನೆಗೆ ಇತಿಹಾಸದ ಪುಟಗಳಲ್ಲಿ ಬೇರೆಷ್ಟೋ ಸಮಾನ ಸಂಗತಿಗಳಿವೆಯೆಂದು ಇದರರ್ಥ. ಹಿಂದೆ ಹಾಗಾಗಿತ್ತು. ಆದ್ದರಿಂದ ಇಂದೂ ಹಾಗಾಗಲಿ ಎಂಬುದು ಇದರ ಸೂಚನೆಯಲ್ಲ, ಹೀಗೆ ಆಗುತ್ತಲೇ ಇರಬಹುದಾದ ವಿದ್ಯಮಾನವನ್ನು ತಡೆಗಟ್ಟಲು ಸಮಕಾಲೀನ ಸಮಾಜವು ಕರೆ ಕೊಡುತ್ತದೆ; ಅದಕ್ಕೆ ಓಗೊಡದಿದ್ದರೆ ಧರ್ಮಕಾರಣದ ರಾಜಕಾರಣವು ಬಹುಬೇಗನೆ ಉಲ್ಬಣಗೊಂಡು ಬೇರೆಲ್ಲ ಸಾಮಾಜಿಕ ಅಗತ್ಯಗಳೂ ಆದ್ಯತೆಯನ್ನು ಕಳೆದುಕೊಳ್ಳುವ ದುರಂತ ನಮ್ಮ ಮುಂದಿದೆ. ವಿಕಾಸ ಹೊಂದುವ ಸಮಾಜದಲ್ಲಿ ಬೇರೆಲ್ಲ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ಸ್ವಾಗತಿಸುವ ಜನ ಮತಧರ್ಮದ ಜಡ್ಡು

ಸಂಪ್ರದಾಯಗಳು ಮಾತ್ರ ಬದಲಾಗದೆ ಹಾಗೇ ಉಳಿಯಬೇಕೆಂದು ಆಗ್ರಹಪಡಿಸುವುದು ಸೋಜಿಗದ ವಿಷಯ.

ವಸಾಹತುಶಾಹಿಯು ಕಳೆದ ಎರಡು ಶತಮಾನಗಳಲ್ಲಿ ಭಯಂಕರವಾಗಿ ತನ್ನ ದರ್ಪವನ್ನು ಮೆರೆದಿದೆ ಮತ್ತು ಅದು ಅಂತ್ಯಗೊಳ್ಳುವ ಸಂದರ್ಭ ಬಂದಾಗ ಏನಾದರೊಂದು ನೆಪವೊಡ್ಡಿ ಹೊಸ ದೌರ್ಜನ್ಯದ ವಿಷಬೀಜವನ್ನು ಬಿತ್ತಿ ನಿರ್ಗಮಿಸಿದೆ. ಭಾರತ, ಕಾಂಗೋ, ನೈಜೀರಿಯಾ ಇತ್ಯಾದಿಗಳು ಈಚಿನ ದಶಕಗಳ ಉದಾಹರಣೆಗಳು. ಇಲ್ಲೆಲ್ಲಾ ಆಯಾ ರಾಷ್ಟ್ರಗಳನ್ನು ಮತೀಯ ಅಥವಾ ಬುಡಕಟ್ಟುಗಳ ಭಿನ್ನತೆಯ ಆಧಾರದ ಮೇಲೆ ವಿಭಜನೆ ಮಾಡಿರುವುದು ಇಲ್ಲವೇ ಮಾಡಯತ್ನಿಸಿದ್ದು ಗೋಚರಿಸುತ್ತದೆ. ಐರ್ಲೆಂಡಿನ ಸನ್ನಿವೇಶವು ಇವೆಲ್ಲದರ ಪೂರ್ವದಲ್ಲೇ ಸೃಷ್ಟಿಯಾಗಿತ್ತು. ಆ ದೇಶವನ್ನು ಇಂಗ್ಲೆಂಡ್ ಆಕ್ರಮಿಸಿದ್ದು ಸುಮಾರು ಮೂರು ಶತಮಾನಗಳ ಹಿಂದೆ. ರಾಜರ ಆಳ್ವಿಕೆಗೆ ವಿರುದ್ಧವಾಗಿ ಜನರ ಆಳ್ವಿಕೆಯನ್ನು ಸ್ಥಾಪಿಸಲು ತನ್ನ ಇಂಗ್ಲೆಂಡಿನಲ್ಲಿ ಹೋರಾಡಿದ್ದ ಆಲಿವರ್ ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾತ್ರ ಅಂತಹ ಪ್ರಕ್ರಿಯೆಯ ಪರವಾಗಿರಲಿಲ್ಲ. ಅಲ್ಲಿ ಇಂಗ್ಲೆಂಡಿನ ದುರಾಕ್ರಮಣವನ್ನು ಬೆಂಬಲಿಸಿದ್ದೇ ಅಲ್ಲದೆ ತಾನೇ ಸ್ವತಃ ಅದನ್ನು ಇಮ್ಮಡಿಗೊಳಿಸಿದವನು ಅವನು. ಅತಿ ದೈವಭಕ್ತನೂ ವೈಯಕ್ತಿಕ ಸ್ವಾತಂತ್ರ್ಯದ ಸಮರ್ಥಕನೂ ಆಗಿದ್ದ ಜಾನ್ ಮಿಲ್ಟನ್ ಈ ಆಕ್ರಮಣವನ್ನೂ ದೂಷಿಸಲಿಲ್ಲ; ಇನ್ನೊಬ್ಬ ಕವಿ ಆಂಡ್ರ್ಯೂ ಮಾರ್ವೆಲ್ ಎಂಬುವವನು ಈ ಆಕ್ರಮಣವನ್ನು ಶ್ಲಾಘಿಸಿ ಕವನವೊಂದನ್ನು ಬರೆದ! ಆ ಕವನವನ್ನು ಇಂದಿಗೂ ನಮ್ಮ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಅಭಿಮಾನದಿಂದ ವ್ಯಾಸಂಗ ಮಾಡಲಾಗುತ್ತದೆ. ಆ ಮಾತಂತಿರಲಿ, ಕ್ರಾಮ್‌ವೆಲ್ ಐರ್ಲೆಂಡಿನಲ್ಲಿ ಮಾಡಿದ್ದೇನು? ಸಂಪತ್ತನ್ನು ಸೂರೆ ಮಾಡುವುದು, ಜನರನ್ನು ಪರಾಧೀನಗೊಳಿಸುವುದು ಮತ್ತು ಅವರ ಮತಧರ್ಮವನ್ನು ಹೀಯಾಳಿಸುವುದು. ಐರ್ಲೆಂಡ್ ಗಣರಾಜ್ಯದ ಕಾರ್ಕ್ ನಗರದ ಬಳಿ ಪುರಾತನವಾದ ಒಂದು ದೊಡ್ಡ ಮನೆ ಇದೆ. ಅದರ ಸುತ್ತಲೂ ಕೋಟೆ, ಕಂದಕಗಳಿವೆ. ಅದನ್ನು ಬ್ಲಾರ್ನೆ ಕೋಟೆಮನೆಯೆಂದು ಕರೆಯುತ್ತಾರೆ. ಅದರ ಭಾಗವಾಗಿ ಒಂದು ಸುಂದರವಾದ ಚರ್ಚ್ ಇದೆ. ಐರ್ಲೆಂಡಿನ ಆಕ್ರಮಣ ನಡೆಸಿದ ಕ್ರಾಮ್‌ವೆಲ್ ಈ ತಾಣವನ್ನು ತನ್ನ ಸೈನ್ಯದ ಕುದುರೆಗಳಿಗೆ ಲಾಯವನ್ನಾಗಿ ಬಳಸಿದ್ದ. ಹಾಗೆಂದು ತಿಳಿಸುವ ಫಲಕವು ಆ ಚರ್ಚಿನ ಬಾಗಿಲನ್ನು ಈಗಲೂ ಅಲಂಕರಿಸಿದೆ! ಕ್ರಾಮ್‌ವೆಲ್ ಕೂಡ ಒಬ್ಬ ಕ್ರೈಸ್ತ ಮತೀಯ. ಆದರೆ ಅವನೊಬ್ಬ ಪ್ರಾಟೆಸ್ಟೆಂಟ್ ಆಗಿದ್ದ. ಆದ್ದರಿಂದ ರೋಮನ್ ಕ್ಯಾಥೋಲಿಕ್ ಬಣಕ್ಕೆ ಸೇರಿದ್ದ ಐರ್ಲೆಂಡಿನ ಒಂದು ಚರ್ಚನ್ನು ಲಾಯವನ್ನಾಗಿ ಪರಿವರ್ತಿಸಲು ಅವನು ಅಳುಕಲಿಲ್ಲ. ಅಲ್ಲೂ ಒಂದು ಕ್ರಿಸ್ತನ ಶಿಲುಬೆಗೆ ಸ್ಥಾನವಿತ್ತೆಂಬುದು ಅವನಿಗೆ ಗೌಣವಾಗಿ ಕಂಡಿತು. ಮತಧರ್ಮದ ಅಮಲು ಎಷ್ಟು ಗಾಢವಾಗಿರಬಹುದೆಂಬುದಕ್ಕೆ ಇದೊಂದು ನಿದರ್ಶನ, ಅಷ್ಟೆ. ಮಸೀದಿ ಮತ್ತು ಮನಸ್ಸುಗಳನ್ನು ಭಗ್ನಗೊಳಿಸುವ ದುಷ್ಟತನ ಈ ಪರಂಪರೆಗೆ ಸೇರುತ್ತದೆ.

ಗಾಂಧೀಜಿಯವರು ತಮ್ಮ ಪ್ರಾರಂಭಿಕ ದೆಸೆಯಲ್ಲಿ ಮೈಗೂಡಿಸಿಕೊಂಡ ಕೆಲವು ಮಾರ್ಗಗಳನ್ನಿಲ್ಲಿ ನೆನೆಯಬೇಕು. ಅವರಿಗೆ ಭಾವನಾತ್ಮಕ ಪರಿಹಾರಗಳು ರುಚಿಸಲಿಲ್ಲ. ಸುಲಭದ ಡೊಂಕು ಹಾದಿಗಳು ಆಕರ್ಷಕವಾಗಲಿಲ್ಲ. ಚಂಪಾರಣ್ಯದ ಗೇಣಿದಾರರ ಮೇಲೆ ಹೇರಲಾಗಿದ್ದ ನೀಲಿ ಬೆಳೆಯ ಕಡ್ಡಾಯದತ್ತ ಅವರು ಗಮನ ಹರಿಸಿ ಹಲವಾರು ತಿಂಗಳುಗಳ ಕಾಲ ಅಲ್ಲಿಯ ಹಳ್ಳಿಗಳಲ್ಲಿ ತಂಗಿದ್ದು ಆರೋಗ್ಯ, ಶಿಕ್ಷಣ ಇತ್ಯಾದಿಗಳ ಬಗ್ಗೆ ವಿಶೇಷ ಆಸ್ಥೆ ವಹಿಸಿದರು. ನಂತರ ಗುಜರಾತಿನ ಖೇಡಾದಲ್ಲಿ ರೈತರಿಂದ ಬರಗಾಲದಲ್ಲಿ ಕಂದಾಯ ವಸೂಲು ಮಾಡುತ್ತಿದ್ದುದರ ವಿರುದ್ಧ ಹೋರಾಟವನ್ನು ಅಣಿಗೊಳಿಸಿದರು. ಆಮೇಲೆ ಅಹಮ್ಮದಾಬಾದಿನಲ್ಲಿ ಗಿರಣಿ ಕಾರ್ಮಿಕರಿಗೆ ನೀಡಲಾಗುತ್ತಿದ್ದ ಪ್ಲೇಗ್ ಭತ್ಯೆಯನ್ನು ಹಿಂತೆಗೆದುಕೊಂಡಾಗ ಅದಕ್ಕೆ ಸರಿದೂಗುವಂತಹ ವೇತನದ ಹೆಚ್ಚಳಕ್ಕಾಗಿ ಸಂಪು ಹೂಡುವುದನ್ನು ಸಮರ್ಥಿಸಿ ಕಣಕ್ಕಿಳಿದರು. ಹೀಗೆಯೇ ಮುಂದುವರಿದಿತ್ತು ಅವರ ಹೋರಾಟ ಪದ್ಧತಿ. ಒಂದು ಕಡೆ ವಸಾಹತು ದೌರ್ಜನ್ಯದ ವಿರುದ್ಧ ಸೆಣಸಾಟ, ಇನ್ನೊಂದು ಕಡೆ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕಲು ಕ್ರಿಯಾಶೀಲ ಕಾರ್ಯಕ್ರಮಗಳು – ಹೀಗೆ ಸಾಗಿತ್ತು ಅವರ ಚಿಂತನೆ ಮತ್ತು ಕ್ರಿಯೆ. ಜನಸಾಮಾನ್ಯರ ಸಮಸ್ಯೆಗಳು ಹಾಗೂ ಹೋರಾಟಗಳು ಗಾಂಧೀಜಿಯವರಿಗೆ ರಾಜಕೀಯ ಪ್ರಶ್ನೆಗಳಾದವು, ಪರಿಹಾರಕ್ಕೆ ಸಾಧನಗಳಾದುವು. ಸಾರ್ವಜನಿಕರ ಮನಸೆಳೆಯಲು ಅವರ ಅವ್ಯಕ್ತ ಭಾವನೆಗಳ ಉದ್ರೇಕವನ್ನು ತಮ್ಮ ಅಸ್ತ್ರವನ್ನಾಗಿಸಿಕೊಳ್ಳಬಹುದೆಂಬ ಯೋಚನೆಯೇ ಅವರಿಗೆ ಬರಲಿಲ್ಲ. ಎಷ್ಟೇ ದೀರ್ಘವಾದ ಹೋರಾಟವಾದರೂ ಸಹನೆಯನ್ನು ಕಳೆದುಕೊಳ್ಳದೆ ಕೆಲವು ಆರೋಗ್ಯಕರ ನಿಯಮಗಳಿಗೆ ಬದ್ಧರಾಗಿರುವುದು ಅವರ ಕ್ರಮವಾಗಿತ್ತು.

ಅವರ ನಂತರದ ಕಾಲದಲ್ಲಿ ಅಧಿಕಾರ ವಹಿಸಿಕೊಂಡ ಕೆಲವರು ಹಾಗೂ ಅಧಿಕಾರಕ್ಕೆ ಹಾತೊರೆದ ಕೆಲವರು ಅಷ್ಟೊಂದು ಸಹನೆಯನ್ನಾಗಲಿ, ಹೋರಾಟದ ನಿಯಮಗಳನ್ನಾಗಲಿ, ಸಾರ್ವಜನಿಕರ ಐಕ್ಯತೆ ಮತ್ತು ಹಿತವನ್ನಾಗಲಿ ಪ್ರಮುಖ ಅಂಶಗಳೆಂದು ಬಗೆಯದೆ ಬೇಗನೆ ಸುಲಭವಾಗಿ ಎತ್ತರಕ್ಕೇರಲು ಅಥವಾ ದೆಹಲಿಯ ಸಿಂಹಾಸನವನ್ನೇರಲು ಉತ್ಸುಕರಾದರು. ಸಾರ್ವಜನಿಕ ಸಂಪತ್ತನ್ನು ಖಾಸಗಿ ಅನುಭೋಗಕ್ಕೆ ಪರಿವರ್ತಿಸಿಕೊಳ್ಳುವುದು ಅಧಿಕಾರದಲ್ಲಿದ್ದಾಗ ಸಾಧ್ಯವೆಂಬುದನ್ನು ಅರಿತ ಮಂದಿ ಹೇಗಾದರೂ ಅದನ್ನು ಪಡೆಯಬೇಕೆಂಬ ಒಂದೇ ಉದ್ದೇಶದ ದಾಸರಾಗಿ ಎಲ್ಲ ಪ್ರಜಾಪ್ರಭುತ್ವವಾದಿ ನಿಯಮಗಳನ್ನು ಗಾಳಿಗೆ ತೂರಲು ಸಿದ್ಧರಾದರು. "ನೀನ್ಯಾಕೋ ನಿನ್ನ ಹಂಗ್ಯಾಕೋ ನಿನ್ನ ನಾಮದ ಬಲವೊಂದಿದ್ದರೆ ಸಾಕೋ" ಎನ್ನುವುದು ಅವರ ಮಂತ್ರ. ಅದು ರಾಮನ ನಾಮವಾಗಬಹುದು, ಗಾಂಧೀಜಿಯವರದಾಗಬಹುದು, ಜಾತಿಕೋಮುಗಳದ್ದಾಗಬಹುದು, ಬಸವ–ಅಂಬೇಡ್ಕರರದಾಗಬಹುದು, 'ಗರೀಬಿ' ಜನರದ್ದಾಗಬಹುದು, ಸಮಗ್ರ ಕ್ರಾಂತಿಯದೂ ಆಗಬಹುದು. ಇವುಗಳ ಪೈಕಿ ಮತಧರ್ಮದ ಭಾವನೆಯನ್ನು ಕೆರಳಿಸುವುದು ಭಾರಿ ರಾಜಕೀಯ ಸರಕಾಗಿ ಪರಿಣಮಿಸಿರುವುದು ಎಲ್ಲರಿಗೂ ಅನುಭವಕ್ಕೆ ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಸಾಹತು ಯಜಮಾನನು ಅನುಸರಿಸಿದ ಕುತಂತ್ರವನ್ನು

ಸ್ವಾತಂತ್ರ್ಯಾನಂತರದಲ್ಲಿ ನಮ್ಮ ಕೆಲವು ರಾಜಕೀಯ ಮುತ್ಸದ್ದಿಗಳು ಅನುಸರಿಸಲು ಹೊರಟಿದ್ದು ಈಗ ಒಂದು ಜ್ವಾಲೆಯಾಗಿ ಹಬ್ಬಿದೆ. ರಾಜಕೀಯವೆಂದರೆ ಸಾಮಾಜಿಕ–ಆರ್ಥಿಕ ಸಿದ್ಧಾಂತಗಳ ಬುನಾದಿಯ ಮೇಲೆ ಇಡೀ ಸಮುದಾಯದ ಏಳಿಗೆಗಾಗಿ ಕೆಲವು ಕಟ್ಟುನಿಟ್ಟಾದ ನೀತಿಗಳನ್ನು ಪ್ರತಿಪಾದಿಸಿ ಅವನ್ನು ಕಾರ್ಯತಃ ಆಗುಮಾಡುವ ಸಂಗ್ರಾಮ ಎಂಬ ಮೂಲತತ್ವವನ್ನು ಪರಿತ್ಯಜಿಸಿ ಜನರನ್ನು ವಿಭಾಗಗಳನ್ನಾಗಿ ಪ್ರತ್ಯೇಕಗೊಳಿಸುವುದು, ಅವರನ್ನು ದಿಕ್ಕು ತಪ್ಪಿಸಿ ಭಾವೋದ್ರೇಕಗಳಿಗೆ ಗುರಿ ಮಾಡುವುದು ಮತ್ತು ಅವರ ಮೇಲೆ ಸವಾರಿ ಮಾಡುತ್ತಾ ಅಧಿಕಾರಕ್ಕೇರುವುದು ಗಣನೆಗೆ ಬಂದಿದೆ. ಇದು ಕ್ಷುದ್ರ ರಾಜಕೀಯ, ಜನವಿರೋಧಿ ರಾಜಕೀಯ, ಸಂಸ್ಕೃತಿ ವಿರೋಧಿ ರಾಜಕೀಯ ಮತ್ತು ದೇಶದ್ರೋಹೀ ರಾಜಕೀಯ. ಇದಕ್ಕೂ ಮತಧರ್ಮದ ಮೌಲ್ಯಗಳಿಗೂ ಅರ್ಥಾತ್ ಸಂಬಂಧವಿಲ್ಲ; ಆದರೆ ಅದರ ಹೆಸರಿನಲ್ಲಿ ಇದೆಲ್ಲಾ ಜರುಗುತ್ತದೆ.

ಒಂದೆರಡು ಚಿಕ್ಕ ಉದಾಹರಣೆಗಳನ್ನು ನೋಡೋಣ: (ಅ) ಸಾರ್ವಜನಿಕ ಆಸ್ತಿಯನ್ನು ಕಬಳಿಸಲು ಚರಂಡಿಯ ಹಾಸುಗಲ್ಲುಗಳ ಮೇಲೆ ಗಣೇಶನ ಗುಡಿಯ ನಿರ್ಮಾಣ ಮತ್ತು ಅದಕ್ಕೆ ಆತುಗೊಂಡಂತೆ ಮೂರು ಅಂತಸ್ತುಗಳ ಭವ್ಯ ಕಟ್ಟಡ ತಲೆಯೆತ್ತುವುದು. ಗಣೇಶನನ್ನು ಮುಂದಿಟ್ಟುಕೊಂಡು ನಗರಪಾಲಿಕೆಯ ಆಸ್ತಿಯನ್ನು ಸ್ವಕೀಯವಾಗಿಸಿಕೊಳ್ಳುವುದು ಇಲ್ಲಿಯ ನಿಜವಾದ ಉದ್ದೇಶ. ಯಾವ ನಾಗರಿಕ ನಿಯಮವೂ ಇಂತಹ ಚೌರ್ಯವನ್ನು ಸಮರ್ಥಿಸುವುದಿಲ್ಲ. ವಿಪರ್ಯಾಸವೆಂದರೆ ಅದನ್ನು ಮಾಡಿದವರು ಸಂಭಾವಿತರಂತೆ ಕಾಣಿಸಿಕೊಳ್ಳುತ್ತಾರೆ ಮತ್ತು ಅವರ ಕ್ರಿಯೆಗೆ ಬೇರೆ 'ನಾಗರಿಕರು', ಅಂಗಡಿ ಮಾಲೀಕರು ಮತ್ತು ಮೇಲಧಿಕಾರಿಗಳು ಬೆಂಬಲ ನೀಡುತ್ತಾರೆ. ಮತಧರ್ಮದ ಸಂಕೇತಗಳಲ್ಲಿ ಒಂದಾದ ಗಣೇಶನನ್ನು ಇದಕ್ಕಿಂತಲೂ ಕೆಟ್ಟ ಮುಖವಾಡವನ್ನಾಗಿ ಮಾಡಿಕೊಳ್ಳಬಹುದಾದ ರಾಜಕೀಯ ಇನ್ನಾವುದಿದೆಯೋ ತಿಳಿಯುವುದಿಲ್ಲ. (ಆ) ಯಾವುದೂ ಜನ್ಮಮಾತ್ರದಿಂದಲೇ ಸಿದ್ಧಿಸುವುದಿಲ್ಲವೆಂಬ ಧೋರಣೆಯನ್ನು ಕಾರ್ಯತಃ ತೋರಿಸಿದ ಬಸವಣ್ಣ ತನ್ನನ್ನು ಅತ್ಯಂತ ಕೆಳಜಾತಿಗಳ ಜನರೊಂದಿಗೆ ಗುರುತಿಸಿಕೊಳ್ಳುತ್ತಾನೆ. ಅವರು ಆ ಜಾತಿಗಳಿಗೆ ಸೇರಿದ್ದು ಅಪರಾಧವಲ್ಲ, ಅವರೂ ಶ್ರೇಷ್ಠರೇ, ಅವರೂ ಸುಸಂಸ್ಕೃತರೇ ಎಂಬ ಸಾಮಾಜಿಕ ಸಮಾನತೆಗಾಗಿ ಹಂಬಲಿಸಿ ದುಡಿದವರು, ಅವರೊಡನೆ ಸಮೀಕರಿಸಿಕೊಂಡವರು ಬಸವಣ್ಣನವರು. ಅದನ್ನೆಲ್ಲ ಗಾಳಿಗೆ ತೂರಿ ಉಗ್ರವಾದ ನಡತೆಯನ್ನು ತೋರಿಸುವ ಅನೇಕರು ಅವರ ಅನುಯಾಯಿಗಳೆಂದು ಕರೆದುಕೊಳ್ಳುವ ಪ್ರಹಸನ ನಮ್ಮ ನಡುವೆ ಇದೆ. "ಧರ್ಮಕಾರಣವನ್ನು ಬರೆದ ಅವನನ್ನು ಇನ್ನೂ ಬದುಕಗೊಡಲಾಗಿದೆಯೇ" ಎಂದು ಗುಡುಗುವ ಶಾಸಕರು ಸಹ ನಮ್ಮಲ್ಲಿದ್ದಾರೆ. ಬಸವಣ್ಣನವರ ಸೌಜನ್ಯಕ್ಕೂ ಈ ಶಾಸಕರ ಆರ್ಭಟಕ್ಕೂ ಎಲ್ಲಿಯ ಸಂಬಂಧ! ಮತಧರ್ಮವನ್ನು ಅಹಿತಕರ ರಾಜಕೀಯಕ್ಕೆ ಅಸ್ತ್ರವನ್ನಾಗಿಸಿಕೊಳ್ಳುವ ವೈಪರೀತ್ಯ ಇದರಲ್ಲಿದೆ. (ಇ) ಒಂದು ಇಂಗ್ಲಿಷ್ ವಾರಪತ್ರಿಕೆಯ ಪುರವಣಿಯಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಕತೆ ಪ್ರಕಟವಾಗಿತ್ತು. ಅದು ಮುಂಚೆ ಮಲಯಾಳಂ

ಭಾಷೆಯಲ್ಲಿ ಕೇರಳದ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತಂತೆ. ಆಗ ಅಸಮಾಧಾನದ ಹೊಗೆ ಅಲ್ಲಿ ಆವರಿಸಲಿಲ್ಲ. ಕತೆಯಲ್ಲಿ ಮುಹಮ್ಮದ್ ಎಂಬುವವನೊಬ್ಬ ಏನೋ ಹೀನಾಯ ಕೃತ್ಯದಲ್ಲಿ ತೊಡಗಿದ್ದಂತೆ ಚಿತ್ರಿಸಲಾಗಿದ್ದಿತೆಂದು ತೋರುತ್ತದೆ. ಅದನ್ನು ಓದಲು ಬಾರದ ಸಹಸ್ರ ಸಂಖ್ಯೆಯ ಮುಸಲ್ಮಾನರನ್ನು ಯಾರೋ ಕುಸಂಸ್ಕೃತ ರಾಜಕಾರಣಿ ಪ್ರೇರೇಪಿಸಿ ಪತ್ರಿಕೆಯ ಕಚೇರಿಯೆದುರು ನಿಲ್ಲಿಸಿ ಗೊಂದಲ ಆರಂಭಿಸಿದ. ಸಂಜೆಯ ವೇಳೆಗೆ ಮೂರು ಮಂದಿ ಹತರಾಗಿದ್ದರು, ನೂರಾರು ಚಪ್ಪಲಿಗಳು ರಸ್ತೆಯಲ್ಲಿ ಚೆಲ್ಲಾಪಿಲ್ಲಿಯಾಗಿದ್ದವು– ಇಲ್ಲಿ ಹತ್ತಾರು ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ: ರಾಮನೆಂದು ಹೆಸರಿಟ್ಟುಕೊಂಡವನೊಬ್ಬ ದರೋಡೆಕೋರನಾದರೆ ಶ್ರೀರಾಮಚಂದ್ರನಿಗೆ ಹೇಗೆ ಅಪಚಾರವಾಗುತ್ತದೆ? ಹಾಗಿದ್ದರೆ ಅಂತಹ ಹೆಸರುಗಳನ್ನಿಟ್ಟುಕೊಳ್ಳುವ ಪದ್ಧತಿಯನ್ನು ಕೈಬಿಡಬೇಕು. ಮುಹಮ್ಮದ್ ಎಂಬ ಹೆಸರಿರುವವರು ಯಾರೂ ದುಷ್ಕೃತ್ಯಗಳಲ್ಲಿ ತೊಡಗಿಲ್ಲವೆ? ಕತೆಯಲ್ಲಿ ಹಾಗೆ ಚಿತ್ರಿಸಿದರೆ ಪ್ರವಾದಿ ಮುಹಮ್ಮದನಿಗೆ ಅಗೌರವ ಹೇಗೆ ಉಂಟಾಗುತ್ತದೆ? ಇದನ್ನೆಲ್ಲಾ ಮೂಲೆಗೊತ್ತಿ ರಾಜಕಾರಣಿಯೊಬ್ಬ ಮತಧರ್ಮದ ಮುಸುಕಿನಲ್ಲಿ ತನ್ನ ಬೇಳೆ ಬೇಯಿಸಿಕೊಳ್ಳಲು ಅಮಾಯಕರನ್ನು ಬಲಿಗೀಡು ಮಾಡಿದ. ಜನರನ್ನು ಭಾವೋದ್ರೇಕಕ್ಕೆ ಗುರಿಮಾಡಿ ತನ್ನ ಪ್ರಾಮುಖ್ಯತೆಯನ್ನು ಪ್ರದರ್ಶಿಸಿಕೊಳ್ಳುವ ಇಂತಹ ನಾಯಕ ಶಿಖಾಮಣಿಗಳ ಮುಖಕ್ಕೆ ಇನ್ನೆಷ್ಟು ಮಂಗಳಾರತಿ ಎತ್ತಬೇಕು?

ನಿಜಕ್ಕೂ ಮತಧರ್ಮದ ಮೌಲ್ಯಗಳಿಂದ ಪ್ರೇರಿತರಾದ ಸಜ್ಜನರು ಜನಸಮುದಾಯದ ಬಗೆಗೆ ತಾಳುವ ನಿಲುವೇ ಬೇರೆ. ಅವರನ್ನು ಬಲಿಪಶುಗಳನ್ನಾಗಿ ಮಾಡುವ ಬದಲು ತಾವೇ ತಮ್ಮ ಪ್ರಾಣವನ್ನು ಬಲಿಕೊಡುವುದಕ್ಕೆ ಅವರು ಹಿಂಜರಿಯುವುದಿಲ್ಲ. ಒಂದು ಉದಾಹರಣೆಯಾಗಿ ಚೈತನ್ಯ ಮಹಾಪ್ರಭುಗಳ ಜೀವನವನ್ನು ನೋಡಬಹುದು. ಸಂಮರ್ದಿತ ರೈತಾಪಿ ಜನಗಳನ್ನು ಸಂಘಟಿಸಿ ಭೂಮಾಲೀಕರನ್ನು ಥೇಡಿಸತ್ತಾ ಅವರು ಲಕ್ಷಗಟ್ಟಲೆ ರೈತರೊಡನೆ ಪುರಿ ಜಗನ್ನಾಥನ ಬಳಿಗೆ ಬಂದರು. ಭೂಮಾಲೀಕರ ಮತ್ತು ಪುಂಡಪಂಡರ ಕುತಂತ್ರಗಳಿಗೆ ಬಲಿಯಾಗಿ ಅಸುನೀಗಿದರು. ಶ್ರೀಮಂತರೊಡನೆ ಸಖ್ಯ ಬೆಳೆಸುವುದು ಅವರಿಗೆ ಸುಲಭವಾಗಿರುತ್ತಿತ್ತು; ಅವರ ಜೀವನವೂ ಸುಗಮವಾಗುತ್ತಿತ್ತು. ಇದಕ್ಕೆ ದೊಡ್ಡ ಪುರಾವೆ, ತರ್ಕಗಳ ಅಗತ್ಯವಿಲ್ಲ. ನಮ್ಮ ಸುತ್ತಮುತ್ತ ಬಲಿಷ್ಠವಾಗಿ ರಾರಾಜಿಸುತ್ತಿರುವ ಮಹಾಂತರು, ಸ್ವಾಮಿಗಳು, ಬಾಬಾಗಳು ಇರುವಂತೆ ಅಂದು ಚೈತನ್ಯ ಮಹಾಪ್ರಭುಗಳು ಇರಬಹುದಿತ್ತು. ಹಾಗಿದ್ದಿದ್ದರೆ ನಮಗಿಂದು ಅವರ ಹೆಸರೇ ಗೊತ್ತಿರುತ್ತಿರಲಿಲ್ಲ. ಅವರು ಆಯ್ದುಕೊಂಡ ಮೌಲ್ಯಗಳು ಹಾಗೂ ಹಾದಿ ಜನಪರವಾಗಿದ್ದುವು. ಅದೇ ಮತಧರ್ಮದ ಶ್ರೇಷ್ಠಮಟ್ಟದ ಪಾಲನೆಯೆಂದು ಅವರು ಭಾವಿಸಿ ಅದರಂತೆ ನಡೆದರು. ಇಂತಹ ಸದ್ಗುಣಿಗಳು ಮಾನವನ ಚರಿತ್ರೆಯಲ್ಲಿ ನೂರಾರು ಮಂದಿ ಆಗಿಹೋಗಿದ್ದಾರೆ. ಚೈತನ್ಯರಂತೆಯೇ ರೈತಾಪಿ ಜನರೊಡನೆ ಬೆರೆತು ಹೋರಾಡಿ ಮರಣದಂಡನೆಗೆ ಗುರಿಯಾದ ಒಬ್ಬ ಕ್ರೈಸ್ತ ಪಾದ್ರಿ ಜರ್ಮನಿಯಲ್ಲಿದ್ದ. ಅವನ ಹೆಸರು ಥಾಮಸ್ ಮುನ್ಸರ್. ಅವನು ಹೆಚ್ಚು ಕಡಿಮೆ ಚೈತನ್ಯರ ಸಮಕಾಲೀನನೇ ಆಗಿದ್ದ.

ಈಚಿನ ದಶಕಗಳಲ್ಲಿ ದಕ್ಷಿಣ ಅಮೇರಿಕಾದ ಕೆಲವು ದೇಶಗಳಲ್ಲಿ ಹತ್ತಾರು ಮಂದಿ ಕ್ರೈಸ್ತಪಾದ್ರಿಗಳು ಇದೇ ಪರಂಪರೆಯಲ್ಲಿ ಕ್ರಿಯಾಶೀಲರಾಗಿ ಪ್ರಸಿದ್ಧಿ ಪಡೆದಿದ್ದಾರೆ. ಅವರು "ವಿಮೋಚನಾ ಮತಧರ್ಮ ಸಿದ್ಧಾಂತ"ವೆಂದು ತಮ್ಮ ಚಿಂತನೆ ಹಾಗೂ ಕ್ರಿಯೆಗಳನ್ನು ವ್ಯಾಖ್ಯಾನಿಸಿಕೊಂಡಿದ್ದಾರೆ. ಅವರೆಲ್ಲಾ ರಾಜಕೀಯವಾಗಿ ಸಕ್ರಿಯರಾಗಿರುವ ಜನ. ಆದರೆ ಮತಧರ್ಮದ ಗುಂಗಿನಲ್ಲಿ ಶೋಷಿತ ಜನರು ಭಾವೋದ್ರೇಕಗಳಿಂದ ಅಸಹ್ಯ ಪ್ರವೃತ್ತಿಗಳಿಗೆ ಬಲಿಯಾಗದಂತೆ ಅವರನ್ನು ಸಂಘಟಿಸುವ ರಾಜಕಾರಣ ಇವರದು. ಕ್ರೈಸ್ತಮತದ ಮೌಲ್ಯಗಳು ಜೀವಂತವಾಗಿ ಅರ್ಥ ಪಡೆದುಕೊಳ್ಳಬೇಕೆಂಬ ಆಸಕ್ತಿ ಇವರಲ್ಲಿ ವಿಶೇಷವಾಗಿದೆ.

ಇದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದದ್ದು ಮತಧರ್ಮದ ಜಡ್ಡು ಸಂಪ್ರದಾಯದ ಅಧಿಕೃತ ವಕ್ತಾರರ ನಡತೆ. ಇದಕ್ಕೆ ಒಂದು ಉದಾಹರಣೆಯೆಂದರೆ ಇಸ್ಲಾಂನ ಹೆಸರಿನಲ್ಲಿ ಅತ್ಯಂತ ಅಮಾನವೀಯ ಕೃತ್ಯಗಳಲ್ಲಿ ತೊಡಗಿರುವ ತಾಲಿಬಾನ್ ತಂಡಗಳದ್ದು; ಇದು ಖೊಮೇನಿ ಸಂಪ್ರದಾಯ. ಮತಧರ್ಮದ ರಕ್ಷಣೆಯ ಹೆಸರಿನಲ್ಲಿ ಜನರನ್ನು ಹಿಂಸಿಸುವ, ಕೊಲ್ಲುವ, ಅಪಮಾನಿಸುವ ಬೀಭತ್ಸ ಲಕ್ಷಣ ಇದರಲ್ಲಿದೆ. ಮಹಿಳೆಯರನ್ನು ತುಚ್ಛವಾಗಿಸುವುದಂತೂ ಇದರ ಮೂಲಭೂತ ಗುಣ. ಅದೂ ರಾಜಕೀಯವೇ, ಇತಿಹಾಸ ವಿರೋಧಿ ರಾಜಕೀಯ. ಇಂತಹ ಉದಾಹರಣೆಗಳು ಬೇರೆ ಮತಗಳ ಮೂಸೆಯಲ್ಲೂ ದೊರೆಯುತ್ತವೆಂಬುದು ವ್ಯಾವಹಾರಿಕ ಸತ್ಯ.

ಇಂತಹ ಪರಿಸ್ಥಿತಿಯ ಉದ್ಭವವಾಗುವುದಾದರೂ ಏಕೆಂಬುದು ಒಂದು ಸೈದ್ಧಾಂತಿಕ ಪ್ರಶ್ನೆ. ಅದರ ವಿಶ್ಲೇಷಣೆ ಮಾಡಿ ಪರಿಹಾರ ಕಂಡುಕೊಳ್ಳದೆ ಸುಮ್ಮನೆ ಮುಲ್ಲಾ – ಮಠಾಧ್ಯಕ್ಷ – ಪಾದ್ರಿಗಳನ್ನು ದೂಷಿಸಿ, ವಿಡಂಬನೆ ಮಾಡಿ, ಇದು ಹೀಗೇ ಇರುತ್ತದೆಂದು ಅಸಹಾಯಕತೆಯನ್ನು ಪ್ರದರ್ಶಿಸುವುದು ನಿರರ್ಥಕ. ಹಿಟ್ಲರನಂತಹ ವ್ಯಕ್ತಿಯೊಬ್ಬ ಎಂತಹ ಹಿನ್ನೆಲೆಯಿಂದ ಪ್ರವರ್ಧಮಾನಕ್ಕೆ ಬಂದ, ಯಾರ ಹಿತಾಸಕ್ತಿಗಳನ್ನು ರಕ್ಷಿಸುವುದು ಅವನ ಉದ್ದೇಶವಾಯಿತು ಮತ್ತು ಇದಕ್ಕಾಗಿ ಯಾರಾರು ಅಪಾರ ಕಷ್ಟ–ನಷ್ಟಗಳನ್ನು ಅನುಭವಿಸಿದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಈ ಸೈದ್ಧಾಂತಿಕ ಪ್ರಶ್ನೆಯು ಜಟಿಲವಾಗಿ ಉಳಿಯುವುದಿಲ್ಲ. ಸಂಕ್ಷೇಪವಾಗಿ ಹೇಳುವುದಾದರೆ ಇದರ ತಾತ್ಪರ್ಯ ಹೀಗಿದೆ: ನಮ್ಮದು ಅಭಿವೃದ್ಧಿ ಹೊಂದಬೇಕಾದ ಹಿಂದುಳಿದ ದೇಶ. ನಮ್ಮ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಅಪವ್ಯಯ ಮತ್ತು ದುರ್ಬಳಕೆ ದಿನನಿತ್ಯದ ಅನುಭವಕ್ಕೆ ಬರುವ ಸಂಗತಿ. ಅವನ್ನು ರೂಢಿಸಿಕೊಂಡು ಇಡೀ ಜನಸಮುದಾಯದ ಆಕಾಂಕ್ಷೆ ಮತ್ತು ಕ್ರಿಯಾಶಕ್ತಿಯನ್ನು ಋಜುಮಾರ್ಗದಲ್ಲಿ ಕೊಂಡೊಯ್ಯುವ ಸವಾಲು ನಮ್ಮ ಮುಂದಿದೆ. ಅದನ್ನು ಫಲಕಾರಿಯಾಗುವಂತೆ ಎದುರಿಸುವ ಸಾಮೂಹಿಕ ಶಕ್ತಿಯನ್ನು ದುಡಿಯುವ ಜನ ಸಂಘಟಿತರಾಗಿ ಪಡೆಯಬೇಕು; ಅಂತಹ ಮುನ್ನೋಟವಿರುವ ರಾಜಕೀಯ ಸಿದ್ಧಾಂತ ಮತ್ತು ಅದರ ಕಾರ್ಯಕರ್ತನೆನಿಸಿಕೊಳ್ಳುವ ರಾಜಕೀಯ ಪಕ್ಷ ಅಂತಹ ಸಂಘಟನೆಯನ್ನು ರಚಿಸಬೇಕು. ಎಲ್ಲ ರೀತಿಯ ಅಸಮತೋಲನ ನಮ್ಮಲ್ಲಿದೆ. ಪ್ರಾದೇಶಿಕ, ಭಾಷಿಕ, ಮತೀಯ, ವರ್ಗೀಯ, ಲಿಂಗಭೇದದ ಹಾಗೂ ಇನ್ನಿತರ

ಅಸಮತೋಲನಗಳ ಮಧ್ಯೆ ವೈಯಕ್ತಿಕ ಮತ್ತು ಸಾಮೂಹಿಕ ಆಕಾಂಕ್ಷೆಗಳು ಬಲವತ್ತರವಾಗಿ ಪ್ರಕಟವಾಗುತ್ತಿವೆ. ಅವುಗಳನ್ನೆಲ್ಲಾ ಒಂದು ಸ್ಪಷ್ಟವಾದ ದಿಕ್ಕಿನಲ್ಲಿ ಚಲಿಸುವಂತೆ ಮಾಡುವ ಸನ್ನಿವೇಶವನ್ನು ನಾವು ರಚಿಸಿಕೊಂಡಿಲ್ಲ ಮತ್ತು ಒಂದು ಗುರಿಯತ್ತ ಸಾಗಲು ಪ್ರೇರೇಪಿಸುವಂತಹ ಒಂದು ಗಾರೆಯಿಂದ ಅವನ್ನು ಒಟ್ಟಾಗಿಸುವ ಯತ್ನವೂ ನಮ್ಮಲ್ಲಿ ಅಷ್ಟಾಗಿ ನಡೆದಿಲ್ಲ. ಹತಾಶೆ, ಅಸ್ಥಿರತೆ, ವಿಭಜನೆಯ ಮನೋಭಾವ, ಇತರರನ್ನು ಆಕ್ರಮಣ ಮಾಡುವಂತಹ ದೃಷ್ಟಿ, ಅಸ್ಮಿತೆಯ ಪ್ರದರ್ಶನ ಇವುಗಳೆಲ್ಲಾ ಅದರ ಫಲ. ಉತ್ಪಾದನೆಯ ಸಲಕರಣೆಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವರಿಗೆ ಲಾಭಗಳಿಕೆಗೆ ಇಂತಹ ಬಿಕ್ಕಟ್ಟಿನ ಸನ್ನಿವೇಶವು ಪ್ರಶಸ್ತವಾಗಿದೆ. ಆದ್ದರಿಂದ ಅದಕ್ಕೆ ಸೊಪ್ಪು ಹಾಕುವುದು ಅವರಿಗೆ ಸಹಜವಾಗಿದೆ. ಈ ಕೊಂಡಿಯಿಂದ ಬಿಡಿಸಿಕೊಳ್ಳಲು ನಮಗೆ ಇಂದಿನ ಸಾಮಾಜಿಕ–ಆರ್ಥಿಕ ಸಂರಚನೆಗೆ ಪರ್ಯಾಯವಾದ ಬೇರೊಂದು ಸಂರಚನೆಯ ಅಗತ್ಯವಿದೆ. ಅದರ ಪ್ರಜ್ಞೆಯೇ ಮೂಡದಿರುವಂತೆ ದಿಗ್ಬಂಧನ ವಿಧಿಸುವ ಸಂಚು ನಮ್ಮಲ್ಲಿ ನಡೆದಿದೆ, ನಡೆಯುತ್ತಿದೆ. ಅದರಿಂದಾಗಿ ಅಮೂರ್ತವಾದ ಮತ್ತು ಅಧ್ರುವವಾದ ಆಶಯಗಳಿಗೆ ಪ್ರಾಮುಖ್ಯತೆ ದೊರೆತು ನಿಜಕ್ಕೂ ಪ್ರಸ್ತುತವಾದ ವಿಷಯಗಳು ಪ್ರಕಾಶಕ್ಕೆ ಬರುತ್ತಿಲ್ಲ. ಶಿಕ್ಷಣ ದೊರೆತೋ ದೊರೆಯದೆಯೋ ಇರುವ ವ್ಯಕ್ತಿ ನಿರುದ್ಯೋಗಿಯಾಗಿ ತನ್ನ ವ್ಯಕ್ತಿತ್ವದ ಪ್ರಕಟಣೆಗೆ ಅವಕಾಶಗಳನ್ನು ಕಳೆದುಕೊಂಡಾಗ ಯಾವುದೋ ಅಮೂರ್ತವಾದ ಆಶಯಕ್ಕೆ ಜೋತುಬೀಳುವುದು ಅಸ್ವಾಭಾವಿಕವಲ್ಲ. ಆಗ ಅವನಿಗೆ ಇಟ್ಟಿಗೆ, ರಥಯಾತ್ರೆ, ಧರ್ಮಕಾರಣ, ಮಸೀದಿ, ಮಂದಿರ ಇವೇ ಬೌದ್ಧಿಕ ಆಹಾರ ಒದಗಿಸಲಾರಂಭಿಸುತ್ತವೆ.

ಮತಧರ್ಮವು ರಾಜಕೀಯವನ್ನು ಆವರಿಸುವಾಗ ಎಂತಹ ಪ್ರಕ್ರಿಯೆನ್ನು ಆರಂಭಿಸಬಾರದೋ ಅದನ್ನು ಆರಂಭಿಸುವುದು ಇಂತಹ ಆಯಕಟ್ಟಿನಲ್ಲಿ. ಇತರರ ಅಜ್ಞಾನವು ನನ್ನ ರಾಜಕೀಯ ಬಂಡವಾಳವಾದಾಗ ದಾಳಗಳನ್ನು ಎಸೆಯುವವನು ನಾನು. ಅವರು ಕೇವಲ ಪೇದೆಗಳಾಗಿ ಬಿಡುತ್ತಾರೆ. ಆಕಾಶದಲ್ಲೆಲ್ಲೋ ಕಂಗೊಳಿಸುವ ಸಂಪತ್ತನ್ನು ತಮಗೆ ಕೊಡಲಾಗುತ್ತದೆಯೆಂಬ ಭ್ರಮೆ ಅವರನ್ನು ಹುಚ್ಚೆಬ್ಬಿಸುತ್ತದೆ. ಈ ಚದುರಂಗದಾಟದಲ್ಲಿ ಯಾರೋ ಕುತಂತ್ರಿಯು ಸಂಪತ್ತನ್ನು ದೋಚಿ ಸವಿಯುತ್ತಾನೆ.

ಪಾಪಪ್ರಜ್ಞೆಯನ್ನು ಹಗುರ ಮಾಡಿಕೊಳ್ಳಲು ನಮ್ಮಲ್ಲಿ ವಿಪುಲವಾದ ಸಾಮಗ್ರಿಗಳಿವೆ. ಪೂಜೆ, ಪುರಸ್ಕಾರ, ಭಜನೆ, ಯಜ್ಞ, ಸಂಕೀರ್ತನೆ, ದಕ್ಷಿಣೆ, ತೀರ್ಥಯಾತ್ರೆ ಇವುಗಳು ಅಂತಹ ಕೆಲವು ಸಾಮಗ್ರಿಗಳು ಮಾತ್ರ. ಶಿಕ್ಷಣ ಸಂಸ್ಥೆಯೊಂದನ್ನು ನಡೆಸುವ ಕ್ರೈಸ್ತ ಸಂಪ್ರದಾಯದ ಒಂದು ಗುಂಪು ಹಿಂದೊಮ್ಮೆ ಕೇರಳ ಮತ್ತು ಕರ್ನಾಟಕದಲ್ಲಿ ದೊಡ್ಡ ದೊಡ್ಡ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿತ್ತು. ಕಾರಣ ಸ್ವಾರಸ್ಯವಾಗಿತ್ತು. ಆ ಸಂಸ್ಥೆಯ ನಿಯಮಬಾಹಿರ ದುಷ್ಕೃತ್ಯಗಳನ್ನು ಬಹಿರಂಗಗೊಳಿಸಿ ಅವನ್ನು ಮಾಡಬಾರದೆಂದು ವಿಶ್ವವಿದ್ಯಾನಿಲಯವೊಂದು ಸಂಸ್ಥೆಗೆ ನಿರ್ದೇಶನ ನೀಡಿದ್ದು ಅವರ ಧರ್ಮಪ್ರಜ್ಞೆಯನ್ನು ಹೊಡೆದೆಬ್ಬಿಸಿತ್ತು. ಪ್ರತಿ ಭಾನುವಾರ ಇಗರ್ಜಿಗೆ ಹೋಗುವವನು ಯಾವ ನಿಯಮ ಉಲ್ಲಂಘಿಸಿದರೇನು, ಪರಮಾತ್ಮನ

ರಕ್ಷಣೆ ಅವನಿಗೆ ಇದೆಯಲ್ಲವೆ? ಅಂತೆಯೇ ದಿನಕ್ಕೆ ಐದು ಬಾರಿ, ಅಥವಾ ಶುಕ್ರವಾರದಂದು ಒಮ್ಮೆ, ಮಸೀದಿಗೆ ಹೋಗಿ ಸೊಂಟ ಬಗ್ಗಿಸಿದವನಿಗೂ ಅಲ್ಲಾಹನ ರಕ್ಷಣೆ ಇದೆ. ಇನ್ನು ಕಪ್ಪುಹಣದ ಒಂದು ಭಾಗವನ್ನು ತಿರುಪತಿಯ ತಿಮ್ಮಪ್ಪನಿಗೆ ಲಂಚವಾಗಿ ಕೊಡುವವನಿಗೆ ಯಾವ ಜುಡಿಷಿಯಲ್ ಆಕ್ಟಿವಿಸಂ ತಾನೆ ಏನು ಮಾಡೀತು! ಬಾಯಿಗೆ ಬಟ್ಟೆ ಕಟ್ಟಿಕೊಂಡ ಜೈನಮುನಿಗಳು ಯಾವುದೇ ವ್ಯಾಪಾರಿಯ ಮಾನವನ್ನು ಕಾಯಬಲ್ಲರು. ಅಂದರೆ, ಮತಧರ್ಮವು ಇವರಿಗೆಲ್ಲಾ ಅಭೇದ್ಯವಾದ ಗುರಾಣಿಯಾಗಿದೆ. ಆದ್ದರಿಂದ ಮತಧರ್ಮದ ಕಕ್ಷೆಯಲ್ಲಿ ನಡೆಯುವ ರಾಜಕೀಯದಲ್ಲಿ ಅವರೆಲ್ಲಾ ಪಾಲುದಾರರು.

ಚೈತನ್ಯ ಮಹಾಪ್ರಭುಗಳಂತಹವರ ಮತಧರ್ಮದ ಮೌಲ್ಯಪ್ರಜ್ಞೆಯ ಬದಲಾಗಿ ಪೋಪ್‌ಪಾಲರಂತಹ ಮತಧರ್ಮದ ಲಾಭಪ್ರಜ್ಞೆ ಇಂದು ನಮಗೆ ಹಲವು ಸಂದರ್ಭಗಳಲ್ಲಿ ಕಾಣಬರುತ್ತಿದೆ. ಜೊತೆಗೆ ಖೊಮೇನಿಯಂತಹವರ ಮೌಢ್ಯ ಪ್ರಜ್ಞೆಯೂ ಸೇರಿ ಮತಧರ್ಮವು ಅಪಾಯಕಾರಿ ಆಯಾಮಗಳಿಂದ ಕಲುಷಿತಗೊಂಡಿದೆ. ರಾಜಕೀಯದಲ್ಲಿ ಮತಧರ್ಮದ ಕೆಲವು ಘನಾತ್ಮಕ ಮೌಲ್ಯಗಳನ್ನು ಮೇಳೈಸಿಕೊಳ್ಳುವುದು ಸಾರ್ಥಕವಾಗಿರುತ್ತದೆ. ಅವು ಸಾರ್ವತ್ರಿಕ ಮತ್ತು ಸಾಮುದಾಯಿಕ ಆಶಯಗಳ ಪ್ರತಿಫಲನವಾಗಿರಬೇಕು. ಅಷ್ಟೇ ಆದರೆ ಅನ್ಯಮತ ದ್ವೇಷವೂ ಸೇರಿದಂತೆ ಕೆಲವು ತ್ಯಾಜ್ಯ ಮನೋಭಾವಗಳನ್ನು ಮತಧರ್ಮದ ಕಪ್ಪುಛಾಯೆಯಡಿ ರಾಜಕೀಯಕ್ಕೆ ಆರೋಪಿಸಿದಾಗ ಅತಂತ್ರದ ಸ್ಥಿತಿ ಅನಿವಾರ್ಯ. ಅಲ್ಲದೆ, ಮತಧರ್ಮದ ಆಚರಣೆಯು ಸ್ವಕೀಯವಾದದ್ದು, ಖಾಸಗಿಯಾದದ್ದು; ಅದನ್ನು ಸಮೂಹಸನ್ನಿಗೆ ತಿರುಗುವಂತೆ ಬಳಸುವ ರಾಜಕೀಯವು ಸರ್ವಥಾ ಅಸಮರ್ಥನೀಯ.

ಈಗ ಸುಮಾರು ಮೂವತ್ತೈದು ವರ್ಷಗಳ ಹಿಂದೆ ಆಗ್ಗೆ ಲೋಕಸಭಾ ಸದಸ್ಯರಾಗಿದ್ದ ಶ್ರೀ ಎಚ್.ವಿ. ಕಾಮತ್ ಲೋನಾವ್ಲಾದ ಕೈವಲ್ಯಧಾಮಕ್ಕೆ ಭೇಟಿ ನೀಡಿದ್ದರು. ಒಂದು ಚಿಕ್ಕ ಗೋಷ್ಠಿಯಲ್ಲಿ ಮಾತನಾಡುತ್ತಾ ಅವರೆಂದರು : "ನಮ್ಮ ರಾಜಕೀಯ ಚಿಂತನೆ ಮತ್ತು ನಡತೆಯಲ್ಲಿ ಯೋಗದ ಅಂಶಗಳನ್ನು ಅಳವಡಿಸಿಕೊಳ್ಳಬೇಕು." ಸಭೆಯಲ್ಲಿ ಉಪಸ್ಥಿತರಿದ್ದ ಸ್ವಾಮಿ ಕುವಲಯಾನಂದರು ತಕ್ಷಣ ಹೇಳಿದರು: "ಹಾಗೇ ಮಾಡಿ, ಆದರೆ ಯೋಗದ ಚಿಂತನೆ ಮತ್ತು ನಡತೆಯೊಳಕ್ಕೆ ನಿಮ್ಮ ರಾಜಕೀಯದ ಪ್ರವೇಶವನ್ನು ಮಾಡಿಸಬೇಡಿ."

*****

ಪರಿಚಯ :

ಮೈಸೂರು ವಿಶ್ವವಿದ್ಯನಿಲಯದಿಂದ ಸಂಸ್ಕೃತದಲ್ಲಿ ಎಂ.ಎ. ಮತ್ತು ಪಿಎಚ್.ಡಿ. ಪದವಿಗಳನ್ನು ಪುಣೆ ಹಾಗೂ ವೇಲ್ಸ್ ವಿಶ್ವವಿದ್ಯಾಲಯಗಳಿಂದ ಇಂಗ್ಲಿಷ್‌ನಲ್ಲಿ ಎಂ.ಎ. ಪದವಿಗಳನ್ನು ಪಡೆದಿದ್ದಾರೆ. ಮಹಾಜನ್ ಕಾಲೇಜುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ

ಸುಮಾರು ೩೦ ವರ್ಷ ಕೆಲಸ ಮಾಡಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂದರ್ಶನ ಪ್ರಾಧ್ಯಪಕರಾಗಿದ್ದುಕೊಂಡು 'ಭಾರತೀಯ ವಿಜ್ಞಾನ ಹಾದಿ' ಕೃತಿಯನ್ನು ರಚಿಸಿದ್ದಾರೆ. 'ಮುನ್ನೋಟ' ಹಾಗೂ 'ಆಯತನ' ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಸಂದಿದೆ. ಭಗತ್‌ಸಿಂಗ್, ಚೆ ಗೆವಾರಾ, ವೈಚಾರಿಕ ಜಾಗೃತಿ, ಯೋಗಪ್ರವೇಶ, ದೇವಿಪ್ರಸಾದ್ ಮತ್ತು ಲೋಕಯತ ದರ್ಶನ, ಫಿಲಾಸಫಿ ಇನ್ ಚೈನಾ ಇವು ರಾಮಕೃಷ್ಣರ ಕೆಲವು ಮುಖ್ಯ ಕೃತಿಗಳು. ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ಶಿಕ್ಷಕರ ಪ್ರತಿನಿಧಿಯಾಗಿ ಇವರು ಕಾರ್ಯನಿರ್ವಹಿಸಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ಸಾಹಿತ್ಯ, ಸಂಸ್ಕೃತಿ, ರಾಜಕಾರನದ ಹಲವು ನೆಲೆಗಳನ್ನು ಕುರಿತು ಚಿಂತನೆ ನಡೆಸುತ್ತಿರುವ ಜಿ. ರಾಮಕೃಷ್ಣ ನಮ್ಮ ನಡುವಿನ ಹಿರಿಯ ಚಿಂತಕರು ಸಾತ್ವಿಕ ಪ್ರತಿಭಟನೆ ಮತ್ತು ಪ್ರಬುದ್ಧ ವೈಚಾರಿಕತೆ ಇವರ ಬರಹಗಳ ಮೂಲ ನಾಡಿ. ಪ್ರಸ್ತುತ ಜಿ. ರಾಮಕೃಷ್ಣ 'ಹೊಸತು' ಮಾಸಪತ್ರಿಕೆಯ ಸಂಪಾದಕರು.

ಸಮಾಜದ ಬಹುರೂಪಿ ಸಂಬಂಧಗಳನ್ನು ಪ್ರತಿಪಾದಿಸುವ ಧರ್ಮ ಎಂದೂ ಸ್ಥಗಿತಗೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಬುದ್ಧಿವಂತಿಕೆಯನ್ನೇ ಬಂಡವಾಳ ಮಾಡಿಕೊಂಡವರು ಆ ಬುದ್ಧಿಯ ಬಲದಿಂದಲೇ ಬಹು ಸಂಖ್ಯಾತ ಜನಸಮುದಾಯವನ್ನು ನಿಯಂತ್ರಿಸುವಂಥ ಅಧಿಕಾರಯುತ ಮಾತುಗಳನ್ನು ಧರ್ಮಸೂತ್ರಗಳೆನ್ನುವಂತೆಯೇ ತೂರಿಬಿಟ್ಟು ಅವುಗಳನ್ನು ಸ್ಥಿರಗೊಳಿಸಿದರು. ಕಾಲ ಮತ್ತು ಪ್ರದೇಶದ ಮಿತಿಗಳನ್ನು ಮತಧರ್ಮಗಳು ಮೀರಿ ನಿಲ್ಲದಿರುವುದಕ್ಕೂ ಬೇರೆ ಬೇರೆ ಹಂತಗಳಲ್ಲಿ ಆಯಾಕಾಲದ ಹಿನ್ನೆಲೆಗನುಸಾರವಾಗಿ ಧರ್ಮವು ವಿವಿಧ ರೂಪಗಳನ್ನು ತಳೆದಿರುವುದಕ್ಕೂ ಇದೇ ಕಾರಣವಾಗಿದೆ. ಇನ್ನು ರಾಜಕೀಯದ ಮೂಲತತ್ವವೆಂದರೆ – ಸಾಮಾಜಿಕ ಆರ್ಥಿಕ ಸಿದ್ಧಾಂತಗಳ ಬುನಾದಿಯ ಮೇಲೆ ಇಡೀ ಸಮುದಾಯದ ಏಳಿಗೆಗಾಗಿ ಕೆಲವು ಕಟ್ಟುನಿಟ್ಟಾದ ನೀತಿನಿಯಮಗಳನ್ನು ಪ್ರತಿಪಾದಿಸಿ ಅವುಗಳನ್ನು ಜಾರಿಗೊಳಿಸುವುದು. ಪ್ರಸ್ತುತ ಸಂದರ್ಭದಲ್ಲಿ ರಾಜಕೀಯದ ಮೂಲತತ್ವಗಳೇ ಧಿಕ್ಕರಿಸಲ್ಪಟ್ಟು ಜನರನ್ನು ವಿಭಾಗಗಳಾಗಿ ಪ್ರತ್ಯೇಕಗೊಳಿಸಿ, ಅವರನ್ನು ದಿಕ್ಕು ತಪ್ಪಿಸಿ ಭಾವೋದ್ರೇಕಗಳಿಗೆ ಗುರಿಮಾಡಿ ಅವರ ಮೇಲೆ ಸವಾರಿ ಮಾಡುತ್ತಾ ಅಧಿಕಾರಕ್ಕೇರುವುದು ರಾಜಕೀಯ ಎಂದಾಗಿದೆ. ಸಾರ್ವಜನಿಕ ಸಂಪತ್ತನ್ನು ಸ್ವಂತಕ್ಕೆ ಬಳಸಿಕೊಳ್ಳುವ ಹಗಲುದರೋಡೆ ಅಧಿಕಾರದಲ್ಲಿದ್ದಾಗ ಮಾತ್ರ ಸಾಧ್ಯವೆಂಬುದನ್ನು ತಿಳಿದ ಮಂದಿ ಅದನ್ನು ಹೇಗಾದರೂ ಪಡೆಯಲೇಬೇಕೆಂಬ ಒಂದೇ ಉದ್ದೇಶದಿಂದ ಪ್ರಜಾಪ್ರಭುತ್ವದ ಎಲ್ಲ ನಿಯಮಗಳನ್ನೂ ಗಾಳಿಗೆ ಕೂರಲು ಸಿದ್ಧರಾಗುತ್ತಾರೆ. ಇದಕ್ಕಾಗಿ ಅವರು ಸಂದರ್ಭಕ್ಕೆ ಒದಗುವ, ಬಹುಮಂದಿಯನ್ನು ಮರುಳು ಮಾಡುವಂಥ ಮಂತ್ರ ಪ್ರಯೋಗಕ್ಕೆ ಸಿದ್ಧರಾಗುತ್ತಾರೆ. ಅದು ರಾಮನಾಮವೂ ಇರಬಹುದು, ಗಾಂಧೀನಾಮವೂ ಇರಬಹುದು. ಬಸವನಾಮ, ಅಂಬೇಡ್ಕರ್ ನಾಮವಿರಬಹುದು, ಕೊನೆಗೆ ಜಾತಿ, ಕೋಮು, ಗರೀಬಿ, ಸಮಗ್ರಕ್ರಾಂತಿ ಇಂಥ ಮಂತ್ರಗಳೂ ಇರಬಹುದು ಇವುಗಳ ಪೈಕಿ ಮತಧರ್ಮದ ಭಾವನೆಯನ್ನು ಕೆರಳಿಸುವುದೂ ಭಾರೀ ರಾಜಕೀಯ ಸರಕಾಗಿ

ಪರಿಣಮಿಸಿದೆ. ಮತಧರ್ಮದ ಮೌಲ್ಯಗಳೊಂದಿಗೆ ಏನೇನೂ ಸಂಬಂಧವಿಲ್ಲದ ಇಂಥ ರಾಜಕೀಯ ಕ್ಷುದ್ರ ರಾಜಕೀಯ, ಜನವಿರೋಧಿ ರಾಜಕೀಯ, ಸಂಸ್ಕೃತಿ ವಿರೋಧಿ ರಾಜಕೀಯ, ದೇಶದ್ರೋಹಿ ರಾಜಕೀಯವೆನಿಸಿಕೊಳ್ಳಲು ಮಾತ್ರ ಲಾಯಕ್ಕು. ಖಾಸಗಿಯಾದ ಮತಧರ್ಮದ ಆಚರಣೆಯನ್ನು ಸಮೂಹಸನ್ನಿಗೆ ತಿರುಗುವಂತೆ ಬಳಸುವ ರಾಜಕೀಯ ಸರ್ವಥಾ ಸಮರ್ಥನೀಯವಲ್ಲವೆಂಬುದನ್ನು ಈ ಲೇಖನ ಸ್ಪಷ್ಟೀಕರಿಸಿದೆ.

೬. ಬುಲ್‌ಡೋಜರ್ ಸಂಸ್ಕೃತಿ

– ನಾಗೇಶ ಹೆಗಡೆ

ನಿಸರ್ಗದ ನಿತ್ಯ ಕ್ರಿಯೆಗಳನ್ನು ಹತ್ತಿಕ್ಕಲೆಂದೂ, ತಿದ್ದಲೆಂದೂ ಈ ೨೦ನೇ ಶತಮಾನದಲ್ಲಿ ಅವತರಿಸಿ ಬಂದ ಯಂತ್ರ ಬುಲ್ ಡೋಜರ್, ನೂರು ಜನರ ಕೆಲಸವನ್ನು ತಾನೊಬ್ಬನೇ ಕ್ಷಣಾರ್ಧ ದಲ್ಲಿ ಮಾಡಿ ಮುಗಿಸುವ ಈ ಯಂತ್ರ, ಬಡವ–ಬಲ್ಲಿದರ ಮಧ್ಯೆಯ ಅಂತರವನ್ನೂ ನೂರುಪಟ್ಟು ಹೆಚ್ಚಿಸುತ್ತದೆ. ನೆಲವನ್ನು ಅಗೆದು ಬಗೆದು ಬದಿಗೆ ತಳ್ಳುವುದೇ ಅಭಿವೃದ್ಧಿಯ ಮಹಾಕಾರ್ಯವೆಂಬ ಭ್ರಮೆ ಹುಟ್ಟಿಸಿ, ಪ್ರಕೃತಿಯನ್ನು ವಿಕೃತಿಯಾಗಿ ಪರಿವರ್ತಿಸುತ್ತದೆ.

ಅರವತ್ತರ ದಶಕದಲ್ಲಿ ಶಿರಸಿ ಬಳಿಯ ಯಡಳ್ಳಿ ಹೈಸ್ಕೂಲಿನಲ್ಲಿ ನಾನು ಓದುತ್ತಿದ್ದೆ. ಪಕ್ಕದ ಹೆದ್ದಾರಿಯಲ್ಲಿ ಒಂದು ದಿನ ಬುಲ್‌ಡೋಜರ್ ಬಂತು. ಅದೃಷ್ಟವೆಂಬಂತೆ ನಮಗೆಲ್ಲ ಆಟಕ್ಕೆ ಬಿಟ್ಟ ಸಮಯ. ಬುಲ್‌ಡೋಜರ್‌ನ ಗುಡುಗುಡು ಸದ್ದು ಕೇಳಿ, ಅದಿನ್ನೂ ಫರ್ಲಾಂಗ್ ದೂರವಿರುವಾಗಲೇ ನೋಡಲು ನಾವೆಲ್ಲ ಓಡಿದ್ದೇ. ಅದರ ಸರಪಳಿ ಚಕ್ರ, ಭಾರೀ ಗಾತ್ರ, ಕಬಂಧ ಬಾಹುಗಳು, ಟಾರ್ ರೋಡಿನಲ್ಲಿ ಮೂಡುವ ಅದರ ಚಕ್ರದ ಹಲ್ಲುಗಳ ಗುರುತುಗಳು... ಬೆಕ್ಕಸ ಬೆರಗಾಗಿ ನಾವೆಲ್ಲ ನೂರಿನ್ನೂರು ಮಕ್ಕಳು ದಿಬ್ಬಣದಂತೆ ಅದರೊಂದಿಗೇ ನಡೆಯುತ್ತ ಬಂದೆವು. ಚಾಲಕ ಮದುಮಗನಂತೆ ಅಷ್ಟೆತ್ತರದಲ್ಲಿ ಕೂತು ನಮ್ಮ ಕುತೂಹಲ ತಣಿಸಲೆಂದು ಕಪಿಚೇಷ್ಟೆ ಮಾಡುತ್ತಿದ್ದ.

ಹೈಸ್ಕೂಲು ಸಮೀಪಿಸುವಷ್ಟರಲ್ಲಿ ನಮ್ಮ ಶಿಕ್ಷಕರೂ ಬುಲ್‌ಡೋಜರ್ ನೋಡಲು ರಸ್ತೆಪಕ್ಕಕ್ಕೆ ಬಂದು ನಿಂತಿದ್ದರು. ಚಾಲಕ ತನ್ನ ವಾಹನವನ್ನು ನಿಧಾನಗೊಳಿಸಿದ. ನಮ್ಮನ್ನೆಲ್ಲ ದೂರ ಸರಿಯುವಂತೆ ಸನ್ನೆ ಮಾಡಿ – ಗಕ್ಕನೆ ಇಡೀ ಗಾಡಿಯನ್ನು ೯೦ ಅಂಶ ಕೋನ ಮಾಡಿ ತಿರುಗಿಸಿದ. ರಸ್ತೆ ಪಕ್ಕದ ಕಾಲುವೆಯನ್ನೂ ದಿಬ್ಬವನ್ನೂ ಕಡೆಗಣಿಸಿ ಆ ಬೃಹತ್ ಎಂಜಿನ್ನು ಅನಾಮತ್ತಾಗಿ ಹೊಟ್ಟೆ ಹೊಸೆಯುತ್ತ ಬೆಟ್ಟ ಏರಿತು. ನಾವೆಲ್ಲ ಅವಾಕ್ಕಾಗಿ ನೋಡುತ್ತಿರುವಂತೇ ಅಲ್ಲಿ ಬೆಳೆದಿದ್ದ ಹತ್ತಾರು ಮರಗಳ ಪೈಕಿ ಅತ್ಯಂತ ದೊಡ್ಡ ಮರದ ಬುಡಕ್ಕೆ ಅದು ತನ್ನ ಮೂತಿಯನ್ನು ಒತ್ತಿತು. ಒಮ್ಮೆ ಜೋರಾಗಿ ಹೂಂಕರಿಸಿದಂತೆ ಸದ್ದು ಮಾಡಿ ದಢಾರೆಂದು ಆ ಮರವನ್ನು ಬೇರುಸಹಿತ ಕಿತ್ತು ಬೀಳಿಸಿತು. ಈ ಮಹಾಕಾರ್ಯದಲ್ಲಿ ತನಗೆ ಏನೇನೂ ಶ್ರಮವಾಗಿಲ್ಲವೆಂಬುದನ್ನು ತೋರಿಸಲೆಂಬಂತೆ ಒಮ್ಮೆ ಮೂತಿಯನ್ನು ಕೆಳಕ್ಕೆ ಮೇಲಕ್ಕೆ

ಮಾಡಿ, ಮತ್ತೆ ೯೦ ಅಂಶ ಕೋನ ಮಾಡಿ ಕುರುಚಲು ಗಿಡಗಂಟಿಗಳನ್ನು ಹೊಸದುಹಾಕುತ್ತ ಶಿಸ್ತಿನ ಯೋಧನಂತೆ ಠಕ್ಕೆಂದು ಪಕ್ಕಕ್ಕೆ ತಿರುಗುತ್ತ ರಸ್ತೆ ಸೇರಿ ತನ್ನ ಹಾದಿ ಹಿಡಿಯಿತು. ಚಾಲಕ ಹಿಂದಿರುಗಿ ನೋಡಿ ನಮಗೆಲ್ಲ ಕೈಬೀಸಿ ವಿದಾಯ ಹೇಳಿದ.

ಮುಂದೆ ಸುಮಾರು ಎರಡು ಮೂರು ವಾರಗಳ ಕಾಲ ನಮಗೆ ಅದೇ ಘಟನೆಯೇ ಚರ್ಚೆಯ ವಸ್ತುವಾಗಿತ್ತು. ಒಣಗುತ್ತ ಬಿದ್ದ ಆ ಹೆಮ್ಮರ ಪ್ರದರ್ಶನ ತಾಣವಾಗಿತ್ತು. ತಿಂಗಳಾರು ಕಳೆದರೂ ಮಾಸದಷ್ಟು ಆಳವಾಗಿ ಆ ದೈತ್ಯಯಂತ್ರ ಟಾರ್ ರಸ್ತೆಯನ್ನೂ, ಬೆಟ್ಟದ ಗಟ್ಟಿ ನೆಲವನ್ನೂ, ನಮ್ಮೆಲ್ಲರ ಕೋಮಲ ಭಾವನೆಗಳನ್ನೂ ಘಾಸಿ ಮಾಡಿಹೋಗಿತ್ತು.

ಮುಂದೆ ನಾನು ಭೂವಿಜ್ಞಾನ ವಿದ್ಯಾರ್ಥಿಯಾಗಿ, ದೇಶದ ಭಾರೀ ಭಾರೀ ಗಣಿಗಳನ್ನೂ, ಬೃಹತ್ ನೀರಾವರಿ ಯೋಜನೆಗಳನ್ನೂ ಹತ್ತಿರದಿಂದ ನೋಡುವಂತಾದಾಗ ಬುಲ್‌ಡೋಜರ್‌ಗಳು ನನಗೆ ತೀರ ಸಮೀಪವಾದದ್ದುಂಟು. ಬಿಹಾರದ ಸಿಂಗ್‌ಭೂಮ್, ಒರಿಸ್ಸಾದ ಕಿರಿಬುರು, ರಾಜಸ್ಥಾನದ ಜವಾರ್, ಹತ್ತಿರದ ದೋಣಿಮಲೈ, ಕುದುರೆಮುಖಗಳಲ್ಲಿ ಈ 'ಅರ್ಥ್ ಮೂವರ್' ಯಂತ್ರ ಎಬ್ಬಿಸಿದ ಕೆಂಧೂಳನ್ನು ನಾನು ಸೇವಿಸಿದ್ದುಂಟು. ಗಣಿ ಗೊಡವೆ ಬಿಟ್ಟು ಪತ್ರಿಕೋದ್ಯಮಕ್ಕೆ ಕಾಲಿಟ್ಟಮೇಲೂ ಮುಂಬೈ ಬಳಿಯ ಥಾಲ್–ವೈಶೇಟ್, ಸಹ್ಯಾದ್ರಿಯ ಕಾಳಿ ವಾರಾಹಿ ಯೋಜನೆಗಳಲ್ಲಿ ಈ ಯಂತ್ರಗಳು ಗುಡ್ಡ ಬೆಟ್ಟವನ್ನು ನೆಲಸಮ ಮಾಡಿದ್ದನ್ನು ವರದಿ ಮಾಡಿದ್ದುಂಟು. ಅಷ್ಟೇಕೆ, ಬೆಂಗಳೂರಿನ ರೆವಿನ್ಯೂ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡವರ ಕಾಂಕ್ರೀಟ್ ಗೋಡೆಗೆ ಇವು ಲಗ್ಗೆ ಹಾಕಿದಾಗ ಉಸಿರು ಬಿಗಿಹಿಡಿದು ನೋಡಿದ್ದುಂಟು.

ಮನುಷ್ಯನ ಲೌಕಿಕ ಅವಶ್ಯಕತೆಗಳನ್ನೂ, ಆಡಂಬರಗಳನ್ನೂ ಪೂರೈಸಿಕೊಳ್ಳಬೇಕೆಂದರೆ ಕುಡುಗೋಲಿನಷ್ಟೇ ಬುಲ್‌ಡೋಜರ್ ಕೂಡಾ ಅಗತ್ಯ ಎಂಬುದನ್ನು ನಾನು ನನಗೆ ಹೇಳಿಕೊಳ್ಳಲು ಯತ್ನಿಸುತ್ತೇನೆ. ನನ್ನ ಮನೆಯ ಒಲೆಯ ಮೇಲೆ ಅನ್ನ ಬೇಯಬೇಕೆಂದರೆ ಅಲ್ಯೂಮಿನಿಯಮ್ ಪಾತ್ರೆ ಬೇಕು; ಅದಕ್ಕೆ ಬೇಕಾದ ಬಾಕ್ಸಾಯಿಟ್ ಅದುರನ್ನು ಅಗೆಯಲು ಈ ದೈತ್ಯಯಂತ್ರ ಬೇಕು. ಅನ್ನ ಬೆಂದಿತೋ ಇಲ್ಲವೋ ನೋಡಲು ಬೆಳಕು ಬೇಕು; ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲು ಬುಲ್‌ಡೋಜರ್ ಬೇಕು. ಮೂಲಕ್ಕೇ ಬರಬೇಕೆಂದರೆ, ಅಕ್ಕಿ ಬೆಳೆಯಲು ನೀರಾವರಿ ಬೇಕು; ಅಣೆಕಟ್ಟು ನಿರ್ಮಿಸಲು ಬುಲ್‌ಡೋಜರ್ ಬೇಕೇ ಬೇಕು.

ಆದರೂ ಕಾಂಪ್ರೊಮೈಸ್ ಸಾಧ್ಯವಾಗುತ್ತಿಲ್ಲ. ಕುದುರೆಮುಖದಿಂದ ಕಕ್ಕಲಾಗುತ್ತಿರುವ ಅದುರಿನ ಪುಡಿ ರಾಶಿರಾಶಿಯಾಗಿ ಬಂದು ಭದ್ರಾನದಿಗೆ ಬೆಟ್ಟದಷ್ಟು ಮೆಕ್ಕಲು ಸೇರಿಸಲು ಇದೇ ಬುಲ್‌ಡೋಜರ್ ಕಾರಣ. ಭದ್ರೆಯಲ್ಲಿ ನೀರಿನ ಒರತೆ ಕಡಿಮೆಯಾಗಿ, ಜಲಾಶಯದಲ್ಲಿ ಹೂಳು ತುಂಬಿ, ಲಕ್ಷಾಂತರ ಎಕರೆ ಭೂಮಿಗೆ

ನೀರು ಖೋತಾ ಆಗಲು ಇದೇ ಕಾರಣ. ಅತ್ತ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಅತಿಯಾದ ನೀರಾವರಿಯಿಂದಾಗಿ ಕೃಷಿ ಭೂಮಿಯಲ್ಲಿ ಜವುಳು-ಸವಳು ಶೇಖರವಾಗಿ ಪ್ರತಿವರ್ಷ ೨೫ ಸಾವಿರ ಹೆಕ್ಟೇರು ಗದ್ದೆ ನಿರರ್ಥಕವಾಗಲೂ ಇದೇ ಕಾರಣ. ನದಿಯಲ್ಲಿ ನೀರಿನ ಪ್ರಮಾಣ ಕಮ್ಮಿಯಾಗಿ, ಕಾರ್ಖಾನೆಗಳ ಮಾಲಿನ್ಯ ಮಡುಗಟ್ಟಿ ನಿಲ್ಲಲಿಕ್ಕೂ ಬುಲ್‌ಡೋಜರ್ ಕಾರಣ.

ನಿಸರ್ಗದ ಶಕ್ತಿಗಳು ಲಕ್ಷಾಂತರ ವರ್ಷಗಳಿಂದ ನಿಧಾನವಾಗಿ ಕೆಲಸ ಮಾಡಿ ನಮ್ಮೆಲ್ಲರ ಬದುಕಿಗೆ ಅನುಕೂಲವಾಗುವಂತೆ ನಿರ್ಮಿಸಿಟ್ಟ ಸಮತೋಲನವನ್ನು ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಅಧ್ವಾನ ಮಾಡಿ, ಮುಂದಿನ ಇಡೀ ಪೀಳಿಗೆಯ ಬದುಕು ದುಸ್ತರವಾಗುವಂತೆ ಮಾಡುವ ಅಪರಾಧಿಯೂ ಇದೇ ಬುಲ್‌ಡೋಜರ್.

ಅಪರಾಧಿಯೋ ಆಪದ್ಬಾಂಧವ ಯಂತ್ರವೋ ತೂಗಿ ನೋಡಿ ಹೇಳಲು ನನಗಂತೂ ಸಾಧ್ಯವಿಲ್ಲ. ಈ ಯಂತ್ರದ ನೆರವಿನಿಂದ ಕೈಗೊಳ್ಳಲಾಗುತ್ತಿರುವ ಭಾರೀ ಯೋಜನೆಗಳಿಂದ ಭೂಜೀವಿಗಳಿಗೆ ಭಾರೀ ನಷ್ಟವಾಗುತ್ತಿದೆಯೆಂದು ಕೆಲವು ಅಧ್ಯಯನಗಳಿಂದ ಈಗೀಗ ಗೊತ್ತಾಗುತ್ತಿದೆ. ಆದರೂ ಯೋಜನಾ ತಜ್ಞರು ಇನ್ನಷ್ಟು ಭಾರೀ ಯೋಜನೆಗಳನ್ನು ಸಿದ್ಧಪಡಿಸುತ್ತಲೇ ಇದ್ದಾರೆ. ಈಗ ಕೈಗೊಳ್ಳಲಾಗುತ್ತಿರುವ ನರ್ಮದಾ ಕೊಳ್ಳ 'ಅಭಿವೃದ್ಧಿ' ಯೋಜನೆಯಲ್ಲಿ ೨೫ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ೩೦ ದೊಡ್ಡ ಅಣೆಕಟ್ಟುಗಳ ನಿರ್ಮಾಣವಾಗಲಿದೆ. ಹತ್ತಿರ ಹತ್ತಿರ ಹತ್ತು ಲಕ್ಷ ಬಡಜನರು, ಆದಿವಾಸಿಗಳು ತಮ್ಮ ಭೂಮಿ-ಮನೆ ತ್ಯಜಿಸಿ ನಿರಾಶ್ರಿತರಾಗಲಿದ್ದಾರೆ. ಯಾರ ಅಭಿವೃದ್ಧಿ ಆಗಲಿದೆಯೆಂಬುದು ಮಾತ್ರ ಇನ್ನೂ ಸ್ಪಷ್ಟವಿಲ್ಲ.

ಈ ಹಿಂದೆ ಬಿಹಾರ್ - ಪಶ್ಚಿಮ ಬಂಗಾಳದಲ್ಲಿ ದಾಮೋದರ ಕೊಳ್ಳದ ಯೋಜನೆ(ಡಿವಿಸಿ) ಕೈಗೊಂಡಾಗ ಬಂಗಾಳದ ಸಿವಿಲ್ ಎಂಜಿನಿಯರ್ ಕಪಿಲ್ ಭಟ್ಟಾಚಾರ್ಯ ಎಂಬವರು ಎಚ್ಚರಿಕೆ ನೀಡಿದ್ದರು. ಹರಿಯುವ ನದಿಗೆ ಅತಿಯಾದ ಅಡೆತಡೆ ಹಾಕಿದರೆ ಹೇಗೆ ಇಡೀ ನೈಸರ್ಗಿಕ ಜೀವಮಂಡಲ ಅಸ್ತವ್ಯಸ್ತ ಆಗುತ್ತದೆಂದು ಅವರು ವಿವರಿಸಿದ್ದರು. ದಾಮೋದರ ಕೊಳ್ಳದ ಆ ಒಂಬತ್ತು ಅಣೆಕಟ್ಟುಗಳಿಂದಾಗಿ ನದಿಯ ಹೂಳು ಸಾಗಣೆ ಸಾಮರ್ಥ್ಯ ಕಡಿಮೆಯಾಗುತ್ತದೆ; ನದಿಯ ಮೇಲ್ದಂಡೆಯಲ್ಲಿ ಹೂಳು ಶೇಖರಣೆ ಹೆಚ್ಚಾಗಿ ಚಿಕ್ಕ ಪ್ರವಾಹವೂ ರೈತರ ಪಾಲಿಗೆ ಮಹಾಪೂರವಾಗುತ್ತದೆ; ಜಲಾಶಯದ ಜೀವಿತಾವಧಿ ಕಮ್ಮಿಯಾಗುತ್ತದೆ; ನದಿಯ ಪಾತ್ರ ಬದಲಾಗುತ್ತದೆ. ಕೆಳದಂಡೆಯಲ್ಲಿ ನೀರಿನ ಧಾರೆ ಸಣಕಲಾಗಿ ಹೂಗ್ಲಿಯಲ್ಲಿ ಕೊಳಚೆ ಮಡುಗಟ್ಟುತ್ತದೆ; ಕಲ್ಕತ್ತದಲ್ಲಿ ದುರ್ವಾಸನೆ ತುಂಬುತ್ತದೆ. ಇತ್ತ ಆದಿವಾಸಿಗಳ ಶೋಷಣೆ ಹೆಚ್ಚುತ್ತದೆ; ತಮ್ಮ ನೆಲದಲ್ಲೇ ಕಟ್ಟಡ ನಿರ್ಮಾಣದ ತೊತ್ತುಗಳಾಗಿ ಕೊನೆಗೆ ನಿರ್ಗತಿಕರಾಗಿ ದೂರ ಸಾಗಬೇಕಾಗುತ್ತದೆ. ಜಲಾಶಯದಲ್ಲಿ ಹೂಳು ಹೆಚ್ಚುವುದರಿಂದ ನೀರಿನ ಶೇಖರಣೆ ಕಡಿಮೆಯಾಗಿ ಪದೇ ಪದೇ ವಿದ್ಯುತ್ ಕಡಿತ ಉಂಟಾಗಿ ಔದ್ಯಮಿಕ ಉತ್ಪಾದನೆಗೆ ಧಕ್ಕೆ ಬರುತ್ತದೆ. ಕಾಲುವೆಯ ನೀರನ್ನು ನಂಬಿ

ಕೂತ ರೈತ ಮುಗಿಲು ನೋಡುವಂತಾಗುತ್ತದೆ; ಕೆಳದಂಡೆಯ ಹೂಗ್ಲಿ ನದಿಗೆ ನೀರು ಖೋತಾ ಆಗುವುದರಿಂದ ಹೊಸದೊಂದು ಬಂದರು ನಿರ್ವಾಣ ಮಾಡಬೇಕಾಗುತ್ತದೆ; ಹೂಗ್ಲಿಗೆ ಹೆಚ್ಚಿನ ನೀರು ಪೂರೈಕೆ ಮಾಡಲೆಂದು ಫರಕ್ಕಾ ಬಳಿ ಒಡ್ಡು ನಿರ್ಮಿಸಹೋದರೆ (ಅಂದಿನ) ಪೂರ್ವ ಪಾಕಿಸ್ತಾನದ ಜತೆ ಮನಸ್ತಾಪ ಕಟ್ಟಿಕೊಳ್ಳಬೇಕಾಗುತ್ತದೆ........

ವಿಶೇಷವೆಂದರೆ, ಕಪಿಲ್ ಭಟ್ಟಾಚಾರ್ಯ ಅಂದೇ ಊಹಿಸಿದ್ದ ಒಂದೊಂದು ವಾಕ್ಯವೂ ಇಂದು ನಿಜವಾಗಿ ಪರಿಣಮಿಸಿ ಬಿಕ್ಕಟ್ಟಿನ ಸರಮಾಲೆಯನ್ನೇ ನಿರ್ಮಿಸಿದೆ.

ಪರಿಸರದ ಇಂಥ ಸೂಕ್ಷ್ಮ ಸಂವೇದನೆಯ ಬಗ್ಗೆ ಪಾಠ ಕಲಿಯುವುದು ಯಾವಾಗ? ಯಾರು ಪಾಠ ಕಲಿಯಬೇಕು? ಮೂರು ಕ್ಷಣದ ಮೋಜಿಗಾಗಿ ಬುಲ್‌ಡೋಜರ್‌ನ ಭೀಮಶಕ್ತಿಯನ್ನು ಬಳಸಿ ಭಾರೀ ವೃಕ್ಷವನ್ನು ಉರುಳಿಸಿ ಹೋಗುವ ಅಶಿಕ್ಷಿತ ಚಾಲಕ ವರ್ಗದವರಿಗೆ ಪಾಠ ಹೇಳಬೇಕೆ? ಅಥವಾ ಡಿವಿಸಿ, ಕುದುರೆಮುಖ, ನರ್ಮದಾ ಯೋಜನೆಗಳನ್ನು ಹೆಣೆಯುವ 'ತಜ್ಞ'ರಿಗೆ ಹಾಗೂ ಅಂಥ ಯೋಜನೆಗಳನ್ನು ಜಾರಿಗೆ ತನ್ನಿರೆಂದು ಒತ್ತಾಯಿಸುವ ಶಾಸಕರಿಗೆ ಪಾಠ ಹೇಳಬೇಕೆ?

ಈ ಎರಡೂ ಹಂತಗಳಲ್ಲಿ ಇಂದು ಪರಿಸರ ಕುರಿತು ಜಾಗೃತಿ ಉಂಟಾಗಬೇಕಾಗಿದೆ. ಅಣುಶಕ್ತಿಯ ಪರಿಣಾಮಗಳ ಬಗ್ಗೆ ಶಾಸಕರಿಗೆಲ್ಲ ಮೂರು ತಿಂಗಳು ಕಟ್ಟುನಿಟ್ಟಿನ ಶಿಕ್ಷಣ ನೀಡಬೇಕೆಂದು ಡಾ. ಶಿವರಾಮ ಕಾರಂತರು ಹಿಂದೊಮ್ಮೆ ಹೇಳಿದ್ದರು. ಕ್ಲಾಸ್‌ರೂಂನಲ್ಲಿ ಕುಳಿತು ಪಾಠ ಕೇಳಿಸಿಕೊಳ್ಳುವಷ್ಟು ಸಮಯವಾಗಲೀ, ಸಂಯಮವಾಗಲೀ ಶಾಸಕರಿಗೆ ಇರಲಿಕ್ಕಿಲ್ಲ. ಅಂಥವರನ್ನು ಹೆಲಿಕಾಪ್ಟರ್‌ನಲ್ಲಿ ಕೂರಿಸಿ ಗೋವಾ ಸರಹದ್ದಿನಿಂದ ಹಿಡಿದು ಪಶ್ಚಿಮ ಘಟ್ಟಗಳ ಗುಂಟ ಕುದುರೆಮುಖದವರೆಗೆ ಉಡ್ಡಯನ ಮಾಡಿಸಬೇಕು. ಜತೆಗೆ ವೀಡಿಯೋ ಕ್ಯಾಮರಾ ಇದ್ದರೆ ಇನ್ನೂ ಒಳ್ಳೆಯದು. ಕಾಳಿ ಮೂಲದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದುರು ಅಗೆಯುವುದೂ, ಅರಣ್ಯ ಕಡಿಯುವುದೂ, ಅಲ್ಲಿ ಎಂಟು ಅಣೆಕಟ್ಟುಗಳಿಗಾಗಿ ಹಾಗೂ ಅಣುಸ್ಥಾವರಕ್ಕಾಗಿ ನಡೆಯುತ್ತಿರುವ ಸಿದ್ಧತೆಗಳನ್ನು ತೋರಿಸಿ, ಸಮೃದ್ಧವಾದ ಯುಪಟೋರಿಯಮ್ ಕಳೆಯನ್ನೂ, ನೀಲಗಿರಿಯ ವಿಫಲ ಪ್ರಯೋಗಗಳನ್ನೂ ದರ್ಶನ ಮಾಡಿಸಿ ಲಿಂಗನಮಕ್ಕಿಗೆ ಕರೆತರಬೇಕು. ಅಲ್ಲಿನ ಬೋಳು ನೆಲ, ಮೆಕ್ಕಲು ತುಂಬಿದ ಜಲಾಶಯ ನೋಡಿ ಆದಮೇಲೆ ವಾರಾಹಿ, ಚಕ್ರಾ ನಂತರ ಭದ್ರಾ ನದಿಯ ಅವಸ್ಥೆ ತೋರಿಸಿ ಕುದುರೆಮುಖ ಬೆಟ್ಟದಲ್ಲಿಳಿಸಬೇಕು. ಐದು ವರ್ಷಗಳ ನಂತರ ಮತ್ತೆ ಅದೇ ರೂಟ್‌ನಲ್ಲಿ ಉಡ್ಡಯನ ಕೈಗೊಂಡು ಬದಲಾವಣೆಯ ಬವಣೆಯನ್ನು ಹಿಂದಿನ ವಿಡಿಯೋ ಚಿತ್ರಗಳ ಹೋಲಿಕೆಯೊಂದಿಗೆ ವಿವರಿಸಬೇಕು.

ಅಭಿವೃದ್ಧಿ ಯೋಜನೆಗಳ ಫಲಾಫಲಗಳ ಕುರಿತು ಇಂಥ ಸಮಗ್ರ ಚಿತ್ರದ (ಮ್ಯಾಕ್ರೋಲೆವೆಲ್) ಪಾಠಗಳು ಜತೆಗೇ ಇನ್ನೊಂದು ಹಂತದಲ್ಲಿ ವೈಯಕ್ತಿಕ (ಮೈಕ್ರೋ ಲೆವೆಲ್) ಮಟ್ಟದಲ್ಲಿ ಪರಿಸರ ಧ್ವಂಸ ಮಾಡುವವರಿಗಾಗಿ ಪ್ರತ್ಯೇಕ ಪಾಠದ ವ್ಯವಸ್ಥೆ ಜಾರಿಗೆ ಬರಬೇಕು. ಇಲ್ಲಿ ನದಿ, ಪರ್ವತ, ಅರಣ್ಯ, ಕರಾವಳಿಗಳ ಪಕ್ಷಿನೋಟ

ಅಗತ್ಯವಿಲ್ಲ. ಈ ಬಗೆಯ ಶಿಕ್ಷಣಕ್ಕೆಂದು ಚಿತ್ರೀಕರಿಸಬೇಕಾದ ಸಂಗತಿಗಳ ಕೆಲ ಉದಾಹರಣೆ ಇಲ್ಲಿವೆ:

–ಬೆಂಗಳೂರಿನ ಖ್ಯಾತ ವಿಶ್ವೇಶ್ವರಯ್ಯ ವಿಜ್ಞಾನ ವಸ್ತುಸಂಗ್ರಹಾಲಯದಲ್ಲಿ ಮೂರಂತಸ್ತಿನ ಪಾವಟಿಗೆಗಳಗುಂಟ ಗೋಡೆಯ ಮೇಲೆ ಜನಸಾಮಾನ್ಯರು ಉಗುಳಿದ ಕಫ, ಎಂಜಲು, ಸಿಂಬಳಗಳ ಸಹಸ್ರಾರು ಚಿತ್ರಗಳಿವೆ;

–ಕತ್ತರಿ ರಸ್ತೆಗಳಲ್ಲಿ ಕೆಂಪು ದೀಪ ಹಸಿರಾದಾಗ ನೂರಾರು ಆಟೋರಿಕ್ಷಾ, ಕಾರು, ಲಾರಿ, ಸ್ಕೂಟರುಗಳು ಒಂದೇ ಸಮನೆ ಹಾರ್ನ್ ಬಾರಿಸುತ್ತ ಮುನ್ನುಗ್ಗಲು ಯತ್ನಿಸುತ್ತವೆ;

–ಬಸ್ ನಿಲ್ದಾಣದಲ್ಲಿ ಅಷ್ಟು ದೊಡ್ಡದಾಗಿ 'ಸಾರ್ವಜನಿಕ ಮೂತ್ರಿ' ಎಂದು ಬರೆದಿದ್ದರೂ ಅದರೊಳಕ್ಕೆ ಹೋಗಲು ಇಷ್ಟಪಡದೇ ಹೊರಗಿನ ಗೋಡೆಗೆ ಗುರಿಯಿಟ್ಟು ಜನರು ಕಾರಂಜಿ ಸೃಷ್ಟಿಸುತ್ತಿರುತ್ತಾರೆ;

–ಕಸದ ತೊಟ್ಟಿ ಇನ್ನೂ ಹತ್ತು ಅಡಿ ದೂರವಿರುವಾಗಲೇ ಒಲಿಂಪಿಕ್ ಸ್ಪರ್ಧೆಗೆ ಶಾಟ್ಪುಟ್ ತಾಲೀಮು ಮಾಡುವಂತೆ ಗೃಹಿಣಿ ಗೌರಮ್ಮ ತನ್ನ ಮನೆಯ ಕಸವನ್ನು ರೊಯ್ಯನೆ ಬೀಸಿ ಬಿಸಾಕುತ್ತಾಳೆ;

–ಅಣ್ಣಮ್ಮ ದೇವಿ, ಅಯ್ಯಪ್ಪ ಮಹೋತ್ಸವ ಎಂದು ವಾರಗಳ ಪರ್ಯಂತ ಬೀದಿಯಲ್ಲಿ ಲೌಡ್‌ಸ್ಪೀಕರ್‌ನಲ್ಲಿ ಡಿಸ್ಕೋ ಹಾಡುಗಳು ಕಿರುಚುತ್ತಿರುತ್ತವೆ;

–ಅದೇ ಉತ್ಸವಕ್ಕೆ ತಳಿರುತೋರಣ ಕಟ್ಟಲೆಂದು ಹದಿವಯಸ್ಸಿನ ಹೈದರು ಬೀದಿ ಬದಿಯ ಮಾವಿನಗಿಡ, ಸಿಲ್ವರ್ ಓಕ್, ರ್ಹೋಡೋಡೆಂಡ್ರಾನ್ ಗಿಡಗಳ ಟೊಂಗೆಯ ಕಂತೆಕಂತೆಯನ್ನೇ ಹೊತ್ತು ತರುತ್ತಾರೆ;

–ಕಿಕ್ಕಿರಿದ ಬಸ್‌ನಲ್ಲಿ 'ಧೂಮಪಾನ ನಿಷೇಧ' ಎಂದು ಬರೆದಿರುವ ಫಲಕದ ಕೆಳಗೆ ಐಷಾರಾಮಾಗಿ ಇಬ್ಬರು ಬೀಡಿ – ಸಿಗರೇಟು ಸೇದುತ್ತಾರೆ; ಮೂಗಿನ ಕಿಟ್ಟ ತೆಗೆದು ಅಲ್ಲೇ ಒರೆಸುತ್ತಾರೆ; ಕಡಲೇಕಾಯಿ ತಿನ್ನುತ್ತ ಅಲ್ಲೇ ಸಿಪ್ಪೆ ಬಿಸಾಕುತ್ತಾರೆ; ಎಲೆ ಅಡಿಕೆ ಅಗಿದು ಪಿಚಕ್ಕೆಂದು ಉಗುಳುತ್ತಾರೆ; ಹಳೇ ಬಸ್ ಟಿಕೆಟ್ಟನ್ನು ಸುರುಳಿ ಮಾಡಿ ಕಿವಿಗೆ ತೂರಿಸಿ ಅಲ್ಲೇ ಚೆಲ್ಲುತ್ತಾರೆ;

–ಮದುವೆಯೋ, ಮುಂಜಿಯೋ ಅಂತೂ ಮೂರು ದಿನಗಳ ಕಾಲ ರಾತ್ರಿಯಿಡೀ ಧನಿಕ ಬಡಾವಣೆಯೊಂದರಲ್ಲಿ ಗೋಡೆ, ಛಾವಣಿ, ಗಿಡ ಮರಗಳಲ್ಲಿ ರಂಗುರಂಗಿನ ಸಹಸ್ರ ದೀಪ ಮಿನುಗುತ್ತಿರುತ್ತವೆ;

–ಮಕ್ಕಳು ಆಟವಾಡುವ ಬಾಲಭವನದ ಪಕ್ಕದಲ್ಲೇ ಬೀದಿ ದೀಪದ ಕಂಬದ ತಳಭಾಗದಲ್ಲಿ ವಿದ್ಯುತ್ ತಂತಿಗಳು ಅಡ್ಡಾದಿಡ್ಡಿ ಕಿತ್ತು ಬಿದ್ದಿವೆ;

–ತುಂಬಿ ತುಳುಕುವ ಒಂದೇ ಕಸದ ತೊಟ್ಟಿಗೆ ಹಂದಿ, ಕಾಗೆ, ನಾಯಿ

ಹಾಗೂ ತಗಡು ಹುಡುಕುವ ಹುಡುಗ ಲಗ್ಗೆ ಹಾಕಿ ಕೆದಕುತ್ತಿದ್ದಾರೆ. ಕಾಲುವೆಯಲ್ಲಿ ಕಸ ಕಟ್ಟಿದ್ದರಿಂದ ನೀರು ನಿಂತು ಸೊಳ್ಳೆಗಳು ಉದ್ಭವವಾಗುತ್ತಿವೆ.

ಹೀಗೆ ಹೇಳಹೋದರೆ ಈ ಪಟ್ಟಿ ಸಾಕಷ್ಟು ಉದ್ದವಾಗುತ್ತದೆ. ನಮ್ಮಲ್ಲಿ ಪರಿಸರದ ಅಧೋಗತಿಯ ಬಗ್ಗೆ ಪಂಚತಾರಾ ಹೋಟೆಲ್‌ಗಳಲ್ಲಿ, ರೋಟರಿ ಸಭಾಂಗಣಗಳಲ್ಲಿ ಚರ್ಚೆ ನಡೆಯುತ್ತವೆಯೇ ಹೊರತು, ವ್ಯಾಕ್ಯೂಮ್ ಹಾರ್ನ್‌ಗಳನ್ನು ಘೀಳಿಟ್ಟಿಸುವ ಲಾರಿ ಚಾಲಕರಿಗೆ ಪರಿಸರ ಪಾಠ ಹೇಳುವ ಯಾವ ವ್ಯವಸ್ಥೆಯೂ ಬಂದಿಲ್ಲ.

ನಮ್ಮ ಸುಸಂಸ್ಕೃತ ಭಾರತದಲ್ಲಿ ಹಿಂದಿನ ಕಾಲದಲ್ಲಿ ಪರಿಸರದ ಬಗ್ಗೆ ತುಂಬ ಕಾಳಜಿ ಇತ್ತೆಂದು ತೋರಿಸಲು ನಾವು 'ಅಭಿಜ್ಞಾನ ಶಾಂಕುಂತಲ'ದ ಸಂಸ್ಕೃತ ಶ್ಲೋಕಗಳನ್ನು ಉದಾಹರಿಸುತ್ತೇವೆ. ವಿಜ್ಞಾನ, ಯೋಗ, ಧ್ಯಾನ, ತತ್ವಜ್ಞಾನ, ತಂತ್ರ ಸಾಧನೆಗಳಲ್ಲೂ ನಾವು ಜಗತ್ತಿಗೇ ಮಾದರಿಯಾಗಿದ್ದೆವೆಂದು ಹೇಳಿಕೊಳ್ಳುತ್ತೇವೆ. ಕಳೆದ ಕೆಲವು ಶತಮಾನಗಳಲ್ಲಿ ಅವೆಲ್ಲ ನಶಿಸಿಹೋದವೆಂದು ಮರುಗುತ್ತಲೋ ವಿದೇಶಿಯರು ನಮ್ಮ ಜ್ಞಾನವನ್ನೆಲ್ಲ ಸಾಗಿಸಿಬಿಟ್ಟಿದ್ದಾರೆಂದು ಆರೋಪಿಸುತ್ತಲೋ ನಮ್ಮ ಇಂದಿನ ಅಸ್ತಿತ್ವಕ್ಕೆ ವ್ಯಾಖ್ಯಾನ ಕೊಡುತ್ತೇವೆ. ಕಂಪ್ಯೂಟರ್, ವಿಸಿಆರ್, ಯೋಗ, ಎಟಿಎಮ್, ಕರಾಟೆ – ಜುಡೋಗಳನ್ನೆಲ್ಲ ನಾವು ಸುಲಭವಾಗಿ ನಮ್ಮದಾಗಿಸಿಕೊಂಡು ಹೆಮ್ಮೆಯಿಂದ ಪ್ರದರ್ಶಿಸುತ್ತೇವೆ.

ಲಂಡನ್‌ನ ಪಿಕಡಿಲ್ಲಿ ಸರ್ಕಸ್‌ನ ಆಚೀಚಿನ ಹೈವೇಗಳಲ್ಲಿ ಕಿಕ್ಕಿರಿದು ಸಂಚರಿಸುವ ಮೋಟಾರ್ ವಾಹನಗಳಿಂದ ಒಂದು ಹಾರ್ನ್ ಸದ್ದು ಕೇಳಬೇಕೆಂದರೂ ಎರಡು ಮೂರು ದಿನಗಳ ಕಾಲ ಕಾಯಬೇಕಾಗುತ್ತದೆ. ವಾಹನ ಚಾಲಕರು ಹಾರ್ನ್ ಬಾರಿಸುವುದೇ ತುಂಬ ಅಪರೂಪ. ಅಲ್ಲಿನ ಅಂಗಡಿಗಳಲ್ಲಿ ದೊರಕುವ ಅಂಟು ಚಾಕಲೇಟ್ ಸುತ್ತಿದ ಕಾಗದದ ಮೇಲೆ ಕಸ ಬಿಸಾಕುವ ಸರಿಯಾದ ವಿಧಾನಗಳ ಬಗೆಗೆ ಸೂಚನೆ ಇರುತ್ತದೆ. 'ನಮ್ಮ ದೇಶವನ್ನು ಚೊಕ್ಕಟವಾಗಿಟ್ಟುಕೊಳ್ಳೋಣ' ಎಂಬ ಘೋಷಣೆಯೂ ಇರುತ್ತದೆ.

ನಾವೇಕೆ ಪಾಶ್ಚಾತ್ಯರ ಈ ಬಗೆಯ ಅನುಕರಣೆ ಮಾಡುತ್ತಿಲ್ಲ? ವೇದ ಕಾಲದಿಂದಲೂ ಪಂಚಮಹಾಭೂತಗಳ ಬಗ್ಗೆ ಹಾಗೂ ಪ್ರಕೃತಿ – ಪುರುಷರ ಏಕತಾನದ ಬಗ್ಗೆ ಉದಾತ್ತ ವಿಚಾರಗಳನ್ನಿಟ್ಟುಕೊಂಡು ಬಂದ ನಾವು ಕಳೆದ ಕೆಲವೇ ದಶಕಗಳಲ್ಲಿ ನೀರು – ಗಾಳಿ – ಭೂಮಿ – ಸಸ್ಯ – ಪ್ರಾಣಿಗಳ ಮಧ್ಯೆ ಹೀಗೇಕೆ ಸಮತೋಲನ ಬಿಗಡಾಯಿಸುವಲ್ಲಿ ತಲ್ಲೀನರಾಗಿದ್ದೇವೆ? ಅಭಿವೃದ್ಧಿ ಎಂದರೆ ಅರಣ್ಯ ಬಲಿದಾನ, ಬಂಜರು ಭೂಮಿಯ ವಿಸ್ತರಣೆ, ನೆಲಜಲ ಮಾಲಿನ್ಯ ಅನಿವಾರ್ಯವೆಂಬುದನ್ನು ಒಪ್ಪಿಕೊಳ್ಳತೊಡಗಿದ್ದೇವೆ?

ಬುಲ್‌ಡೋಜರ್ ಸಂಸ್ಕೃತಿ ನಮಗೇಕೆ ಅಪ್ಯಾಯಮಾನವಾಗುತ್ತಿದೆ?

*****

ಪರಿಚಯ :

ನಾಗೇಶ್ ಹೆಗಡೆ ಉತ್ತರ ಕನ್ನಡ ಜಿಲ್ಲೆಯ 'ಬಕ್ಕಮನೆ'ಯವರು ಕಲ್ಕತ್ತಾ ಮತ್ತು ದೆಹಲಿ ವಿಶ್ವವಿದ್ಯಾಲಯಗಳಿಂದ ಭೂವಿಜ್ಞಾನ ಹಾಗೂ ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕೆಲವು ಕಾಲ ನೈನಿತಾಲ್‌ನ ಕುಮಾವೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ವೃತ್ತಿಯಲಿದ್ದರು. 'ಪ್ರಜಾವಾಣಿ' ಬಳಗದಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಈಗ ಅಂಕಣಕಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾಗೇಶ್ ಹೆಗಡೆಯವರು ಇಲ್ಲಿಯವರೆಗೆ ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇರುವುದೊಂದೇ ಭೂಮಿ, ಕರೆಯಲಿ ಚಿನ್ನ ಕೆರೆಯೇ ಚಿನ್ನ, ಆಚಿನ ಲೋಕಕ್ಕೆ ಕಾಲಕೋಶ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಜೀವಮಾನ ಸಾಧನೆಗಾಗಿ ಮಾಧ್ಯಮ ಅಕಾಡೆಮಿ ಪ್ರಶಸ್ತಿಗಳು ಹೆಗಡೆಯವರನ್ನು ಅರಸಿಕೊಂಡು ಬಂದಿವೆ.

ಇಪ್ಪತ್ತನೇ ಶತಮಾನದಲ್ಲಿ ಅವತರಿಸಿದ ಬುಲ್‌ಡೋಜರ್ ನೂರು ಜನರ ಕೆಲಸವನ್ನು ಕ್ಷಣಾರ್ಧದಲ್ಲಿ ಮಾಡಿ ಮುಗಿಸಿ, ಬಡವ ಬಲ್ಲಿದರ ನಡುವಣ ಅಂತರವನ್ನು ನೂರು ಪಟ್ಟು ಹೆಚ್ಚಿಸಿ, ನೆಲವನ್ನು ಬಗೆದು ಬದಿಗೆ ತಳ್ಳುವುದೇ ಅಭಿವೃದ್ಧಿಯ ಮಹಾಕಾರ್ಯವೆಂಬ ಭ್ರಮೆಯನ್ನು ಹುಟ್ಟಿಸುವ ಯಂತ್ರವಾಗಿದೆ. ಬಿಹಾರ, ಒರಿಸ್ಸಾ, ರಾಜಾಸ್ತಾನಗಳಲ್ಲಿ ಮಾತ್ರವಲ್ಲ. ಹತ್ತಿರದ ದೋಣಿಮಲೈ, ಕುದುರೆಮುಖಗಳಲ್ಲಿ ಇದು ಕೆಂಧೂಳನ್ನು ಎಬ್ಬಿಸಿದೆ. ಸಹ್ಯಾದ್ರಿಯ ಕಾಳಿ, ವಾರಾಹಿ ಯೋಜನೆಗಳಲ್ಲಿ ಗುಡ್ಡ ಬೆಟ್ಟಗಳನ್ನು ನೆಲಸಮ ಮಾಡಿದೆ. ಆಂಧ್ರಕ್ಕೆ ಹೊಂದಿಕೊಂಡ ಬಳ್ಳಾರಿಯ ಗಡಿಪ್ರದೇಶದಲ್ಲಿ ಭೂಮಿಯ ಒಡಲಿಂದ ಮಣ್ಣನ್ನು ಎತ್ತಿ ಎತ್ತಿ ಲಾರಿಗಳಿಗೆ ತುಂಬಿಸಿ ದೊಡ್ಡ ಪ್ರಪಾತಗಳನ್ನು ನಿರ್ಮಿಸಿದೆ. ಬೆಂಗಳೂರಿನ ರೆವಿನ್ಯೂ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡವರ ಕಾಂಕ್ರೀಟ್ ಗೋಡೆಗಳನ್ನು ಅಪ್ಪಳಿಸಿ ಬೀಳಿಸಿದೆ. ರಸ್ತೆ ಅಗಲೀಕರಣಕ್ಕೆಂದು ಇಬ್ಬದಿಯ ಮನೆಗಳನ್ನು ಬಡಿದು ನೆಲಕ್ಕುರಿಳಿಸಿದೆ. ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ, ಅಣೆಕಟ್ಟು ನಿರ್ಮಿಸಲು ಬುಲ್‌ಡೋಜರ್ ಬೇಕೇಬೇಕದರೂ ಅದು ಅಭಿವೃದ್ಧಿಗೆ ಬಳಕೆಯಾಗಿರುವುದಕ್ಕಿಂತ ನಾಶಕ್ಕೆ ಬಳಕೆಯಾಗಿರುವುದೇ ಹೆಚ್ಚು. ನಿಸರ್ಗ ಲಕ್ಷಾಂತರ ವರ್ಷಗಳಿಂದ ಮಾನವನ ಬದುಕಿಗೆ ಅನುಕೂಲವಾಗುವಂತೆ ನಿರ್ಮಿಸಿಟ್ಟ ಸಮತೋಲನವನ್ನು ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಅಧ್ವಾನ ಮಾಡಿ ಮುಂದಿನ ಇಡೀ ಪೀಳಿಗೆಯ ಬದುಕನ್ನು ದುಸ್ತರವಾಗಿಸಿದ, ಭದ್ರಾನದಿಯಲ್ಲಿ ಬೆಟ್ಟವಷ್ಟು ಮೆಕ್ಕಲು ಮಣ್ಣು ತುಂಬಿಸಿದ, ಭದ್ರಾಜಲಾಶಯದಲ್ಲಿ ಹೂಳು ತುಂಬಿ ಲಕ್ಷಾಂತರ ಎಕರೆ ಭೂಮೊಗೆ ನೀರು ಖೋತಾ ಆಗಿಸಿದ ಅಪರಾಧಿಯೂ ಬುಲ್‌ಡೋಜರ್ರೇ. ಇಷ್ಟಾಗಿಯೂ ಪರಿಸರ ಕುರಿತು ನಾವು ಸೂಕ್ಷ್ಮ ಸಂವೇದನೆಯ ಪಾಠ ಕಲಿಯುವುದು ಯಾವಾಗ? ಇಂಥ ಮನೆಹಾಳು ಯೋಜನೆಗಳನ್ನು ರೂಪಿಸುವ ತಜ್ಞರಿಗೆ ಮತ್ತು ಅಂಥ ಯೋಜನೆಗಳಿಗಾಗಿ ಒತ್ತಾಯಿಸುವ ಶಾಸಕರಿಗೆ ಪಾಠ ಹೇಳುವುದು ಹೇಗೆ? ಅದಕ್ಕಾಗಿ ಲೇಖಕರು ಅಭಿವೃದ್ಧಿ ಯೋಜನೆಗಳ ಫಲಾಫಲಗಳನ್ನು ಕುರಿತ ಸಮಗ್ರ ಚಿತ್ರದ ಪಾಠಗಳನ್ನು ಇನ್ನೊಂದು ಕಡೆ ವೈಯಕ್ತಿಕ ಮಟ್ಟದಲ್ಲಿ ಪರಿಸರ ಹಾಳುಮಾಡುವವರಿಗಾಗಿ ಪ್ರತ್ಯೇಕ ಪಾಠದ ವ್ಯವಸ್ಥೆಯಗಬೇಕೆಂದೂ ಅಬಿಪ್ರಾಯಪಟ್ಟಿರುವುದಲ್ಲದೆ ಅಂಥ ಚಿತ್ರಗಳನ್ನೂ ಈ ಲೇಖನದಲ್ಲಿ ಬಿಡಿಸಿದ್ದಾರೆ.

೭. ಯುಗಪುರುಷ ಗಾಂಧೀಜಿ

– ಬಿ.ಎಂ. ಚಂದ್ರಶೇಖರಯ್ಯ

"ಇಪ್ಪತ್ತನೆಯ ಶತಮಾನದ ಎರಡು ಅದ್ಭುತಗಳೆಂದರೆ – ಒಂದು ಗಾಂಧೀಜಿ ಮತ್ತೊಂದು ಅಣುಬಾಂಬ್"– ಪ್ರಖ್ಯಾತ ರಾಜಕಾರಣಿ, ಸಮಾಜವಾದಿ ಹಾಗೂ ಅರ್ಥಶಾಸ್ತ್ರಜ್ಞ ಡಾ. ರಾಮಮನೋಹರ ಲೋಹಿಯಾ ಅವರು ಇಪ್ಪತ್ತನೆಯ ಶತಮಾನದ ವಿದ್ಯಮಾನವನ್ನು ಬಣ್ಣಿಸಿದ್ದು ಹೀಗೆ. ಒಂದು ಜಗತ್ತಿನ ಶಾಂತಿ ಹಾಗೂ ಮಾನವತೆಗೆ ಪ್ರತೀಕವಾದರೆ, ಮತ್ತೊಂದು ಹಿಂಸೆ ಹಾಗೂ ವಿನಾಶದ ಸಂಕೇತ.

'ರಕ್ತಮಾಂಸಗಳಿಂದ ಕೂಡಿದ ಇಂತಹ ಮಹಾತ್ಮನೊಬ್ಬನು ಮನುಷ್ಯ ರೂಪದಲ್ಲಿ ಇದೇ ಭೂಮಿಯ ಮೇಲೆ ನಡೆದಾಡುತ್ತಿದ್ದನೆಂದರೆ ಮುಂದಿನ ಪೀಳಿಗೆಯು ನಂಬುವುದು ಕಷ್ಟ!' ಎಂದು ಮಹಾತ್ಮಗಾಂಧಿಯವರನ್ನು ಕುರಿತು ಮಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ಉದ್ಗರಿಸಿದ್ದಾರೆ. ನಿಜವಾಗಿ ಹೇಳಬೇಕೆಂದರೆ ಅಂತಹ ನಿಷ್ಕಳಂಕ, ಧೀರೋದಾತ್ತ ಮತ್ತು ಘನತೆವೆತ್ತ ಚೇತನವು ಈ ಭೂಮಿಯ ಮೇಲೆ ಹಿಂದೆ ಎಂದೂ ಮೈದಳೆಯಲಿಲ್ಲ. ಆತ ಮನುಷ್ಯರಲ್ಲಿ ಮನುಷ್ಯ, ಧೀರರಲ್ಲಿ ಧೀರ, ದೇಶಭಕ್ತರಲ್ಲಿ ದೇಶಭಕ್ತ ಮತ್ತು ಇನ್ನೂ ಮುಂದುವರಿದು ಹೇಳಬೇಕೆಂದರೆ ಅವರು ಮಾನವೀಯತೆಯೇ ಮೂರ್ತಿವೆತ್ತಂತಿದ್ದ ಮಹಾನ್ ಆತ್ಮ!

ಆತನ ಜೀವಿತ ಕಾಲದಲ್ಲೇ ಆತನನ್ನು ಎಷ್ಟೋ ಜನರು ಪೂಜಿಸಲು ಯತ್ನಿಸಿದರು, ಸಂತನೆಂದು ಕರೆದರು, ಮಹಾತ್ಮನೆಂದು ಹೊಗಳಿದರು, ದೇವರೆಂದೇ ಭಾವಿಸಿದರು. ಆದರೆ ಅವರೆಂದೂ ಅದನ್ನು ಒಪ್ಪಲಿಲ್ಲ! "ಯಾವುದೇ ಆಕಾರ ಅಥವಾ ಸ್ವರೂಪದಲ್ಲಿ ನಾನು ಸಂತನಂತೆ ಕಾಣುವೆನೆಂದು ಭಾವಿಸಿಲ್ಲ. ಆದರೆ ನಾನು ದೇವರ ಸೇವಕನೆಂದು ಮಾತ್ರ ಹೇಳಬಲ್ಲೆ!" ಎನ್ನುತ್ತಿದ್ದರು.

ಈ ಮಹಾಪುರುಷನು ಪುಟ್ಟ ಮೋಹನನಾಗಿದ್ದಾಗ ನೋಡಿದ್ದ ಯಾರೇ ಆಗಲಿ, ಮುಂದೆ ಆತನೊಬ್ಬ ಮಹಾಪುರುಷನಾಗುವನೆಂದು ಭಾವಿಸುವಂತಿರಲಿಲ್ಲ. ಒಂದು ಸಾಮಾನ್ಯ ಶಾಲೆಗೆ ಹೋಗುತ್ತಿದ್ದ ಆತನು ಪಾಠಪ್ರವಚನಗಳಲ್ಲೇನೂ ಅಷ್ಟು ಚುರುಕಾಗಿರಲಿಲ್ಲ. ಆತನ ನೆನಪಿನ ಶಕ್ತಿಯೂ ಅಷ್ಟಕ್ಕಷ್ಟೆ! ಮುಂದೆ ಪ್ರೌಢಶಾಲೆಗೆ ಹೋದಾಗಲೂ, ಅಲ್ಲಿಯೂ ಆತನು ಸಾಧಾರಣ ವಿದ್ಯಾರ್ಥಿಯೇ! ಅದರೆ ಶಾಲೆಗೆ ಹೋಗಿಬರುವುದರಲ್ಲಿ ಅತ್ಯಂತ ನಿಯಮಬದ್ಧ. ಕುಶಲಮತಿಯಲ್ಲದಿದ್ದರೂ ಕಷ್ಟಪಟ್ಟು

ಅಭ್ಯಾಸ ಮಾಡುತ್ತಿದ್ದುದಲ್ಲದೆ, ಉತ್ತಮ ವಿದ್ಯಾರ್ಥಿಯೆಂದು ತೋರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದನು. ಮೊದಮೊದಲು ಆತನಿಗೆ ಇಂಗ್ಲಿಷ್ ಭಾಷೆಯೆಂದರೆ ತಲೆನೋವು. ಆದರೆ ಕಷ್ಟಪಟ್ಟು ಅಭ್ಯಾಸ ಮಾಡಿ ಆ ಭಾಷೆಯಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿ, ಮುಂದೆ ವಿಶ್ವದ ಮಹಾನ್ ಬರಹಗಾರರಲ್ಲೊಬ್ಬರೆನಿಸಿದರು! ಸಂಸ್ಕೃತದಲ್ಲೂ ಆಸಕ್ತಿ ಕಡಿಮೆಯೇ. ಆದರೆ ರೇಖಾಗಣಿತದಲ್ಲಿ ಅತ್ಯಾಸಕ್ತಿ. ಆಟೋಟಗಳಲ್ಲಿಯೂ ಆಸಕ್ತಿಯಿರಲಿಲ್ಲ!

ಸಾಮಾನ್ಯರಲ್ಲಿ ಸಾಮಾನ್ಯನಾಗಿ ಹುಟ್ಟಿ ಅಸಾಮಾನ್ಯನಾಗಿ ತ್ರಿವಿಕ್ರಮನಂತೆ ಬೆಳೆದ ಮೋಹನದಾಸ ಕರಮಚಂದ್ ಗಾಂಧಿ ಹುಟ್ಟಿದ್ದು ಕಾಥೆವಾಡದ ಪೋರ್‌ಬಂದರ್‌ನಲ್ಲಿ ಅಕ್ಟೋಬರ್ ೨, ೧೮೬೯ರಲ್ಲಿ. ತಂದೆ ಕರಮಚಂದ ಗಾಂಧಿ, ತಾಯಿ ಪುತ್ಥಲಿಬಾಯಿ. ಅವರದು ಶ್ರೀಮಂತ ವ್ಯಾಪಾರೀ ಮನೆತನ. ಅವರ ತಂದೆ ಮತ್ತು ಅಜ್ಜ ಇಬ್ಬರೂ ಆ ರಾಜ್ಯದ ಪ್ರಧಾನಮಂತ್ರಿಗಳಾಗಿದ್ದವರು. ಅವರ ತಾಯಿ ಅತ್ಯಂತ ಧಾರ್ಮಿಕ ಹಾಗೂ ಸಾತ್ವಿಕ ಪ್ರವೃತ್ತಿಯ ಮಹಿಳೆ. ದೇವರಪೂಜೆ ಸಲ್ಲಿಸದೆ ಅನ್ನವನ್ನೇ ಮುಟ್ಟುತ್ತಿರಲಿಲ್ಲ. ಗಾಂಧೀಜಿ ಸಾರ್ವಜನಿಕ ಜೀವನದಲ್ಲಿ ತೊಡಗುವ ಕಲೆಯನ್ನು ತಮ್ಮ ತಂದೆಯಿಂದಲೂ, ಧಾರ್ಮಿಕ ಪ್ರವೃತ್ತಿಯನ್ನು ತಮ್ಮ ತಾಯಿಯಿಂದಲೂ ಪಡೆದರೆಂದು ಹೇಳಬಹುದು.

ಮೋಹನ ಅತ್ಯಂತ ವಿಧೇಯ ಬಾಲಕ. ಹಿರಿಯರು ಹೇಳಿದಂತೆ ನಡೆದುಕೊಳ್ಳುತ್ತಿದ್ದುದಲ್ಲದೆ, ಅದನ್ನೆಂದೂ ಪ್ರಶ್ನಿಸಿದವನಲ್ಲ. ಬಾಲಕನಾಗಿದ್ದಾಗಲೇ ಆತನು ಒಮ್ಮೆ 'ರಾಜಾ ಹರಿಶ್ಚಂದ್ರ' ನಾಟಕವನ್ನು ನೋಡಿದನು. ಅದರಿಂದ ಆತನು ಎಷ್ಟು ಪ್ರಭಾವಿತನಾದನೆಂದರೆ, 'ಸತ್ತರೂ ಕೂಡ ಸುಳ್ಳು ಹೇಳಬಾರದು' ಎಂದು ಅಂದೇ ನಿರ್ಧರಿಸಿದನು!

ಗಾಂಧೀಜಿಗೆ ಮದುವೆಯಾದಾಗ, ಅವರಿನ್ನೂ ಬಾಲಕ. ಬಾಲ್ಯವಿವಾಹ ಅಂದಿನ ಸಂಪ್ರದಾಯವಾಗಿತ್ತು. ಅವರ ಹೆಂಡತಿ ಕಸ್ತೂರಿಬಾಯಿ ಒಬ್ಬ ಸುಶೀಲೆ ಹಾಗೂ ಮೋಹಕ ಬಾಲಕಿ. ಆಕೆ ಎಂದೂ ಶಾಲೆಗೆ ಹೋದವಳಲ್ಲ. ಓದು ಬರಹ ಕಲಿಯದಿದ್ದರೂ, ಆಕೆ ಸದ್ಗೃಹಿಣಿಯಾಗಿದ್ದಳು. ಗಂಡನನ್ನು ನೆರಳಿನಂತೆ ಅನುಸರಿಸುತ್ತಿದ್ದಳು. ಕೆಲ ಕಾಲದ ನಂತರ ಬಾಪು ಮೆಟ್ರಿಕ್ ಪರೀಕ್ಷೆ ಪಾಸು ಮಾಡಿದರು. ಅವರಿಗೆ ವೈದ್ಯರಾಗಬೇಕೆಂಬ ಆಸೆಯಿದ್ದರೂ ಮನೆಯವರೆಲ್ಲರ ಇಚ್ಛೆಗನುಸಾರವಾಗಿ ಕಾನೂನು ಅಭ್ಯಾಸ ಮಾಡಬೇಕಾಯಿತು. ಅದಕ್ಕಾಗಿ ಅವರು ಇಂಗ್ಲೆಂಡಿಗೆ ಹೋಗಲು ನಿರ್ಧರಿಸಿದರು. ಪರದೇಶಕ್ಕೆ ಹೋಗಿ ಅಭ್ಯಾಸ ಮಾಡುವುದನ್ನು ಅವರ ಮನೆಯವರ್‍ಯಾರೂ ಒಪ್ಪಲಿಲ್ಲ. ೧೯ ವರ್ಷ ವಯಸ್ಸಿನ ಬಾಪು ತಮ್ಮ ವಯಸ್ಸಿಗನುಗುಣವಾಗಿ ಹಟ ಹಿಡಿದು, ೧೮೮೮ರಲ್ಲಿ ಬೊಂಬಾಯಿಯಿಂದ ಉಗಿ ಹಡಗು ಹಿಡಿದು ಇಂಗ್ಲೆಂಡಿಗೆ ಹೊರಟೇಬಿಟ್ಟರು.

ಇಂಗ್ಲೆಂಡಿನಲ್ಲಿ ತಾನು ಬಯಸಿದಷ್ಟು ಸರಳವಾದ ಆಹಾರ ದೊರಕುವುದು ಕಷ್ಟಸಾಧ್ಯವೆಂದು ತಿಳಿದ ಗಾಂಧೀಜಿ ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳಲು

ಕಲಿತರು. ಅಲ್ಲಿದ್ದ ಇತರ ಭಾರತೀಯ ವಿದ್ಯಾರ್ಥಿಗಳಂತೆ ಇಂಗ್ಲಿಷ್ ಜಂಟ್ಲಮನ್ ಆಗುವುದು ತಮ್ಮ ಜೀವಿತದ ಗುರಿಯಲ್ಲವೆಂದು ಬೇಗ ಅರಿತುಕೊಂಡರು.

ಮೋಹನನ ಇಂಗ್ಲೆಂಡ್ ಜೀವನದ ಕತೆಯು ಕ್ರಮೇಣ ಸರಳ ಜೀವನದ ಕತೆಯಾಗಿ ಮಾರ್ಪಟ್ಟಿತು! ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಎಲ್ಲಾ ಪರೀಕ್ಷೆಗಳನ್ನು ಪಾಸು ಮಾಡಿ ಇಂಗ್ಲೆಂಡಿನ ವಕೀಲರ ಸಂಘದ(ಬಾರ್) ಸನ್ನದನ್ನು ಪಡೆದು, ಹೈಕೋರ್ಟಿನ ವಕೀಲರ ಪಟ್ಟಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿ ಗಾಂಧೀಜಿ ಭಾರತಕ್ಕೆ ಮರಳಿ ಬಂದರು. ಆದರೆ ಆ ವೇಳೆಗೆ ಅವರ ಅತ್ಯಂತ ಪ್ರೀತಿಯ ತಾಯಿ ಇನ್ನಿಲ್ಲವಾಗಿದ್ದರು. ಗಾಂಧೀಜಿ ವಕೀಲರಾಗಿ, ಮೊದಲು ರಾಜಕೋಟೆಯಲ್ಲಿ, ನಂತರ ಮುಂಬಯಿಯಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಆಗ ಅವರ ಗಳಿಕೆ ಮಾಸಿಕ ಮುನ್ನೂರು ರೂ.ಗಳಾಗಿತ್ತು. ಅಷ್ಟರಲ್ಲಿ ಅವರಿಗೆ ದಕ್ಷಿಣ ಆಫ್ರಿಕಾದಲ್ಲಿದ್ದ ಭಾರತೀಯ ವ್ಯಾಪಾರೀ ಸಂಸ್ಥೆಯೊಂದರ ಕಾನೂನು ಸಲಹೆಗಾರರಾಗಿ ಹೋಗುವ ಅವಕಾಶ ದೊರೆಯಿತು. ಮತ್ತೆ ಅವರು ೧೮೯೩ರ ಏಪ್ರಿಲ್‌ನಲ್ಲಿ ವಿದೇಶಕ್ಕೆ ಹೊರಟರು.

ದಕ್ಷಿಣ ಆಫ್ರಿಕಾ ಬಹು ಶ್ರೀಮಂತ ಹಾಗೂ ಸುಂದರವಾದ ದೇಶ. ಆದರೆ ಕೆಲವು ಅನಿಷ್ಟ ಪದ್ಧತಿಗಳಿಂದ ಕೂಡಿದ ದೇಶವಾಗಿತ್ತು. ಅಲ್ಲಿಯ ಸರಕಾರ ಅಲ್ಲಿ ಹೊಟ್ಟೆಪಾಡಿಗಾಗಿ ಬಂದು ನೆಲೆಸಿದ ಬಡ ಕೂಲಿಕಾರರನ್ನು ತೀರಾ ಅಮಾನವೀಯ ರೀತಿಯಲ್ಲಿ ನಡೆಸಿಕೊಳ್ಳುತ್ತಿತ್ತು. ಅವರು ಕೂಲಿಗಾಗಿ ತೀರ ನಿಕೃಷ್ಟ ಪರಿಸ್ಥಿತಿ, ಪರಿಸರಗಳಲ್ಲಿ ದುಡಿಯುತ್ತಾ, ಗುಲಾಮರಂತೆ ಬದುಕುತ್ತಿದ್ದುದನ್ನು ನೋಡಿದ ಗಾಂಧೀಜಿಯವರು ಬಹಳ ಮನನೊಂದು, ಅವರ ಒಳಿತಿಗಾಗಿ ಏನನ್ನಾದರೂ ಮಾಡಲು ನಿರ್ಧರಿಸಿದರು.

ದಕ್ಷಿಣ ಆಫ್ರಿಕದ ಬಿಳಿಯರು ಅಲ್ಲಿನ ಮೂಲನಿವಾಸಿಗಳಾದ ನೀಗ್ರೋಗಳನ್ನು ಹಾಗೆಯೇ ಭಾರತೀಯರನ್ನು ಕೂಡ ತೀರಾ ಹೀನಾಯವಾಗಿ ಕಾಣುತ್ತಿದ್ದುದಲ್ಲದೆ ಅಸ್ಪೃಶ್ಯರಂತೆ ನಡೆಯಿಸಿಕೊಳ್ಳುತ್ತಿದ್ದರು. ಅಲ್ಲಿದ್ದ ಕೆಲವು ಭಾರತೀಯರು ಶ್ರೀಮಂತರು, ಸಂಸ್ಕೃತರು, ವಿದ್ಯಾವಂತರಾಗಿದ್ದರೂ ಅವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಅವರಿಗೆ ಉತ್ತಮ ಕೆಲಸಗಳಾಗಲೀ ಒಳ್ಳೆಯ ಬಡಾವಣೆಗಳಲ್ಲಿ ಮನೆಗಳಾಗಲೀ ದೊರೆಯುತ್ತಿರಲಿಲ್ಲ. ಇದು ಸ್ವತಃ ಗಾಂಧೀಜಿಯವರ ಅನುಭವಕ್ಕೆ ಬಂದಿತು. ಅವರೊಮ್ಮೆ ರೈಲಿನ ಪ್ರಥಮ ದರ್ಜೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಒಂದು ನಿಲ್ದಾಣದಲ್ಲಿ ಆ ಡಬ್ಬಿಯೊಳಗೆ ಯೂರೋಪಿಯನ್ ಪ್ರಯಾಣಿಕನೊಬ್ಬನು ಬಂದನು. ಅವನು ಅಲ್ಲಿ ಈಗಾಗಲೇ ಕುಳಿತಿದ್ದ ಗಾಂಧೀಜಿಯವರನ್ನು ನೋಡಿ, ರೈಲ್ವೆ ರಕ್ಷಕನಿಗೆ ದೂರು ನೀಡಿದನು. ರಕ್ಷಕನು ಅಲ್ಲಿಗೆ ಬಂದು, ನೀಗ್ರೋಗಳಿಗೆ ಮೀಸಲಿಟ್ಟ ಡಬ್ಬಿಗೆ ಹೋಗಿ ಕುಳಿತುಕೊಳ್ಳಲು ಹೇಳಿದನು. ಗಾಂಧೀಜಿಯುವರು ತಮ್ಮಲ್ಲಿದ್ದ ಪ್ರಥಮದರ್ಜೆಯ ಟಿಕೇಟನ್ನು ತೋರಿಸಿ ಅವನ ಆಜ್ಞೆಯನ್ನು ನಿರಾಕರಿಸಿದರು. ಆದರೆ ರಕ್ಷಕನು, ಪೊಲೀಸನನ್ನು ಕರೆಸಿ ಅವನ ನೆರವಿನಿಂದ ಗಾಂಧಿಯವರನ್ನು

ಪ್ಲಾಟ್‌ಫಾರ್ಮಿನ ಮೇಲೆ ತಳ್ಳಿಬಿಟ್ಟನು. ಅವರ ಸಾಮಾನುಗಳು ರೈಲಿನಲ್ಲೇ ಉಳಿದುವು. ಅವರು ಮಾತ್ರ ಇಡೀ ರಾತ್ರಿ ಚಳಿಯಲ್ಲಿ ನಡುಗುತ್ತಾ ನಿರೀಕ್ಷಣಾ ಕೊಠಡಿಯಲ್ಲೇ ಕಾಲ ಕಳೆಯಬೇಕಾಯಿತು! ಇದು ಅವರ ಜೀವನದ ಸ್ಮರಣೀಯ ತಿರುವು. ಅಂದೇ ಅವರು ತಮ್ಮನ್ನು ದಲಿತರು ಹಾಗೂ ತುಳಿತಕ್ಕೊಳಗಾದವರ ಮುಂದಾಳನ್ನಾಗಿ ಪರಿವರ್ತಿಸಿದ ಅನಿಷ್ಟಪದ್ಧತಿಗಳ ವಿರುದ್ಧ ಹೋರಾಡಲು ಪಣತೊಟ್ಟರಲ್ಲದೆ, ಪ್ರಪಂಚದೆಲ್ಲೆಡೆಯ ದನಿಯಿಲ್ಲದವರ ದನಿಯಾಗಲು ಮತ್ತು ಭಾರತವನ್ನು ದಾಸ್ಯದಿಂದ ಬಿಡುಗಡೆಗೊಳಿಸಲು ಹಾಗೂ ವಿಶ್ವರಾಷ್ಟ್ರಗಳ ಪಂಕ್ತಿಯಲ್ಲಿ ಭಾರತಕ್ಕೊಂದು ಗೌರವಯುತ ಸ್ಥಾನಮಾನವನ್ನು ದೊರಕಿಸಿಕೊಡಲು ಮುಂದಾದರು! ಆದರೆ ಬಾಪು ತಮ್ಮ ಇಂತಹ ಅನೇಕ ಕಟು ಅನುಭವಗಳಿಂದಾಗಿ ತಮ್ಮ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ. ಬದಲಾಗಿ ಮತ್ತಷ್ಟು ದೃಢಮನಸ್ಸಿನಿಂದ ಕಾರ್ಯೋನ್ಮುಖರಾದರು.

ಗಾಂಧೀಜಿ ಆಫ್ರಿಕಾದಲ್ಲಿ ವಕೀಲಿ ವೃತ್ತಿಯನ್ನು ನಡೆಸುವಾಗಲೂ ಪ್ರೀತಿ, ಸತ್ಯ ಮತ್ತು ಕ್ಷಮೆಗಳೆಂಬ ತಮ್ಮ ಅಸ್ತ್ರಗಳನ್ನು ಬಳಸುತ್ತಿದ್ದರು. 'ಸತ್ಯಮೇವ ಜಯತೇ'! ಎಂದು ನಂಬಿದ್ದ ಅವರು ಕೋರ್ಟಿನಲ್ಲಿ ತಮ್ಮ ಪ್ರಕರಣವನ್ನು ಗೆಲ್ಲಲಾಗಲೀ ಅಥವಾ ಹೆಚ್ಚು ಹಣವನ್ನು ಪಡೆಯಲಿಕ್ಕಾಗಲೀ ಎಂದೂ ಸುಳ್ಳನ್ನು ಹೇಳಲಿಲ್ಲ. ಇತರ ವಕೀಲರು ಸುಳ್ಳು ಹೇಳಿ ಪ್ರಸಿದ್ಧರಾಗುತ್ತಿದ್ದ ಕಾಲದಲ್ಲಿಯೇ ಗಾಂಧೀಜಿಯವರು ನೇರವಾಗಿ ಸತ್ಯವನ್ನೇ ನುಡಿದು ಸುಪ್ರಸಿದ್ಧರಾದರು. ತಿಂಗಳಿಗೆ ೫ ರಿಂದ ೬ ಸಾವಿರ ರೂ.ಗಳನ್ನು ಸಂಪಾದಿಸುತ್ತಿದ್ದರು. ಅವರ ದೃಷ್ಟಿಯಲ್ಲಿ ಹಣವೆಂದರೆ ಸಮುದಾಯದ ಒಳಿತಿಗಾಗಿ ವಿನಿಯೋಗಿಸುವ ವಸ್ತು ಮಾತ್ರ!

ಬಾಪುವಿನ ಈ ನಂಬಿಕೆಗಳ ಫಲವಾಗಿಯೇ ಮಾನವಕುಲಕ್ಕೊಂದು ಹೊಸತತ್ವ–ಸತ್ಯಾಗ್ರಹ ಹುಟ್ಟಿಕೊಂಡಿತು. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮತ್ತು ಆಫ್ರಿಕನ್ನರ ಹಕ್ಕುಗಳಿಗಾಗಿ ಬಾಪು ಹೋರಾಡಲು ಬಳಸಿದುದು 'ಅಹಿಂಸಾ ಮಾರ್ಗ!' ಅಥವಾ ಅನ್ಯಾಯದ ಕಾನೂನು ಮತ್ತು ತತ್ವಗಳ ವಿರುದ್ಧ ಶಾಂತಿಯುತ ಪ್ರತಿಭಟನೆ. ಅಂತಹ ಹೋರಾಟಕ್ಕಿಳಿದಾಗ, ಶಾಂತಿಯುತವಾಗಿ ಮತ್ತು ಧೈರ್ಯವಾಗಿ ಕಾರ್ಯವೆಸಗಬೇಕು. ಜೈಲಿಗೆ ಹೋಗಬೇಕು. ಅಗತ್ಯವಾದಲ್ಲಿ ಜೀವಕ್ಕೆರವಾಗಲೂ ಸಿದ್ಧರಿರಬೇಕು. ಆದರೆ ಎದುರಾಳಿಯ ವಿರುದ್ಧ ಎಂದೂ ದ್ವೇಷ ಸಾಧಿಸಬಾರದು. ತಮಗೆ ನೋವನ್ನುಂಟುಮಾಡಿದವರಿಗೂ ಒಳ್ಳೆಯದನ್ನೇ ಬಯಸಬೇಕು! ಬಾಪು ಇದನ್ನು ರಾಷ್ಟ್ರಮಟ್ಟದ ಸಾರ್ವಜನಿಕ ಜೀವನದಲ್ಲಿ ಕೂಡ ಅಳವಡಿಸಿಕೊಳ್ಳಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟವರಲ್ಲಿ ಪ್ರಪ್ರಥಮರು!

ಸತ್ಯಾಗ್ರಹದ ಆಯುಧ ಪ್ರೀತಿ! ಅದರ ಮಾರ್ಗ ಸತ್ಯ! ಅದರ ನೀತಿ ತ್ಯಾಗ! ಸತ್ಯಾಗ್ರಹಿ ತಾನು ನೋವು ತಿನ್ನಬಹುದೇ ಹೊರತು, ಇನ್ನೊಬ್ಬರಿಗೆ ಎಂದೂ ನೋವುಂಟುಮಾಡುವುದಿಲ್ಲ. ಯಾವುದೇ ಸಮಸ್ಯೆಗೆ ಒಂದು ಗೌರವಯುತ, ವಿವೇಕಯುತ ಪರಿಹಾರವನ್ನು ಸೂಚಿಸಲು ಸತ್ಯಾಗ್ರಹಿಯು ಸದಾಸಿದ್ಧ! ಏಕೆಂದರೆ ಸತ್ಯಾಗ್ರಹದ ದಾರಿಯೆಂದರೆ ಪ್ರೀತಿ, ಸತ್ಯಗಳ ದಾರಿ! ವಿಶ್ವದಲ್ಲಿ ಅದನ್ನು ಮೀರಿಸಿದ

ಶಕ್ತಿ ಮತ್ತೊಂದಿಲ್ಲ! ಅದು ಖಡ್ಗ ಅಥವಾ ಬಂದೂಕಿಗಿಂತಲೂ ಸಮರ್ಥವಾದದ್ದು! ಸತ್ಯಾಗ್ರಹದ ದಾರಿ ಹಿಡಿದವನಿಗೆ ನಿರಾಶೆ ಅಥವಾ ಸೋಲು ಎಂಬುದಿಲ್ಲ. ಅದು ತನ್ನ ಗುರಿಯನ್ನು ಸಾಧಿಸಿಯೇ ತೀರುತ್ತದೆ ಎಂಬುದು ಗಾಂಧೀಜಿಯವರ ದೃಢ ನಂಬಿಕೆ.

ಮೊದಲ ಮಹಾಯುದ್ಧವು(೧೯೧೪ ರಿಂದ ೧೯೧೮) ವಿಶ್ವದ ಜನರನ್ನು ಎರಡು ಭಾಗಗಳಾಗಿ ವಿಂಗಡಿಸಿದುದಲ್ಲದೆ, ಲಕ್ಷಾಂತರ ಜನರಿಗೆ ಸಾವು ನೋವುಗಳನ್ನುಂಟುಮಾಡಿತು. ಗಾಂಧೀಜಿ ಆಫ್ರಿಕಾದಲ್ಲಿನ ತಮ್ಮ ಕಾರ್ಯಕ್ಕೆ ವಿದಾಯ ಹೇಳಿ ತಾಯ್ನಾಡಿಗೆ ಹಿಂದಿರುಗಿದರು. ಹಿಂಸಾಮಾರ್ಗವು ಎಂದೂ ಶಾಂತಿಯೆಡೆಗೆ ಕರೆದೊಯ್ಯದು ಎಂದು ನಂಬಿದ ಗಾಂಧೀಜಿಯವರು ತಮ್ಮ ತತ್ವಗಳಾದ ಪ್ರೀತಿ, ಅಹಿಂಸೆಗಳನ್ನು ಹಿಂದೆಂದಿಗಿಂತಲೂ ಹೆಚ್ಚು ಉತ್ಸಾಹದಿಂದ ಬೋಧಿಸತೊಡಗಿದರು. ಅಲ್ಲದೆ, ಯುದ್ಧದ ಗಾಯಾಳುಗಳ ಸೇವೆಗೆ ಧಾವಿಸಿದರು.

ಯುದ್ಧವು ಮುಗಿದಿದ್ದರೂ ವಿಶ್ವದೆಲ್ಲೆಡೆಯಲ್ಲಿ ಬರ, ರೋಗರುಜಿನಗಳು ಹಾಗೂ ಅತೃಪ್ತಿಗಳು ತಾಂಡವವಾಡುತ್ತಿದ್ದವು. ಯುದ್ಧವು ನಡೆದುದು ಸ್ವಾತಂತ್ರ್ಯದ ಹೆಸರಿನಲ್ಲಿ! ಆದರೂ ಭಾರತೀಯರಿನ್ನೂ ಪರದಾಸ್ಯದಲ್ಲೇ ಮುಂದುವರಿದಿದ್ದರು. ಇದರಿಂದ ರೊಚ್ಚಿಗೆದ್ದ ಭಾರತೀಯರ ಸ್ವಾತಂತ್ರ್ಯದ ಕೂಗು ಮುಗಿಲುಮುಟ್ಟಿತು. ವಿಪರ್ಯಾಸವೆಂದರೆ, ಸ್ವಾತಂತ್ರ್ಯದ ಹೆಸರಿನಲ್ಲಿ ಘನಘೋರ ಯುದ್ಧ ಮಾಡಿದ ಬ್ರಿಟಿಷ್ ಸರ್ಕಾರವು ಇದನ್ನು ಸ್ವಲ್ಪವೂ ಸಹಿಸಲಿಲ್ಲ! ಬ್ರಿಟನ್ ತನ್ನ ಸಂಪನ್ಮೂಲದ ಭಂಡಾರವನ್ನು ಸುಲಭವಾಗಿ ಬಿಟ್ಟುಕೊಡಲು ಒಪ್ಪಲಿಲ್ಲ. ಭಾರತೀಯರು ತಮ್ಮನ್ನು ತಾವು ಆಳಿಕೊಳ್ಳಲು ಶಕ್ತರಾಗಿಲ್ಲವೆಂಬ ಕುಂಟುನೆಪವನ್ನೊಡ್ಡಿ, ಅನೇಕ ಕಠಿಣ ಕಾಯಿದೆಗಳನ್ನು ಜಾರಿಗೊಳಿಸಿ, ಸ್ವಾತಂತ್ರ್ಯ ಹೋರಾಟವನ್ನು ತನ್ನ ಸೈನಿಕ ಬಲದಿಂದ ಹತ್ತಿಕ್ಕತೊಡಗಿತು. ಬ್ರಿಟಿಷ್ ಸರ್ಕಾರದಿಂದ 'ಜಲಿಯನ್ ವಾಲಾಬಾಗ್' ದುರಂತದಂತಹ ದುರ್ಘಟನೆ ನಡೆದೇಹೋಯಿತು. ದೇಶದಾದ್ಯಂತ ಜನರು ಬ್ರಿಟಿಷರ ವಿರುದ್ಧ ಸಿಡಿದೆದ್ದರಾದರೂ, ಅಹಿಂಸೆಯ ಹಾದಿಯಲ್ಲಿ ನಡೆಯಲು ಸಿದ್ಧರಿರಲಿಲ್ಲ. ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆಗಳು ನಡೆಯತೊಡಗಿದವು. ಬಂಗಾಳದ ಚೌರಿಚೌರಾ ಎಂಬ ಹಳ್ಳಿಯಲ್ಲಿ ಜನರು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿ ೩೩ ಪೊಲೀಸರನ್ನು ಜೀವಸಹಿತ ಬೂದಿ ಮಾಡಿದರು. ಇಂತಹ ದುರ್ಘಟನೆಗಳನ್ನು ಬಾಪು ಊಹಿಸಲೂ ಸಿದ್ಧರಿರಲಿಲ್ಲ. ಸ್ವಾತಂತ್ರ್ಯವನ್ನು ಹಿಂಸೆಯ ಮೂಲಕ ಪಡೆಯಬೇಕೆಂದಾದಲ್ಲಿ ಅದು ಬೇಡವೇ ಬೇಡ ಎಂಬುದು ಅವರ ದೃಢ ನಿಲುವು. ಆದ್ದರಿಂದ ಅವರು ಹಿಂಸೆಯನ್ನು ವಿರೋಧಿಸಿ ತಮ್ಮ ಅನುಯಾಯಿಗಳು ಮಾಡುವ ಯಾವುದೇ ಅಕಾರ್ಯಕ್ಕೆ ತಾವೇ ಹೊಣೆಯೆಂದು ಭಾವಿಸಿ, ಪ್ರಾಯಶ್ಚಿತ್ತರೂಪವಾಗಿ ಉಪವಾಸ ಕೈಗೊಂಡರು. ಬಾಪುವಿನ ಈ ಕ್ರಮದಿಂದಾಗಿ, ಅವರನ್ನು ಕಂಡರೆ ಹೆದರಿ, ದ್ವೇಷಕಾರುತ್ತಿದ್ದ ಬ್ರಿಟಿಷರು ಅವರನ್ನು ಬಂಧಿಸಿ, ಆರು ವರ್ಷಗಳ ಶಿಕ್ಷೆ ವಿಧಿಸಿ ಸೆರೆಮನೆಗೆ ದೂಡಿದರು.

ಗಾಂಧೀಜಿಯವರಿಗೆ ಶಿಕ್ಷೆ ವಿಧಿಸಿದ ನ್ಯಾಯಾಧೀಶರು, 'ನಾನು ಇದುವರೆವಿಗೆ ವಿಚಾರಣೆ ನಡೆಸಿದ ಎಲ್ಲಾ ವ್ಯಕ್ತಿಗಳಿಗಿಂತ ನೀವು ತುಂಬಾ ಭಿನ್ನರಾದವರು ಎಂಬುದನ್ನು ನಾನು ನಿರಾಕರಿಸಲು ಸಾಧ್ಯವೇ ಇಲ್ಲ. ಅದರಂತೆಯೇ ಲಕ್ಷಾಂತರ ಭಾರತೀಯರ ಕಣ್ಣಿನಲ್ಲಿ ನೀವೊಬ್ಬ ಮಹಾನ್ ದೇಶಪ್ರೇಮಿ ಮತ್ತು ಮಹಾನ್ ಮುಂದಾಳು ಎಂಬುದನ್ನು ನಾನು ಪರಿಗಣಿಸದಿರಲೂ ಸಾಧ್ಯವೇ ಇಲ್ಲ. ರಾಜಕೀಯದಲ್ಲಿ ನಿಮ್ಮ ವಿಚಾರಗಳನ್ನು ಒಪ್ಪದವರೂ ಕೂಡಾ ನಿಮ್ಮನ್ನೊಬ್ಬ ತತ್ವ ನಿಷ್ಠ ಮತ್ತು ಋಷಿಸದೃಶ ಮನುಷ್ಯನೆಂಬುದನ್ನು ಮರೆಯದೇ ಗೌರವಿಸುತ್ತಾರೆ' ಎಂದು ಹೊಗಳಿದ್ದಾರೆ.

ಬಾಪುವಿನ ಈ ಐತಿಹಾಸಿಕ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಹಾಜರಿದ್ದ ಭಾರತದ ಕೋಗಿಲೆಯೆಂದೇ ಪ್ರಸಿದ್ಧರಾದ ಮಹಾನ್ ಕವಯಿತ್ರಿ ಶ್ರಿಮತಿ ಸರೋಜಿನಿ ನಾಯ್ಡು ಅಲ್ಲಿ ತಮ್ಮ ಮನಸ್ಸಿನ ಮೇಲೆ ಆದ ವಿಚಿತ್ರ ಪರಿಣಾಮದ ಬಗ್ಗೆ ಬರೆಯುತ್ತಾ. "ಮೊಳಕಾಲಿನವರೆಗೆ ಒರಟು ಪಂಚೆ ಧರಿಸಿದ್ದ ಸಣಕಲು, ಶಾಂತ, ದುರ್ದಮ ವ್ಯಕ್ತಿಯು ಸಂತಸದಿಂದ ನಕ್ಕರೆ ಅದರಲ್ಲಿ ಲೋಕೋತ್ತರ, ಮಗು ಸಹಜ ಮುಗ್ಧತೆಯ ಹೊಳಪನ್ನು ಹಿಡಿದಿಟ್ಟುಕೊಂಡಿರುವಂತೆ ಭಾಸಗುತ್ತಿತ್ತು!" ಎಂದು ಹೇಳುತ್ತಾರೆ. ಅವರು ಮುಂದುವರಿದು, "ನನ್ನ ಕಲ್ಪನೆಯು ಗರಿಗೆದರಿ ಹಾರಿ ಶತಮಾನಗಳ ಹಿಂದಿನ ಬೇರೆಯೇ ಯುಗದ, ಬೇರೆಯೇ ನೆಲದ ಮೇಲೆ ನಡೆದ ಇಂತಹುದೇ ನಾಟಕವನ್ನು ಕಂಡರಿಸಿತು. ಇಂತಹುದೇ ದೈವೀಶಕ್ತಿಯ, ಮೃದುಮೂರ್ತಿ ಜಗದ್ಗುರುವನ್ನು ಒಳ್ಳೆಯ ವಿಚಾರಗಳನ್ನು ನಿರ್ಭಯದಿಂದ ಜನತೆಗೆ ಬೋಧಿಸಿದ ತಪ್ಪಿಗಾಗಿ ಶಿಲುಬೆಗೇರಿಸಿದರು. ದೂರದ ನಜಾರೆತ್‌ನಲ್ಲಿ ದನದ ಹಕ್ಕೆಯ ಗೋದಲಿಯಲ್ಲಿ ಜನಿಸಿದ ಆ ಏಸುವಿಗೆ, ಅದಮ್ಯ ಅನುಕಂಪೆಯಿಂದ ಮಾನವತೆಯನ್ನು ಪ್ರೀತಿಸಿದ ಭಾರತದ ದುರ್ದಮ ಸ್ವಾತಂತ್ರ್ಯ ಸೇನಾನಿ, 'ಬಡವರನ್ನು ಬಡವರ ಮನಸ್ಸಿನಿಂದಲೇ ಸಮೀಪಿಸುವ' ಎಂದು ಹೇಳುತ್ತಿದ್ದ ಬಾಪು ಮಾತ್ರ ಸರಿದೊರೆಯಾಗಬಲ್ಲರು!" ಎಂದು ಹೇಳಿದ್ದಾರೆ.

ಕೋಟ್ಯಂತರ ಭಾರತೀಯರ ಪ್ರೀತಿಯ ಬಾಪು, ಎರಡು ವರ್ಷಗಳ ದೀರ್ಘಕಾಲ ಜೈಲಿನಲ್ಲಿ ಸಾಮಾನ್ಯ ಕೈದಿಯಂತೆ, ಅದರಲ್ಲೂ ಮಾದರಿ ಕೈದಿಯಾಗಿ ಜೀವನ ಸಾಗಿಸುತ್ತಿದ್ದರು. ಬಾಪು ಜೈಲಿನಲ್ಲಿಯೇ ಕಾಯಿಲೆ ಬಿದ್ದರು. ಚಿಕಿತ್ಸೆಗೆಂದು ಅವರನ್ನು ಬಿಡುಗಡೆ ಮಾಡಲಾಯಿತು. ಆ ಸಮಯದಲ್ಲಿಯೇ, ದೇಶದ ಹಿಂದೂ ಮುಸ್ಲಿಮರು ಪರಸ್ಪರ ಸಂಘರ್ಷಕ್ಕೆ ತೊಡಗಿದ್ದು, ಅದು ದೇಶದ ಐಕ್ಯತೆಗೆ ಮಾರಕವಾಗುವಂತಿತ್ತು. ಅದನ್ನು ವಿರೋಧಿಸಿದ ಬಾಪು, ತಮ್ಮ ಆರೋಗ್ಯವನ್ನು ಕಡೆಗಣಿಸಿ ಮತ್ತೆ ಉಪವಾಸಕ್ಕೆ ತೊಡಗಿದರು. ಅವರ ದುರ್ಬಲ ಆರೋಗ್ಯದ ಸಂದರ್ಭದಲ್ಲಿ ಮತ್ತೆ ಉಪವಾಸ ಮಾಡುವುದು ತೀರಾ ಅಪಾಯಕಾರೀ ವಿಚಾರವೆಂದು ಭಾವಿಸಿದ ಹಿಂದೂ ಮುಸ್ಲಿಮರಿಬ್ಬರೂ ಶಾಂತಿ ಸೌಹಾರ್ದತೆಗಳಿಂದ ಬಾಳುವುದಾಗಿ ಭರವಸೆ ನೀಡಿದರು. ಬಾಪು ಉಪವಾಸ ನಿಲ್ಲಿಸಿದರು.

ಉಪ್ಪು ಮನುಷ್ಯನ ಆರೋಗ್ಯಕರ ಜೀವನಕ್ಕೆ ಅತ್ಯಗತ್ಯವಾದ ವಸ್ತು! ಅಂತಹ ಉಪ್ಪಿನ ಮೇಲೆ ಬ್ರಿಟಿಷ್ ಸರ್ಕಾರವು ೧೯೩೦ರಲ್ಲಿ ಹೊಸ ತೆರಿಗೆಯೊಂದನ್ನು ವಿಧಿಸಿತು. ಇದರಿಂದಾಗಿ, ಉಪ್ಪಿನ ಬೆಲೆ ಹೆಚ್ಚಾಗಿ ಬಡವರು ಕೊಳ್ಳುವುದು ಕಷ್ಟಕರವಾಗತೊಡಗಿತು. ಬಾಪು ಈ ಕರಾಳ ಶಾಸನವನ್ನು ಧಿಕ್ಕರಿಸಲು ಸಮುದ್ರ ದಡದ ದಂಡಿಗೆ ಹೋಗಿ, ಉಪ್ಪನ್ನು ಮಾಡಿ ಹಂಚುವುದರ ಮೂಲಕ ಉಪ್ಪಿನ ಕರ ಕಾಯಿದೆಯನ್ನು ಭಂಗಗೊಳಿಸಿದರು. ವಿಶ್ವದ ಅನೇಕ ಜನರು, ಈ ಯಾತ್ರೆಯಲ್ಲಿ ಭಾರತೀಯರು ಸ್ವಾತಂತ್ರ್ಯದೆಡೆಗೆ ಇಟ್ಟ ಮೊದಲ ಹೆಜ್ಜೆಗಳನ್ನು ಗುರುತಿಸಿದರು!

ಉಪ್ಪಿಗಾಗಿ ನಡೆದ ಈ ದಂಡೀ ಯಾತ್ರೆಯು ಜನತೆಯನ್ನು ರಣಕಹಳೆಯಂತೆ ಬಡಿದೆಬ್ಬಿಸಿತು. ಇದರಿಂದಾಗಿ ರೊಚ್ಚಿಗೆದ್ದ ದೇಶದ ಜನತೆ ಸಾವಿರ ಸಂಖ್ಯೆಯಲ್ಲಿ ಚಳವಳಿ ಮಾಡಿ ಜೈಲು ತುಂಬತೊಡಗಿದರು. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದ ವಿಶ್ವದ ಇತರ ರಾಷ್ಟ್ರಗಳು ಭಾರತದಲ್ಲಿ ನಡೆಯುತ್ತಿರುವುದೇನು? ಎಂದು ಬ್ರಿಟಿಷ್ ಸರ್ಕಾರವನ್ನು ಪ್ರಶ್ನಿಸತೊಡಗಿದುವು. ಆಗ ಬಾಪುವನ್ನು ಹಾಗೂ ಸತ್ಯಾಗ್ರಹಿಗಳನ್ನು ವಿಮುಕ್ತಿಗೊಳಿಸುವುದು ಸರ್ಕಾರಕ್ಕೆ ಅನಿವಾರ್ಯವಾಯಿತು. ಆಗ ವೈಸರಾಯ್ ಇರ್ವಿನ್ ಬಾಪುವನ್ನು ಮಾತುಕತೆಗೆ ಆಹ್ವಾನಿಸಿದರು. ಮಾತುಕತೆಯ ನಂತರ ಉಂಟಾದ ಒಪ್ಪಂದದಂತೆ, ಬಾಪು ಬ್ರಿಟಿಷ್ ಪ್ರಧಾನಿ ರ್‍ಯಾಮ್ಸೆ ಮ್ಯಾಕ್‌ಡೊನಾಲ್ಡ್ ಅವರೊಡನೆ ಚರ್ಚಿಸಲು ದುಂಡುಮೇಜಿನ ಪರಿಷತ್ತಿಗೆಂದು ಲಂಡನ್‌ಗೆ ತೆರಳಿದರು. ಗಾಂಧೀಜಿಯವರ ಲಂಡನ್ ಭೇಟಿಯಿಂದ ಭಾರತಕ್ಕೆ ತಕ್ಷಣ ಸ್ವಾತಂತ್ರ್ಯವೇನೂ ದೊರೆಯಲಿಲ್ಲ. ಆದರೆ ಬಾಪು ತಮ್ಮ ಪ್ರೀತಿ ಮತ್ತು ಶಾಂತಿಯ ಸಂದೇಶವನ್ನು ವಿಶ್ವದೆಲ್ಲೆಡೆ ಸಾರಲು ಸಹಾಯಕವಾಯಿತು.

ಎರಡನೆಯ ಮಹಾಯುದ್ಧವು ಭಾರತಕ್ಕೆ ವಿಪತ್ತನ್ನೇ ತಂದಿತು. ಜಪಾನೀಯರು ಭಾರತದ ನೆಲವನ್ನಾಕ್ರಮಿಸಲು ಪ್ರಯತ್ನಿಸತೊಡಗಿದರು. ದಾಸ್ಯದಲ್ಲಿಯೇ ತೊಳಲುತ್ತಿರುವ ಭಾರತವು ವಿಶ್ವ ಸ್ವಾತಂತ್ರ್ಯಕ್ಕೆ ಹೇಗೆ ನೆರವಾದೀತು? ಆಗ ಗಾಂಧೀಜಿಯವರು 'ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ' ಎಂದು ಅಂತಿಮ ಎಚ್ಚರಿಕೆ ನೀಡಿದರು. ದೇಶದ ಜನತೆ ಭಾರೀ ಚಳವಳಿಯಲ್ಲಿ ತೊಡಗಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆಯೆದ್ದರು. ಪರಿಣಾಮವಾಗಿ ಬಾಪು, ಪಂಡಿತ್ ನೆಹರು ಮತ್ತಿತರ ನೇತಾರರೆಲ್ಲರೂ ಜೈಲು ಸೇರಬೇಕಾಯಿತು. ಬಾಪು ಆಗಾಖಾನ್ ಅರಮನೆಯ ಸೆರೆಯಲ್ಲಿಯೇ ೨೧ ದಿನಗಳ ಉಪವಾಸವನ್ನು ಕೈಗೊಂಡರು. ಇಲ್ಲಿಯೇ ಅವರ ಬಾಳ ಸಂಗಾತಿ, ಪ್ರೀತಿಯ ಕಸ್ತೂರಬಾ ಮತ್ತು ಅವರ ಗೆಳೆಯ, ಕಾರ್ಯದರ್ಶಿ ಮಹಾದೇವ ದೇಸಾಯಿ ಇಬ್ಬರೂ ಕೊನೆಯುಸಿರೆಳೆದರು.

ಯುದ್ಧ ಮುಗಿದ ನಂತರ, ಭಾರತದ ನಾಯಕರುಗಳೆಲ್ಲರನ್ನೂ ಜೈಲಿನಿಂದ ಬಿಡಲಾಯಿತು. ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು, ಬಡವರು ಮತ್ತು ತುಳಿತಕ್ಕೊಳಗಾದವರ ಪಕ್ಷ ಬ್ರಿಟಿಷ್ ಕಾರ್ಮಿಕ ಪಕ್ಷವು ಅಧಿಕಾರಕ್ಕೆ ಬಂದು, ಭಾರತಕ್ಕೆ ಸ್ವಾತಂತ್ರ್ಯ ನೀಡಲು ನಿರ್ಧರಿಸಿತು. ಆದರೆ ಸ್ವಾತಂತ್ರ್ಯವನ್ನು ಹೇಗೆ

ನೀಡಬೇಕೆಂಬುದನ್ನು ನಿರ್ಧರಿಸುವುದು ಸುಲಭವಾಗಿರಲಿಲ್ಲ. ಮುಸ್ಲಿಮರು ತಮಗೆ ಪ್ರತ್ಯೇಕ ದೇಶವೇ ಬೇಕೆಂದು ಹಟ ಹಿಡಿದರು. ಆದರೆ ಹಿಂದುಗಳು ಶಾಂತಿಯುತವಾಗಿ ತಮ್ಮ ಮುಸ್ಲಿಮ್ ಬಂಧುಗಳೊಡನೆ ಒಟ್ಟಾಗಿ ಒಂದೇ ರಾಷ್ಟ್ರದಲ್ಲಿರಲು ಸಾಧ್ಯವೆಂದು ವಾದಿಸಿದರು. ಆದರೂ ದೇಶದಲ್ಲಿ ಕೋಮು ದಂಗೆಗಳು ಪ್ರಾರಂಭವಾದುವು. ಗಾಂಧೀಜಿಯವರ ಆಶಯಕ್ಕೆ ವಿರುದ್ಧವಾಗಿ ೧೯೪೭ರ ಆಗಸ್ಟ್ ೧೫ರಂದು ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ಸರ್ವತಂತ್ರ ಸ್ವತಂತ್ರ ರಾಷ್ಟ್ರಗಳನ್ನಾಗಿ ವಿಭಜಿಸಲಾಯಿತು. ಇಡೀ ರಾಷ್ಟ್ರವೇ ಹರ್ಷದ ಹೊನಲಿನಲ್ಲಿ ತೇಲಾಡುತ್ತಿದ್ದರೆ, ಬಾಪು ದುಃಖದಲ್ಲಿ ತೊಳಲಾಡುತ್ತಿದ್ದರು. ಏಕೆಂದರೆ ಇದು ಅವರ ಕಲ್ಪನೆಯ ಸ್ವಾತಂತ್ರ್ಯವಾಗಿರಲಿಲ್ಲ.

ಗಾಂಧೀಜಿಯವರ ಕಾತರದ ಕ್ಷಣಗಳು ಎದುರಾದವು. ಇದ್ದಕ್ಕಿದ್ದಂತೆಯೇ ದೇಶದ ಕೆಲವೆಡೆ ಭಾರೀ ದಂಗೆ, ಕೊಲೆ, ಸುಲಿಗೆಗಳು ಪ್ರಾರಂಭವಾದವು. ಭಾರತ ಮತ್ತು ಪಾಕಿಸ್ತಾನಗಳೆರಡರಲ್ಲೂ ಹಿಂದು ಮತ್ತು ಮುಸಲ್ಮಾನರು ಉನ್ಮಾದಕ್ಕೊಳಗಾದವರಂತೆ ವರ್ತಿಸತೊಡಗಿದರು. ನಿರಾಶ್ರಿತರ ತಂಡಗಳು ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಪ್ರವಾಹದೋಪಾದಿಯಲ್ಲಿ ಹರಿಯತೊಡಗಿದವು. ಗಾಂಧೀಜಿ ತಮ್ಮ ರಕ್ಷಣೆಯ ಬಗ್ಗೆ ಯೋಚಿಸದೆ ದಂಗೆಯ ಸ್ಥಳಗಳಿಗೆ ತಕ್ಷಣ ತೆರಳಿದರು. ಅಲ್ಲಿ ಅಹಿಂಸೆ ಮತ್ತು ಕ್ಷಮೆಗಳ ಮೂಲಕ ಶಾಂತಿಯನ್ನು ಪುನರ್ ಸ್ಥಾಪಿಸಲು ಶಕ್ತಿಮೀರಿ ಶ್ರಮಿಸಿದರು. ಅಂತಿಮ ಕ್ರಮವಾಗಿ ಬಾಪು ಉಪವಾಸ ವ್ರತ ಕೈಗೊಂಡರಲ್ಲದೆ, ಶಾಂತಿ ನೆಲೆಸುವುದಿಲ್ಲವಾದರೆ ತಾವು ಉಪವಾಸದಿಂದ ಆತ್ಮಾರ್ಪಣೆ ಮಾಡಿಕೊಳ್ಳಲು ಸಿದ್ಧವೆಂದು ಹೇಳಿದರು. ಆದರೆ ಬಾಪುವಿನ ಅಮೂಲ್ಯ ಜೀವದ ಬಗ್ಗೆ ಕಾತರರಾಗಿದ್ದ ದೇಶದ ಜನತೆಯು ತಕ್ಷಣ ಕೊಲೆ ಸುಲಿಗೆಗಳನ್ನು ನಿಲ್ಲಿಸುವುದಾಗಿಯೂ, ಅವರು ಉಪವಾಸವನ್ನು ನಿಲ್ಲಿಸಬೇಕೆಂದೂ ಬೇಡಿಕೊಂಡರು. ಜನತೆ ತಮ್ಮ ಮಾತನ್ನು ನಡೆಯಿಸಿಕೊಟ್ಟರು. ದೇಶದೆಲ್ಲೆಡೆ ಶಾಂತಿ ನೆಲೆಸಿತು!

ಬಾಪು ಎಲ್ಲರನ್ನೂ ಪ್ರೀತಿಸಿದರು. ಆದರೂ ಅವರನ್ನು ದ್ವೇಷಿಸುವ ಸಣ್ಣ ಮನಸ್ಸಿನ ಜನರು ಭಾರತದಲ್ಲೂ ಇದ್ದರು. ಅವರು ಬಾಪುವನ್ನು ವಿನಾಕಾರಣ ದ್ವೇಷಿಸತೊಡಗಿದರು. ಕ್ರಿಸ್ತನನ್ನೂ ಅಲ್ಲಿಯ ಜನರು ಇದೇ ರೀತಿ ದ್ವೇಷಿಸಿದರು! ಅವರು ಮುಸಲ್ಮಾನರನ್ನು ಪ್ರೀತಿಸುತ್ತಾ ಭಾರತವನ್ನು ಹಾಳುಮಾಡುತ್ತಿದ್ದಾರೆ. ಮುಸಲ್ಮಾನರ ಎಲ್ಲಾ ತಪ್ಪುಗಳನ್ನು ಕ್ಷಮಿಸಿ, ಅವರನ್ನು ಸೋದರರಂತೆ ನೋಡಲು, ಅವರೊಡನೆ ಶಾಂತಿಯಿಂದ ಬಾಳಲು ಹೇಳುತ್ತಿದ್ದಾರೆ ಎಂದು ದೂಷಿಸುತ್ತಿದ್ದರು. ಅವರಲ್ಲೇ ಕೆಲವು ಯುವಕರು ಅವರನ್ನು ಅಂತಿಮವಾಗಿ ಮುಗಿಸಿಬಿಡಲು ನಿರ್ಧರಿಸಿದರು. ಅದಕ್ಕಾಗಿ ಪಿತೂರಿಯೊಂದನ್ನು ಸಿದ್ಧಪಡಿಸಲಾಯಿತು.

ಮೊದಲ ಪ್ರಯತ್ನ ನೆರವೇರಲಿಲ್ಲ. ಸಂಜೆಯ ಪ್ರಾರ್ಥನೆಯ ವೇಳೆಯಲ್ಲಿ ಬಾಪೂಜಿಯವರೆಡೆಗೆ ಬಾಂಬೊಂದನ್ನು ಎಸೆಯಲಾಯಿತು. ಅವರು ಅದರಿಂದ ಪಾರಾದರು. ಆ ಯುವಕನನ್ನು ಬಂಧಿಸಲಾಯಿತಾದರೂ ಅವನನ್ನು ಬಿಟ್ಟುಬಿಡಲು

ಬಾಪು ಹೇಳಿದರು. ಬಾಪುವಿಗೆ, ಸಾವು ಮಾನವನ ಅತ್ಯಂತ ನಿಜವಾದ ಸ್ನೇಹಿತ. ಸತ್ಯಕ್ಕಾಗಿ ಸಾಯುವ ಯೋಧನಿಗಂತೂ ಅದು ಪರಮಪ್ರಸಾದ! ಶರಣರ ನುಡಿಯಂತೆ 'ಮರಣವೇ ಮಹಾನವಮಿ!' ಅವರು ತಮ್ಮ ರಕ್ಷಣೆಗಾಗಿ ಸೈನಿಕರು ಅಥವಾ ಪೊಲೀಸರ ನೇಮಕವನ್ನು ವಿರೋಧಿಸಿದರು.

ಕೆಲ ದಿನಗಳ ನಂತರ, ಎಂದರೆ ೧೯೪೮ರ ಜನವರಿ ೩೦ರ ಸಂಜೆಯ ಪ್ರಾರ್ಥನಾ ಸಭೆಗೆ ಯುವಕನೊಬ್ಬನು ಜೇಬಿನಲ್ಲಿ ಪಿಸ್ತೂಲನ್ನಿಟ್ಟುಕೊಂಡು ಬಂದನು. ಬಾಪು ಸಭೆಗೆ ಬರುತ್ತಿದ್ದಂತೆಯೇ ಅವರಿಗೆ ನಮಸ್ಕರಿಸುವ ನೆಪದಲ್ಲಿ ಬಳಿಸಾರಿ, ಅವರ ಎದೆಗೆ ಮೂರು ಗುಂಡುಗಳನ್ನು ಹಾರಿಸಿದನು. ತಕ್ಷಣ ಬಾಪು 'ಹಾಯ್ ರಾಮ್!' ಎಂದು ನೆಲಕ್ಕುರುಳಿದರು.

ಅಂದು ರಾತ್ರಿ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ರೇಡಿಯೋದಲ್ಲಿ 'ನಮ್ಮ ಜೀವಗಳ ಬೆಳಕು ನಂದಿಹೋಯ್ತು.... ಆದರೆ ನಾನು ಹೇಳುತ್ತಿರುವುದು ತಪ್ಪೆಂದು ಅನಿಸುತ್ತಿದೆ. ಏಕೆಂದರೆ ಈ ರಾಷ್ಟ್ರದಲ್ಲಿ ಬೆಳಗಿದ ಆ ಬೆಳಕು ಸಾಮಾನ್ಯ ರೀತಿಯದ್ದಲ್ಲ. ಸಾವಿರಾರು ವರ್ಷಗಳ ನಂತರವೂ ಈ ದೇಶದಲ್ಲಿ ಆ ಬೆಳಕನ್ನು ಕಾಣಬಹುದಾಗಿದೆ. ವಿಶ್ವದೆಲ್ಲೆಡೆಯೂ ಆ ಬೆಳಕನ್ನು ಕಾಣಲು ಸಾಧ್ಯ.... ಏಕೆಂದರೆ ಆ ಬೆಳಕು ಜೀವಂತ ಸತ್ಯವನ್ನು ಪ್ರತಿನಿಧಿಸುತ್ತದೆ, ಎಂದು ಗದ್ಗದಿತರಾಗಿ ನುಡಿದರು.

ತಮಗಾಗಿ ಯಾರೂ ಅಳಬಾರದೆಂದು ಬಾಪು ತಮ್ಮ ಸ್ನೇಹಿತರಿಗೆ, ಅನುಯಾಯಿಗಳಿಗೆ ಹೇಳಿದ್ದರು. ಕಣ್ಣೀರಿಗೆ ಇರುವ ಬೆಲೆಯಾದರೂ ಏನು? 'ಜಾತಸ್ಯ ಮರಣಂ ಧೃವಂ' ಹುಟ್ಟಿದವನಿಗೆ ಸಾವು ಶತಸ್ಸಿದ್ಧವೆಂದು ತಿಳಿದಿದ್ದೂ ಅದಕ್ಕಾಗಿ ಏಕೆ ಅಳಬೇಕು! 'ಜೀವನವೆಂದರೆ ಸಾವಿನ ವಿರುದ್ಧ ಮಾನವನ ನಿರಂತರ ಹೋರಾಟ'. ಇಡೀ ವಿಶ್ವವೇ ಬಾಪುವಿಗಾಗಿ ಕಣ್ಣೀರಿಟ್ಟಿತಾದರೂ ಅನೇಕ ಜನರು ಅವರ ಜೀವನ ಬಹುಶಃ ಈಗ ಪ್ರಾರಂಭವಾಯಿತೆಂದು ಭಾವಿಸಿದರು. ಏಕೆಂದರೆ ಅವರು ಬೋಧಿಸಿದ ಮಹಾನ್ ಸತ್ಯ ಮತ್ತು ಅವರು ಯಾವುದಕ್ಕಾಗಿ ಪ್ರಾಣ ತೆತ್ತರೋ ಆ ಸತ್ಯಗಳು ಮುಂದಿನ ಜನಾಂಗಗಳನ್ನು ಪ್ರಭಾವಿತಗೊಳಿಸಿ, ಅವರನ್ನು ಪ್ರೀತಿ ಶಾಂತಿ ಸಹನೆಗಳ ಮಾರ್ಗದಲ್ಲಿ ನಡೆಸುತ್ತವೆ.

ಸತ್ಯಾಗ್ರಹದ ಪರಿಕಲ್ಪನೆ

ಗಾಂಧೀಜಿಯವರು ಈ ಮಹಾನ್ ದೇಶವನ್ನು ಸ್ವಾತಂತ್ರ್ಯದೆಡೆಗೆ ಮುನ್ನಡೆಸಿದರು. ಅವರು ಮುಟ್ಟಿದ ಪ್ರತಿಯೊಂದು ವಸ್ತುವಿಗೂ ಹೊಸ ಚೈತನ್ಯವನ್ನು ನೀಡಿದರು. ಸಾವಿರಾರು ವರ್ಷಗಳಷ್ಟು ಹಳೆಯ ದುಷ್ಟಪದ್ಧತಿಗಳ ವಿರುದ್ಧ ಹೋರಾಡಿ ಜಯಗಳಿಸಿದರು. ಅವರು ಹೊಸರೀತಿಯ ಯುದ್ಧಪದ್ಧತಿ 'ಸತ್ಯಾಗ್ರಹ'ವನ್ನು ಆವಿಷ್ಕರಿಸಿದರು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯವರು, ಭಾರತೀಯರು ಮತ್ತು ಆಫ್ರಿಕನ್ನರ ಹಕ್ಕುಗಳಿಗಾಗಿ ಹೋರಾಡಲು ಬಳಸಿದ 'ಅಹಿಂಸಾ ಮಾರ್ಗ' ಅಥವಾ ಅನ್ಯಾಯದ ಕಾನೂನು ಮತ್ತು ತತ್ವಗಳ ವಿರುದ್ಧ ಶಾಂತಿಯುತ ಪ್ರತಿಭಟನೆಯ

ಮುಂದೆ 'ಸತ್ಯಾಗ್ರಹ'ವಾಗಿ ಬೆಳಕಿಗೆ ಬಂದಿತು.

ಗಾಂಧೀಜಿಯವರೇ ಹೇಳಿದಂತೆ, ಸತ್ಯಾಗ್ರಹಿಯು ತಪ್ಪು ಮತ್ತು ಅನ್ಯಾಯಗಳ ವಿರುದ್ಧ ಹೋರಾಡುತ್ತಾನೆ. ಜನಾಂಗಗಳ ಮಧ್ಯೆ ಇರುವ ಅನಿಷ್ಟ ಕಾನೂನು ಪದ್ಧತಿಗಳ ವಿರುದ್ಧ ಹೋರಾಡುತ್ತಾನೆ. ಒಂದು ರಾಷ್ಟ್ರದ ಮೇಲೆ ಮತ್ತೊಂದು ರಾಷ್ಟ್ರವು ನಡೆಸುವ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಾನೆ. ಶ್ರೀಮಂತರು ಬಡವರ ಮೇಲೆ ನಡೆಸುವ ಶೋಷಣೆಯ ವಿರುದ್ಧ ಹೋರಾಡುತ್ತಾನೆ. ವ್ಯಕ್ತಿಯ ಹೃದಯಲ್ಲಿ ಮನೆಮಾಡಿರುವ ಅಸೂಯೆ ಮತ್ತು ಸಣ್ಣತನಗಳ ವಿರುದ್ಧ ಹೋರಾಡುತ್ತಾನೆ. ಆದರೆ ಅವನು ಎಂದೆಂದಿಗೂ ಶಾಂತಿಯುತ ಹೋರಾಟಗಾರ! ಸತ್ಯಾಗ್ರಹ ಸಾತ್ವಿಕ. ಅದು ಯಾರನ್ನೂ ಎಂದಿಗೂ ನೋಯಿಸುವುದಿಲ್ಲ. ಅದರಲ್ಲಿ ಮೋಸ ಅಥವಾ ಕಪಟಕ್ಕೆ ಸ್ಥಾನವಿಲ್ಲ; ನಿಂದನೆ, ಕುಯುಕ್ತಿಗಳಿಲ್ಲ. ಸತ್ಯಾಗ್ರಹದ ನಿಘಂಟಿನಲ್ಲಿ 'ವೈರಿ' ಎಂಬ ಪದವೇ ಇಲ್ಲ!

ಏಸುಕ್ರಿಸ್ತ, ಡೇನಿಯಲ್ ಮತ್ತು ಸಾಕ್ರಟೀಸ್ ಅವರನ್ನು ಗಾಂಧೀಜಿ ಸತ್ಯಾಗ್ರಹ ಪಂಥದ ಮಹಾನ್ ಅನುಯಾಯಿಗಳೆಂದು ಪರಿಗಣಿಸಿದ್ದಾರೆ. ಅದರ ಆಯುಧ-ಪ್ರೀತಿ, ಅದರ ನೀತಿ - ಪ್ರೀತಿ, ಅದರ ಮಾರ್ಗ-ತ್ಯಾಗ. ಸತ್ಯಾಗ್ರಹಿಯು ತಾನು ನೋವುಣ್ಣಬಹುದೇ ಹೊರತು, ಮತ್ತೊಬ್ಬರಿಗೆ ಎಂದೂ ನೋವುಂಟುಮಾಡುವುದಿಲ್ಲ. ಯಾವುದೊಂದು ಸಮಸ್ಯೆಗೂ ಒಂದು ಗೌರವಯುತ ಪರಿಹಾರವನ್ನು ಸೂಚಿಸಲು ಸತ್ಯಾಗ್ರಹಿಯು ಸದಾಸಿದ್ಧ. ಏಕೆಂದರೆ ಸತ್ಯಾಗ್ರಹದ ದಾರಿ ಪ್ರೀತಿ ಮತ್ತು ಸತ್ಯಗಳ ದಾರಿ. ವಿಶ್ವದಲ್ಲಿ ಅದನ್ನು ಮೀರಿಸಿದ ಶಕ್ತಿ ಮತ್ತೊಂದಿಲ್ಲ. ಅದು ಖಡ್ಗ, ಬಂದೂಕು ಅಥವಾ ಯಾವುದೇ ಮಾರಕ ಆಯುಧಕ್ಕಿಂತಲೂ ಸಮರ್ಥವಾದದ್ದು. ಅದನ್ನು ಅನುಸರಿಸಿದವರಿಗೆ ನಿರಾಶೆ ಅಥವಾ ಸೋಲಿಲ್ಲ.

ಬಾಪುವಿನ ಈ ನಂಬಿಕೆಗಳ ಫಲವಾಗಿಯೇ ಮಾನವ ಜೀವನಕ್ಕೊಂದು ಹೊಸ ತತ್ವ-ಸತ್ಯಾಗ್ರಹ ಹುಟ್ಟಿಕೊಂಡಿತು ಎಂಬುದನ್ನು ನಾವಿಲ್ಲಿ ನೆನೆಯಬೇಕು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯು ಭಾರತೀಯರ ಮತ್ತು ಆಫ್ರಿಕನ್ನರ ಹಕ್ಕುಗಳಿಗಾಗಿ ಹೋರಾಡಲು ಬಳಸಿದುದು 'ಅಹಿಂಸಾ ಮಾರ್ಗ' ಅಥವಾ ಕಾನೂನು ಮತ್ತು ತತ್ವಗಳ ವಿರುದ್ಧ ಶಾಂತಿಯುತ ಪ್ರತಿಭಟನೆ. ಆದ್ದರಿಂದ ಸರ್ಕಾರದ ವಿರುದ್ಧ ಹೋರಾಟಕ್ಕಿಳಿದಾಗ, ಶಾಂತಿಯುತವಾಗಿ ಮತ್ತು ಧೈರ್ಯವಾಗಿ ಕಾರ್ಯವೆಸಗಬೇಕು. ಜೈಲಿಗೆ ಹೊಗಬೇಕು, ಅಗತ್ಯವಾದಲ್ಲಿ ಜೀವಕ್ಕೆರವಾಗಲೂ ಸಿದ್ಧರಿರಬೇಕು. ಆದರೆ ತಮ್ಮ ಎದುರಾಳಿಯ ವಿರುದ್ಧ ಎಂದೂ ದ್ವೇಷ ಭಾವನೆಯನ್ನು ಹೊಂದಿರಬಾರದು ಎಂದು ತಮ್ಮ ಅನುಯಾಯಿಗಳಿಗೆ ಹೇಳುತ್ತಿದ್ದರು. ತಮಗೆ ಕೇಡುಂಟುಮಾಡಿದವರನ್ನು ತಮಗಾಗದವರನ್ನು, ತಮ್ಮ ತತ್ವಗಳನ್ನು ಒಪ್ಪದವರನ್ನು ವೈರಿಗಳೆಂದು ಪರಿಗಣಿಸದೆ ಅವರನ್ನು ಪ್ರೀತಿಸಬೇಕು. ಅವರಿಗೆ ಒಳ್ಳೆಯದನ್ನೇ ಬಯಸಬೇಕು. ಇದನ್ನು ಕೆಲವರು ತಮ್ಮ ಖಾಸಗಿ ಜೀವನದಲ್ಲಿ ಆಚರಣೆಗೆ ತಂದಿರಬಹುದು. ಆದರೆ ಬಾಪು ಇದನ್ನು ರಾಷ್ಟ್ರಮಟ್ಟದ ಸಾರ್ವಜನಿಕ ಜೀವನದಲ್ಲಿ ಆಚರಣೆಗೆ ತರಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟವರಲ್ಲಿ ಮೊದಲಿಗರು!

ಹೊಸ ರೀತಿಯ ಈ ಹೋರಾಟವನ್ನು ಹೆಸರಿಸಲು, ಒಂದು ಹೊಸ ಪದವನ್ನೇ ಟಂಕಿಸಲು ಗಾಂಧೀಜಿ ಪ್ರಯತ್ನಿಸಿದರು. ಅದಕ್ಕಾಗಿ 'ಸದಾಗ್ರಹ' ಎಂಬ ಪದವನ್ನು ಆರಿಸಿಕೊಳ್ಳಲಾಯ್ತು. ಅದರ ಅರ್ಥ 'ಸತ್ಯಕ್ಕಾಗಿ ಅಚಲವಾಗಿ ನಿಲ್ಲುವುದು'. ಬಾಪು ಅದರಲ್ಲಿ ಸ್ವಲ್ಪ ಬದಲಾವಣೆ ಮಾಡಿ 'ಸತ್ಯಾಗ್ರಹ'ವೆಂದು ಹೆಸರಿಸಿದರು. 'ಸತ್' ಎಂದರೆ 'ಸತ್ಯ' ಮತ್ತು 'ಆಗ್ರಹ'ವೆಂದರೆ 'ಅಚಲವಾಗಿ ನಿಲ್ಲು' ಎಂಬ ಅರ್ಥಗಳಿವೆ. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಈ ಮಾಂತ್ರಿಕಪದ 'ಸತ್ಯಾಗ್ರಹ' ಬೇಕೆಂದರೆ ಇಡೀ ಜಗತ್ತಿಗೆ ಶಾಂತಿ, ಸಮಾಧಾನಗಳನ್ನು ತಂದುಕೊಡಬಲ್ಲದು.

ಗಾಂಧೀಜಿ ತಮ್ಮ ಜೀವನದುದ್ದಕ್ಕೂ ಸತ್ಯಾಗ್ರಹದ ಬಗ್ಗೆ ಸಾಕಷ್ಟು ಹೇಳಿದ್ದಾರೆ, ಬರೆದಿದ್ದಾರೆ. ಅಲ್ಲದೆ ಅವರ ಅಹಿಂಸಾತ್ಮಕ, ಶಾಂತಿ ಸೈನ್ಯದ ಯೋಧನಾಗುವವನು ಹೇಗಿರಬೇಕು ಎಂಬ ಬಗ್ಗೆಯೂ ಸಾಕಷ್ಟು ಹೇಳಿದ್ದಾರೆ. ಆತನು ಅತ್ಯಂತ ಧೈರ್ಯಶಾಲಿಯಾಗಿರಬೇಕು. ಏಕೆಂದರೆ ಮಾನವನಿಗೆ ಹೇಡಿತನಕ್ಕಿಂತ ಮಿಗಿಲಾದ ಶತ್ರು ಯಾರೊಬ್ಬರೂ ಇಲ್ಲ. ಹೇಡಿತನಕ್ಕೆ ಭೀತಿ, ಅಪನಂಬಿಕೆಗಳೇ ಕಾರಣ. ಆದ್ದರಿಂದ ಎಲ್ಲಿ ಪರಸ್ಪರ ನಂಬಿಕೆಯಿರುವುದಿಲ್ಲವೋ ಅಲ್ಲಿ ಪರಸ್ಪರ ವಿರೋಧ, ಒಬ್ಬರು ಇನ್ನೊಬ್ಬರ ಮೈಮೇಲೆ ಬಿದ್ದು ಮುಗಿಸಲೆಳಸುವುದು ನಡೆಯುತ್ತದೆ.

ಬಾಪು ತಮ್ಮನ್ನು ಅನೇಕ ಬಾರಿ ಜೈಲಿಗೆ ಕಳಿಸಿದ ದಕ್ಷಿಣ ಆಫ್ರಿಕದ ಪ್ರಧಾನಮಂತ್ರಿ ಸ್ಮಟ್ಸ್ ಅವರೊಡನೆ ಹೊಂದಿದ್ದ ಸ್ನೇಹ, ವಿಶ್ವಾಸಗಳನ್ನು ನೋಡಿದರೆ ಅವರು ತಮ್ಮ ವೈರಿಗಳೊಡನೆ ಕೂಡ ಉತ್ತಮ ಬಾಂಧವ್ಯ ಹೊಂದಲು ಶಕ್ತರಾಗಿದ್ದರೆಂಬುದನ್ನು ಅರಿಯಬಹುದು. ಸ್ಮಟ್ಸ್ ಅನೇಕ ಬಾರಿ ಮಾತುಕತೆಗೆ, ಚರ್ಚೆಗೆ ಗಾಂಧೀಜಿಯವರನ್ನು ಆಹ್ವಾನಿಸುತ್ತಿದ್ದರು. ಅದರಿಂದಾಗಿ ಅವರಿಬ್ಬರೂ ವಿರುದ್ಧ ಪಕ್ಷಗಳಲ್ಲಿದ್ದು, ವಿರೋಧಾಭಿಪ್ರಾಯಗಳನ್ನು ಹೊಂದಿದ್ದರೂ ಉತ್ತಮ ಸ್ನೇಹಿತರಾಗಿದ್ದರು.

ಸತ್ಯಾಗ್ರಹವು ಹೊಸ ಕಲ್ಪನೆಯಾಗಿದ್ದು, ಜನರು ಇನ್ನೂ ಅದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ರಾಷ್ಟ್ರದ್ಯಂತ ಜನರು ಸರ್ಕಾರದ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದರಾದರೂ, ಅಹಿಂಸೆಯ ಹಾದಿಯಲ್ಲಿ ನಡೆಯಲು ಸಿದ್ಧರಿರಲಿಲ್ಲ. ಸರ್ಕಾರಿ ಅಧಿಕಾರಿಗಳ ಮೇಲೆ ಹಲ್ಲೆಗಳು ನಡೆಯತೊಡಗಿದವು. ಆದರೆ ಗಾಂಧೀಜಿ ಇಂತಹ ಘಟನೆಗಳನ್ನು ಊಹಿಸಲೂ ಸಿದ್ಧರಿರಲಿಲ್ಲ. ಸ್ವಾತಂತ್ರ್ಯವನ್ನು ಹಿಂಸೆಯ ಮೂಲಕ ಪಡೆಯಬೇಕೆಂದಾದಲ್ಲಿ ಅದು ಬೇಡವೇಬೇಡ ಎಂಬುದು ಅವರ ದೃಢ ನಿಲುವು. ಇಂತಹ ಸಂದರ್ಭಗಳಲ್ಲಿ ಬಾಪು ದೀರ್ಘ ಉಪವಾಸವನ್ನು ಕೈಗೊಳ್ಳುತ್ತಿದ್ದರು. ಭಾರತೀಯರ ಆರಾಧ್ಯ ದೈವ ಮತ್ತು ಮಹಾನ್ ಮುಂದಾಳಾಗಿದ್ದರೂ ಗಾಂಧೀಜಿಯು ತಮ್ಮ ಅನುಯಾಯಿಗಳು ಮಾಡುವ ಯಾವುದೇ ಅಕಾರ್ಯಕ್ಕೆ ತಾವೇ ಹೊಣೆಯೆಂದು ಭಾವಿಸಿ, ಪ್ರಾಯಶ್ಚಿತ್ತರೂಪವಾಗಿ ಉಪವಾಸ ಕೈಗೊಳ್ಳುತ್ತಿದ್ದರು. ಅದರಿಂದಾಗಿ ಜನರನ್ನು ಪರಿಶುದ್ಧರನ್ನಾಗಿ ಮಾಡಲು ಮತ್ತು ಅವರ ನೋವುಗಳನ್ನು ನಿವಾರಿಸಲು ಸಾಧ್ಯವೆಂದು ಭಾವಿಸಿದ್ದರು.

ಗಾಂಧೀಜಿ ತಮ್ಮ ಜೀವಿತದ ಅವಧಿಯಲ್ಲಿ ಅನೇಕ ಬಾರಿ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಆದರೆ ಅವರು ಉಪವಾಸ ವ್ರತವನ್ನೇಕೆ ಕೈಗೊಳ್ಳುತ್ತಿದ್ದರು? ಅದರಿಂದ ಅವರಿಗಾಗುತ್ತಿದ್ದ ಲಾಭಗಳೇನು? ಎಂಬ ಪ್ರಶ್ನೆಗಳುದ್ಭವಿಸುವುದು ಸಹಜ. ಬಾಪು ಎಂದಿಗೂ ತಮ್ಮ ಸ್ವಾರ್ಥಕ್ಕಾಗಿ, ಸ್ವಂತದ ಲಾಭಕ್ಕಾಗಿ ಉಪವಾಸ ಕೈಗೊಳ್ಳುತ್ತಿರಲಿಲ್ಲ. ಅದೊಂದು ತೀವ್ರ ಧಾರ್ಮಿಕ ಸಾಹಸವೆಂದೇ ಹೇಳಬಹುದು. ಅವರೇ ಒಮ್ಮೆ ಆ ಬಗ್ಗೆ ಹೇಳುತ್ತಾ, 'ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ಉಪವಾಸ ವ್ರತ ಕೈಗೊಳ್ಳುವುದೆಂದರೆ ಅದು ದೇವರ ಕೃಪೆಯಿಂದಾಗಬಹುದಾದ ಕಾರ್ಯ. ಇಲ್ಲವಾದಲ್ಲಿ, ಅದು ಬರೀ ಅನ್ನವಿಲ್ಲದೆ ಕೊರಗುವುದಕ್ಕಷ್ಟೇ ಸೀಮಿತವಾಗುತ್ತದೆ' ಎಂದು ವಿವರಿಸಿದ್ದರು. ಅವರು ಮುಂದುವರಿದು 'ಉಪವಾಸವ್ರತ' ವೆಂದರೆ ಸತ್ಯಾಗ್ರಹಿಯ ಸಮರ್ಥ ಉಪಕರಣ. ಅದರಿಂದ ನನಗೆ ತೀವ್ರ ಶಾಂತಿ ಮತ್ತು ಸಂತಸದ ಅನುಭವಗಳಾಗಿವೆ. ಉಪವಾಸವ್ರತವೆಂದರೆ, ತಮ್ಮನ್ನು ತಾವೇ ಶುದ್ಧೀಕರಿಸಿಕೊಳ್ಳುವುದು; ತಮ್ಮನ್ನು ತಾವೇ ಸಶಕ್ತರನ್ನಾಗಿ ಮಾಡಿಕೊಳ್ಳುವುದು. ನನ್ನ ಧರ್ಮದ ಪ್ರಕಾರ ಮನುಷ್ಯ ಪ್ರಯತ್ನದಿಂದ ಪರಿಹರಿಸಲಾಗದ ಸಂಕಟವೊದಗಿಬಂದಾಗ, ಅದರ ಪರಿಹಾರಕ್ಕಾಗಿ ಪ್ರತಿಯೊಬ್ಬನೂ ಉಪವಾಸ ಮತ್ತು ಪ್ರಾರ್ಥನೆಗಳನ್ನು ಕೈಗೊಳ್ಳಬೇಕು. ಏಕೆಂದರೆ ಮನುಷ್ಯನ ಮನಸ್ಸು ಮತ್ತು ಹೃದಯಗಳು ಪರಿಶುದ್ಧವಾಗಿದ್ದಾಗಲೇ ಒಳ್ಳೆಯ ನಿರ್ಧಾರಗಳನ್ನು ಕೈಗೊಳ್ಳುವುದು ಸಾಧ್ಯ ಎಂದು ವಿವರಿಸಿದ್ದಾರೆ.

ಧರ್ಮದೃಷ್ಟಿ

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಬಾಪೂಜಿಯವರಿಗೆ ಶಿಕ್ಷೆ ವಿಧಿಸಿದ ಬ್ರಿಟಿಷ್ ನ್ಯಾಯಾಧೀಶರೊಬ್ಬರು, 'ಇದುವರೆಗೆ ನನ್ನಿಂದ ವಿಚಾರಣೆಗೊಳಗಾದ ವ್ಯಕ್ತಿಗಳೆಲ್ಲರಿಗಿಂತ ನೀವು ತುಂಬಾ ಭಿನ್ನರಾದವರು. ನಾನು ಅದನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ರಾಜಕೀಯದಲ್ಲಿ ನಿಮ್ಮ ವಿಚಾರಗಳನ್ನು ಒಪ್ಪದವರೂ ಕೂಡಾ ನಿಮ್ಮನ್ನು ಒಬ್ಬ ಮಹಾನ್ ದೇಶಪ್ರೇಮಿ, ಧರ್ಮನಿಷ್ಠ, ತತ್ವನಿಷ್ಠ ಮತ್ತು ಋಷಿಸದೃಶ ಮನುಷ್ಯ ಎಂಬುದನ್ನು ಮರೆಯದೆ ಗೌರವಿಸುತ್ತಾರೆ' ಎಂದು ಉದ್ಗರಿಸಿದ್ದಾರೆ.

ಗಾಂಧೀಜಿಯವರು ಒಬ್ಬ ಹಿಂದೂವಾದರೂ, ಎಲ್ಲ ಧರ್ಮಗಳನ್ನು ಸಮಾನವಾಗಿ ಪ್ರೀತಿಸುತ್ತಿದ್ದರು, ಗೌರವಿಸುತ್ತಿದ್ದರು. ಧರ್ಮವೆಂದರೆ ಗಾಂಧೀಜಿಯವರ ಪರಿಭಾಷೆಯಲ್ಲಿ ಅದು ಕೇವಲ ಪ್ರೀತಿ ಮತ್ತು ಸತ್ಯ! ಅವರ ಸುದೀರ್ಘ ಅನುಭವದಿಂದಾಗಿ ಅವರು ಕೆಲವು ಸಿದ್ಧಾಂತಗಳನ್ನು ರೂಪಿಸಿಕೊಂಡಿದ್ದರು. ಅದೆಂದರೆ, ಎಲ್ಲಾ ಧರ್ಮಗಳೂ ಸತ್ಯ. ಎಲ್ಲಾ ಧರ್ಮಗಳಲ್ಲಿಯೂ ಕೆಲವಾರು ದೋಷಗಳಿವೆ. ನನಗೆ ಹಿಂದೂ ಧರ್ಮದಲ್ಲಿ ಎಷ್ಟು ಪ್ರೀತಿ, ವಿಶ್ವಾಸಗಳಿವೆಯೋ ಉಳಿದ ಧರ್ಮಗಳಲ್ಲೂ ಅಷ್ಟೇ ಪ್ರೀತಿ, ವಿಶ್ವಾಸಗಳಿವೆ ಎಂದು ಹೇಳುತ್ತಿದ್ದರು. ಅದರಿಂದಾಗಿ, ಮತಾಂತರ ಸಿದ್ಧಾಂತಗಳನ್ನು ಅವರು ಒಪ್ಪುತ್ತಿರಲಿಲ್ಲ. ಹುಟ್ಟು ಒಂದು ಆಕಸ್ಮಿಕ ಘಟನೆ. ಮನುಷ್ಯನು ತನ್ನ ಅರಿವಿಗೆ ಅಳವಲ್ಲದ ಕಾರಣಗಳಿಂದಾಗಿ

ಯಾವುದೋ ಧರ್ಮದಲ್ಲಿ, ಯಾವುದೋ ದೇಶದಲ್ಲಿ ಜನಿಸಿರಬಹುದು. ಆದರೂ ದೇವರು ಆತನಿಗೊಂದು ಧರ್ಮ ಅಥವಾ ನಂಬಿಕೆಯನ್ನು ನೀಡಿರುತ್ತಾನೆ. ಅವನು ಅದನ್ನು ಬಳಸಿಕೊಂಡು, ಅದನ್ನು ಸದುಪಯೋಗಪಡಿಸಿಕೊಳ್ಳಬೇಕೆ ಹೊರತು, ಅದನ್ನು ಇನ್ನೊಬ್ಬರ ಮೇಲೆ ಹೇರಲು ಬಯಸಬಾರದು! ಕ್ರಿಶ್ಚಿಯನ್ನರು ಹಿಂದೂಗಳಾಗಬಾರದು. ಆದರೆ ಅವರು ಒಳ್ಳೆಯ ಕ್ರಿಶ್ಚಿಯನ್ನರಾಗಲು ನಿರಂತರ ಪ್ರಯತ್ನಿಸಬೇಕು. ಹಿಂದೂಗಳು ಕ್ರಿಶ್ಚಿಯನ್ನರು ಅಥವಾ ಮುಸಲ್ಮಾನರಾಗಬಾರದು. ಆದರೆ ಒಳ್ಳೆಯ ಹಿಂದೂ ಆಗಲು ನಿರಂತರವೂ ಪ್ರಯತ್ನಿಸಬೇಕು.

ಆದಿವಾಸಿಗಳು ಅಥವಾ ಬುಡಕಟ್ಟಿನ ಜನರಿಗೆ ಇಲ್ಲಸಲ್ಲದ ಆಮಿಷಗಳನ್ನು ಒಡ್ಡುವ ಮೂಲಕ, ಅವರ ಮತಾಂತರಕ್ಕೆ ಪ್ರಯತ್ನಿಸಬಾರದು. ಆದರೆ ಅವರು ತಮ್ಮ ಮತದಲ್ಲಿಯೇ ಇದ್ದುಕೊಂಡು ಮುಂದೆ ಬರಲು, ಅಭಿವೃದ್ಧಿಯಾಗಲು ಮುಂದುವರಿದ ಜನಾಂಗಗಳು ನೆರವು ನೀಡಬೇಕು. ಇದು ಅವರ ಖಚಿತ ನಿಲುವು!

ಬಾಪು ಅವರಿಗೆ ಅನೇಕ ಮುಸಲ್ಮಾನ ಸ್ನೇಹಿತರಿದ್ದರು. ಯಾವುದೇ ಕಾರಣಕ್ಕೂ ಮುಸಲ್ಮಾನರಿಗೆ ಅನ್ಯಾಯವಾಗಲು ಅವರು ಅವಕಾಶವನ್ನು ನೀಡುತ್ತಿರಲಿಲ್ಲ. ಗಾಂಧೀಜಿಯವರು ಅವರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಅವರ ಆ ಪ್ರೀತಿಯೇ ಅವರ ಜೀವಕ್ಕೆ ಮುಳುವಾಯಿತೆನ್ನಬಹುದು. ಅವರು ಹಿಂದೂ ಮುಸಲ್ಮಾನರ ಹಿತಕ್ಕಾಗಿ, ಏಕತೆಗಾಗಿ ಉಪವಾಸ ಮಾಡಿದರು. ಅನೇಕ ಪಾದಯಾತ್ರೆಗಳನ್ನು ಮಾಡಿದರು. ನಿರಂತರವಾಗಿ, ಅವರಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತಿದ್ದರು.

ಗಾಂಧೀಜಿಯವರಿಗೆ ಕ್ರಿಸ್ತ ಮತ್ತು ಕ್ರಿಶ್ಚಿಯನ್ನರಲ್ಲಿ ಅಪಾರ ಗೌರವವಿತ್ತು. 'ಜಗತ್ತಿನ ಶಕ್ತಿಯುತ' ಸತ್ವಯುತ ಪ್ರವಾದಿಗಳಲ್ಲಿ ಯೇಸುಕ್ರಿಸ್ತನೂ ಒಬ್ಬನು' ಎಂದು ಹೇಳುತ್ತಿದ್ದರು. ಕ್ರಿಸ್ತನಿಗೆ ನನ್ನ ಹೃದಯದಲ್ಲಿ ಸ್ಥಾನವಿದೆ. ನನ್ನ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಕ್ರಿಸ್ತನಿಗೆ ಪ್ರಮುಖ ಸ್ಥಾನವಿದೆ. ಆತನ ಬೋಧನೆ 'ನಿಮ್ಮ ಜೀವನವನ್ನು ಪ್ರೀತಿಯ ಶಾಶ್ವತ ಕಾನೂನಿಗೊಳಪಡಿಸಿಕೊಳ್ಳಿ' ಎಂಬುದನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಯಾವಾಗಲೂ ಹೇಳುತ್ತಿದ್ದರು.

ಬುದ್ಧ ಮತ್ತು ಬೌದ್ಧಧರ್ಮೀಯರ ಬಗ್ಗೆಯೂ ಬಾಪುವಿಗೆ ಅಪಾರ ಗೌರವ. ಬುದ್ಧನು ಬೋಧಿಸಿದ ಅಪರಿಮಿತ ತ್ಯಾಗ, ಅನುಪಮ ವೈರಾಗ್ಯ, ಪರಿಶುದ್ಧ ಜೀವನ ಮತ್ತು ಕೃತಜ್ಞತಾಭಾವಗಳಿಗಾಗಿ ಭಾರತವು ಆತನಿಗೆ ಋಣಿಯಾಗಿದೆ. ಬುದ್ಧನ ಬೋಧನೆಗಳು ಆತನ ಹೃದಯದಂತೆ ವಿಶಾಲ ಮತ್ತು ಆವರಿಸಿಕೊಳ್ಳುವಂತಹವುಗಳಾಗಿದ್ದರಿಂದಲೇ ಆತನ ದೇಹ ಭಾರತದಲ್ಲೇ ಉಳಿದರೂ, ಬೋಧನೆಗಳು ಸಾಗರಗಳಾಚೆಯ ಜನರನ್ನು ಆವರಿಸಿಕೊಂಡವು!

ಯಾವುದೇ ಧರ್ಮದ ಬಗ್ಗೆ ಗಾಂಧೀಜಿಯವರಿಗೆ ಸಂಕುಚಿತ ಮನೋಭಾವವಿರಲಿಲ್ಲ. ಅವರಿಗೆ ಧರ್ಮವೆಂದರೆ ಸತ್ಯದ ಮೇಲಿನ ಪ್ರೀತಿ, ಶಾಂತಿ ಸಹನೆಗಳ ಅನುಸರಣೆ ಮತ್ತು ದೀನ ದಲಿತರ ಸೇವೆ. ಸಾರ್ವತ್ರಿಕ ಪ್ರೀತಿಯ

ನೆಲೆಯಲ್ಲಿ ಸತ್ಯವನ್ನರಸುವುದೇ ಧರ್ಮ! ಏಕದೇವೋಪಾಸನೆ ಎಲ್ಲಾ ಧರ್ಮಗಳ ತಿರುಳು! ಎಲ್ಲಾ ಧರ್ಮಗಳು ಆ ಪರಾತ್ಪರನನ್ನು ಕಾಣಲು ಇರುವ ವಿವಿಧ ಮಾರ್ಗಗಳು ಎಂದು ಬಾಪು ನಂಬಿದ್ದರು. ಗಾಂಧೀಜಿಯವರು ಧರ್ಮದ ಬಗ್ಗೆ ಜನತೆಯು ಎಂದೆಂದಿಗೂ ನೆನಪಿಡತಕ್ಕಂತಹ ಮತ್ತು ಆ ಬಗ್ಗೆ ಸದಾಕಾಲವೂ ಯೋಚಿಸತಕ್ಕಂತಹ ಅನೇಕ ವಿವೇಕಯುತವಾದ ಸುಂದರ ಸಂಗತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಸಂಗತಿಗಳನ್ನು ಇಲ್ಲಿ ನೀಡಲಾಗಿದೆ.

'ಸತ್ಯವೇ ದೇವರು', 'ಸತ್ಯವನ್ನುಳಿದು ನನಗೆ ಬೇರೆ ಯಾವ ದೇವರೂ ಇಲ್ಲ' 'ದೇವರೇ ಕಾನೂನು ಮತ್ತು ಕಾನೂನು ನಿರೂಪಕ, ಆತನೇ ನ್ಯಾಯವನ್ನು ಎತ್ತಿ ಹಿಡಿಯುವವನು' 'ನಿಸ್ಸಹಾಯಕರಿಗೆ ಸಹಾಯಕನು', 'ಮನುಷ್ಯನನ್ನು ಭಯದಿಂದ ಮುಕ್ತಗೊಳಿಸುವವನೂ ಅವನೇ' 'ಎಲ್ಲಿ ಭಯವಿದೆಯೋ ಅಲ್ಲಿ ಧರ್ಮವಿಲ್ಲ!'

'ದೇವರು ವೇದನೆ ಮತ್ತು ಸಹನೆಗಳ ಪ್ರತಿರೂಪ' ಆತನಿಗೆ ಸಾವಿರ ನಾಮಗಳಿದ್ದರೂ ಆತನೊಬ್ಬನೇ', 'ನಾನು ಆತನ ಸಂಪೂರ್ಣ ನಿರಾವಲಂಬನೆಯನ್ನು ನಂಬುತ್ತೇನೆ', 'ದೇವರು ಸಂಪೂರ್ಣವಾಗಿ ಅದ್ವೈತಿ' 'ಅದರಂತೆ ಮಾನವ ಜನಾಂಗವೂ ಕೂಡ ಒಂದೇ'!

'ದೇವರಲ್ಲಿ ಜೀವಂತ ನಂಬಿಕೆಯೆಂದರೆ, ಮಾನವ ಜನಾಂಗದ ಭ್ರಾತೃತ್ವವನ್ನೊಪ್ಪಿಕೊಳ್ಳುವುದು.' ಬಾಪುವಿನ ಬೋಧನೆಗಳಲ್ಲೆಲ್ಲಾ ಪ್ರೀತಿಯ ಬಗ್ಗೆ ಅವರು ಹೇಳಿರುವ ಸುಂದರ ಮಾತುಗಳು ಹೀಗಿವೆ: 'ಧರ್ಮದ ನೆಲೆ ಹೃದಯ', 'ಎಲ್ಲಿ ಪ್ರೀತಿಯಿದೆಯೋ ಅಲ್ಲಿ ದೇವರಿದ್ದಾನೆ', 'ಈ ಜಗತ್ತಿನ ಅತ್ಯಂತ ಬಲಯುತ ಶಕ್ತಿಯೆಂದರೆ ಪ್ರೀತಿ', 'ಪ್ರೀತಿಯಿಲ್ಲದ ಜೀವನ ಸಾವಿಗೆ ಸಮ', ಪ್ರೀತಿಗೆ ಕೊಡುವುದಷ್ಟೇ ಗೊತ್ತು, ಪಡೆದುಕೊಳ್ಳುವುದಲ್ಲ!', 'ಪ್ರೀತಿ ತಾಳ್ಮೆಯ ಪ್ರತಿರೂಪ', 'ಪ್ರೀತಿ ಎಂದೂ ಪ್ರತೀಕಾರವನ್ನು ಬಯಸುವುದಿಲ್ಲ', 'ಪ್ರೀತಿ ಸ್ವಾರ್ಥವನ್ನು ಅಳಿಸುತ್ತದೆ', 'ಪ್ರೀತಿಯು ಧೈರ್ಯಶಾಲಿಯ ವಿಶೇಷಾಧಿಕಾರ', 'ದ್ವೇಷವನ್ನು ಪ್ರೀತಿಯಿಂದ ಮಾತ್ರ ಗೆಲ್ಲಲು ಸಾಧ್ಯ' 'ಪ್ರೀತಿಯೇ ಪರಮ ಸತ್ಯ ಹಾಗೂ ಜೀವನದ ನಿಯಮ!'

ಬಾಪುವಿಗೆ ಪ್ರಾರ್ಥನೆಯಲ್ಲಿ ಅಪಾರ ನಂಬಿಕೆ! 'ಪ್ರಾರ್ಥನೆಯು ಬೆಳಗಿನ ಕೀಲಿಕೈ, ಸಂಜೆಯ ಅಗಳಿ'. ಪ್ರತಿದಿನ ಬೆಳಗ್ಗೆ ಸೂರ್ಯೋದಯಕ್ಕೆ ಮೊದಲು ತಮ್ಮ ಆಶ್ರಮದ ನಿವಾಸಿಗಳೊಡನೆ ಪ್ರಾರ್ಥನೆಗೆ ತೊಡಗುತ್ತಿದ್ದರು. ಅದರಂತೆಯೇ ಪ್ರತಿದಿನ ಸಂಜೆ ಸೂರ್ಯಾಸ್ತಮದ ವೇಳೆಗೆ ಸ್ನೇಹಿತರು, ಸಂದರ್ಶಕರು ಮೊದಲಾದವರೂ ಸೇರಿದಂತೆ ಬಹುದೊಡ್ಡ ಪ್ರಾರ್ಥನಾ ಸಭೆ ನಡೆಯುತ್ತಿತ್ತು. ಯಾರು ಬೇಕಾದರೂ ಈ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಬಹುದಿತ್ತು. ಅಲ್ಲಿ ಬ್ರಾಹ್ಮಣನ ಪಕ್ಕದಲ್ಲಿ ಮುಸಲ್ಮಾನ, ಕ್ರಿಶ್ಚಿಯನ್ನನ ಪಕ್ಕದಲ್ಲಿ ಪಾರ್ಸಿಯು ಕುಳಿತು ಪ್ರಾರ್ಥನೆಯಲ್ಲಿ ತೊಡಗುತ್ತಿದ್ದರು. ವಿಶ್ವದ ಎಲ್ಲಾ ಪ್ರಮುಖ ಧರ್ಮಗ್ರಂಥಗಳಿಂದಲೂ ಆರಿಸಿದ ಶ್ಲೋಕಗಳನ್ನು, ವಾಕ್ಯಗಳನ್ನು ಅಲ್ಲಿ ಪಠಿಸಲಾಗುತ್ತಿತ್ತು.

ಪ್ರಾರ್ಥನೆಯೆಂದರೆ ಗಾಂಧೀಜಿಯವರ ಪ್ರಕಾರ ದೇವರಿಗೆ ಬೇಡಿಕೆ ಸಲ್ಲಿಸುವುದಲ್ಲ, ಅದು ಆತ್ಮದ ಮೊರೆ! ಅವರು ಯಾವ ಕೆಲಸವನ್ನೂ ಪ್ರಾರ್ಥನೆಯಿಲ್ಲದೆ ಮಾಡರು. ದೈನಂದಿನ ಕೆಲಸಗಳಿಗೆ ಒಂದು ಶಿಸ್ತು ಬರಬೇಕೆಂದರೆ, ಅದು ಪ್ರಾರ್ಥನೆಯಿಂದ ಮಾತ್ರ ಸಾಧ್ಯ! ಪ್ರಾರ್ಥನೆಯನ್ನು ತನ್ನ ಜೀವನದ ಅವಿಭಾಜ್ಯ ಅಂಗವಾಗಿ ಮಾಡಿಕೊಂಡ ಮನುಷ್ಯನು ತಾನೂ ಶಾಂತಿಯಿಂದ ಇರುತ್ತಾನೆ ಹಾಗೂ ಇತರ ಎಲ್ಲರೊಂದಿಗೂ ಶಾಂತಿ, ತಾಳ್ಮೆಯಿಂದ ವ್ಯವಹರಿಸುತ್ತಾನೆ. ಪ್ರಾರ್ಥನೆಯು ಮಾತ್ರ ಮನುಷ್ಯನನ್ನು ದೇವರ ಸಮೀಪಕ್ಕೆ ಕೊಂಡೊಯ್ಯಬಲ್ಲುದು!

ಬಾಪು ತಾಳ್ಮೆಯ ಪ್ರತಿರೂಪ! ನಾವು ಪರಸ್ಪರರ ಧರ್ಮಗಳನ್ನು ಗೌರವಿಸುವುದರಿಂದ ಶಾಂತಿ ಒಡಮೂಡುತ್ತದೆ, ನಾವು ಇನ್ನೊಬ್ಬರ ನಂಬಿಕೆಗಳು ಮತ್ತು ಪದ್ಧತಿಗಳನ್ನು ಗೌರವಿಸಬೇಕೆಂದು ಅವರು ಒತ್ತಾಯಿಸುತ್ತಿದ್ದರು. ಬಡ ಮತ್ತು ಅಮಾಯಕ ಜನರ ಆಚರಣೆಗಳನ್ನು ಕೂಡ ನಿಕೃಷ್ಟವಾಗಿ ಕಾಣಬಾರದು. ನಾನು ಮದ್ಯಪಾನ, ಮಾಂಸಾಹಾರ ಮತ್ತು ಧೂಮಪಾನಗಳನ್ನು ದ್ವೇಷಿಸುತ್ತೇನೆ. ಆದರೆ ಅವುಗಳ ಅಭ್ಯಾಸವನ್ನುಳ್ಳ ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ನರಲ್ಲಿ ಯಾರನ್ನೂ ದ್ವೇಷಿಸುವುದಿಲ್ಲ! ಹಾಗೆಯೇ ಮೇಲಿನ ಯಾವುದೇ ಅಭ್ಯಾಸವಿಲ್ಲದ ನನ್ನನ್ನು ಕೂಡ ಅವರು ಸಹಿಸಿಕೊಳ್ಳಬೇಕೆಂದು ನಿರೀಕ್ಷಿಸುತ್ತೇನೆ. ಮತ್ತೊಬ್ಬರು ನಮ್ಮನ್ನು ಅನುಸರಿಸಬೇಕೆಂದು ನಿರೀಕ್ಷಿಸುವುದೇ ಅನೇಕ ಭಿನ್ನಾಭಿಪ್ರಾಯ ಹಾಗೂ ಜಗಳಗಳಿಗೆ ಕಾರಣವಾಗುತ್ತದೆ! 'ಬದುಕಿ, ಇತರರನ್ನೂ ಬದುಕಲು ಬಿಡಿ' ಎಂಬುದೇ ನಮ್ಮ ಜೀವನಮಂತ್ರವಾಗಬೇಕು.

ಗಾಂಧೀಜಿಯವರ ತಾಳ್ಮೆಯು, ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ತಳೆದಿದ್ದ ಅಭಿಪ್ರಾಯಗಳ ಮೇಲೂ ತನ್ನ ಪ್ರಭಾವವನ್ನು ಬೀರುತ್ತಿತ್ತು. ಅವರು ಭಾರತವನ್ನು ಹೃದಯಪೂರ್ವಕವಾಗಿ ಪ್ರೀತಿಸುತ್ತಿದ್ದರು. ಅದನ್ನು ಅವರ ಮಾತುಗಳಲ್ಲೇ ಕೇಳಿ– 'ಮಗು ತನ್ನ ತಾಯಿಯ ಎದೆಗೆ ಅಂಟಿಕೊಂಡಿರುವಂತೆ, ನಾನು ಭಾರತಕ್ಕೆ ಅಂಟಿಕೊಂಡಿದ್ದೇನೆ. ಏಕೆಂದರೆ ಆಕೆಯು ನನಗೆ ಬೇಕಾದ ಆಧ್ಯಾತ್ಮಿಕ ತುಷ್ಟಿಪುಷ್ಟಿಗಳನ್ನು ನೀಡುತ್ತಾಳೆ' ಎಂದು ಹೇಳುತ್ತಿದ್ದರು. ಹಾಗೆಯೇ ಅವರು ವಿಶ್ವದ ಎಲ್ಲ ರಾಷ್ಟ್ರಗಳನ್ನೂ ಪ್ರೀತಿಸುತ್ತಿದ್ದರು. ತಮ್ಮ ಜೀವಿತದ ಬಹುಪಾಲು ಕಾಲವನ್ನು ಬ್ರಿಟನ್ ದೇಶದೊಡನೆ ಹೋರಾಟದಲ್ಲಿಯೇ ಕಳೆದಿದ್ದರೂ ಬ್ರಿಟಿಷ್ ಅಧಿಕಾರಿಗಳು ಅವರನ್ನು ಅನೇಕ ವರ್ಷಗಳ ಕಾಲ ಜೈಲಿನಲ್ಲಿ ಬಂಧಿಸಿಟ್ಟಿದ್ದರೂ ಬ್ರಿಟಿಷರ ವಿರುದ್ಧ ಅವರ ಹೃದಯಲ್ಲಿ ಯಾವುದೇ ಕಹಿ ಭಾವನೆ ಇರಲಿಲ್ಲ. 'ನಾನು ನನ್ನ ದೇಶದ ಜನರನ್ನು ಎಷ್ಟು ಪ್ರೀತಿಸುತ್ತೇನೆಯೋ, ಅಷ್ಟೇ ಪ್ರೀತಿಯು ಬ್ರಿಟಿಷರ ಬಗ್ಗೆಯೂ ಇದೆ' ಎಂದು ಹೇಳುತ್ತಿದ್ದರು.

'ಭಾರತದ ಸೇವೆಯೆಂದರೆ ಮಾನವ ಜನಾಂಗದ ಸೇವೆ' ಎಂದೇ ಬಾಪು ಭಾವಿಸಿದ್ದರು. ನಾನು ಭಾರತವನ್ನು ಸೇವಿಸುವ ನೆಪದಲ್ಲಿ ಇಡೀ ಮಾನವ ಜನಾಂಗವನ್ನೇ ಸೇವಿಸುತ್ತಿದ್ದೇನೆ. ನನ್ನ ದೇಶಭಕ್ತಿಯಲ್ಲಿ ಮಾನವ ಜನಾಂಗದ

ಸಾರ್ವತ್ರಿಕ ಒಳಿತೂ ಸೇರಿದೆ. ಮಾನವೀಯತೆಯೂ ನನ್ನ ದೇಶಭಕ್ತಿಯ ಅರ್ಥದಲ್ಲಿ ಸೇರಿದೆ' ಎಂದೂ ಬಾಪು ಹೇಳುತ್ತಿದ್ದರು.

ಮಾನವೀಯತೆ ಎಂದರೆ ಏಕತೆ! ಮಾನವರೆಲ್ಲರೂ ಒಂದು ಹಾಗೂ ಸರಿಸಮಾನರು. ಆದ್ದರಿಂದಲೇ ಅವರು ಅಸ್ಪೃಶ್ಯರನ್ನು 'ಹರಿಜನ' ಎಂಬ ಕೋಮಲವಾದ ಪದದಿಂದ ಕರೆಯುತ್ತಿದ್ದರು. ಹರಿಜನರೆಂದರೆ ದೇವರಿಗೆ ಪ್ರಿಯವಾದ ಜನರು. ಅವರಿಗೆ ಪ್ರವೇಶವಿಲ್ಲದ ದೇವಾಲಯದೊಳಗೆ ಗಾಂಧಿ ಕೂಡ ಎಂದೂ ಹೋಗುತ್ತಿರಲಿಲ್ಲ. ಹರಿಜನ ಕುಟುಂಬವೊಂದನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡಿದ್ದರು. ಅವರಿಗೆ ಅಡಿಗೆ ಮನೆಯೂ ಸೇರಿದಂತೆ ಎಲ್ಲಾ ಕಡೆಯೂ ಪ್ರವೇಶವಿತ್ತು. ಅಲ್ಲದೆ, ಹರಿಜನ ಬಾಲಕಿಯೊಬ್ಬಳನ್ನು ತಮ್ಮ ದತ್ತು ಮಗಳಾಗಿ ಸ್ವೀಕರಿಸಿದ್ದರು. ಅವರಿಗೆ ದೇಶದ ಎಲ್ಲಾ ಅರಮನೆಗಳ ಬಾಗಿಲುಗಳು ತೆರೆದಿದ್ದರೂ ಅವರು ಬಡವರ, ದೀನದಲಿತರ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. 'ಮರುಜನ್ಮವೇನಾದರೂ ಇದ್ದಲ್ಲಿ, ಆಗ ನಾನು ಅಸ್ಪೃಶ್ಯನಾಗಿ ಹುಟ್ಟಲು ಬಯಸುತ್ತೇನೆ' ಎಂದು ಅವರು ಅನೇಕ ಬಾರಿ ಹೇಳುತ್ತಿದ್ದರು.

ಬಾಪು ಅಸ್ಪೃಶ್ಯತೆಯನ್ನು ಸೈತಾನನ ಕೆಲಸವೆಂದೇ ದೂಷಿಸುತ್ತಿದ್ದರು. ಅದು ಪಾಪ ಹಾಗೂ ಕೊಲೆಗಡುಕತನವೆಂದೇ ಹೇಳುತ್ತಿದ್ದ ಬಾಪು ತಾವೇ ಅನೇಕ ಸಂದರ್ಭಗಳಲ್ಲಿ ಅಸ್ಪೃಶ್ಯರ ಕೆಲಸವನ್ನು ಯಾವುದೇ ಎಗ್ಗಿಲ್ಲದೆ ಮಾಡುತ್ತಿದ್ದರು. ದಕ್ಷಿಣ ಆಫ್ರಿಕದಿಂದ ಹಿಂದಿರುಗಿದ ನಂತರ ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನಕ್ಕೆ ಹಾಜರಾಗಿದ್ದರು. ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆದಿತ್ತು. ಆದರೆ ಆ ಸ್ಥಳ ತುಂಬಾ ಹೊಲಸಾಗಿತ್ತು. ಕಸದ ರಾಸಿಯೇ ಬಿದ್ದಿತ್ತು. ಕೊಳಕು ನೀರು ಹರಿಯುತ್ತಿತ್ತು. ಪಾಯಖಾನೆಗಳು ಗಬ್ಬು ವಾಸನೆ ಬೀರುತ್ತಿದ್ದವು. ಬಾಪು ಕಾರ್ಯಕರ್ತರನ್ನು ಕರೆದು ಆ ಕಡೆ ಗಮನಹರಿಸಲು ಸೂಚಿಸಿದರು. ಆದರೆ ಅವರು ಅದು ಜಾಡಮಾಲಿಗಳ ಕೆಲಸ, ನಮ್ಮದಲ್ಲವೆಂದು ಹೇಳಿಬಿಟ್ಟರು. ಆಗ ಬಾಪು ಹಿಂದು ಮುಂದೆ ನೋಡದೆ ಕೂಡಲೇ ತಾವೇ ಪಾಯಖಾನೆಗಳನ್ನು ಸ್ವಚ್ಛಗೊಳಿಸಿದರು! ಅವರ ಆಶ್ರಮದಲ್ಲಿ ಇದು ಅತಿ ಪ್ರಮುಖರಿಂದ ಹಿಡಿದು ಸಾಮಾನ್ಯನವರೆಗೂ ಕಡ್ಡಾಯವಾಗಿತ್ತು!

ಭಾರತದಲ್ಲಿ ಎಂದಿನಿಂದಲೂ ಚಮ್ಮಾರಿಕೆಯನ್ನು ಕೀಳು ಕೆಲಸವೆಂದೇ ಬಗೆಯಲಾಗಿದೆ. ಬಾಪು ಅದನ್ನು ವಿರೋಧಿಸುತ್ತಿದ್ದುದಲ್ಲದೆ, ಯಾವುದೇ ಎಗ್ಗಿಲ್ಲದೆ ಚಪ್ಪಲಿಗಳನ್ನು ತಯಾರಿಸುತ್ತಿದ್ದರು. ಬಾಪು ದಕ್ಷಿಣ ಆಫ್ರಿಕಾದ ಜೈಲಿನಲ್ಲಿದ್ದ ಸಮಯದಲ್ಲಿ ಅಲ್ಲಿಯ ಪ್ರಧಾನಿ ಜನರಲ್ ಸ್ಮಟ್ಸ್ ಅವರಿಗೆ ತಾವೇ ಕೈಯಾರ ತಯಾರಿಸಿದ್ದ ಒಂದು ಜೊತೆ ಚಪ್ಪಲಿಗಳನ್ನು ಕಾಣಿಕೆಯಾಗಿ ನೀಡಿದರು. ಸ್ಮಟ್ಸ್ ಅವುಗಳನ್ನು ಕೆಲ ಸಲ ಮೆಟ್ಟಿದರಾದರೂ, ಅನಂತರ 'ಅಂತಹ ಮಹಾಪುರುಷನು ತಯಾರಿಸಿದ ಈ ಚಪ್ಪಲಿಗಳನ್ನು ಮೆಟ್ಟಲು ನನಗೆ ಯೋಗ್ಯತೆಯಿಲ್ಲವೆಂದು ಭಾವಿಸಿ, ಹಿಂದಿರುಗಿಸುತ್ತಿದ್ದೇನೆ!' ಎಂದು ಅವುಗಳನ್ನು ಹಿಂದಿರುಗಿಸಿದರು. ಭಾರತದಲ್ಲಿ ಅವರ ಆಶ್ರಮವಾಸಿಗಳೆಲ್ಲರೂ ಚಮ್ಮಾರಿಕೆಯ ಕೆಲಸ ಮಾಡಬೇಕಾಗಿತ್ತು. ಅಲ್ಲಿ ಸಂಸ್ಕೃತ

ವಿದ್ವಾಂಸರಾದ ಅನೇಕ ಬ್ರಾಹ್ಮಣರು ಚಮ್ಮಾರಿಕೆ ಮತ್ತು ಕಸಗುಡಿಸುವ ಕೆಲಸವನ್ನು ಮಾಡುವುದನ್ನು ನೋಡಿದ ಅನೇಕರು ದಿಗ್ಮೂಢರಾಗಿದ್ದರು!

ಬಾಪುವಿನ ಮೇಲ್ಪಂಕ್ತಿ ಮತ್ತು ಬೋಧನೆಗಳ ಪರಿಣಾಮವಾಗಿ ಅಸ್ಪೃಶ್ಯತೆಯು ಇಂದು ಭಾರತದಲ್ಲಿ ಶಿಕ್ಷಾರ್ಹವೆಂದು ಪರಿಗಣಿಸಲ್ಪಟ್ಟಿದೆ. ನಮ್ಮ ಸಂವಿಧಾನದ ಪ್ರಕಾರ ದೇಶದಲ್ಲಿಂದು ಅಸ್ಪೃಶ್ಯತೆ ಎಂಬುದೇನೂ ಇಲ್ಲ. ಎಲ್ಲಾ ಜನರೂ ಸರಿಸಮಾನರು, ಎಲ್ಲರೂ ಒಂದು! ಬಾಪು ಅವರು ಮತ್ತೆ ಮತ್ತೆ 'ದೇವರ ಸೃಷ್ಟಿಯಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ! ಕೆಲವರನ್ನು ನಮಗಿಂತ ಕೀಳು ಎಂದು ಭಾವಿಸುವುದು ತಪ್ಪು ಹಾಗೂ ಮಹಾನ್ ಪಾಪದ ಕೆಲಸ!' ಎಂದು ಹೇಳುತ್ತಿದ್ದರು.

*****

ಪರಿಚಯ :

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕೆಂಚಮಲ್ಲನಹಳ್ಳಿಯಲ್ಲಿ ಜನಿಸಿದ ಬಿ.ಎಂ. ಚಂದ್ರಶೇಖರಯ್ಯನವರು ಕರ್ನಾಟಕ ವಿಶ್ವವಿದ್ಯಾಲಯದ ಸಾಮಾಜಿಕ ಮಾನವಶಾಸ್ತ್ರದ ಎಂ.ಎ.ಪದವೀಧರರು ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ 'ಮಾರ್ಚ್ ಆಫ್ ಕರ್ನಾಟಕ' ಮತ್ತು 'ಕರ್ನಾಟಕ ವಿಕಾಸ' ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಆಯಾರಾಮ್ ಗಯಾರಾಮ್. ನಮ್ಮೆಲ್ಲರ ಬಾಪು ಗಾಂಧೀಜಿ, ಮದನ ಮೋಹನ ಮಾಳವೀಯ, ಕರ್ನಾಟಕದ ಕರಕುಶಲ ಕಲೆಗಳು, ಕೂಡ್ಲಿಗಿ ತಾಲ್ಲೂಕು ದರ್ಶನ – ಇವು ಚಂದ್ರಶೇಖರಯ್ಯನವರ ಮುಖ್ಯ ಕೃತಿಗಳಲ್ಲಿ ಕೆಲವು.

ಜಗತ್ತಿನ ಶಾಂತಿ ಹಾಗೂ ಮಾನವತೆಯ ಪ್ರತ್ಯೇಕವಾದ ಮೋಹನದಾಸ ಕರಮ್‌ಚಂದ್ ಗಾಂಧಿ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಹುಟ್ಟಿ ಅಸಾಮಾನ್ಯನಾಗಿ ತ್ರಿವಿಕ್ರಮನಂತೆ ಬೆಳೆದವರು. ಜೀವಿತ ಕಾಲದಲ್ಲೇ ಗಾಂಧಿಯನ್ನು ಎಷ್ಟೋ ಜನ ಪೂಜಿಸಲು ಯತ್ನಿಸಿದರು. ಸಂತನೆಂದು ಕರೆದರು. ಮಹಾತ್ಮನೆಂದು ಹೊಗಳಿದರು. ಅವನ್ನೆಲ್ಲ ಗಾಂಧೀಜಿ ಎಂದೂ ಒಪ್ಪಲಿಲ್ಲ. ಸಾರ್ವಜನಿಕ ಜೀವನದಲ್ಲಿ ತೊಡಗುವ ಕಲೆಯನ್ನು ಹಾಗೂ ಧಾರ್ಮಿಕ ಪ್ರವೃತ್ತಿಯನ್ನು ತಂದೆಯಿಂದಲೂ ಪಡೆದ ಗಾಂಧಿ ಪ್ರೌಢಶಾಲಾ ಹಂತದಲ್ಲಿ ಸಾಧಾರಣ ವಿದ್ಯಾರ್ಥಿಯೇ. ತಲೆನೋವಾಗಿದ್ದ ಇಂಗ್ಲಿಷ್ ಭಾಷೆಯನ್ನು ಕಷ್ಟಪಟ್ಟು ಅಭ್ಯಾಸ ಮಾಡಿ, ಅದರಲ್ಲಿ ಪ್ರಾವೀಣ್ಯ ಸಂಪಾದಿಸಿ ಮುಂದೆ ಅದೇ ಭಾಷೆಯಲ್ಲಿ ವಿಶ್ವದ ಮಹಾನ್ ಬರಹಗಾರರಲ್ಲಿ ಒಬ್ಬರೆನಿಸಿದ್ದು, ವಿಸ್ಮಯಕಾರಿಯಾದ ಸಂಗತಿ. ಬಾಲಕನಾಗಿದ್ದಾಗಲೇ ರಾಜಾ ಹರಿಶ್ಚಂದ್ರ ನಾಟಕ ನೋಡಿ 'ಸತ್ತರೂ ಕೂಡ

ಸುಳ್ಳು ಹೇಳಬಾರದು' ಎಂದು ನಿರ್ಧರಿಸಿದ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದಾಗಲೂ ತಮ್ಮ ಪ್ರಕರಣವನ್ನು ಗೆಲ್ಲುವುದಕ್ಕಾಗಲೀ ಕಕ್ಷಿದಾರರದಿಂದ ಹೆಚ್ಚು ಹಣ ಪಡೆಯುವುದಕ್ಕಾಗಲೀ ಎಂದೂ ಸುಳ್ಳನ್ನು ಹೇಳಲಿಲ್ಲ. ಅವರ ದೃಷ್ಟಿಯಲ್ಲಿ ಹಣವೆಂದರೆ ಸಮುದಾಯದ ಒಳಿತಿಗಾಗಿ ವಿನಿಯೋಗಿಸುವ ವಸ್ತು ಮತ್ರ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮತ್ತು ಆಫ್ರಿಕನ್ನರ ಹಕ್ಕುಗಳಿಗಾಗಿ ಹೋರಾಡಲು ಗಾಂಧಿ ಬಳಸಿದ್ದು 'ಅಹಿಂಸಾ ಮಾರ್ಗ' ಅಂದರೆ ಅನ್ಯಾಯದ ಕಾನೂನು ಮತ್ತು ತತ್ವಗಳ ವಿರುದ್ಧ ಶಾಂತಿಯುತ ಪ್ರತಿಭಟನೆ. ಇದನ್ನು ರಾಷ್ಟ್ರಮಟ್ಟದ ಸಾರ್ವಜನಿಕ ಜೀವನದಲ್ಲಿ ಕೂಡ ಅಳವಡಿಸಿಕೊಳ್ಳಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟವರಲ್ಲಿ ಗಾಂಧಿಯೇ ಪ್ರಥಮರು. ಅವರ ಅನುಯಾಯಿಗಳು ಮಾಡುತ್ತಿದ್ದ ಹಿಂಸಾಚಾರದಂಥ ಅಕಾರ್ಯವನ್ನು ವಿರೋಧಿಸಿ ಅದಕ್ಕೆ ತಾವೇ ಹೊಣೆಯೆಂದು ಭಾವಿಸಿ ಪ್ರಾಯಶ್ಚಿತರೂಪವಾಗಿ ಉಪವಾಸ ಕೈಗೊಳ್ಳುತ್ತಿದ್ದರು. ಬ್ರಿಟಿಷ್ ಸರ್ಕಾರ ಜನಸಾಮಾನ್ಯರ ಜೀವನಕ್ಕೆ ಅತ್ಯಗತ್ಯ ವಸ್ತುವಾದ ಉಪ್ಪಿನ ಮೇಲೆ ಹೊಸ ತೆರಿಗೆ ವಿಧಿಸಿದಾಗ ಗಾಂಧಿ ಈ ಕರಾಳ ಶಾಸನವನ್ನು ಧಿಕ್ಕರಿಸಲು ಸಮುದ್ರ ದಡದ ದಂಡಿಗೆ ಹೋಗಿ ಉಪ್ಪನ್ನು ಮಾಡಿ ಹರಿಸುವುದರ ಮೂಲಕ ಉಪ್ಪಿನ ಕರ ಕಾಯಿದೆಯನ್ನು ಭಂಗಗೊಳಿಸಿದರು. ಈ ದಂಡಿಯಾತ್ರೆ ಭಾರತೀಯರು ಸ್ವಾತಂತ್ರದೆಡೆಗೆ ಇಟ್ಟ ಮೊದಲ ಹೆಜ್ಜೆ ಗುರುತುಗಳಾಗಿದ್ದವು. ತಮ್ಮ ರಕ್ಷಣೆಗಾಗಿ ಪೊಲೀಸರ ಅಥವಾ ಸೈನಿಕರ ನೇಮಕವನ್ನು ವಿರೋಧಿಸಿದ ಗಾಂಧಿ ಪ್ರಾರ್ಥನಾ ಸಭೆಗೆ ಆಗಮಿಸುತ್ತಿದ್ದಾಗ ಯುವಕನೊಬ್ಬ ಹಾರಿಸಿದ ಗುಂಡುಗಳಿಗೆ ಬಲಿಯಾಗಿ ನೆಲಕ್ಕುರುಳಿದರು. ಅವರು ಯಾವುದಕ್ಕಾಗಿ ಪ್ರಾಣ ತೆತ್ತರೋ ಆ ಸತ್ಯಗಳು ಮುಂದಿನ ಜನಾಂಗವನ್ನು ಪ್ರಭಾವಿತಗೊಳಿಸಿ ಅವರನ್ನು ಪ್ರೀತಿ ಶಾಂತಿ ಸಹನೆಗಳ ಮಾರ್ಗದಲ್ಲಿ ನಡೆಸಬೇಕಾಗಿದೆ. ಗಾಂಧಿಯನ್ನು ಕುರಿತು ಮಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ "ರಕ್ತಮಾಂಸಗಳಿಂದ ಕೂಡಿದ ಇಂತಹ ಮಹತ್ಮನೊಬ್ಬನು ಮನುಷ್ಯರೂಪದಲ್ಲಿ ಇದೇ ಭೂಮಿಯ ಮೇಲೆ ನಡೆದಾಡುತ್ತಿದ್ದನೆಂದರೆ ಮುಂದಿನ ಪೀಳಿಗೆ ನಂಬುವುದು ಕಷ್ಟ" ಎಂದು ಉದ್ಗರಿಸಿದ್ದಾರೆ.

೮. ಶೈಕ್ಷಣಿಕ ಜಾನಪದ

– ಬಸವರಾಜ ಸಬರದ

ಸಮಾಜದ ಪ್ರಸ್ತುತ ಅಗತ್ಯಗಳಿಗನುಗುಣವಾಗಿ ಜಾನಪದವನ್ನು ಹೊಸ ಹೊಸ ನೆಲೆಗಳಿಂದ ಅಧ್ಯಯನಕ್ಕಳವಡಿಸುವುದು ಇಂದಿನ ಅಗತ್ಯವಾಗಿದೆ. ಸದಾ ಚಲನಶೀಲತೆಯನ್ನೊಳಗೊಂಡಿರುವ ಜಾನಪದ, ಹರಿವ ನೀರಿನಂತೆ ನಿರಂತರವಾಗಿರುತ್ತದೆ. ಚಲನಶೀಲ ಕ್ರಿಯೆಯಲ್ಲುಂಟಾಗುವ ಸ್ಥಗಿತತೆಗಳನ್ನು ಮೀರುತ್ತಲೇ, ಹೊಸ ಪರಂಪರೆಯೊಂದನ್ನು ಕಟ್ಟಿನಿಲ್ಲಿಸುವುದು ಇಂದಿನ ಅನಿವಾರ್ಯತೆಯಾಗಿದೆ. ಈ ನಿಟ್ಟಿನಲ್ಲಿ ಶೈಕ್ಷಣಿಕ ಜಾನಪದಕ್ಕೆ ಸಂಬಂಧಿಸಿದಂತೆ ಕೆಲವು ಟಿಪ್ಪಣಿಗಳನ್ನಿಲ್ಲಿ ಮಂಡಿಸಲಾಗಿದೆ.

'ಶೈಕ್ಷಣಿಕ ಜಾನಪದ'ದ ಅರ್ಥವನ್ನು ಬೇರೆ-ಬೇರೆ ರೀತಿಗಳಲ್ಲಿ ಅರ್ಥೈಸಬಹುದಾಗಿದೆ. ಜಾನಪದ ಸಂಸ್ಕೃತಿ ಕಲಿಸುವ ಶಿಕ್ಷಣ ಯಾವುದು? ಅದು ಹೇಗಿರುತ್ತದೆ? ಎಂಬುದರ ಬಗೆಗೆ ಅಧ್ಯಯನ ಮಾಡುವುದು ಒಂದು ರೀತಿಯಾದರೆ, ಶೈಕ್ಷಣಿಕ ವಲಯಗಳಲ್ಲಿ ಜಾನಪದವನ್ನು ಹೇಗೆ ಬಳಸಲಾಗುತ್ತದೆಂದು ಅರಿಯುವುದು ಮತ್ತೊಂದು ರೀತಿಯ ಅಧ್ಯಯನವಾಗಿದೆ. ಶಿಕ್ಷಣವನ್ನು ನೀಡುವ ಮಾಧ್ಯಮವಾಗಿ ಜಾನಪದ ಹೇಗೆ ಯಶಸ್ವಿಯಾಗಿದೆ? ಅಂತಹ ಶಿಕ್ಷಣ ಎಂತಹ ಮೌಲ್ಯಗಳನ್ನೊಳ ಗೊಂಡಿರುತ್ತದೆ? ಎಂಬಂತಹ ಪ್ರಶ್ನೆಗಳು ಇಲ್ಲಿ ಬಹುಮುಖ್ಯವಾಗುತ್ತವೆ.

ಹಿಂದೆ ನಾವು ಬ್ರಿಟಿಷ್ ವಸಾಹತುಶಾಹಿಯ ಆಕ್ರಮಣದಲ್ಲಿ ನೊಂದು-ಬೆಂದು ಹೋಗಿದ್ದರೆ, ಇಂದು ಸೆಟಲೈಟ್ ಚಾನಲ್‌ಗಳ ಮೂಲಕ ಸ್ಟಾರ್ ಟಿ.ವಿ.ಗಳ ಮುಂದೆ ಕುಳಿತು ನವವಸಾಹತುಶಾಹಿಯನ್ನು ಸ್ವಾಗತಿಸುತ್ತಿದ್ದೇವೆ. ಡಂಕೆಲ್ ಪ್ರಸ್ತಾವನೆಯ ಗ್ಯಾಟ್ ಒಪ್ಪಂದದ ಮೂಲಕ ಆರ್ಥಿಕ ಉದಾರೀಕರಣದ ಹೆಸರಿನಲ್ಲಿ ರೈತ ಸಮುದಾಯವನ್ನು ದಿಕ್ಕು ತಪ್ಪಿಸುತ್ತಿದ್ದೇವೆ. ನಾವು ಬಿತ್ತಿ ಬೆಳೆದ ಬೀಜಗಳಿಗೆ ನಾವೇ ಪರದಾಡುವಂತೆ ಮಾಡುವ ಪೇಟೆಂಟ್ ಕಪಿಮುಷ್ಟಿಯಲ್ಲಿ ಸಿಕ್ಕಿ ನರಳುತ್ತಿದ್ದೇವೆ. ಅಮೇರಿಕಾ ದೇಶದ ಬಹುರಾಷ್ಟ್ರೀಯ ಕಂಪನಿಗಳು ನಮ್ಮನ್ನಿಂದು ಸದ್ದಿಲ್ಲದೇ ಆಳತೊಡಗಿದೆ. ಈ ಸಂದರ್ಭದಲ್ಲಿ ಜಾನಪದ ಅನಿವಾರ್ಯವಾಗಿದೆ.

ಜಾನಪದ ಸಂಸ್ಕೃತಿ ಜೀವಪರವಾಗಿರುವುದರ ಜತೆಗೆ ಬಹುಮುಖಿ ರೂಪಗಳನ್ನು ಪಡೆದುಕೊಂಡಿದೆ. ತುಂಬಾ ಸಂಕೀರ್ಣವಾಗಿರುವ ಸಂಸ್ಕೃತಿಯ ನೆಲೆಗಳನ್ನು ಸೂಕ್ಷ್ಮವಾದ ಒಳನೋಟಗಳ ಮೂಲಕವೇ ಅಧ್ಯಯನಕ್ಕೊಳಪಡಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಜಾನಪದ ಕೊಡುವ ಶಿಕ್ಷಣದ ಸಾಧ್ಯತೆ–ಮಿತಿಗಳನ್ನು ಅದರ ಸಾಂದರ್ಭಿಕ ನೆಲೆಯಲ್ಲಿಯೇ ಸ್ವೀಕರಿಸಬೇಕಾಗುತ್ತದೆ.

'ಜಾನಪದ' ನೀಡುವ ಶಿಕ್ಷಣ ಪಾರಂಪರಿಕವಾದುದಾಗಿದೆ. ಜನಪದ ಸಾಹಿತ್ಯದಂತೆ ಜನಪದ ಶಿಕ್ಷಣವೂ ಕೂಡ ಮೌಖಿಕ ಪರಂಪರೆಯ ಮೂಲಕವೇ ಬೆಳೆದುಕೊಂಡು ಬಂದಿದೆ. ಭಾರತೀಯ ಪರಂಪರೆಯಲ್ಲಿ 'ಜಾನಪದ'ವು ಎರಡು ರೀತಿಯ ಶಿಕ್ಷಣವನ್ನು ನೀಡುತ್ತ ಬಂದಿದೆ. ಒಂದು, ವೃತ್ತಿಪರ ಶಿಕ್ಷಣವಾದರೆ ಮತ್ತೊಂದು ಸಂಸ್ಕೃತಿ ಪ್ರಸಾರದ ಶಿಕ್ಷಣವಾಗಿದೆ. ಇಲ್ಲಿ ಬರುವ ಕುಲಕಸಬುಗಳಲ್ಲಿ ಕುಲಕ್ಕೂ–ಕಸುಬಿಗೂ ಇರುವ ಸಂಬಂಧವನ್ನು ಸೂಕ್ಷ್ಮವಾಗಿ ಗ್ರಹಿಸುವುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಪ್ರಾರಂಭದಲ್ಲಿ ಅತ್ಯಂತ ಸಾಮರಸ್ಯದಿಂದಿದ್ದ ಜನಸಮುದಾಯ ನಂತರದಲ್ಲಿ ಈ ಕುಲಗಳ ತಾರತಮ್ಯಕ್ಕೊಳಗಾಗಿ ಕಸುಬುಗಳು ಸೊರಗಿಹೋದುದನ್ನು ಕಾಣಬಹುದಾಗಿದೆ.

ಜನಪದ ವೃತ್ತಿಶಿಕ್ಷಣದ ಮಾದರಿಗಳು ತುಂಬಾ ಕುತೂಹಲಕಾರಿಯಾಗಿವೆ. ಇಲ್ಲಿಯ ಶಿಕ್ಷಣ ರೀತಿ ಮುಖ್ಯವಾಗಿ "ನೋಡಿ ತಿಳಿ, ಮಾಡಿ ಕಲಿ" ವಿಚಾರಕ್ಕೆ ಸಂಬಂಧಿಸಿದುದಾಗಿದೆ. ಒಕ್ಕಲುತನ, ಹೈನುಗಾರಿಕೆ, ಗುಡಿಕೈಗಾರಿಕೆ, ಬಡಿಗತನ, ಕಂಬಾರಿಕೆ, ಕುಂಬಾರಿಕೆ ಈ ಮೊದಲಾದ ವೃತ್ತಿಗಳು ಮುಂದುವರೆಯಲು ಜಾನಪದ ಶಿಕ್ಷಣವೇ ಪ್ರಮುಖ ಕಾರಣವಾಗಿದೆ. ಒಕ್ಕಲಿಗನ ಮಗನಾಗಲಿ, ಕಂಬಾರನ ಮಗನಾಗಲಿ, ಕುಂಬಾರನ ಮಗನಾಗಲಿ ತಮ್ಮ ತಮ್ಮ ವೃತ್ತಿಗಳನ್ನು ಮುಂದುವರೆಸಲು ಪ್ರತ್ಯೇಕವಾದ ತರಬೇತಿಯನ್ನು ಪಡೆಯುವುದಿಲ್ಲ. ಅವರೆಲ್ಲಾ ತಮ್ಮ ತಂದೆ–ತಾಯಿ, ಅಕ್ಕ–ಅಣ್ಣಂದಿರಿಂದಲೇ ಇಂತಹ ವೃತ್ತಿಗಳನ್ನು ಕಲಿತುಬಿಡುತ್ತಾರೆ. ಈ ಕಲಿಯುವಿಕೆಗಾಗಿ ಅವರು ಯಾವುದೇ ರೀತಿಯ ಹಣವನ್ನು ವ್ಯಯ ಮಾಡುವುದಿಲ್ಲ. ಅದಕ್ಕಾಗಿ ಪ್ರತ್ಯೇಕ ಸಮಯವನ್ನು ವ್ಯರ್ಥಗೊಳಿಸುವುದಿಲ್ಲ. ಹೀಗೆ ಸಹಜವಾಗಿ ಮೂಡಿಬರುವ ಜನಪದ ವೃತ್ತಿಶಿಕ್ಷಣಕ್ಕೂ, ಇಂದಿನ ಆಧುನಿಕ ವೃತ್ತಿಶಿಕ್ಷಣಕ್ಕೂ ಬಹಳಷ್ಟು ಅಂತರವಿದೆ.

ಆಧುನಿಕ ವೃತ್ತಿಪರ ಶಿಕ್ಷಣದ ಮಾದರಿಗಳು ಭಯಾನಕವಾಗಿವೆ. ಈ ಭಯಾನಕತೆಗೆ ಅನೇಕ ಕಾರಣಗಳಿವೆ. ಮಾತೃಭಾಷೆಗಳಲ್ಲಿ ಈ ವೃತ್ತಿಪರ ಶಿಕ್ಷಣ ಲಭಿಸದೇ ಇರುವುದು. ವೃತ್ತಿಗೂ–ಶಿಕ್ಷಣಕ್ಕೂ ಅನೇಕ ಸಂದರ್ಭಗಳಲ್ಲಿ ಸಂಬಂಧವೇ ಇಲ್ಲದಿರುವುದು, ಶಿಕ್ಷಣ ಪಡೆದ ನಂತರ ವೃತ್ತಿಯಿಲ್ಲದೆ ನಿರುದ್ಯೋಗಿಗಳಾಗುವುದು ಈ ಎಲ್ಲ ಸಮಸ್ಯೆಗಳನ್ನು ನೋಡಿದರೆ, ಜಾನಪದವು ನೀಡಿದ ವೃತ್ತಿ ಶಿಕ್ಷಣ ಹೆಚ್ಚು ಉಪಯೋಗಕಾರಿಯಾಗಿದೆ. ಸಹಜತೆ–ಸರಳತೆ–ದಕ್ಷತೆಗಳು ಜನಪದ ವೃತ್ತಿ ಶಿಕ್ಷಣದಲ್ಲಿ ಎದ್ದು ಕಾಣುತ್ತವೆ.

ಬಹುರಾಷ್ಟ್ರೀಯ ಕಂಪನಿಗಳು ತಾವು ತಯಾರಿಸಿದ ಸರಕುಗಳನ್ನು ಮಾರಾಟಮಾಡಲು ಭಾರತದಂತಹ ದೇಶಗಳಿಗೆ ಅನಿವಾರ್ಯತೆಯನ್ನು ತಂದೊಡ್ಡುತ್ತವೆ. ಪ್ರಮುಖವಾದ ಔಷಧಿಗಳಿಗಾಗಲಿ, ಯುದ್ಧದಲ್ಲಿ ಬಳಸುವ

ಮದ್ದುಗುಂಡುಗಳಿಗಾಗಲಿ ನಾವಿಂದು ಅಮೇರಿಕದಂತಹ ಅಧಿಕಾರಶಾಹಿ ದೇಶಗಳನ್ನೇ ಅವಲಂಬಿಸಿದ್ದೇವೆ. ಹೀಗಾಗಿ ನಮಗಿಲ್ಲಿ ಬದುಕಬೇಕಾದರೂ ಅಥವಾ ಸಾಯಬೇಕಾದರೂ ಬಹುರಾಷ್ಟ್ರೀಯ ಕಂಪನಿಗಳು ಬೇಕೇಬೇಕು. ಅಂತಹ ಅನಿವಾರ್ಯತೆಯನ್ನು ಸೃಷ್ಟಿಸಿರುವ ನವವಸಾಹತುಶಾಹಿಯ ಕ್ರೂರ ಆಕ್ರಮಣವನ್ನು ಇನ್ನುಮುಂದಾದರೂ ಅರ್ಥಮಾಡಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಜನಪದ ವೃತ್ತಿಶಿಕ್ಷಣದ ಪ್ರಾಮುಖ್ಯತೆಯ ಅರಿವು ಮೂಡಬೇಕಾಗಿದೆ.

ಜನಪದ ವೃತ್ತಿಶಿಕ್ಷಣದಲ್ಲಿ ದೊಡ್ಡ ದೊಡ್ಡ ಜಾಹೀರಾತುಗಳಿಲ್ಲ. ಪೊಳ್ಳು ಆಶ್ವಾಸನೆಗಳಿಲ್ಲ. ಸುಳ್ಳು, ಮೋಸಗಳಿಲ್ಲ. ಉಸಿರಿನಷ್ಟೇ ಸಹಜವಾಗಿ ಹಿರಿಯರಿಂದ ಕಿರಿಯರಿಗೆ, ತಲೆಮಾರಿನಿಂದ ತಲೆಮಾರಿಗೆ ಈ ಶಿಕ್ಷಣ ಸಾಗಿಬರುತ್ತದೆ. ಹಳ್ಳಿಗಳಲ್ಲಿರುವ ಒಕ್ಕಲಿಗ, ನಾಟಿವೈದ್ಯ, ಕಂಬಾರ, ಕುಂಬಾರ, ಬಡಿಗಾರ, ಚಮ್ಮಾರ ಇವರಾರೂ ವಿಶೇಷ ತರಬೇತಿ ಪಡೆದು ಬಂದವರಲ್ಲ. ವೃತ್ತಿಶಿಕ್ಷಣಕ್ಕಾಗಿ ಲಕ್ಷಗಟ್ಟಲೆ ಹಣ ಖರ್ಚುಮಾಡಿ ಅನೇಕ ಪದವಿ ಪಡೆದು ನಿರುದ್ಯೋಗಿಯಾಗಿ ತಿರುಗಿದವರೂ ಇಂಗ್ಲಿಷ್ ಭಾಷೆಯ ವ್ಯಾಮೋಹ ಹೇಗೆ ಹುಟ್ಟಿತು? ಏಕೆ ಹುಟ್ಟಿತು? ಎಂಬುವುದರ ಬಗೆಗೆ ಚಿಂತನೆ ಮಾಡಬೇಕಾಗಿದೆ.

ಜನಪದ ವೃತ್ತಿಶಿಕ್ಷಣವನ್ನು ನಿರ್ಲಕ್ಷಿಸಿ ಪಾಶ್ಚಾತ್ಯ ಮಾದರಿಯ ವೃತ್ತಿಶಿಕ್ಷಣವನ್ನು ಲಕ್ಷಗಟ್ಟಲೆ ಹಣ ಸುರಿದು ಕಲಿಯುವುದು ಯಾತಕ್ಕಾಗಿ? ಹೀಗೆ ಪಡೆದ ವೃತ್ತಿಶಿಕ್ಷಣ ಎಷ್ಟರಮಟ್ಟಿಗೆ ಸಫಲವಾಗಿದೆ? ಇಂತಹ ಅನೇಕ ಪ್ರಶ್ನೆಗಳು ಇಂದು ಕಾಡತೊಡಗಿವೆ. ಇಂತಹ ಪ್ರಶ್ನೆಗಳಿಗೆ ಸುಲಭವಾದ ಉತ್ತರಗಳಿಲ್ಲ. ಪಾರಂಪರಿಕವಾದ ವೃತ್ತಿಶಿಕ್ಷಣವೇ ಮುಂದುರಿಯಬೇಕೆಂಬ ಹಟವಾಗಲಿ, ಜನಪದ ವೃತ್ತಿಶಿಕ್ಷಣವೊಂದೇ ಸಾಕು ಎಂಬ ತೀರ್ಮಾನವಾಗಲಿ, ವೃತ್ತಿಶಿಕ್ಷಣದಲ್ಲಿ ಹೊಸ ಆವಿಷ್ಕಾರಗಳೇ ಬೇಡವೆಂದು ಹೇಳುವುದಾಗಲಿ ಇಲ್ಲಿಯ ಉದ್ದೇಶವಲ್ಲ. ನವವಸಾಹತುಶಾಹಿ ಆಕ್ರಮಣದ ಹಿನ್ನೆಲೆಯಲ್ಲಿ, ನಾವಿಂದು ಜನಪದ ವೃತ್ತಿ ಶಿಕ್ಷಣವನ್ನು ಆಧುನಿಕ ವೃತ್ತಿಶಿಕ್ಷಣದೊಂದಿಗೆ ಹೋಲಿಸಿ ನೋಡಬೇಕಾಗಿದೆ. ಈ ತೌಲನಿಕ ಅಧ್ಯಯನದ ಚರ್ಚೆಯಲ್ಲಿ ಅನೇಕ ಹೊಸ ಸತ್ಯಗಳು ಬೆಳಕಿಗೆ ಬರುತ್ತವೆ. ಆಗ ಜನಪದ ವೃತ್ತಿಶಿಕ್ಷಣಗಳ ಸಾಧ್ಯತೆಗಳು ಸ್ಪಷ್ಟವಾಗುತ್ತವೆ, ಮಿತಿಗಳು ತಿಳಿಯುತ್ತವೆ. ಅಂತಹ ಚರ್ಚೆಗೆ ಇಲ್ಲಿಯ ಟಿಪ್ಪಣಿಗಳು ಸಹಾಯಕವಾದರೆ ಈ ಬರವಣಿಗೆಯ ಶ್ರಮ ಸಾರ್ಥಕವಾಗುತ್ತದೆ.

ಜನಪದ ವೃತ್ತಿಶಿಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮ ದೇಶದಲ್ಲಿ ದೊಡ್ಡ ಪರಂಪರೆಯಿದೆ, ಪ್ರಾತ್ಯಕ್ಷತೆಗಳಿವೆ. ಸಾವಿರಾರು ವರ್ಷಗಳಿಂದ ಚಲನಶೀಲವಾಗಿರುವ ಇಂತಹ ಅರ್ಥಪೂರ್ಣ ಪರಂಪರೆಗೆ ಬೆನ್ನು ತಿರುಗಿಸಿ ನಾವಿಂದು ಅಮೇರಿಕಾದವರಂತೆ ದಿಢೀರನೆ ಶ್ರೀಮಂತರಾಗಲು ಹೊರಟಿದ್ದೇವೆ. ಅಂತೆಯೇ ಕೃತಕ ಗೊಬ್ಬರ, ಕೃತಕ ಆಹಾರ, ಕೃತಕ ಬದುಕು, ಕೊನೆಗೆ ಕೃತಕ ಸಾವು ಇಲ್ಲಿ ಕಾಣತೊಡಗಿವೆ. ಅಂದಿನ ನಮ್ಮ ರೈತ ಬೆಳೆದ ಬಿಳಿಜೋಳ, ನೆಲಗಡಲೆ, ಬೇಳೆಕಾಳುಗಳು ಎಷ್ಟೊಂದು ಪೌಷ್ಟಿಕವಾಗಿದ್ದವು. ಈಗೇಕೆ ಅಂತಹ ಧಾನ್ಯಗಳನ್ನು

ಬೆಳೆಯುತ್ತಿಲ್ಲ? ಇಂದು ತಿನ್ನುವ ಹೈಬ್ರಿಡ್ ಧಾನ್ಯಗಳ ಸತ್ವವೆಷ್ಟು? ಈ ಪ್ರಶ್ನೆಗಳನ್ನು ಗಂಭೀರವಾಗಿ ಅಲೋಚಿಸಬೇಕಾಗಿದೆ. ಅಂದಿನ ನಮ್ಮ ಅಭಿಯಂತರರು ನಿರ್ಮಿಸಿದ ಸೇತುವೆಗಳು, ಕಟ್ಟಡಗಳು ಇಂದೂ ಕೂಡ ಹಾಗೆಯೇ ಇವೆ. ಇಂದಿನವರು ನಿರ್ಮಿಸಿದ ಕಟ್ಟಡಗಳು, ಸೇತುವೆಗಳು ಏಕೆ ಕುಸಿದುಬೀಳುತ್ತವೆ? ಅಂದಿನ ನಾಟಿವೈದ್ಯರು ನೀಡಿದ ಚಿಕಿತ್ಸೆಯಿಂದ ಆರೋಗ್ಯವಂತರಾಗಿದ್ದ ಜನ ಇಂದೇಕೆ ಸಣ್ಣಸಣ್ಣಕಾಯಿಲೆಗಳಿಗೆ ಸಾವಿರಾರು ರೂಪಾಯಿ ಹಣ ಖರ್ಚುಮಾಡುತ್ತಿದ್ದಾರೆ? ಈ ಎಲ್ಲ ಪ್ರಶ್ನೆಗಳನ್ನು ಗಮನಿಸಿದಾಗ ಆಧುನಿಕ ಶಿಕ್ಷಣ ನಮಗೆ ನೀಡಿರುವ ಮೌಲ್ಯಗಳೆಂತಹವೆಂಬುದು ಸ್ಪಷ್ಟವಾಗುತ್ತದೆ. ನವವಸಾಹತುಶಾಹಿ ಆಕ್ರಮಣಕ್ಕೊಳಗಾದ ನಾವಿಂದು ಪಾಶ್ಚಾತ್ಯ ಸಂಸ್ಕೃತಿ–ಶಿಕ್ಷಣದ ಅನುಯಾಯಿಗಳಾಗಿಬಿಟ್ಟಿದ್ದೇವೆ. ಇಂತಹ ಸಂದರ್ಭದಲ್ಲಿ ಜನಪದ ಶಿಕ್ಷಣ ನೀಡಿದ ಮೌಲ್ಯಗಳು ನಮಗಿಂದು ಆದರ್ಶವಾಗಿ ಕಾಣುತ್ತವೆ.

ಜಾನಪದ ಸಂಸ್ಕೃತಿ ಈ ನಾಡಿನ ಜೀವನಾಡಿಯೆಂದು ತಿಳಿಸದ ಯಾವ ಶಿಕ್ಷಣವೂ ಇಲ್ಲಿ ಜನಪರವಾಗಲಾರದು. ಯುರೋಪಿನ ಸಂಸ್ಕೃತಿಯ ಪ್ರಭಾವದಿಂದ ಹುಟ್ಟಿಕೊಂಡ ಇಲ್ಲಿನ ಅಧುನಿಕ ಶಿಕ್ಷಣ ಈ ದೇಶದ ಜನಪದರ ಮೂಲ ನೆಲೆಗಳನ್ನು ಮರೆತುಬಿಟ್ಟಿದೆ. ಜನಪದ ವೃತ್ತಿಶಿಕ್ಷಣ ಈ ನಾಡಿನ ಆರ್ಥಿಕಾಭಿವೃದ್ಧಿಗೆ ಸಹಾಯಕವಾಗಿದೆ. ಜನಪದ ನೀತಿಶಿಕ್ಷಣ ಇಲ್ಲಿಯ ಸಮುದಾಯಗಳ ಸಮನ್ವಯ ಬದುಕಿಗೆ ಕಾರಣವಾಗಿದೆ. ಯುರೋಪಿನ ಶಿಕ್ಷಣದ ತಪ್ಪು ಗ್ರಹಿಕೆಯಿಂದಾಗಿ ಇಂದಿನ ನಮ್ಮ ಆಧುನಿಕ ಶಿಕ್ಷಣ ಕೇವಲ ಲಿಖಿತ ದಾಖಲೆಗಳಿಗೆ ಪ್ರಾಧಾನ್ಯತೆ ನೀಡಿ, ಮಹತ್ವದ ಮೌಖಿಕ ಪರಂಪರೆಗಳನ್ನು ಮರೆತುಬಿಟ್ಟಿದೆ. ಹೀಗಾಗಿ ಇಲ್ಲಿ ಕಲಿಸುವ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಈ ಮೊದಲಾದ ಕ್ಷೇತ್ರಗಳ ಶಿಕ್ಷಣವು ಮೌಖಿಕ ಪರಂಪರೆಯನ್ನು ನಿರ್ಲಕ್ಷಿಸಿ ಅಂಗವಿಕಲವಾಗಿದೆ. ಅಂತೆಯೇ ಇಂದು ಕಲಿಸುತ್ತಿರುವ ಇತಿಹಾಸ, ಅದು ಕೇವಲ ರಾಜ–ಮಹಾರಾಜರ ವೈಭೋಗದ ಚರಿತ್ರೆಯಾಗಿದೆಯೇ ಹೊರತು ಜನಸಮುದಾಯದ ಘಟನೆಗಳನ್ನೊಳಗೊಂಡಿರುವ ಸಮಗ್ರತೆಯನ್ನು ಪಡೆದುಕೊಂಡಿಲ್ಲ. ಜನಪದರ ಮೌಖಿಕ ಇತಿಹಾಸ ನೀಡುವ ಶಿಕ್ಷಣಕ್ಕೂ ಆಧುನಿಕರು ಹೇಳುವ ಇತಿಹಾಸದ ಶಿಕ್ಷಣಕ್ಕೂ ಬಹಳ ವ್ಯತ್ಯಾಸವಿದೆ.

ಜಾನಪದದ ಜನಜೀವನ ಮೌಖಿಕ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ. ಜನಪದ ನ್ಯಾಯಪದ್ಧತಿ, ಪಂಚಾಯತ ವ್ಯವಸ್ಥೆಯಂತಹ ಸಾಮುದಾಯಿಕ ಸಂಸ್ಥೆಗಳು ಇಲ್ಲಿ ಉತ್ತಮ ಶಿಕ್ಷಣವನ್ನು ನೀಡುತ್ತ ಬಂದಿವೆ. ಗ್ರಾಮೀಣ ಬದುಕಿನಲ್ಲಿ ಮೌಲ್ಯಗಳನ್ನು ಸ್ಥಾಪಿಸುತ್ತ ಬಂದಿವೆ. ಕೇವಲ ಅಕ್ಷರಗಳ ಮೂಲಕ ಕಲಿಯುವ ಇಂದಿನ ಯಾಂತ್ರಿಕ ಶಿಕ್ಷಣ ಪದ್ಧತಿಗಿಂತ, ಶ್ರದ್ಧೆಯಿಂದ ತಿಳಿಸುತ್ತಿದ್ದ ಅಂದಿನ ಮೌಖಿಕ ಪರಂಪರೆಯ ಮೂಲಕ ಸಿಗುವ ಶಿಕ್ಷಣದಲ್ಲಿ ಮಹತ್ವದ ಸಾಂಸ್ಕೃತಿಕ ಧ್ವನಿಗಳಿವೆ. ಈ ಶಿಕ್ಷಣ ಕೇವಲ ಬೌದ್ಧಿಕ ಕಸರತ್ತಾಗದೆ ಹೃದಯವೈಶಾಲ್ಯತೆಯನ್ನು ಬೆಳೆಸಿದೆ, ಮಾನವೀಯತೆಯನ್ನು ಕಲಿಸಿದೆ. ಮಾನವಶಾಸ್ತ್ರ, ಇತಿಹಾಸ, ಪರಿಸರ ವಿಜ್ಞಾನ,

ಮನಶ್ಶಾಸ್ತ್ರ, ಪುರಾಣ, ಅರ್ಥಶಾಸ್ತ್ರ ಇವೆಲ್ಲವುಗಳನ್ನೊಳಗೊಂಡಿರುವ ಜನಪದ ಮೌಖಿಕ ಪರಂಪರೆ ಕಾಲಘಟ್ಟದ ವಿವಿಧ ರೂಪಗಳಲ್ಲಿ ಜನಸಮುದಾಯಕ್ಕೆ ಶಿಕ್ಷಣವನ್ನು ನೀಡುತ್ತಲೇ ಬಂದಿದೆ.

ಜಾನಪದ ಸಂಸ್ಕೃತಿಯಲ್ಲಿರುವ ಅನೇಕ ಆಚರಣೆಗಳು ಜನಶಿಕ್ಷಣವನ್ನು ನೀಡುತ್ತಲೇ ಬಂದಿವೆ. ಬದುಕಿನಲ್ಲಿದ್ದು, ಬದುಕನ್ನು ನೋಡಿ, ಬದುಕಿನ ಬಗೆಗೆ ಕಲಿಯುತ್ತಲೇ ಹೊಸ ಬದುಕನ್ನು ಕಟ್ಟಿಕೊಡುವ ಜನಪದರು ತಮ್ಮ ಸಂಸ್ಕೃತಿಯಿಂದ, ತಮ್ಮ ಸಮುದಾಯದಿಂದ ಪಡೆದುಕೊಂಡ ಶಿಕ್ಷಣ ಅಮೂಲ್ಯವಾಗಿದೆ. ಅಜ್ಜಿಯಿಂದ ತಾಯಿಗೆ, ತಾಯಿಯಿಂದ ಮಗಳಿಗೆ ಹರಿದುಬರುವ ಜಾನಪದ ಮೌಖಿಕ ಪರಂಪರೆ ಉನ್ನತ ಮೌಲ್ಯಗಳನ್ನೊಳಗೊಂಡಿರುವ ಶಿಕ್ಷಣವನ್ನು ನೀಡುತ್ತಲೇ ಬಂದಿದೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಬೆಳೆದ ಆಧುನಿಕ ಶಿಕ್ಷಣದಿಂದ ಜಾನಪದ ಸಂಸ್ಕೃತಿ–ಶಿಕ್ಷಣಗಳು ನಶಿಸುವ ಹಂತ ತಲುಪಿವೆ ಎನ್ನುವ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಜನಪದ ಶಿಕ್ಷಣವು ಶಿಸ್ತು–ಸಂಯಮ–ತ್ಯಾಗ–ಪ್ರೇಮದಂತಹ ಮೌಲ್ಯಗಳನ್ನು ಕಲಿಸಿದರೆ, ಇಂದಿನ ಸ್ಟಾರ್ ಚಾನಲ್‌ಗಳ ಮೂಲಕ ಬರುವ ಶಿಕ್ಷಣ ಸಂಸ್ಥೆ ಮತ್ತು ಸೆಕ್ಸ್‌ಗಳ ಮೂಲಕ ಯುವಜನಾಂಗದ ಬದುಕನ್ನೇ ನಾಶಗೊಳಿಸತೊಡಗಿದೆ. ಜನಪದರ ಹಬ್ಬ–ಜಾತ್ರೆಗಳು, ದೊಡ್ಡಾಟ–ಸಣ್ಣಾಟಗಳು, ಪುರಾಣ–ಭಜನೆಗಳು ಸಮೂಹಮಾಧ್ಯಮಗಳಾಗಿ ಭಾರತೀಯ ಪರಂಪರೆಯ ಉನ್ನತ ಮೌಲ್ಯಗಳನ್ನು ಪ್ರಸಾರಗೊಳಿಸಿದರೆ, ಇಂದಿನ ಆಧುನಿಕ ಸಮೂಹಮಾಧ್ಯಮಗಳು ಅಪಾಯಕಾರಿಯಾಗಿ ಕಾಣಿಸುತ್ತವೆ. ಮನರಂಜನೆ ಕೇವಲ ಮನರಂಜನೆಯಾಗಿ ಉಳಿಯದೆ, ಮನರಂಜನೆಯ ಹೆಸರಿನಲ್ಲಿ ಮಾನಸಿಕ ಯುದ್ಧವೇ ಪ್ರಾರಂಭವಾಗಿದೆ. ರೆಸಲಿಂಗ್ ಪಂದ್ಯಗಳ ಹೆಸರಿನಲ್ಲಿ ವರ್ಲ್ಡ್ ರೆಸಲಿಂಗ್ ಫೆಡರೇಷನ್ ಈಗ ಹಿಂಸೆಗೆ ಪ್ರಚೋದನೆ ನೀಡಿದರೆ, ಪಾಪ್ ರಾಕ್ ರ‍್ಯಾಪ್ ಸಂಗೀತವು ಕುಟುಂಬಗಳ ಸಾಮರಸ್ಯವನ್ನೇ ಕೆಡಿಸತೊಡಗಿದೆ. ಜನಪದ ಸಂಗೀತ ಶಿಕ್ಷಣಗಳು ಹೃದಯವನ್ನರಳಿಸಿ ಮಾನವೀಯ ಮೌಲ್ಯಗಳನ್ನು ಬೆಳೆಸಿದರೆ, ಸ್ಯಾಟಲೈಟ್ ಚಾನಲ್‌ಗಳ ಮೂಲಕ ಹರಿದುಬರುವ ಪಾಪ್ ರಾಕ್ ಸಂಗೀತ ಲೈಂಗಿಕ ತೃಷೆಯನ್ನು ತಣಿಸುವ ಸಾಧನವಾಗಿ ಬಳಕೆಯಾಗತೊಡಗಿದೆ. ಈ ಸಂದರ್ಭದಲ್ಲಿ ಜನಪದ ಶಿಕ್ಷಣದ ಅಗತ್ಯವನ್ನರಿಯುವುದು ಇಂದಿನ ಅನಿವಾರ್ಯತೆಯಾಗಿದೆ.

ಜನಪದ ವೃತ್ತಿಪರ ಶಿಕ್ಷಣ ಹಾಗೂ ಸಂಸ್ಕೃತಿಪರ ಶಿಕ್ಷಣಗಳನ್ನು ಗಮನಿಸಿದ ನಂತರ ಈಗಿನ ಶೈಕ್ಷಣಿಕ ಸಂಸ್ಥೆಗಳಲ್ಲಿ ಜಾನಪದ ಹೇಗೆ ಮುಂದುವರಿದಿದೆಯೆಂಬುದನ್ನೂ ಇಲ್ಲಿಯೇ ಚರ್ಚಿಸಬಹುದಾಗಿದೆ. ಇಂದಿನ ಶಾಲೆ–ಕಾಲೇಜುಗಳು, ವಿಶ್ವವಿದ್ಯಾಲಯಗಳು ಪಾಶ್ಚಾತ್ಯ ಮಾದರಿಯ ಶಿಕ್ಷಣವನ್ನೇ ನೀಡುತ್ತಿದ್ದರೂ ಕೂಡ ಅದರೊಳಗಡೆಯೇ ಜಾನಪದವು ಹೊಸ ರೂಪಗಳೊಂದಿಗೆ ಬೆಳೆಯತೊಡಗಿದೆ. ಪಾಶ್ಚಾತ್ಯ ಶಿಕ್ಷಣ ನಿರುದ್ಯೋಗವನ್ನು ಹೆಚ್ಚಿಸಿ ಅಸಮಾನತೆಯನ್ನು ಬೆಳೆಸಿದಾಗ, ಕಾಲೇಜು ವಿದ್ಯಾರ್ಥಿಗಳ ಗೋಡೆ ಬರಹಗಳ ಮೂಲಕ, ಅವರ ಚಳವಳಿಗಳ ಮೂಲಕ ಜಾನಪದವು

ಜೀವಂತವಾಗಿ ಮುಂದುವರಿದಿದೆ. ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಅರಿವೂ ಕೂಡ ಶೈಕ್ಷಣಿಕ ಜಾನಪದದ ಒಂದು ಭಾಗವಾಗಿದೆ. ಪಾಶ್ಚಾತ್ಯ ಮಾದರಿಯ ಇಂದಿನ ಶಿಕ್ಷಣವು, ನಮ್ಮ ದೇಶಿ ಸಂಸ್ಕೃತಿಯನ್ನು ನಿರ್ಲಕ್ಷಿಸಿ ಹುಸಿ ಸಂಸ್ಕೃತಿಯನ್ನು ಬೆಳೆಸುತ್ತಿರುವ ಸಂದರ್ಭಗಳಲ್ಲಿ ಜಾನಪದದ ಬೇರುಗಳು ಚಿಗುರೊಡೆದು ಹಸಿರುಟ್ಟು ನಿಲ್ಲುವುದೀಗ ಅನಿವಾರ್ಯವಾಗಿದೆ.

ಜನಪದ ಶಿಕ್ಷಣ ಕೊಡುವ ಮಾಧ್ಯಮಗಳು ಇಂದು ಹೊಸ ರೂಪದಲ್ಲಿ ಕಾಣಿಸಿಕೊಂಡಿವೆ. ಇವುಗಳ ಬಗೆಗೆ ಹೆಚ್ಚಿನ ಚರ್ಚೆ ನಡೆಯಬೇಕಾಗಿದೆ. ಸಾಕ್ಷರತಾ ಆಂದೋಲನ, ಜ್ಞಾನ-ವಿಜ್ಞಾನ ಜಾತಾ, ಏಡ್ಸ್ ಕುರಿತಾದ ಆರೋಗ್ಯ ಕಾರ್ಯಕ್ರಮದಂತಹ ಹೊಸ ರೂಪಗಳಲ್ಲಿ ಜಾನಪದ ಮೌಲ್ಯಗಳನ್ನು ಕಾಣಬಹುದಾಗಿದೆ. ಸಾಕ್ಷರತಾ ಆಂದೋಲನಕ್ಕೆ ಅನೇಕ ಮಿತಿಗಳಿದ್ದರೂ ಶತಮಾನಗಳಿಂದ ವಂಚಿತರಾದ ಜನಸಮುದಾಯಕ್ಕೆ ಅದು ಅಕ್ಷರಗಳನ್ನು ತಲುಪಿಸಿದೆ. ಅರಿವನ್ನು ಹೆಚ್ಚಿಸಿದೆ. ಹಾಗೆಯೇ ಜ್ಞಾನ-ವಿಜ್ಞಾನ ಜಾಥಾದಂತಹ ಕಾರ್ಯಕ್ರಮಗಳು ಜನಸಮುದಾಯದಲ್ಲಿ ವೈಜ್ಞಾನಿಕ ಬೆಳವಣಿಗೆಯನ್ನುಂಟುಮಾಡಿವೆ. ಸ್ಯಾಟಲೈಟ್ ಚಾನಲ್‌ಗಳ ಮೂಲಕ ಸಿಡಿಯುವ ಬಾಂಬ್‌ಗಳನ್ನು ನಾವಿಂದು ಜನಪದದ ಈ ಆಧುನಿಕ ಮಾಧ್ಯಮಗಳ ಮೂಲಕ ತಡೆಯಬಹುದಾಗಿದೆ. ಜಾನಪದದ ಆಶಯಗಳಿಗೆ ಹತ್ತಿರವಾಗಿರುವ ಈ ಜನಪರ ಮಾಧ್ಯಮಗಳನ್ನು ನಾವಿಂದು ಬೆಳೆಸಬೇಕಾಗಿದೆ. ಇಲ್ಲದೆ ಹೋದರೆ ನಮ್ಮ ಯುವ ಜನಾಂಗವು ಈ ಟಿ.ವಿ. ಚಾನೆಲ್‌ಗಳ ಹಾವಳಿಯಲ್ಲಿ ಸಂಪೂರ್ಣವಾಗಿ ಸಾಂಸ್ಕೃತಿಕವಾಗಿ ನಾಶವಾಗಿ ಹೋಗುತ್ತದೆ. ಇದು ಇಂದಿನ ಜ್ವಲಂತ ಸಮಸ್ಯೆಯಾಗಿದೆ.

ಜನಪದ ಶಿಕ್ಷಣವು ಸೃಜನಶೀಲತೆಯನ್ನು ಹುಟ್ಟಿಸಿ, ಸ್ವಾಭಿಮಾನವನ್ನು ಬೆಳೆಸಿದರೆ, ಪಾಶ್ಚಾತ್ಯಮಾದರಿಯ ಇಂದಿನ ಶಿಕ್ಷಣ ಗುಲಾಮಗಿರಿಯನ್ನು ಕಲಿಸುತ್ತ, ಸೃಜನಶೀಲತೆಯನ್ನು ನಾಶಗೊಳಿಸತೊಡಗಿದೆ. ಜನಪದರ ಸೃಜನಶೀಲ ಮನಸ್ಸು, ಮುಕ್ತ ಚರ್ಚೆ, ನೇರ ನುಡಿ ನಮ್ಮ ಶಿಕ್ಷಣದಲ್ಲಿ ಅಳವಡಿಕೆಯಾಗದಿದ್ದರೆ ಮುಂದಿನ ಜನಾಂಗ ಕತ್ತಲಲ್ಲಿ ನರಳಬೇಕಾಗುತ್ತದೆ. ಜನಪದರ ಸಮಷ್ಟಿ ಪ್ರಜ್ಞೆಯ ಅರಿವು ಜನಪದ ಶಿಕ್ಷಣ ನೀಡಿದ ದೊಡ್ಡ ಕೊಡುಗೆಯಾಗಿದೆ. ಹೀಗೆಂದಾಕ್ಷಣ ಪಶ್ಚಿಮದ ಚಿಂತನೆಗಳನ್ನು ಕೈಬಿಡಬೇಕೆಂಬುದು ಇಲ್ಲಿಯ ವಾದವಲ್ಲ. ಪಶ್ಚಿಮದ ಚಿಂತನೆಗಳಲ್ಲಿ ವಸ್ತುನಿಷ್ಠತೆ, ವಾಸ್ತವ ಸ್ಥಿತಿ, ವಿಮರ್ಶಕ ಪ್ರಜ್ಞೆ, ಪ್ರಶ್ನಿಸುವ ಕ್ರಮ ಬಹುಮುಖ್ಯವಾಗಿವೆ. ಇಂತಹ ಪ್ರಗತಿಪರ ಚಿಂತನೆಗಳನ್ನು ಮುಂದುವರಿಸುತ್ತಲೇ, ಜನಪದ ಶಿಕ್ಷಣದ ಆಂತರಿಕ ಸೆಲೆಗಳ ಕಡೆಗೂ ಗಮನ ಹರಿಸಬೇಕಾಗಿದೆ.

ಇಲ್ಲಿ ದೇಶಿಯತೆಯೆಂದಾಕ್ಷಣ ಮತ್ತೆ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಇಂದಿನ ಮತೀಯ ಶಕ್ತಿಗಳು ಪ್ರತಿಪಾದಿಸುವ ದೇಶೀಯತೆಗೆ ಮಾರುಹೋಗದೆ, ಅಮೆರಿಕಾದ ಸ್ಟಾರ್‌ಬಾಂಬ್‌ಗಳ ದಾಳಿಗೆ ಬಲಿಯಾಗದೆ ಜಾನಪದದ ಚಲನಶೀಲ ಮೌಲ್ಯಗಳನ್ನು ಎತ್ತಿಹಿಡಿದು ಪ್ರಗತಿಪರ ಚಿಂತನೆಗಳ ಮೂಲಕ ಅವುಗಳನ್ನು

ಜನಪರಗೊಳಿಸಬೇಕಾಗಿದೆ. ಸಮುದ್ರದಂತೆ ವಿಶಾಲವಾಗಿರುವ ಜಾನಪದದಲ್ಲಿ ಅನೇಕ ಎಡರು–ತೊಡರುಗಳೂ ಇವೆ. ಇವುಗಳನ್ನು ಸೂಕ್ಷ್ಮವಾಗಿ ಅಧ್ಯಯನಮಾಡಿ ಒರೆಗಲ್ಲಿಗೆ ಹಚ್ಚಬೇಕಾಗುತ್ತದೆ. ಮುಗ್ಧರ ಪ್ರಾಚೀನ ನಡವಳಿಕೆಗಳನ್ನು ಯಥಾವತ್ತಾಗಿ ಸ್ವೀಕರಿಸುವಂತೆಯೂ ಇಲ್ಲ. ಜಾನಪದದ ವೈಭವೀಕರಣವನ್ನು ಕೈಬಿಟ್ಟು ವೈಚಾರಿಕತೆಯನ್ನು ಬೆಳೆಸುತ್ತಲೇ ಅದರ ಹೃದಯವಂತಿಕೆಯನ್ನು ನೆನಪಿಟ್ಟುಕೊಳ್ಳಬೇಕಾಗಿದೆ. ನವವಸಾಹತುಶಾಹಿಯ ಅತಿಕ್ರಮಣದ ಈ ಸಂದರ್ಭದಲ್ಲಿ ಜಾನಪದದ ಹೊಸ ಓದು ಅತ್ಯಂತ ಅಗತ್ಯವಾಗಿದೆ. ಸಾಂಸ್ಕೃತಿಕ ಮುಖಾಮುಖಿಯ ಈ ಸಂದರ್ಭದಲ್ಲಿ, ಬಹುಮುಖಿ ನೆಲೆಗಳನ್ನೊಳಗೊಂಡಿರುವ ಜಾನಪದದ ಮೂಲಕ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾಗಿದೆ.

*****

ಪರಿಚಯ :

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಬಸವರಾಜ ಸಬರದ ನವೋದಯದ ನೆಲದಲ್ಲಿ ಚಿಗುರೊಡೆದು ಬಂಡಾಯದಲ್ಲಿ ಬೃಹತ್ತಾಗಿ ಬೆಳೆದು ನಿಂತಿರುವ ಪ್ರತಿಭೆ. ವಚನ ಸಂಸ್ಕೃತಿಯ ಜೀವಸೆಲೆ, ಬಂಡಾಯ ಸಂಸ್ಕೃತಿಯ ಪ್ರಜ್ವಲತೆಯ ಜೊತೆಗೆ ಸ್ಪಂದಿಸುತ್ತ ಜನಮುಖಿಯಾಗಿ ಜೀವಮುಖಿಯಾಗ ತುಡಿಯುವವರು. ಬಂಡವಾಳಶಾಹಿಯ ವಿಕೃತ ರೂಪಗಳನ್ನು ಚೆನ್ನಾಗಿ ಬಲ್ಲವರು ಜಾನಪದ ಜೀವನದ ಸರಸ ಸಲ್ಲಾಪಗಳನ್ನು ಸ್ವಾರಸ್ಯಪೂರ್ಣ ಬರವಣಿಗೆಯಲ್ಲಿ ಮೂಡಿಸಬಲ್ಲವರು. ಕಾವ್ಯ, ನಾಟಕ, ವಿಚಾರ ಸಾಹಿತ್ಯ, ಸಾಹಿತ್ಯ ವಿಮರ್ಶೆ, ಸಂಶೋಧನೆ ಪ್ರಕಾರಗಳಲ್ಲಿ ವಿಸ್ತಾರವಾದ ಕೃಷಿ ನಡೆಸಿರುವವರು. ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ, ಪ್ರಶಸ್ತಿ, ರತ್ನಾಕರವರ್ಣಿ ಪ್ರಶಸ್ತಿ ಮುಂತಾದವುಗಳಿಂದ ಪುರಸ್ಕೃತರಾಗಿರುವ ಬಸವರಾಜ ಸಬರದರ ಕೆಲವು ಮುಖ್ಯ ಕೃತಿಗಳು : ದನಿಯೆತ್ತಿ ಹಾಡೇನ, ಕೆಂಡ ಸಂಪಿಗೆ, ನಾಕು ಬೀದಿ ನಾಟಕಗಳು, ಸಮುದಾಯ ಮತ್ತು ಸಂಸ್ಕೃತಿ, ಹೊಸದಿಕ್ಕು, ವಚನ ಚಳುವಳಿ, ಬಂಡಾಯ ಸಾಹಿತ್ಯ, ವಚನಕಾರರು ಮತ್ತು ದಲಿತ ಸಂವೇದನೆ, ಬಸವೇಶ್ವರ ಮತ್ತು ಪರಂದರದಾಸ.

ಜಾನಪದ ಸಂಸ್ಕೃತಿ ಜೀವಪರವಾಗಿರುವುದರ ಜೊತೆಗೆ ಬಹುಮುಖಿ ರೂಪಗಳನ್ನು ಪಡೆದುಕೊಂಡಿರುವಂಥದ್ದು. ಜಾನಪದ ನೀಡುವ ಶಿಕ್ಷಣ ಪಾರಂಪರಿಕವಾದದ್ದು. ವೃತ್ತಿಪರ ಶಿಕ್ಷಣದ ಜೊತೆಗೆ ಸಂಸ್ಕೃತಿ ಪ್ರಸಾರದ ಶಿಕ್ಷಣವನ್ನು ನೀಡುತ್ತ ಬಂದಿರುವುದು ಜಾನಪದದ ವೈಶಿಷ್ಟ್ಯವಾಗಿದೆ.ಜನಪದ ವೃತ್ತಿಶಿಕ್ಷಣದ ಮಾದರಿ "ನೋಡಿ ತಿಳಿ, ಮಾಡಿ ಕಲಿ"ಯುಂಥದ್ದು. ಬೇಸಾಯ, ಪಶುಪಾಲನೆ, ಗೃಹಕೈಗಾರಿಕೆ,

ಮರಗೆಲಸ, ಕುಂಬಾರಿಕೆ, ಕಮ್ಮಾರಿಕೆಗಳಂಥ ವೃತ್ತಿಗಳು ಮುಂದುವರಿದುಕೊಂಡು ಬಂದಿರುವುದಕ್ಕೆ ಜಾನಪದ ವೃತ್ತಿಶಿಕ್ಷಣವೇ ಪ್ರಮುಖ ಕಾರಣವಾಗಿದೆ. ಇಂಥವುಗಳ ಕಲಿಯುವಿಕೆಗೆ ಪ್ರತ್ಯೇಕ ಸಮಯ ವ್ಯರ್ಥವಾಗುವುದಿಲ್ಲ. ಅದಕ್ಕೆಂದೇ ಹಣವನ್ನೂ ವ್ಯಯ ಮಾಡುವುದಿಲ್ಲ. ಪ್ರತ್ಯೇಕ ತರಬೇತಿಯಿಲ್ಲದೆ ಮೂಡಿಬರುವ ಜಾನಪದ ವೃತ್ತಿಶಿಕ್ಷಣಕ್ಕೂ ಇಂದಿನ ಆಧುನಿಕ ವೃತ್ತಿಶಿಕ್ಷಣಕ್ಕೂ ಬಹಳಷ್ಟು ಅಂತರವಿದೆ. ಸಮಸ್ಯೆಗಳೇ ಮೈತುಂಬಿಕೊಂಡಿರುವ ಆಧುನಿಕ ವೃತ್ತಿಪರ ಶಿಕ್ಷಣದ ಮಾದರಿಗಳಿಗಿಂತ ಸಹಜತೆ, ಸರಳತೆ, ದಕ್ಷತೆಗಳಿಂದ ಕೂಡಿರುವ ಜಾನಪದ ವೃತ್ತಿಶಿಕ್ಷಣ ಪ್ರಯೋಜನಕಾರಿಯಾಗಿದೆ. ಜಾನಪದ ಸಂಸ್ಕೃತಿಯಲ್ಲಿರುವ ಅನೇಕ ಆಚರಣೆಗಳು ಜನಶಿಕ್ಷಣವನ್ನು ನೀಡುತ್ತಲೇ ಬಂದಿವೆ. ಬದುಕಿನಲ್ಲಿದ್ದು, ಬದುಕನ್ನು ನೋಡಿ, ಬದುಕಿನ ಬಗೆಗೆ ಕಲಿಯುತ್ತಲೇ ಹೊಸ ಬದುಕನ್ನು ಕಟ್ಟಿಕೊಡುವ ಜನಪದರು ತಮ್ಮ ಸಂಸ್ಕೃತಿಯಿಂದ ತಮ್ಮ ಸಮುದಾಯದಿಂದ ಪಡೆದುಕೊಂಡ ಶಿಕ್ಷಣ ಅಮೂಲ್ಯವಾದದ್ದು. ಜಾನಪದ ಮೌಖಿಕ ಪರಂಪರೆ ಉನ್ನತ ಮೌಲ್ಯಗಳಿಂದ ಕೂಡಿರುವ ಶಿಕ್ಷಣವನ್ನು ನೀಡುತ್ತ ಬಂದಿದೆ. ಜನಪದ ಶಿಕ್ಷಣವು ಶಿಸ್ತು ಸಂಯಮ ತ್ಯಾಗ ಪ್ರೇಮದಂತಹ ಮೌಲ್ಯಗಳನ್ನು ಕಲಿಸುತ್ತದೆ. ಜನಪದರ ಹಬ್ಬ ಜಾತ್ರೆಗಳು, ಪುರಾಣ ಪ್ರವಚನ ಭಜನೆಗಳು ಸಮೂಹ ಮಾಧ್ಯಮಗಳಾಗಿ ಭಾರತೀಯ ಪರಂಪರೆಯ ಉನ್ನತ ಮೌಲ್ಯಗಳನ್ನು ಪ್ರಸಾರ ಮಾಡಿದರೆ ಆಧುನಿಕ ಸಮೂಹ ಮಾಧ್ಯಮಗಳು ಅಪಾಯಕಾರಿಯಾಗಿ ಕಾಣಿಸುತ್ತವೆ. ಯುವ ಜನಾಂಗ ಟಿ.ವಿ. ಚಾನಲ್‌ಗಳ ಹಾವಳಿಯಲ್ಲಿ ಸಾಂಸ್ಕೃತಿಕವಾಗಿ ಸಂಪೂರ್ಣ ನಾಶದತ್ತ ಸಾಗುತ್ತಿದೆ. ಸೃಜನಶೀಲತೆಯನ್ನು ಹುಟ್ಟಿಸುವ ಜನಪದ ಶಿಕ್ಷಣಕ್ಕೆ ವ್ಯತಿರಿಕ್ತವಾಗಿ ಪಾಶ್ಚಾತ್ಯ ಮಾದರಿಯ ಶಿಕ್ಷಣ ಗುಲಾಮಗಿರಿಯಲ್ಲಿ ಕಲಿಸುತ್ತ ಸೃಜನಶೀಲತೆಯನ್ನು ನಾಶಗೊಳಿಸುತ್ತದೆ. ಸಮಷ್ಟಿ ಪ್ರಜ್ಞೆಯ ಅರಿವು ಜನಪದ ಶಿಕ್ಷಣ ನೀಡಿದ ದೊಡ್ಡ ಕೊಡುಗೆಯಾಗಿರುವುದರಿಂದ ಅದರ ಮೂಲಕ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಾಗಿದೆಯೆನ್ನುವುದು ಲೇಖನದ ನಿಲುವಾಗಿದೆ.

೯. ಅಂಬೇಡ್ಕರ್ ಹಿನ್ನೆಲೆಯಲ್ಲಿ ದಲಿತ ಚಳುವಳಿ ಹಾಗೂ ಅಲ್ಪಸಂಖ್ಯಾತರು

– ರಹಮತ್ ತರೀಕೆರೆ

ದಲಿತರು ಭಾರತೀಯ ಸಮಾಜದಲ್ಲಿ ನಾಗರಿಕ ಹಕ್ಕುಗಳಿಗಾಗಿ ಹೋರಾಡುವಾಗ, ಪ್ರತಿಪಕ್ಷವಾಗಿ ವರ್ಣೀಯ ವ್ಯವಸ್ಥೆ ಇದ್ದರೂ, ಮುಸ್ಲಿಮರ ಪ್ರಸ್ತಾಪ ತಪ್ಪದೆ ಬರುತ್ತಿರುತ್ತದೆ, ಅದೂ ದಲಿತರು ಮತಾಂತರದ ಬೆದರಿಕೆ ಹಾಕುವಾಗ. ಹೀಗಾಗಿ ಬಲು ವಿಚಿತ್ರವಾಗಿ ದಲಿತರ–ಸವರ್ಣೀಯರ ನಡುವಿನ ಘರ್ಷಣೆಯಲ್ಲಿ ಮೂರನೇ ಸಮುದಾಯವು ಇಕ್ಕಟ್ಟಿಗೆ ಸಿಲುಕುತ್ತದೆ. ಅದನ್ನು ಮೀನಾಕ್ಷಿಪುರಂ ಘಟನೆಯ ನಂತರ ಸ್ಪಷ್ಟವಾಗಿ ಕಾಣುತ್ತೇವೆ. ವಾಸ್ತವವಾಗಿ ದಲಿತರ ಮತಾಂತರಕ್ಕೆ (ಅಥವಾ ಬಹಳ ಸಲ ಅದೊಂದು ಬೆದರಿಕೆಯ ತಂತ್ರವಾಗಿದೆ ಕೂಡಾ) ಕಾರಣಗಳನ್ನು ಹಿಂದೂ ಪುರೋಹಿತಶಾಹಿಯು ತನ್ನಲ್ಲಿ ಹುಡುಕಿಕೊಂಡು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಆದರೆ ಆತ್ಮವಿಮರ್ಶೆ ನಡೆಸಿಕೊಂಡು, ಬದಲಾದರೆ, ಅದರ ವರ್ಗಹಿತಾಸಕ್ತಿಗಳಿಗೆ ಧಕ್ಕೆ ಬರುತ್ತದೆ. ಸುಮ್ಮನಿದ್ದರೆ ದಲಿತರು ಪಕ್ಷಾಂತರ ಮಾಡಿ ಮುಖಭಂಗ ಮಾಡುತ್ತಾರೆ. ಈ ಇಕ್ಕಟ್ಟಿನಲ್ಲಿ ಅದು ತನ್ನ ಸಂಕಟವನ್ನು ಮುಸ್ಲಿಮರ ಮೇಲೆ ತಿರುಗಿಸುತ್ತದೆ. ಹೀಗೆ ದಲಿತರು ತಮಗರಿಯದಂತೆ ಮುಸ್ಲಿಮರ ಬಗೆಗಿನ ಸಾಂಪ್ರದಾಯಿಕ ದ್ವೇಷವನ್ನು ತೀವ್ರಗೊಳಿಸುತ್ತಾರೆ. ಒಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಯಾವುದೇ ಮತಾಂತರವು ಆಮಿಷ ಹಾಗೂ ಬಲಾತ್ಕಾರದ್ದಾಗಿದ್ದರೆ, ಅದೂ ಡೆಮಾಕ್ರಸಿಯಲ್ಲಿ, ಅದೊಂದು ಹೀನ ಕೃತ್ಯವಾಗಿರುತ್ತದೆ. ಆದರೆ ಇಂಡಿಯಾದಲ್ಲಿ ದಲಿತರ ಮತಾಂತರಗಳು ಯಾಕೆ ಆಗುತ್ತಿವೆಯೆಂಬುದನ್ನು ಸವರ್ಣೀಯರು ಸರಳೀಕರಿಸಿ ನೋಡುತ್ತಾ ಆತ್ಮವಂಚನೆ ಮಾಡಿಕೊಳ್ಳುತ್ತಾರೆ ಅಥವಾ ಗೊತ್ತಿದ್ದೂ ಗೊತ್ತಿಲ್ಲದಂತೆ ನಟಿಸುತ್ತಾರೆ. ವಿವೇಕಾನಂದರು ಮಾತ್ರ ಇದನ್ನು ಚೆನ್ನಾಗಿ ತಿಳಿದಿದ್ದರು. ಪೂರ್ವ ಬಂಗಾಳದಲ್ಲಿ ಬಡ ಮುಸ್ಲಿಮರು ಯಾಕೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ಯೋಚಿಸುತ್ತಾ ಭೂಮಾಲೀಕರೂ ಪುರೋಹಿತಶಾಹಿಯೂ ಒಂದಾಗಿ ದುರ್ಬಲರ ಮೇಲೆ ಚಪ್ಪಡಿ ಕಲ್ಲಂತೆ ನಿಂತು ಉಸಿರು ಕಟ್ಟಿಸಿದ್ದರಿಂದಲೇ ಸಮಾನತೆಯ ಗಾಳಿ ಬೀಸಿದ ಕಡೆ ಜನ ತಿರುಗಿದರು ಎಂದು ಅವರು ವಿಶ್ಲೇಷಿಸಿದರು. ಸವರ್ಣೀಯ ಸಮಾಜ ದುರ್ಬಲರ ಮೇಲೆ, ಕೆಳಜಾತಿಗಳ ಮೇಲೆ ದಬ್ಬಾಳಿಕೆ ಹೆಚ್ಚು ಮಾಡಿದಾಗಲೆಲ್ಲ, ಬೌದ್ಧಧರ್ಮ, ವೀರಶೈವ ಧರ್ಮಗಳು ಪರ್ಯಾಯವಾಗಿ ಉದಿಸಿ ಬಂದವು.

ಬೌದ್ಧಧರ್ಮವನ್ನು ಇಂಡಿಯಾದ ಆಳುವ ವ್ಯವಸ್ಥೆ ದ್ವೇಷಿಸಲು ಮತ್ತು ನಾಶ ಮಾಡಲು ಕಾರಣವಾದುದು ದೌರ್ಜನ್ಯಕ್ಕೊಳಗಾದ ಜನರನ್ನು ಕರೆದು ಮೈದಡವಿದ ಬುದ್ಧನ ಮಾನವೀಯತೆಯೇ ಆಗಿದೆ. ಅಂಬೇಡ್ಕರರ ಮತಾಂತರವನ್ನು ಕೆಲವರು ಸರಳೀಕರಿಸಿ ಮಾತಾಡುತ್ತಾರೆ. ಅಂಬೇಡ್ಕರ್ ಮತಾಂತರಗೊಂಡರೂ ಇಸ್ಲಾಮಿಗೆ ಹೋಗಲಿಲ್ಲ. ಹಿಂದೂ ಧರ್ಮದ ಶಾಖೆ(?)ಯಾದ ಬೌದ್ಧ ಧರ್ಮಕ್ಕೆ ಹೋದರು ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ. ಇದರಿಂದ ಏನೂ ಪ್ರಯೋಜನವಿಲ್ಲ. ಆದರೆ ಇಷ್ಟಂತೂ ನಿಜ. ಅಂಬೇಡ್ಕರರು ಬಹಳ ಆಳವಾಗಿ ಯೋಚಿಸಿ, ಬೌದ್ಧಧರ್ಮ ಸ್ವೀಕರಿಸಿದರು. ಅವರಿಗೆ ಆರಂಭದಿಂದಲೂ (ಸಿದ್ಧಾರ್ಥ ಕಾಲೇಜನ್ನು ಕಟ್ಟುವ ಮುಂಚಿನಿಂದಲೂ) ಬೌದ್ಧ ಧರ್ಮದ ಬಗೆಗೆ ಆಸಕ್ತಿಯಿತ್ತು. ಮತ್ತದರ ಬಗೆಗೆ ಆಳವಾದ ಅಧ್ಯಯನ ಅವರು ನಡೆಸಿದ್ದರು. ಇಸ್ಲಾಮಿನ ಭ್ರಾತೃತ್ವ ಕಲ್ಪನೆ ಅವರನ್ನು ಸೆಳೆದಿತ್ತಾದರೂ, ಈ ಕಲ್ಪನೆ ಇಸ್ಲಾಮನ್ನು ಸೇರಿದವರಿಗೆ ಮಾತ್ರ (ವಚನಕಾರರ ಸಮಾನತೆಯ ಕಲ್ಪನೆಯಂತೆ) ಎಂಬುದು ಅವರಿಗೆ ಹಿಡಿಸಲಿಲ್ಲ. ಅವರಂಥ ಸ್ವತಂತ್ರ ಚಿಂತನೆಯ ಧೀಮಂತನಿಗೆ ದೈವ-ಧರ್ಮದ ಅತಿಶ್ರದ್ಧೆಗಳನ್ನುಳ್ಳ ಇಸ್ಲಾಂ ತಕ್ಕನಾದುದೂ ಆಗಿರಲಿಲ್ಲ.

ಅಂಬೇಡ್ಕರ್ ಇಸ್ಲಾಮನ್ನು ಮತ್ತು ಮುಸ್ಲಿಮರನ್ನು ಬಹಳ ನಿಷ್ಠುರವಾಗಿ ವಿಮರ್ಶೆ ಮಾಡಬಲ್ಲವರಾಗಿದ್ದರು ಹಾಗೂ ಮುಸ್ಲಿಮರನ್ನು ಎಷ್ಟೋ ಸಲ ಹಿಂದೂ ಸವರ್ಣೀಯರೆದುರು ವಾದ ಮಾಡಲು ನಿದರ್ಶನವಾಗಿ ಬಳಸಿಕೊಳ್ಳುತ್ತಿದ್ದರು. ಉದಾಹರಣೆಗೆ ಅಸ್ಪೃಶ್ಯರು ಗೋಮಾಂಸ ಭಕ್ಷಕರಾದುದರಿಂದ ಕೆರೆ-ಬಾವಿಗಳನ್ನು ಮುಟ್ಟಲು ಅನರ್ಹರು ಎಂದಾಗ, 'ಮುಸ್ಲಿಮರೂ ಕ್ರಿಶ್ಚಿಯನ್ನರೂ ಗೋಮಾಂಸ ಭಕ್ಷಕರೇ, ಅವರನ್ನೇಕೆ ಬಿಟ್ಟಿದ್ದೀರಿ?' ಎಂದು ಪ್ರಶ್ನಿಸುತ್ತಿದ್ದರು. ತಮ್ಮ 'ಅಸ್ಪೃಶ್ಯರು' ಎಂಬ ಪುಸ್ತಕದಲ್ಲಿ ಪ್ರಾಚೀನ ಭಾರತದಲ್ಲಿ ಗೋಮಾಂಸ ಭಕ್ಷಣೆ ಇತ್ತು ಎಂಬುದನ್ನು ತಮ್ಮ ಪ್ರಚಂಡ ವಿದ್ವತ್ತಿನಿಂದ ಸಮರ್ಥಿಸಿದರು. ಇದರಿಂದ ಮುಸ್ಲಿಮರಿಗೆ 'ಗೋಹಂತಕ'ರೆಂಬ ಹಣೆಪಟ್ಟಿ ಹಚ್ಚಿ, ಮತೀಯ ದ್ವೇಷಕ್ಕೊಂದು ನೆಪ ಹುಡುಕಿದವರ ಬಾಯಿಗಳು ಎಷ್ಟೋ ಬಂದಾದವು. ಸಾವರ್ಕರರೂ ಭಾರತದಲ್ಲಿ ಗೋಮಾಂಸ ಭಕ್ಷಣೆಯಿತ್ತೆಂದು ಒಪ್ಪಿಕೊಂಡಿದ್ದು ಬಹುಶಃ ಈ ಪುಸ್ತಕದಿಂದಾಗಿಯೇ ಇರಬೇಕು. ಕಾಂಗ್ರೆಸ್ಸಿನ ಮೇಲುಜಾತಿ ಮುಖಂಡರು ಅಂಬೇಡ್ಕರರನ್ನು 'ಮುಸ್ಲಿಂ ಪರ' ವಾದಿಯೆಂದು ಕರೆಯುತ್ತಿದ್ದರು. ಇದಕ್ಕೆ ಕಾರಣ ಮುಸ್ಲಿಂ ಲೀಗ್ ಮತ್ತು ಅಂಬೇಡ್ಕರರಿಬ್ಬರಿಗೂ ಕಾಂಗ್ರೆಸ್ಸು ಸಮಾನ ವೈರಿಯಾಗಿದ್ದು ಎಷ್ಟೋ ಸಲ ಲೀಗ್ ಮತ್ತು ಅಂಬೇಡ್ಕರರು ತಾಳುತ್ತಿದ್ದ ನಿಲುವು ಒಂದೇ ಆಗಿರುತ್ತಿತ್ತು. ಇನ್ನೊಂದು ಕಾರಣವೆಂದರೆ, ಅಂಬೇಡ್ಕರ್ ಬರೆದ 'ಪಾಕಿಸ್ತಾನ ಕುರಿತ ಚಿಂತನೆ' (೧೯೪೦) ಎಂಬ ಪುಸ್ತಕ. ಇದರೊಳಗೆ ಮುಸ್ಲಿಮರು ಮತ್ತು ಹಿಂದೂಗಳು ಭಾಷೆ, ಸಂಸ್ಕೃತಿ, ಧರ್ಮ ಎಲ್ಲದರಲ್ಲೂ ಮೂಲಭೂತವಾಗಿ ಭಿನ್ನತೆಯನ್ನು ಪಡೆದಿರುವುದರಿಂದ ಮತ್ತು ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಆಳತೊಡಗಿದರೆ ಸಮಸ್ಯೆಗಳು

ಶುರುವಾಗುವುದರಿಂದ ಅವರು ಪಾಕಿಸ್ತಾನ ನಿರ್ಮಿಸಿಕೊಳ್ಳುವುದೇ ಸರಿ ಎಂದು ಅಂಬೇಡ್ಕರ್ ವಾದಿಸಿದ್ದರು. ಆದರೆ ಕಾಂಗ್ರೆಸ್ ಭಾವಿಸಿದ್ದಂತೆ ಅಂಬೇಡ್ಕರ್ ಬ್ರಿಟಿಷ್ ಪರವೂ ಆಗಿರಲಿಲ್ಲ, ಮುಸ್ಲಿಂ ಪರವೂ ಆಗಿರಲಿಲ್ಲ. ವಸಾಹತುಶಾಹಿ ತಂದ ಆಧುನೀಕರಣ ಕುರಿತು ಮೆಚ್ಚಿದಂತೆಯೇ, ಅದು ಭಾರತೀಯ ಆರ್ಥಿಕ ವ್ಯವಸ್ಥೆಯನ್ನು ಹೇಗೆ ನಾಶಮಾಡಿತು ಎಂಬುದನ್ನು ಕಟುವಾಗಿ ಟೀಕಿಸಿದ್ದರು. ೧೯೧೬ರಲ್ಲಿ ಕೊಲಂಬಿಯಾ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಡಾಕ್ಟರೇಟ್ ಪ್ರಬಂಧದ ವಿಷಯ ಇದನ್ನು ಕುರಿತಾಗಿತ್ತು. ಹೀಗೆಯೇ ಮುಸ್ಲಿಂ ಲೀಗನ್ನು, ಅದರಲ್ಲೂ ಜಿನ್ನಾನನ್ನು, ಆತನ ಮತೀಯ ಕೊಳಕು ರಾಜಕಾರಣವನ್ನು ಉಗ್ರವಾಗಿ ವಿಡಂಬಿಸುತ್ತಿದ್ದರು. ಆದರೆ ಜಿನ್ನಾನನ್ನು ಗಾಂಧಿಯಂಥ ವ್ಯಕ್ತಿತ್ವದೊಂದಿಗೆ ಹೋಲಿಸಿ, ಟೀಕಿಸುವ ಅಂಬೇಡ್ಕರ್ ಕ್ರಮ ಅಷ್ಟು ಸರಿಯಲ್ಲವೆಂದು ಅನಿಸುತ್ತದೆ. ಕಾಂಗ್ರೆಸ್ಸಿನ ಮಿತಿಯೆಂದರೆ ಅದು ಕಡೆಯ ತನಕವೂ ಅಂಬೇಡ್ಕರರನ್ನು ಅರ್ಥಮಾಡಿಕೊಳ್ಳಲಾಗದುದು. ಅಂಬೇಡ್ಕರ್ ಮಿತಿಯೆಂದರೆ ಗಾಂಧಿಯನ್ನು ದಲಿತ ಚಳುವಳಿಯ ದೃಷ್ಟಿಯಿಂದಲೇ ನೋಡಿ ಬೆಲೆಗಟ್ಟಿದುದು. ಪ್ರಾಯಃ ಒಬ್ಬರನ್ನೊಬ್ಬರು ತಾಳ್ಮೆಯಿಂದ ಅರ್ಥಮಾಡಿಕೊಳ್ಳಲಾಗದ ರಾಜಕೀಯ, ಸಾಮಾಜಿಕ ಪ್ರಕ್ಷುಬ್ಧ ಸ್ಥಿತಿಯಲ್ಲಿದ್ದುದೇ ಇದರ ಕಾರಣವಾಗಿದೆ.

ಅಂಬೇಡ್ಕರ್ ಅಲ್ಪಸಂಖ್ಯಾತರನ್ನು ಕುರಿತು ಯೋಚಿಸಿರುವುದಾದರೂ ಇಂಥದೊಂದು ಪ್ರಕ್ಷುಬ್ಧ ಐತಿಹಾಸಿಕ ಸನ್ನಿವೇಶದಲ್ಲಿಯೇ. ಇಲ್ಲಿ ವಹಿಸಬೇಕಾದ ಎಚ್ಚರಿಕೆಯೆಂದರೆ ಮುಸ್ಲಿಂ ಲೀಗ್ ಭಾರತದ ಎಲ್ಲ ಮುಸ್ಲಿಮರ ಪ್ರತಿನಿಧಿಯಾಗಿರಲಿಲ್ಲ ಮತ್ತು ಅದು ಜಿನ್ನಾನಂಥ ಮತೀಯ ರಾಜಕಾರಣಿಗಳ ಕೈಗೊಂಬೆಯಾಗಿತ್ತು. ಅಂಬೇಡ್ಕರ್ ಇಂಡಿಯಾದ ಮುಸ್ಲಿಮರನ್ನು ಮುಸ್ಲಿಂ ಲೀಗ್ ಮತ್ತು ಜಿನ್ನಾನಂಥವರನ್ನು ಮನಸ್ಸಲ್ಲಿಟ್ಟುಕೊಂಡೇ ನೋಡಿದರೇನೋ ಎಂಬ ಗುಮಾನಿ ಬರುತ್ತದೆ. ಆದರೆ ಅವರು ಮುಸ್ಲಿಮರನ್ನು ಮತ್ತು ದಲಿತರನ್ನು ಬಹಳ ಸಲ ಜತೆಯಲ್ಲಿಟ್ಟು ನೋಡಿದರು. ದಲಿತರೂ ಮುಸ್ಲಿಮರಂತೆ ಅಲ್ಪಸಂಖ್ಯಾತರೇ. ಹಳ್ಳಿಗಳಲ್ಲಿ ಮುಸ್ಲಿಮರದು ಎರಡೇ ಮನೆಯಿರಲಿ ಅವರನ್ನು ಯಾರೂ ಮುಟ್ಟುವುದಿಲ್ಲ. ಮುಟ್ಟಿದರೆ ಇಡೀ ಭಾರತದ ಮುಸ್ಲಿಂ ಸಮುದಾಯವೇ ಎದ್ದು ನಿಲ್ಲುತ್ತದೆಂದು ಅವರಿಗೆ ಗೊತ್ತು. ಹೀಗಾಗಿ ಅವೆರಡು ಮನೆಗಳು ಸಂಪೂರ್ಣ ನಿರ್ಭಯ ಬದುಕನ್ನು ಬದುಕುತ್ತವೆ. ಆದರೆ ನೀವು ಮಾತ್ರ ದಬ್ಬಾಳಿಕೆ ಗುರಿಯಾದಾಗ ಯಾಕೆ ಯಾರ ಸಹಾಯವೂ ಬರುವುದಿಲ್ಲ? ಎಂದು ದಲಿತರಿಗೆ ಯೋಚಿಸಲು ಕರೆಯೊಡ್ಡುತ್ತಿದ್ದರು. ಇದು ಕೆಲ ಮಟ್ಟಿಗೆ ನಿಜ. ಆದರೆ ಇತ್ತೀಚಿನ ಕೋಮುಗಲಭೆಗಳ ಹಿನ್ನೆಲೆಯಲ್ಲಿ ನೋಡಿದಾಗ 'ಸಂಪೂರ್ಣ ಸ್ವತಂತ್ರ ನಿರ್ಭಯ' ಬದುಕನ್ನು ಆ 'ಎರಡು ಮನೆ'ಗಳು ಬದುಕುತ್ತಿಲ್ಲವೆಂದು ಮನವರಿಕೆ ಆಗಿಹೋಗಿದೆ. ಅಲ್ಪಸಂಖ್ಯಾತರನ್ನು ಕುರಿತು ಬಾಬಾ ಸಾಹೇಬರು ಹೀಗೆ ಯೋಚಿಸಲು ಮುಸ್ಲಿಂ ರಾಜಕಾರಣವು ಆ ಹೊತ್ತಿನಲ್ಲಿ ಪಡೆದುಕೊಂಡಿದ್ದ ಸ್ಥಾನ ಕಾರಣವಾಗಿತ್ತು. ಆದರೂ ಸ್ವತಂತ್ರ ಭಾರತದ ಮುಸ್ಲಿಮರನ್ನು

ಕುರಿತು ಅವರು ಗಾಢವಾಗಿ ಯೋಚಿಸಿದ್ದರಿಂದಲೇ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಹಿತವನ್ನು ಕಾಯಲು ಸಾಧ್ಯವಾಯಿತು. ಪೂನಾ ಒಪ್ಪಂದಕ್ಕೆ ಹಿನ್ನೆಲೆ ಕಥೆಯಾಗಿರುವ ದಲಿತರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ಕುರಿತ ಕಾಂಗ್ರೆಸ್ ಮತ್ತು ಗಾಂಧಿಯೊಂದಿಗಿನ ಜಗಳದಲ್ಲಿ ಅಂಬೇಡ್ಕರ್ ಮುಸ್ಲಿಮರನ್ನು ಬುಟ್ಟಿಗೆ ಹಾಕಿಕೊಳ್ಳುವಾಗಲೆಲ್ಲ ಮುಸ್ಲಿಮರು ಅದನ್ನು ತಪ್ಪಿಸಿದ್ದಾರೆಂದು ಕೃತಜ್ಞತೆಯಿಂದ ನೆನೆಯುತ್ತಾರೆ. ('ಗಾಂಧಿ ಮತ್ತು ಗಾಂಧಿ' ವಾದದಲ್ಲಿ) ಆದರೆ ಇದನ್ನೆಲ್ಲ ಸಾಂದರ್ಭಿಕ ಹೇಳಿಕೆಗಳಾಗಿ ಮಾತ್ರ ತೆಗೆದುಕೊಳ್ಳಬೇಕೆನಿಸುತ್ತದೆ. ಮುಸ್ಲಿಂ ಲೀಗ್ ದಲಿತರ ಹಿತರಕ್ಷಕವೇನಾಗಿರಲಿಲ್ಲ. ಆದರೆ ಕಾಂಗ್ರೆಸ್ ವಿರೋಧಿ ನಿಲುವುಗಳಿಂದ ಕೆಲವೊಮ್ಮೆ ಅಂಬೇಡ್ಕರರಿಗೆ ಹಿತವೆನಿಸಿದೆ ಅಷ್ಟೇ. ಉಳಿದಂತೆ ನಿತ್ಯ ಬದುಕಿನಲ್ಲಿ ಮುಸ್ಲಿಮರೂ ದಲಿತರನ್ನು ಕೀಳಾಗಿಯೇ ಪರಿಗಣಿಸಿದವರು. ಇದು ಅಂಬೇಡ್ಕರರಿಗೂ ಗೊತ್ತಿತ್ತು ಮತ್ತು ಈಗಿನ ಬಹುತೇಕ ಭಾರತೀಯ ಮುಸ್ಲಿಮರು ಒಂದು ಕಾಲದಲ್ಲಿ ಭಾರತದ ಹಿಂದುಳಿದ ಮತ್ತು ಅಸ್ಪೃಶ್ಯ ವರ್ಗಗಳೇ ಆಗಿದ್ದರೆಂಬುದನ್ನು, ಸಾಮಾಜಿಕ ಒತ್ತಡದಲ್ಲಿ ಸಿಲುಕಿ ಸುಸ್ತಾಗಿ ಹೊರಬಂದವರೆಂಬುದನ್ನು ಅಂಬೇಡ್ಕರ್ ಹತ್ತಾರು ಕಡೆ ಸ್ಪಷ್ಟ ಮಾಡುತ್ತಾರೆ. ಆದರೆ ಹಿಂದೂ ಮತೀಯವಾದಿಗಳು ಮುಸ್ಲಿಮರ ಸಂಖ್ಯೆಗೆ ಮಧ್ಯಕಾಲೀನ ರಾಜರ ಬಲಾತ್ಕಾರ ಮಾತ್ರ ಕಾರಣವೆಂದು ಹೇಳುತ್ತಾ ಸತ್ಯಕ್ಕೆ ತೆರೆಯೆಳೆಯುತ್ತಾರೆ. ಪುರೋಹಿತಶಾಹಿ ಎಂಥಾ ಉಸಿರುಕಟ್ಟುವ ವಾತಾವರಣ ನಿರ್ಮಿಸಿತ್ತೆಂದರೆ, (ಮಧ್ಯಕಾಲೀನ ಭಾರತದಲ್ಲಿ ರಾಜಕೀಯ ಪ್ರಭುತ್ವ ಮೊಗಲರ ಕೈಲಿದ್ದರೂ ಸಮಾಜದ ಮೇಲಿತ ಹಿಡಿತ ಇದರದ್ದೇ ಆಗಿತ್ತು.) ಕೆಳವರ್ಗಗಳು ಮಾತ್ರವಲ್ಲ ಮೇಲುಜಾತಿ ಜನರೂ ಹೊರಬಂದಿದ್ದಾರೆ. ಪ್ರಸಿದ್ಧ ಹಿಂದೂಸ್ಥಾನಿ ಸಂಗೀತದ ಮನೆತನವಾದ ಡಾಗರ್ ವಂಶ ಇದಕ್ಕೆ ಒಳ್ಳೇ ಉದಾಹರಣೆ. ಮೊಗಲ ದೊರೆ ಮಹಮ್ಮದ್ ಶಾನ ಕೈಯಿಂದ ಆಸ್ಥಾನ ವಿದ್ವಾಂಸನಾದ ಗೋಪಾಲದಾಸ ಡಾಗರ್ ತಾಂಬೂಲ ಸ್ವೀಕರಿಸಿದ್ದಕ್ಕಾಗಿ ಪುರೋಹಿತರು ಅವನಿಗೆ ಬಹಿಷ್ಕಾರ ಹಾಕಿದರು. ಡಾಗರ್ ಸೇಡಿನಿಂದ ಇಸ್ಲಾಂ ಸೇರಿದ. ದಲಿತರೂ ಸೇರಿದಂತೆ ಎಷ್ಟೋ ಜನವರ್ಗಗಳು ಜಾತಿಗಳ ಕಟ್ಟಾ ಸಂಪ್ರದಾಯಕ್ಕೆ ರೋಸಿಯೇ ಇಸ್ಲಾಮನ್ನು ಬೆಳೆಸಿರುವುದು ಕಾಣುತ್ತೇವೆ. ಆದರೆ ಬೇಕೆಂದೇ ತಮ್ಮ ವಾದಕ್ಕೆ ನೇರವಾದ ಉದಾಹರಣೆಗಳಿಂದ ಸತ್ಯವನ್ನು ಹೊರಡಿಸುತ್ತಾರೆ. ಮತಾಂತರದಿಂದ ಏನು ಸಾಧಿಸುತ್ತೀರಿ? ಎಂದು ಕೇಳಿದಾಗ ಮಾತ್ರ 'ಮುಸ್ಲಿಮರು, ಸಿಖ್ಖರು, ಕ್ರೈಸ್ತರು ಅಸ್ಪೃಶ್ಯರಿಗಿಂತ ಉತ್ತಮ ಬಾಳುವೆ ಮಾಡುತ್ತಿದ್ದಾರಲ್ಲ ನೋಡಿ' ಎಂದು ತೋರಿಸುತ್ತಿದ್ದರು.

ಕಾಂಗ್ರೆಸ್ಸಿಗೆ ವಿರುದ್ಧ ಶಕ್ತಿಗಳಾಗಿ ಮುಸ್ಲಿಂ ಲೀಗ್ ಮತ್ತು ಅಂಬೇಡ್ಕರ್ ಇದ್ದರೂ, ಅಂಬೇಡ್ಕರರ ವಿರೋಧ ಸಾಮಾಜಿಕ ನ್ಯಾಯಕ್ಕಾಗಿ ನಡೆಸುವ ತಾತ್ವಿಕ ಹೋರಾಟವಾಗಿತ್ತು. ಮುಸ್ಲಿಂ ಲೀಗಿನದು ಮತೀಯ ನೆಲೆಯ ರಾಜಕೀಯ ಆಕಾಂಕ್ಷೆಯಾಗಿತ್ತು. ಜನಸಮುದಾಯವೊಂದರ ಧಾರ್ಮಿಕ ಭಾವನೆಗಳನ್ನು ರಾಜಕೀಯಗೊಳಿಸಿದಾಗ ಅದು ಮತೀಯವಾದವಾಗುತ್ತದೆ. ಆಗ ಜಿನ್ನಾ ಮಾಡಿದ್ದೂ

ಹೀಗೇ. ಹಿಂದೂ ಮಹಾಸಭಾ ಸಮಾನಾಂತರವಾಗಿ ಇದನ್ನೇ ಮಾಡುತ್ತಿತ್ತು. ಈ ಎರಡು ಶಕ್ತಿಗಳೇ ದೇಶದ ವಿಭಜನೆಗೆ ನಾಂದಿ ಹಾಡಿಸಿದವು. ಅಂಬೇಡ್ಕರ್ ಈ ಸಂದರ್ಭದಲ್ಲಿ ಪಾಕಿಸ್ತಾನ ನಿರ್ಮಾಣದ ಪರವಾಗಿದ್ದು ಈ ಮತೀಯ ಶಕ್ತಿಗಳು ದೇಶವನ್ನು ಕೆಟ್ಟ ಭವಿಷ್ಯಕ್ಕೊಯ್ಯುತ್ತವೆಂದು ತಿಳಿದಿದ್ದರಿಂದ. ಆದರೆ ದೇಶದ ವಿಭಜನೆಯು ಭಾರತದಲ್ಲೇ ಉಳಿಯುವ ಅಲ್ಪಸಂಖ್ಯಾತರ ಭವಿಷ್ಯವನ್ನು ಶಾಶ್ವತವಾಗಿ ಆತಂಕದಲ್ಲಿಡುವುದನ್ನು ಕುರಿತು ಅವರು ಹೆಚ್ಚು ಚಿಂತಿಸಲಿಲ್ಲ. ಆ ಹೊತ್ತಲ್ಲಿ ಅಬ್ದುಲ್ ಕಲಾಮ್ ಆಜಾದರದು ಯಾರೂ ಆಲಿಸದ ನಿರ್ಲಕ್ಷಿತ ಕೂಗಾಗಿಬಿಟ್ಟಿತು. ಕೊನೆಯದಾಗಿ ಈ ಹೊತ್ತಿನ ದಲಿತ ಚಳುವಳಿ ಹಾಗೂ ದಲಿತ ಮುಸ್ಲಿಮರ ಸಾಮಾಜಿಕ ಸಂಬಂಧಗಳನ್ನು ಕುರಿತು ಯೋಚಿಸಬಹುದಾಗಿದೆ. ಸಾಮಾಜಿಕವಾಗಿ ಆರ್ಥಿಕವಾಗಿ ಎರಡೂ ಇಂಡಿಯಾದ ದೊಡ್ಡ ಜನಸಮುದಾಯಗಳು ಮತ್ತು ಎರಡನೇ ದರ್ಜೆಯ ಪ್ರಜೆಗಳಂತಿರುವವರು. ವ್ಯತ್ಯಾಸವೆಂದರೆ ಮೇಲ್ಜಾತಿಯ ಪ್ರಭುತ್ವವನ್ನು ಒಪ್ಪಿಕೊಂಡಿದ್ದ ದಲಿತರು ಇನ್ನೂ ಕೀಳರಿಮೆಗಳಿಂದ ಬಿಡುಗಡೆಯಾಗಬೇಕಿದ್ದರೆ, ಮಾನಸಿಕವಾಗಿ ಮುಸ್ಲಿಮರು ಎಂದೂ ಕೀಳರಿಮೆಗೆ ಒಳಗಾಗಿದ್ದೇ ಇಲ್ಲ. ಒಬ್ಬ ಸಾಮಾನ್ಯ ದರಿದ್ರ ಮುಸ್ಲಿಮನೂ ಇನ್ನೊಂದು ಧರ್ಮದ ಮೇಲ್ಜಾತಿಯವನನ್ನು ತನಗಿಂತ 'ಪವಿತ್ರ'ವೆಂದು ತಿಳಿಯಲಾರ ಮತ್ತು 'ಕಾಫಿರ್' ಎಂಬ ಒಂದೇ ಶಬ್ದದಲ್ಲಿ ಅವನನ್ನು ಗುಡಿಸಿಹಾಕುತ್ತಾನೆ. ಒಂದು ಧರ್ಮವು ಮತ್ತೊಂದು ಧರ್ಮದವನನ್ನು ತಿರಸ್ಕಾರದಿಂದ ನೋಡಲು ಒದಗಿಸುವ ಇಂಥ ಪರಿಭಾಷೆಯು ತುಂಬಾ ದುರದೃಷ್ಟಕರವಾದುದು. ಆದರೆ ಇಂಡಿಯಾದ ಜಾತಿ ವ್ಯವಸ್ಥೆ ನಿರ್ಮಿಸಿದ್ದ ಮೇಲು ಕೀಳು ವಾತಾವರಣದಲ್ಲಿ ಸಾಂಸ್ಕೃತಿಕ ಏಕಾಂಗಿತನವನ್ನು ಅನುಭವಿಸದಂತೆ ಮುಸ್ಲಿಮರನ್ನು ಇಂಥ ಪರಿಭಾಷೆ ರಕ್ಷಿಸಿತು. ಆದರೆ ಬಹುಧರ್ಮೀಯ, ಬಹುಭಾಷೀಯ ಸಮಾಜದ ಸಾಮರಸ್ಯದಲ್ಲಿ ಇದೊಂದು ತೊಡಕೇ ಆಗಿಬಿಟ್ಟಿದೆ. ಒಟ್ಟಿನಲ್ಲಿ ಆಕ್ರಮಣಕಾರೀ ಸ್ವಭಾವದಿಂದ ರಕ್ಷಿಸಿಕೊಳ್ಳಲು ಮುಸ್ಲಿಮರಿಗೆ ಸಾಧ್ಯವಾದಂತೆ ದಲಿತರಿಗೆ ಸಾಧ್ಯವಾಗಲಿಲ್ಲ. ಹೀಗಾಗಿಯೇ ಪ್ರತಿಭಟನೆಯ ಎಲ್ಲ ನೈತಿಕ ಹಕ್ಕುಗಳು ಮತ್ತು ಈ ಸಮಾಜ ವ್ಯವಸ್ಥೆಯನ್ನು ಸರಿಪಡಿಸುವ ಹೊಣೆ ದಲಿತರದ್ದಾಗಿದೆ. ಯಾಕೆಂದರೆ ಎಂದೂ ಯಾರಿಗೂ ಅವರು ಕೆಡುಕೆಣಿಸಿದವರಲ್ಲ.

ಧಾರ್ಮಿಕ–ಸಾಂಸ್ಕೃತಿಕ ಭಿನ್ನತೆಗಳಿದ್ದರೂ ದಲಿತರು ಮತ್ತು ಮುಸ್ಲಿಮರ ಸಹಬಾಳ್ವೆಯು ಗ್ರಾಮೀಣ ಮಟ್ಟದಲ್ಲಿ ಎಲ್ಲಾ ಮಿತಿಯಲ್ಲೂ ಇದ್ದಂತಿದೆ. ಭೂಮಾಲೀಕರ ದಬ್ಬಾಳಿಕೆಗೊಳಗಾಗುವ ಸಮುದಾಯಗಳು ಚುನಾವಣೆಯಂಥ ಸಂದರ್ಭಗಳಲ್ಲಿ ಜಮೀನ್ದಾರಿ ವಿರೋಧಿ ನಿಲುವನ್ನು ತಾಳುವುದನ್ನು ಸಾಮಾನ್ಯವಾಗಿ ನೋಡಬಹುದು. ಏಕಶತ್ರುವಿನೆದುರು ವ್ಯತ್ಯಾಸಗಳನ್ನು ಮರೆಯುವ ಏಕತೆಯಿದು. ಆದರೂ ಆರ್ಥಿಕವಾಗಿ, ಸಾಮಾಜಿಕವಾಗಿ ಒಂದು ಹೋರಾಟದಲ್ಲಿ ಒಗ್ಗೂಡಲು ಒಂದು ತಾತ್ವಿಕ ನೆಲೆ ದೊರಕದಿರುವುದು ದುರಂತವಾಗಿದೆ. ವರ್ಗ ಹೋರಾಟದಲ್ಲಿ

ಜಾತಿ ಧರ್ಮಗಳು ಸಾರ್ವತ್ರಿಕವಾಗಿ ಒಡ್ಡಿರುವ ಸವಾಲಿದು. ಇತ್ತೀಚೆಗೆ ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ದಲಿತರ, ಕೆಳ ಜಾತಿಗಳ ಮತ್ತು ಅಲ್ಪಸಂಖ್ಯಾತರ ರಾಜಕೀಯ ಏಕತೆಯ ಬಗೆಗೆ ಚರ್ಚೆಗಳು ನಡೆಯುತ್ತಿವೆ, ನಿಜ. ಆದರೆ ಇದಕ್ಕೆ ಪೂರಕವಾಗಿ ಹತ್ತಾರು ವರ್ಷಗಳ ಸಂಘಟನೆ ಮಾಡಿದ, ಜತೆಯಾಗಿ ದುಡಿದ ಹಿನ್ನೆಲೆಯಿಲ್ಲದೆ, ದಿಢೀರನೆ ರಾಜಕೀಯ ಏಕತೆ ಸಾಧ್ಯವಾಗುತ್ತದೆಯೇ? ಇಷ್ಟಂತೂ ನಿಜ. ಮತೀಯವಾದೀ ಆಕ್ರಮಣಗಳ ಹೊತ್ತಲ್ಲಿ ದಲಿತರು–ಮುಸ್ಲಿಮರು ಒಟ್ಟಾಗಿರುವ ಸಂದರ್ಭಗಳ ಎಳೆಯನ್ನು, ಸಮಾನ ಆರ್ಥಿಕ–ಸಾಮಾಜಿಕ ನೆಲೆಗಳ ತನಕ ಒಯ್ಯುವ ಪರಸ್ಪರ ತಿಳುವಳಿಕೆಯಿಲ್ಲವಾಗಿದೆ. ಯಾತಕ್ಕೂ ವಿದ್ಯೆಯೇ ಇಲ್ಲದ ಈ ಸಮುದಾಯಗಳು ಇಂಥ ವೈಚಾರಿಕತೆಯನ್ನು ಪಡೆಯುವುದೂ ಕಷ್ಟವಾಗಿದೆ.

*****

ಪರಿಚಯ :

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ರಹಮತ್ ತರೀಕೆರೆ ಕನ್ನಡದ ಪ್ರಮುಖ ವಿಮರ್ಶಕರು ಮತ್ತು ಚಿಂತಕರು. ಒಂದು ಕೃತಿಯನ್ನು ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಅದರ ಒಳಹೂರಣವನ್ನು ಅರ್ಥಮಾಡಿಸುತ್ತಲೇ ಕೃತಿಯ ಓರೆಕೋರೆಗಳನ್ನೂ ಖಚಿತಪಡಿಸುವಂಥವರು. ವಿಮರ್ಶೆಯ ಮೂಲಕ ಮೂಲಕೃತಿಯ ಓದಿಗೆ ಪ್ರೇರಿಪಿಸುವವರು. ಯಾವುದೇ ಪೂರ್ವಾಗ್ರಹಗಳಿಲ್ಲದೆ ಕೃತಿಯೇ ಮುಖ್ಯ ಎಂದು ಭಾವಿಸುವ ರಹಮತ್ ತರೀಕೆರೆಯವರ ವಿಮರ್ಶನ ಶೈಲಿ ವಿಶಿಷ್ಟವಾದದ್ದು. ಲಹರಿ ರೂಪದ ವಿಶ್ಲೇಷಣಾ ಬರಹಗಳಿಂದಲೂ ಗಮನ ಸೆಳೆದಿರುವ ತರೀಕರೆಯವರು ಗಂಭೀರ ವೈಚಾರಿಕ ಕೃತಿಗಳಿಂದ ವಿಮರ್ಶಕ ವಲಯದಲ್ಲಿ ಗುರುತಿಸಿಕೊಂಡಿರುವವರು. ಇವರ ಕೆಲವು ಮುಖ್ಯ ಕೃತಿಗಳು; ಪ್ರತಿಸಂಸ್ಕೃತಿ, ಮರದೊಳಗಣ ಕಿಚ್ಚು, ಕರ್ನಾಟಕದ ಸೂಫಿಗಳು, ಕನ್ನಡ ಮಾತು ತಲೆಯೆತ್ತುವ ಬಗೆ, ಧರ್ಮ ಪರೀಕ್ಷೆ, ಚಿಂತನೆಯ ಪಾಡು, ಹೊಸ ತಲೆಮಾರಿನ ತಲ್ಲಣ; ಇಲ್ಲಿ ಯಾರೂ ಮುಖ್ಯರಲ್ಲ, ಸಾಂಸ್ಕೃತಿಕ ಅಧ್ಯಯನ.

ಇಸ್ಲಾಂ ಮತ್ತು ಮುಸ್ಲಿಮರನ್ನು ನಿಷ್ಠುರವಾಗಿ ವಿಮರ್ಶೆ ಮಾಡಬಲ್ಲವರಾಗಿದ್ದ ಅಂಬೇಡ್ಕರ್ ಎಷ್ಟೋ ಸಲ ಹಿಂದೂ ಮೇಲ್ಜಾತಿಯವರ ಎದುರು ವಾದ ಮಾಡಲು ಮುಸ್ಲಿಮರನ್ನು ನಿದರ್ಶನವಾಗಿ ಬಳಿಸಿಕೊಳ್ಳುತ್ತಿದ್ದರು. ಅಸ್ಪೃಶ್ಯರು ಗೋಮಾಂಸ ತಿನ್ನುತ್ತಾರೆಂದು ಅವರು ಕೆರೆಬಾವಿಗಳನ್ನು ಮುಟ್ಟುವುದನ್ನು ತಡೆಯುತ್ತಿದ್ದ ಹಿಂದೂಗಳನ್ನು "ಮುಸ್ಲಿಮರೂ ಕ್ರಿಶ್ಚಿಯನ್ನರೂ ಗೋಮಾಂಸ ತಿನ್ನುವುದಿಲ್ಲವೇ? ಅವರನ್ನೇಕೆ ಕರೆ ಬಾವಿಗಳನ್ನು ಮುಟ್ಟಲು ಬಿಡುತ್ತೀರಿ?" ಎಂದು ಪ್ರಶ್ನಿಸುತ್ತಿದ್ದರಲ್ಲದೆ ಪ್ರಾಚೀನ ಭಾರತದಲ್ಲೂ

ಗೋಮಾಂಸ ತಿನ್ನುವ ಪದ್ಧತಿ ಇತ್ತೆಂದು ತಮ್ಮ ಪ್ರಚಂಡ ವಿದ್ವತ್ತಿನಿಂದ ಸಮರ್ಥಿಸುತ್ತಿದ್ದರು. ಮುಸ್ಲಿಮರನ್ನು ಗೋಹಂತಕರೆಂದು ಕರೆದು ಮತೀಯ ದ್ವೇಷ ಹುಟ್ಟುಹಾಕಲು ಯತ್ನಿಸುತ್ತಿದ್ದವರು ಬಾಯನ್ನು ಬಂದ್ ಮಾಡುತ್ತಿದ್ದರು. 'ಪಾಕಿಸ್ತಾನ ಕುರಿತ ಚಿಂತನೆ' ಎಂಬ ಪುಸ್ತಕದಲ್ಲಿ ಹಿಂದೂಗಳ ಮತ್ತು ಮುಸ್ಲಿಮರ ಭಾಷೆ, ಸಂಸ್ಕೃತಿ, ದರ್ಮ ಎಲ್ಲದರಲ್ಲೂ ಪರಸ್ಪರ ಹೊಂದಾಣಿಕೆಯಾಗಲಾರದ ಮೂಲಭೂತ ಭಿನ್ನತೆಯಿರುವುದರಿಂದಲೂ ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಆಳುವುದರಿಂದ ಉಂಟಾಗುವ ಗಂಭೀರ ಸಮಸ್ಯೆಗಳು ತಲೆದೋರುವುದರಿಂದಲೂ ಅವರು ಪ್ರತ್ಯೇಕ ರಾಷ್ಟ್ರ ನಿರ್ಮಿಸಿಕೊಳ್ಳುವುದೇ ಸರಿಯೆಂದು ದೂರದರ್ಶಿಯಂತೆ ವಾದಿಸಿದ್ದರು. ಅಂಬೇಡ್ಕರ್ ವಸಾಹತುಶಾಹಿ ತಂದ ಅಧುನೀಕರಣ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದಂತೆಯೇ ಅದು ಭಾರತೀಯ ಆರ್ಥಿಕ ವ್ಯವಸ್ಥೆಯನ್ನು ಹೇಗೆ ನಾಶಮಾಡತೆಂಬುದನ್ನು ಕಟುವಾಗಿ ಟೀಕಿಸಿದ್ದೂ ಉಂಟು ಹೀಗೆಯೇ ಮುಸ್ಲಿಂ ಲೀಗನ್ನು, ಜಿನ್ನಾನನ್ನು, ಅವನ ಮತೀಯ ರಾಜಕಾರಣವನ್ನು ಉಗ್ರವಾಗಿ ವಿಡಂಬಿಸುತ್ತಲೂ ಇದ್ದರು. ಆದರೆ ಅಂಬೇಡ್ಕರರನ್ನು ನಿರಂತರವಾಗಿ ಕಥುತ್ತ ಬಂದ ನೋವೆಂದರೆ – ಇಂಡಿಯಾದ ಜಾತಿ ವ್ಯವಸ್ಥೆ ನಿರ್ಮಿಸಿದ ಮೇಲು ಕೀಳು ಎನ್ನುವ ತಾರತಮ್ಯದಿಂದ ಪಾರಾಗಲು ಮುಸ್ಲಿಮರ ಆಕ್ರಮಣಕಾರಿ ಸ್ವಭಾವ ನೆರವಿಗೆ ಬಂದಂತೆ ದಲಿತರಿಗೆ ಯಾವುದೂ ನೆರವಿಗೆ ಬರಲಿಲ್ಲ ಎನ್ನುವುದು. ಆದ್ದರಿಂದಲೇ ಯಾರಿಗೂ ಎಂದೂ ಕೆಡುಕೆಣಿಸದ ದಲಿತರು ಪ್ರತಿಭಟನೆಯ ಎಲ್ಲ ನೈತಿಕ ಹಕ್ಕುಗಳು ಮತ್ತು ಈ ಸಮಾಜ ವ್ಯವಸ್ಥೆಯನ್ನು ಸರಿಪಡಿಸುವ ಹೊಣೆಯನ್ನು ನಿರ್ವಹಿಸಬೇಕಾಗಿದೆಯೆಂದು ಅಬೇಡ್ಕರ್ ಅಭಿಪ್ರಾಯಪಡುತ್ತಾರೆ. ಮತೀಯವಾದಿಗಳ ಆಕ್ರಮಣದ ನಡುವೆ ದಲಿತರು ಮುಸ್ಲಿಮರು ಒಟ್ಟಾಗಿರುತ್ತಾರೆನ್ನುವುದೂ ಒಂದು ದೂರದ ಕನಸೇ ವಿದ್ಯೆಯಿಂದ ವಂಚಿತವಾಗಿರುವ ಈ ಸಮುದಾಯಗಳು ಅದಕ್ಕೆ ಅಗತ್ಯವಾದ ವೈಚಾರಿಕತೆಯನ್ನು ಪಡೆಯುವುದು ಕಷ್ಟವಾಗಿವೆ.

೧೦. ಯುವ ಭಾರತ, ವೃದ್ಧ ಅಮೇರಿಕ

– ಮನು ಬಳಿಗಾರ್

'ಜಗತ್ತಿನ ಎಲ್ಲ ರಸ್ತೆಗಳೂ ಹೋಗಿ ಕೂಡುವುದು ರೋಮ್ ನಗರಕ್ಕೆ' ಎಂಬುದು ಪ್ರಾಚೀನ ಕಾಲದ ವಾಡಿಕೆ ಮಾತಾಗಿತ್ತು. ಆ ಸಂದರ್ಭದ ರೋಮ್ ಮಹಾನಗರದ ವಾಣಿಜ್ಯ ವ್ಯವಹಾರ, ಸಂಪತ್ತು, ಶಿಲ್ಪಕಲೆ, ಸಾಂಸ್ಕೃತಿಕ ಭವ್ಯತೆ ಅಷ್ಟೊಂದು ಉತ್ತುಂಗಕ್ಕೇರಿತ್ತು. ಹಾಗೆಯೇ ಈ ಮಾತು ಪುಷ್ಟೀಕರಿಸಲೋ ಎಂಬಂತೆ 'ರೋಮ್ ನಗರವನ್ನು ಒಂದೇ ದಿನದಲ್ಲಿ ನಿರ್ಮಿಸಲಾಗಿಲ್ಲ' ಎಂಬ ಸೂಚ್ಯ ಹೇಳಿಕೆಯೂ ಇತ್ತು. ಅಂದಿನ ಆ ಮಾತು ಇಂದು ಅಕ್ಷರಶಃ ಅನ್ವಯಿಸುವುದು ಅಮೇರಿಕಕ್ಕೆ. ಮಾಯಾನಗರಿಯೊಂದರ ವಿಪರೀತ ಆಕರ್ಷಣ ಶಕ್ತಿಯನ್ನು ಈ ಇಡೀ ದೇಶವೇ ಗರ್ಭೀಕರಿಸಿಕೊಂಡು ವಿಶ್ವದ ಎಲ್ಲ ಮಹತ್ವಾಕಾಂಕ್ಷಿಗಳನ್ನು ಇಂದು ತನ್ನ ತೆಕ್ಕೆಗೆ ಎಳೆದುಕೊಳ್ಳುತ್ತಿದೆ. ಅಮೇರಿಕಾ, ಒಂದು – Country of happenings – ಕ್ರಿಯಾಶೀಲ ಚಟುವಟಿಕೆಗಳ ದೇಶ, ವಿಪುಲಾವಕಾಶಗಳ ಕೇಂದ್ರ, ಸರ್ವೋತ್ಕೃಷ್ಟತೆಗಳ ತವರೂರು. ಕೇವಲ ಐ.ಟಿ., ಬಿ.ಟಿ.ಯವರಿಗಲ್ಲದೇ ಸಾಧನೆಯ ಅತ್ಯುನ್ನತ ಗುರಿ ತಲುಪಬೇಕೆನ್ನುವವರಿಗೆಲ್ಲ ಹೇಳಿ ಮಾಡಿಸಿದ ತಾಣ. ಭಾರತದಲ್ಲಿ ಬೆಳೆಯುವ ಅಲ್ಫಾನ್ಸೊ ಮಾವಿನಹಣ್ಣುಗಳು ಶ್ರೇಷ್ಠತೆಯ ಗರಿಷ್ಠ ಮಟ್ಟ ತಲುಪಿದಾಗ 'export quality' ಆಗುತ್ತವೆ. ಆಗ ಅವುಗಳ ಪಯಣ ಅಮೇರಿಕಾದತ್ತ ಸಾಗುತ್ತದೆ. ನಮ್ಮಲ್ಲಿಯ ಅತ್ಯುತ್ತಮ ಅರಳೆಯಿಂದಾದ 'ಟೀ ಶರ್ಟ್', ಅಸ್ಸಾಂ ತೋಟಗಳ ಅನುಪಮ ಚಹಾಪುಡಿ, ಕಾಫಿಬೌಲ್ ಇತ್ಯಾದಿಗಳು, ಇದರಂತೆಯೇ ಚೀನಾ, ಇಂಡೋನೇಶಿಯಾ, ಬಂಗ್ಲಾದೇಶ, ಶ್ರೀಲಂಕಾಗಳಲ್ಲಿಯ ಶ್ರೇಷ್ಠ ವಸ್ತುಗಳು ಯು.ಎಸ್.ಎ.ಗೆ ಹೊರಟುಬಿಡುತ್ತವೆ. ಸ್ವದೇಶಿಯರಿಗೇ ಸಿಗದ ಉತ್ಕೃಷ್ಟ ದೇಶಿ ಉತ್ಪನ್ನಗಳೆಲ್ಲ ಆ ಪರದೇಶದಲ್ಲಿ ವಿಪುಲವಾಗಿಯೇ ದೊರೆಯುತ್ತವೆ. ಇದು ಚಮತ್ಕಾರವಲ್ಲ ವಾಸ್ತವತೆ. ಯಾಕೆಂದರೆ ಅಮೇರಿಕಾದಲ್ಲಿ ಬೆಲೆಯಿರುವುದು ಕೇವಲ ಗುಣಮಟ್ಟಕ್ಕೆ, ಅದಿರದಿದ್ದರೆ ಅಲ್ಲಿ ಯಾರಿಗೂ/ಯಾವುದಕ್ಕೂ ಕಿಂಚಿತ್ತೂ ಕಿಮ್ಮತ್ತಿಲ್ಲ. ಒಂದು ಡಾಲರ್‌ಗೆ ೪೪ ರೂ. ಆಗುವುದರಿಂದ ಅಲ್ಲಿ ಎಷ್ಟೇ ಕಡಿಮೆ ಬೆಲೆಯ ವಸ್ತುವೆಂದರೂ ನಾಲ್ಕೈದು ಡಾಲರಿನದು – ಅಂದಾಜು ಇನ್ನೂರು ರೂಪಾಯಿಯದು. ಇಪ್ಪತ್ತು ರೂಪಾಯಿಗೆ ಕೆ.ಜಿ. ಎಂದಾಕ್ಷಣ 'ಈರುಳ್ಳಿ ಬೆಲೆ ಗಗನಕ್ಕೆ' ಎಂದು ಹುಬ್ಬೇರಿಸುವ ನಾವು ಅಲ್ಲಿ ೩–೪ ಡಾಲರ್‌ಗೆ ಕೆ.ಜಿ. ಅಂದಾಗ 'ಓಹ್ ಪರವಾಗಿಲ್ಲ' ಎನ್ನುವ ನಮ್ಮವರ ಸಮಾಧಾನದ ಮಾತು ಕೇಳಿಸಿಕೊಳ್ಳುತ್ತೇವೆ. ಇದೇ ಅಮೇರಿಕಾದ ಮೋಡಿ.

ಇಂತಹ ಅದ್ಭುತ ಅಮೇರಿಕಾದಲ್ಲಿ ನಾವಿಳಿಯುತ್ತಲೇ ಕಾಣುವ ಇತ್ತೀಚಿನ ವಿಚಿತ್ರವೆಂದರೆ ಕೆಳಮಟ್ಟದ ದೈಹಿಕ ಶ್ರಮದ ಕೆಲಸಕಾರ್ಯಗಳನ್ನು ಅಲ್ಲಿನ ವೃದ್ಧ ಜನರೇ ಮಾಡುತ್ತಿರುವುದು. ವಿಮಾನ ನಿಲ್ದಾಣ, ಹೋಟೆಲ್, ಶಾಪಿಂಗ್ ಮಾಲ್, ಆಸ್ಪತ್ರೆ, ಗ್ರಂಥಾಲಯಗಳಲ್ಲಿ ಯುವಕರಿಗೆ ಸಲ್ಲುವ ಶ್ರಮಿಕ ಕೆಲಸಗಳಲ್ಲಿ ಸಮಪಾಲು ತೊಡಗಿಕೊಂಡ ಹಳಬರು ನೋವು ಮರೆತು ಮುಖದಲ್ಲಿ ಮಂದಹಾಸ ಬೀರುವುದು ಸ್ವಲ್ಪ ವಿಚಿತ್ರವೆನಿಸುತ್ತದೆ. ಕೆಲ ದಶಕಗಳ ಹಿಂದೆ ಇದು ಹೀಗಿರಲಿಲ್ಲ. ನಿವೃತ್ತಿಯಾಗಿ ಹಾಯಾಗಿ ಜೀವನ ಸಾಗಿಸಬೇಕಾದ ಹಿರಿಯ ಜೀವಿಗಳಿಗೆ ಈ ಗತಿಯೇಕೆ ಬಂತೆಂದು ವಿಚಾರಿಸಿದರೆ ಕೆಲವೊಂದು ವಿಶಿಷ್ಟ ಅಂಶಗಳು ಬೆಳಕಿಗೆ ಬರುತ್ತವೆ. ಇತ್ತೀಚೆಗೆ ಇಲ್ಲಿನ ಹಲವಾರು ಕಂಪನಿಗಳು ನಿವೃತ್ತರಿಗೆ ನೀಡುತ್ತಿದ್ದ ವಚನಬದ್ಧ ಪಿಂಚಣಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗುತ್ತಿರುವುದು, ವೃದ್ಧರಿಗೆ ಬೇಕಾಗುವ ಔಷಧೋಪಚಾರ ಮತ್ತಿತರ ಅಗತ್ಯ ವಸ್ತುಗಳು ಹಾಗೂ ಸೇವಾ ಸಲಕರಣೆಗಳ ಬೆಲೆ ಏರುತ್ತಿರುವುದು ಅವರನ್ನು ಕಂಗೆಡಿಸಿದೆ. ಹೀಗಾಗಿ ಸರಕಾರ ನೀಡುತ್ತಿರುವ ಮಾಸಿಕ ಸಾಮಾಜಿಕ ಸುರಕ್ಷಾ (Social Security) ನೆರವು ಅವರಿಗೆ ಸಾಕಾಗುತ್ತಿಲ್ಲ. (ನಮ್ಮಲ್ಲಿಯೂ ವಯಸ್ಸಾದವರಿಗೆ ಇಂತಹುದೆ 'ಸಂಧ್ಯಾ ಸುರಕ್ಷಾ'ಯೋಜನೆ ಇದೆ). ಹಿರಿಯರು ಮಕ್ಕಳ ಪಾಲನೆ ಪೋಷಣೆಯಲ್ಲಿರುವುದಂತೂ ಆ ಸಮಾಜ ವ್ಯವಸ್ಥೆಯಲ್ಲಿ ಸಾಧ್ಯವಿಲ್ಲ.

ವೃದ್ಧರದು ಈ ಅವಸ್ಥೆಯಾದರೆ, ಆಧುನೀಕರಣದ ಬೆನ್ನತ್ತಿ ತಮ್ಮ ದೈಹಿಕ ಆಕರ್ಷಣೆ ಕೆಡಕೂಡದೆಂಬ ಧೋರಣೆಯಿಂದ ಮಕ್ಕಳನ್ನು ಹೆರಲು ಹಿಂಜರಿಯುವ ಹೆಂಗಳೆಯರು, ಮಕ್ಕಳು ಸಂಸಾರಕ್ಕೆ ಭಾರವೆಂಬ ಭಾವನೆಯ ದಂಪತಿಗಳು, ವಂಶೋದ್ಧಾರದ ಪವಿತ್ರ ಪರಿಕಲ್ಪನೆಗೆ ಆರ್ಥಿಕ ಲೆಕ್ಕಾಚಾರದ ಕಹಿ ಲೇಪಿಸಿ, ಮುಂದಿನ ಪೀಳಿಗೆ/ಯುವಕರನ್ನು ಸೃಷ್ಟಿಸದೇ ನುಣುಚಿಕೊಳ್ಳುತ್ತಿದ್ದಾರೆ. ಹೀಗಾಗಿ ಅಲ್ಲಿ ಜನನ ಪ್ರಮಾಣ ಇಳಿಮುಖವಾಗುತ್ತ ನಡೆದಿದೆ. ಹುಟ್ಟಿಗಿಂತ ಸಾವನ್ನೇ ಅಧಿಕವಾಗಿ ಆಹ್ವಾನಿಸುತ್ತಿದ್ದಾರೇನೊ ಎಂದೆನಿಸುತ್ತದೆ. ಹೀಗಾಗಿ 'ಮಕ್ಕಳಿರಲವ್ವಾ ಮನೆತುಂಬ', 'ಅಷ್ಟಪುತ್ರ ಸೌಭಾಗ್ಯವತಿ' ಎಂಬ ಹರಕೆ, ಆಶೀರ್ವಾದಗಳ ಸೊಲ್ಲು ಅಲ್ಲಿಲ್ಲ. ನಮ್ಮ ದೇಶದಲ್ಲೂ ಈ ಘೋಷಣೆಗಳು ಪರಿಷ್ಕಾರಗೊಂಡಿವೆಯಾದರೂ ಅದು ಬೇರೆ ಕಾರಣಕ್ಕೆ. ಜನಸಂಖ್ಯಾ ಸ್ಫೋಟದ ಒತ್ತಡ ನಮಗೆ, ವಿಪರೀತ ಲೌಕಿಕ ಅಭಿರುಚಿಗಳ ಆಕರ್ಷಣೆ ಅವರಿಗೆ. ನೈಸರ್ಗಿಕ ಬೇಡಿಕೆಗಳಿಗೂ ಎಲ್ಲಿ ಕೊರತೆಯುಂಟಾಗುವುದೋ–ಜನಸಂಖ್ಯೆ ಹೆಚ್ಚಳದಿಂದ–ಎಂಬ ಸಾತ್ವಿಕ ಭಯ ನಮ್ಮನ್ನು ಕಾಡುತ್ತಿದ್ದರೆ ; ಐಹಿಕ ಅನುಭೋಗಕ್ಕೆ ಎಲ್ಲಿ ಚ್ಯುತಿ ಬರುತ್ತದೋ ಎಂಬ ಅತಿರೇಕದ ಆತಂಕ ಅವರಿಗೆ. ಇದೇ ಸಾಂಸ್ಕೃತಿಕ, ಸಾಮಾಜಿಕ ಭಿನ್ನಭೇದ ನಮ್ಮ ಅವರ ನಡುವೆ. ಇದೊಂದು ಕಡೆಯಾದರೆ, ಜೈವಿಕ(ಬಯಾಲಾಜಿಕಲ್) ಕಾರಣಗಳು ಮತ್ತೊಂದೆಡೆ. ಕಳೆದ ನಾಲ್ಕು ದಶಕಗಳಿಂದ ಉತ್ತರ ಅಮೇರಿಕಾ ನಿವಾಸಿಗಳಾಗಿರುವ ಪ್ರಸಿದ್ಧ ವೈದ್ಯ ಡಾ. ಎಂ.ಬಿ. ಉದೋಷಿ ಹೇಳುವಂತೆ. "ಈ ಕೆಂಪು ಜನಾಂಗದ (ಕಕೇಷಿಯನ್ಸ್) ಮರು ಸೃಷ್ಟಿಕ್ರಿಯೆ ಅಂದರೆ ಮಕ್ಕಳನ್ನು ಹುಟ್ಟಿಸುವ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತಿದೆ". ಇದಕ್ಕಾಗಿ ಅವರು ಕೊಡುವ ಕಾರಣಗಳಲ್ಲಿ ಮುಖ್ಯವಾದವುಗಳು–ದೀರ್ಘಕಾಲ ನಮಗೆ ಮಕ್ಕಳು ಬೇಡ ಬೇಡ ಎಂಬ ತೀವ್ರ

ಮತ್ತು ನಿರಂತರ ತಹತಹ ಅಲ್ಲಿಯ ಜನರ ದೈಹಿಕ ಮತ್ತು ಮಾನಸಿಕ ಕ್ರಿಯೆಗಳ ಮೇಲೆ ಅಲ್ಪ ಪ್ರಮಾಣದಲ್ಲಾದರೂ ಪರಿಣಾಮ ಬೀರುತ್ತಿದೆಯೆಂಬುದು. ಪ್ರಾಯಶಃ ಮಧುಮೇಹ ರೋಗಿಗಳು ಸಿಹಿ ಖಾದ್ಯಗಳನ್ನು ವರ್ಜಿಸುತ್ತ ವರ್ಜಿಸುತ್ತ ಕ್ರಮೇಣ ಅವುಗಳ ಮೇಲೆ ಒಂದು ತೆರನಾದ ನಿರಾಸಕ್ತಿ ಬೆಳೆಸಿಕೊಂಡಂತೆ ಇದಾಗಿರಬಹುದೇನೊ. ಕಾಲ ಕಳೆದಂತೆ ಸಹಜವಾಗಿಯೇ ಸಿಹಿಪದಾರ್ಥಗಳು ಅವರ ಆಯ್ಕೆಯಾಗಿರುವುದಿಲ್ಲವಲ್ಲ ಹಾಗೆ! ಕೆಲವೊಬ್ಬರು ಈ ವಾದ ಒಪ್ಪಲಿಕ್ಕಿಲ್ಲವಾದರೂ ಇಲ್ಲಿ ಮನವರಿಕೆಯಾಗುವಂಥ ತರ್ಕಬದ್ಧತೆಯಂತೂ ಇದೆ.

ಅಮೇರಿಕಾದ ಈ ವೈಪರೀತ್ಯಕ್ಕೆ ಭಾರತದಲ್ಲಿ ಸ್ವಲ್ಪ ಮಟ್ಟಿನ ಉತ್ತರವಿದೆ. ಇಂದು ನಮ್ಮಲ್ಲಿ ಪ್ರತಿಶತ ೫೦ಕ್ಕಿಂತಲೂ ಹೆಚ್ಚು ಜನ ೩೦ ವರ್ಷ ವಯಸ್ಸಿನೊಳಗಿನವರಾಗಿದ್ದಾರೆ. "ಯುವ ಭಾರತ ಜಿಂದಾಬಾದ್". ಆದರೆ ಇದಕ್ಕೂ ತನ್ನದೇ ಆದ ತಲ್ಲಣಗಳಿವೆ. ಯುವಕರು ಹೆಚ್ಚೆಚ್ಚು ಬದಲಾವಣೆಯ ಗಾಳಿಗೆ ಮೈಮನಸ್ಸು ಒಡ್ಡುತ್ತಿದ್ದಾರೆ. ಅಂತರ್ಜಾಲದಲ್ಲಿ ವಿಹರಿಸುತ್ತಿದ್ದಾರೆ. ತಮ್ಮ ಪರಂಪರಾಗತ ಜೀವನ ಶೈಲಿಗಳನ್ನು ಬದಿಗೊತ್ತುತ್ತಿದ್ದಾರೆ. ಅವರ ಬೇಡಿಕೆಗಳು ಮಿತಿ ಮೀರಿ ಬೆಳೆಯುತ್ತಿವೆ. ಭಾರತದಂತಹ ಉಷ್ಣವಲಯದ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳು(ಪಾಕಿಸ್ತಾನ, ಬಾಂಗ್ಲಾ, ಚೀನಾ ಇತ್ಯಾದಿ) ಚೀನಾ ಹೊರತುಪಡಿಸಿ, ಪ್ರಗತಿಯಲ್ಲಿ ಬೇರೆಲ್ಲವೂ ಇನ್ನೂ ನಿಗದಿತ ಮಟ್ಟ ತಲುಪಿಲ್ಲ. ಜನಸಂಖ್ಯೆಯ ಹಾಗೆಯೇ ಬೇಡಿಕೆಗಳೂ (Demand) ಹೆಚ್ಚಾಗುತ್ತ ಹೋದಂತೆ ಪೂರೈಕೆಗಳು (Supply) ಕಡಿಮೆಯಾಗುತ್ತವೆ. ಈ ಅನುಪಾತ ಹೀಗೆ ಏರುಪೇರಾಗುವುದರಿಂದಲೇ ಹಣದುಬ್ಬರ, ಬೆಲೆಯೇರಿಕೆ, ಕೃತ್ರಿಮ ತಾತ್ಕಾಲಿಕ ಕೊರತೆ ಇತ್ಯಾದಿಗಳು ತಲೆಯೆತ್ತುತ್ತವೆ. ಭ್ರಷ್ಟಾಚಾರ ತಾಂಡವವಾಡತೊಡಗುತ್ತದೆ.

ವೀಸಾ ನೀಡುವಲ್ಲಿ ಅತಿ ಕಠಿಣ ನಿಲುವು ತಾಳುತ್ತಿದ್ದ ಅಮೇರಿಕಾ ದೂತಾವಾಸಗಳು ೨೦೦೭ರಿಂದ ಉದಾರಿಗಳಾಗುತ್ತಿವೆ. ಕಾರಣವಿಷ್ಟೆ. ಈಗ ಆ ದೇಶಕ್ಕೆ 'Work force' – ದುಡಿವ ಕೈಗಳು ಬೇಕಾಗಿವೆ. ಇದೇ ವಾತಾವರಣ ಯುರೋಪಿನ ರಾಷ್ಟ್ರಗಳಲ್ಲೂ ತಲೆದೋರಿದೆ. ಇಂಗ್ಲೆಂಡ್, ಜರ್ಮನಿಗಳು ಇತ್ತೀಚೆಗೆ ತಮಗೆ ಇಂಜಿನಿಯರ್ ಡಾಕ್ಟರ್‌ಗಳು ಬೇಕಿಲ್ಲ, ಮನೆಗೆಲಸದವರು, ಕೂಲಿಕಾರ್ಮಿಕರು, ಶ್ರಮಿಕ ವರ್ಗದವರು ಬೇಕಿದ್ದಾರೆಂಬ ಬೇಡಿಕೆಯನ್ನು ಘೋಷಿಸಿಕೊಂಡಿವೆ. ಭಾರತ, ಟರ್ಕಿ, ಪಾಕ್, ಬಂಗ್ಲಾ ಮುಂತಾದ ದೇಶಗಳಿಂದ ಕೆಲಸಗಾರರನ್ನು ಸ್ವಾಗತಿಸುತ್ತಿವೆ.

ಈಗಾಗಲೇ ಅಮೇರಿಕಾ, ಯುರೋಪ್‌ಗಳ ಕೆಲ ದೇಶಗಳಲ್ಲಿ ಶೇಕಡ ೨೫ರಷ್ಟು ವೈದ್ಯರು ಭಾರತ/ಏಷಿಯಾ ಮೂಲದವರಾಗಿದ್ದಾರೆ. ಶೇಕಡಾ ೧೮–೨೦ರಷ್ಟು ಇಂಜಿನಿಯರ್ ಇತ್ಯಾದಿ ತಾಂತ್ರಿಕ ವರ್ಗದವರಿದ್ದಾರೆ. ಕಾರಣ ಈಗ ಆ ದೇಶಗಳಿಗೆ ಬೇಕಿರುವುದು 'ಶ್ರಮಯೇವ ಜಯತೆ' ಎಂಬ ಕಠಿಣ ಕಾಯಕಯೋಗಿಗಳು. ಅದಕ್ಕಾಗಿಯೇ ಭಾರತ ಇನ್ನಿತರ ಏಷಿಯಾ ವಲಯದತ್ತ ಅವುಗಳ ವಾರೆನೋಟ.

ತಮ್ಮೆಲ್ಲ ಅಭಿವೃದ್ಧಿ ವಿಕಾಸಗಳ ಜೊತೆ ಜೊತೆಯಲ್ಲಿಯೇ ಈ ದೇಶಗಳು ಭಾರತ ಮತ್ತಿತರ ದೇಶವಾಸಿ ಯುವಕರ ಮೇಲೆ ಅವಲಂಬಿಸುವುದು

ಅನಿವಾರ್ಯವಾಗಿದೆ. ಈ ಹೊತ್ತಿನಲ್ಲಿ ನಮ್ಮ ಶ್ರೇಷ್ಠ ಮಾನವ ಸಂಪನ್ಮೂಲವಾದ ಯುವಶಕ್ತಿಯನ್ನು ನಮ್ಮಲ್ಲಿಯೇ ಉಳಿಸಿಕೊಂಡು ಬಳಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಇಲ್ಲವಾದಲ್ಲಿ ಬಿಳಿಜೋಳದ ಜಾಗದಲ್ಲಿ ಹೈಬ್ರಿಡ್ ಜೋಳ, ದೇಸಿ ಭತ್ತದ ಬದಲಾಗಿ ಹೈಬ್ರಿಡ್ ಭತ್ತ ಬಂದ ಮೇಲೆ – ಮನುಷ್ಯನಿಗೆ ತಿನ್ನಲು ಕಾಳು ಪುಷ್ಕಳವಾಗಿದೆ, ಆದರೆ ಎತ್ತುಗಳಿಗೆ ಮೇವು ಒದಗುತ್ತಿಲ್ಲ. ಯಾಕೆಂದರೆ ಹೈಬ್ರಿಡ್ ದಂಟನ್ನು ದನಕರುಗಳು ಹೆಚ್ಚಾಗಿ ತಿನ್ನುವುದಿಲ್ಲ. ಹಾಗೆಯೇ ಎತ್ತುಗಳ ಜಾಗೆಯನ್ನು ಯಂತ್ರಗಳು ಆವರಿಸಿಕೊಳ್ಳುತ್ತಿವೆ. ಇದರಿಂದಾಗಿ ಸಗಣಿ ಗಂಜಲದಂತ ಸಾವಯವ ಗೊಬ್ಬರ ಉತ್ಪಾದನೆ ಕಡಿಮೆಯಾಗಿ ರಾಸಾಯನಿಕ 'ಫರ್ಟಿಲೈಜರ್' ಮೇಲೆ ಅನಾವಶ್ಯಕ ಅವಲಂಬನೆ ತಲೆದೋರುತ್ತದೆ. ಕೃಷಿ ಭೂಮಿಯ ಕಸುವಿನ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇದರಂತೆಯೇ ನಮ್ಮ ಪ್ರತಿಭಾವಂತ ಹಾಗೂ ಉತ್ತಮ ಯುವಕರು ವಲಸೆ ಹೋದರೆ ದೇಶದಲ್ಲಿ ಒಂದು ಥರಾ ಅನಾರೋಗ್ಯಕರ/ಬರಡು ವಾತಾವರಣ ಉಂಟಾಗಬಹುದಲ್ಲವೇ?

*****

ಪರಿಚಯ :

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ನಿರ್ದೇಶಕರಾಗಿರುವ ಮನು ಬಳಿಗಾರ್ ಸರಕಾರಿ ಸೇವೆಯಲ್ಲಿ ನಿತ್ಯ ಕಡತಗಳಲ್ಲಿ ಮುಳುಗಿಯೂ ಸೃಜನಶೀಲ ಕೃತಿಗಳ ರಚನೆಯಲ್ಲಿ ಖುಷಿ ಕಾಣುವವರು. ಕವಿ, ನಾಟಕಕಾರ, ವಿಮರ್ಶಕ, ಅಂಕಣಕಾರರಾಗಿ ಸಾಹಿತ್ಯ ಕೃಷಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವವರು. ಸರಕಾರಿ ಸಂದಿಗ್ಧಗಳಲ್ಲಿ ಕಳೆದುಹೋಗದೆ ನೈಜ ಸಂವೇದನೆಗಳನ್ನು ಕಾಳಜಿಯಿಂದ ಕಾಪಾಡಿಕೊಂಡಿರುವ ಅಪರೂಪದ ಬರಹಗಾರರು. ವರ್ತಮಾನದ ಜರೂರು ಬಯಸುವ ಎಲ್ಲ ಅಪೇಕ್ಷೆಗಳನ್ನು ಸಾಹಿತ್ಯಕ ಚೌಕಟ್ಟಿನೊಳಗೆ ಎಳೆತಂದು ಸಾರ್ವಕಾಲಿಕವಾಗಿ ಪ್ರಸ್ತುತವೆನಿಸುವ ಗಾಂಭೀರ್ಯವನನು ತಮ್ಮ ವಿಚಾರಗಳಿಗೆ ತುಂಬುವವರು. ಕಾಲದ ಜೊತೆಗೆ ಹೆಜ್ಜೆಹಾಕುವ ಅನುಭವ ಮತ್ತು ಪಕ್ವತೆ ಅವರ ಬರಹಗಳಲ್ಲಿ ಸಾಂದ್ರವಾಗಿ ತುಂಬಿಕೊಂಡಿದೆ. ಅಪ್ತವಾಗಿಯೂ ಲವಲವಿಕೆಯಿಂದಲೂ ಓದಿಸಿಕೊಳ್ಳುವ ಮನುಬಳಿಗಾರರ ಅಂಕಣ ಬರಹಗಳ ಸಂಕಲನ 'ಬೆಳಕು ಬೆಡಗು' ಒಂದು ವಿಶಿಷ್ಠ ಕೃತಿ. ಬಳಿಗಾರರ ಕೆಲವು ಮುಖ್ಯ ಕೃತಿಗಳು ; ನನ್ನ ನಿನ್ನೊಳಗೆ, ಎದ್ದವರು ಬಿದ್ದವರು, ನಯಾಗರ ಮತ್ತು ಜಲಪಾತಗಳು, ಅವ್ಯಕ್ತ, ಋಣ, ಏಕಾಂತ ಮತ್ತು ಏಕಾಗ್ರತೆ, ಮೈಲಾರ ಮಹಾದೇವ, ಎಸ್.ಆರ್.ಕಂಠಿ, ಅಬ್ದುಲ್ ನಜೀರ್ ಸಾಬ್.

ಸಾಧನೆಯ ಅತ್ಯುನ್ನತ ಗುರಿ ತಲುಪಬೇಕೆನ್ನುವವರಿಗೆಲ್ಲ ಹೇಳಿ ಮಾಡಿಸಿದ ತಾಣವಾಗಿರುವ ಅಮೆರಿಕಾ ಕ್ರಿಯಾಶೀಲ ಚಟುವಟಿಕೆಗಳ ದೇಶವಾಗಿ, ವಿಫುಲಾವಕಾಶಗಳ

ಕೇಂದ್ರವಾಗಿ, ವಿಶ್ವದ ಎಲ್ಲ ಮಹತ್ವಾಕಾಂಕ್ಷಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಎಲ್ಲ ದೇಶಗಳ ಶ್ರೇಷ್ಠ ವಸ್ತುಗಳನ್ನೂ ಅಮೆರಿಕಾ ತನ್ನ ತೆಕ್ಕೆಗೆ ಸೆಳೆದುಕೊಳ್ಳುತ್ತದೆ. ಅಮೆರಿಕಾದಲ್ಲಿ ಬೆಲೆಯಿರುವುದು ಕೇವಲ ಗುಣಮಟ್ಟಕ್ಕೆ ಅದಿಲ್ಲದ ಯಾವುದನ್ನೂ ಯಾರನ್ನೂ ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ. ಇಂಥ ಅಮೆರಿಕಾದಲ್ಲಿ ಕಾಣುವ ವಿಚಿತ್ರ ನೋಟವೆಂದರೆ ಕೆಳಮಟ್ಟದ ದೈಹಿಕ ಶ್ರಮದ ಕೆಲಸಗಳನ್ನು ಅಲ್ಲಿನ ವೃದ್ಧರೇ ಮಾಡುತ್ತಿರುವುದು; ಯುವಕರು ಮಾಡಬೇಕಾದ ಶ್ರಮಿಕ ಕೆಲಸಗಳಲ್ಲಿ ಸಮಪಾಲು ತೊಡಗಿಕೊಂಡು ನೋವು ಮರೆತ ಮುಖದಲ್ಲಿ ಮಂದಹಾಸ ಬೀರಲು ಪ್ರಯತ್ನಿಸುತ್ತಿರುವುದು ನಿವೃತ್ತಿ ಪಡೆದು ಹಾಯಾಗಿರಬೇಕಾದ ಹಿರಿಯ ಜೀವಗಳು ಪಿಂಚಣಿ ಯೋಜನೆಯ ವೈಫಲ್ಯದಿಂದ, ಔಷಧೋಪಚಾರ ಮತ್ತು ಸೇವಾಸಲಕರಣೆಗಳ ಬೆಲೆ ಏರುತ್ತಿರುವುದರಿಂದ ಮಾಸಿಕ ಸಾಮಾಜಿಕ ಸುರಕ್ಷಾ ಯೋಜನೆಯು ಸಾಕಾಗದಿರುವುದರಿಂದ ಅವರು ಕಂಗಾಲಾಗಿ ದುಡಿಯಬಾರದ ವಯಸ್ಸಿನಲ್ಲಿ ದುಡಿಯಬೇಕಾಗಿ ಬಂದಿದೆ. ವೃದ್ಧರದು ಇಂಥ ಅವಸ್ಥೆಯಾದರೆ ಅಂಗಸೌಷ್ಠವನ್ನು ಕಾಪಾಡಿಕೊಂಡು ಆಕರ್ಷಣೆ ಉಳಿಸಿಕೊಳ್ಳುವುದಕ್ಕಾಗಿ ಹೆಂಗಸರು ಮಕ್ಕಳನ್ನು ಹೆರಲು ಹಿಂಜರಿಯುತ್ತಿದ್ದಾರೆ. ಆರ್ಥಿಕ ಲೆಕ್ಕಾಚಾರವೂ ವಂಶೋದ್ಧಾರಕರನ್ನು ಪಡೆಯುವ ಆಸೆಗೆ ಅಡ್ಡಿಯುಂಟುಮಾಡುತ್ತಿದೆ. ಮಕ್ಕಳು ಸಂಸಾರಕ್ಕೆ ಭಾರವೆಂಬ ಕಲ್ಪನೆಗೆ ಸಾರ್ವತ್ರಿಕವಾಗಿ ಹರಡಿಕೊಂಡಿದೆ. ಹುಟ್ಟಿಗಿಂತ ಹೆಚ್ಚಾಗಿ ಅಮೆರಿಕನ್ನರು ಸಾವನ್ನೇ ಆಹ್ವಾನಿಸುತ್ತಿರುವಂತೆ ತೋರುತ್ತದೆ. ಕಕೇಷಿಯನ್ ಬುಡಕಟ್ಟಿನ ಅಮೆರಿಕನ್ನರ ಮಕ್ಕಳನ್ನು ಹುಟ್ಟಿಸುವ ಶಕ್ತಿಯೂ ಕ್ಷೀಣಿಸುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ ಅಮೆರಿಕನ್ ಸಮಾಜದಲ್ಲಿ ಯುವಕರೇ ವಿರಳವಾಗಿದ್ದಾರೆ. ಅಮೆರಿಕಕ್ಕೆ ಹೋಲಿಸಿದರೆ ಭಾರತದಲ್ಲಿ ಮಕ್ಕಳನ್ನು ಪಡೆಯುವ ಆಸೆ ಅಷ್ಟಾಗಿ ಬತ್ತಿಹೋಗಿಲ್ಲವಾದ್ದರಿಂದ ಯುವಕರ ಸಂಖ್ಯೆಯೇನೋ ಇಲ್ಲಿ ಹೆಚ್ಚಾಗಿದೆ. ನಿಜ. ಆದರೆ ಅಂತರ್ಜಾಲಗಳಲ್ಲಿ ವಿಹರಿಸುತ್ತಿರುವ, ಪರಂಪರಾಗತ ಜೀವನಶೈಲಿಯನ್ನು ಬದಲಾವಣೆಗೊಡ್ಡುತ್ತಿರುವ ಮತಿಮೀರಿದ ಬೇಡಿಕೆಗಳಲ್ಲಿ ಕಳೆದುಹೋಗುತ್ತಿರುವ ಯುವಶಕ್ತಿ ರಾಷ್ಟ್ರೀಯ ಬಂಡವಾಳವಾಗಿ ಪರಿವರ್ತನೆಗೊಳ್ಳದಿರುವ ದುರಂತವೂ ನಮ್ಮನ್ನು ಆವರಿಸಿಕೊಳ್ಳುತ್ತಿರುವುದು ಸುಳ್ಳಲ್ಲ. ಆದ್ದರಿಮದ ನಮ್ಮ ಶ್ರೇಷ್ಠ ಮಾನವ ಸಂಪನ್ಮೂಲವಾಗಿರುವ ಯುವಶಕ್ತಿಯನ್ನು ನಮ್ಮಲ್ಲೇ ಉಳಿಸಿಕೊಂಡು ಸಮರ್ಥವಾಗಿ ಬಳಸಿಕೊಳ್ಳುವ ವಿಚಾರದತ್ತ ನಮ್ಮೆಲ್ಲರ ಗಮನ ಹರಿಯಬೇಕಾಗಿದೆ.

೧೧. ದಲಿತರು ಬೇರು ಬಸವಣ್ಣ ಹೂವು

– ಮೊಗಳ್ಳಿ ಗಣೇಶ್

ವಚನ ಸಾಹಿತ್ಯದ ಬಗ್ಗೆ ಸಾವಿರಾರು ಪುಟಗಳ ವಿಮರ್ಶೆ ಬಂದಿದೆ. ಅನೇಕ ಸಂಶೋಧನೆಗಳು ನಡೆದು ಬರುತ್ತಿವೆ. ವಾದ, ವಿವಾದ, ಚರ್ಚೆ, ತರ್ಕ ಸಾಕಷ್ಟು ಆಗಿದೆ. ಬಸವಣ್ಣನ ಸುತ್ತ ಶೈವಕೇಂದ್ರಿಕ ಧರ್ಮ ಇವತ್ತು ವಿಸ್ತಾರವಾಗಿ, ಬಲಿಷ್ಠವಾಗಿ ಹಬ್ಬಿದೆ. ಬಸವಣ್ಣನ ಕಾಲಾನಂತರ ಅನೇಕ ಬಗೆಯ ರೂಪ ವಿರೂಪಗಳೆಲ್ಲವೂ ಇವತ್ತಿಗೂ ನಿರಂತರವಾಗಿ ಆಗುತ್ತಾ ಬಂದಿವೆ. ದಲಿತ ಮೂಲದ ವಚನ ಚಳುವಳಿ ಇಂದು ಹಿಂದೂ ಧರ್ಮದ ಜಾತಿ ವ್ಯವಸ್ಥೆಯ ಮತ್ತೊಂದು ಶಾಖೆಯಾಗಿ ರೂಪಾಂತರಗೊಂಡಿದೆ. ಆ ಜಾತಿ ವ್ಯವಸ್ಥೆಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡದಂತಹ ಮಠಗಳೂ, ಸ್ವಾಮೀಜಿಗಳೂ ಅದರಲ್ಲೇ ಸೇರಿಹೋಗಿದ್ದಾರೆ. ವಚನ ಚಳುವಳಿಯ ಮೂಲ ಬೇರುಗಳಿರುವುದು ದಲಿತರ ಸಂಸ್ಕೃತಿಯ ನಿರ್ಜಾತೀಕರಣದ ಆಶಯದಲ್ಲಿ. ಬಸವಣ್ಣನೇ ವಚನ ಚಳುವಳಿಯನ್ನು ಹುಟ್ಟು ಹಾಕಿ ದಲಿತರ, ಮಹಿಳೆಯರ, ದುರ್ಬಲರ, ಅನೇಕ ಕೆಳ ಮಧ್ಯಮ ಜಾತಿಗಳ ಉದ್ಧಾರಕ್ಕಾಗಿ ಹನ್ನೆರಡನೇ ಶತಮಾನದಲ್ಲಿ ಹಿಂದೆಂದೂ ಭಾರತದ ಯಾವ ಮೂಲೆಯಲ್ಲೂ ಘಟಿಸದಿದ್ದಂತಹ ಸಾಮಾಜಿಕ ಕ್ರಾಂತಿಯನ್ನು ಮಾಡಿದನೆಂದು ಬಹುಪಾಲು ಎಲ್ಲರೂ ವಾದಿಸುತ್ತಾರೆ. ಆ ಮೂಲಕ ಒಬ್ಬ ರೆಬೆಲ್ ಬ್ರಾಹ್ಮಿಣ್ ಆದ ಬಸವಣ್ಣ ಕರ್ನಾಟಕ ಸಂಸ್ಕೃತಿಯುಲ್ಲಿ ದಲಿತರ ಸಮಾನತೆಗಾಗಿ ಅಂಬೇಡ್ಕರ್‌ಗಿಂತಲೂ ಮಿಗಿಲಾಗಿ, ಮೊದಲಾಗಿ ವಿಸ್ತಾರವಾದ ಸಾಮಾಜಿಕ ಸಂಬಂಧಗಳಿಂದ ಸಮಾಜವನ್ನು ಬದಲಿಸಲು ದೊಡ್ಡ ಹೋರಾಟವನ್ನೇ ಮಾಡಿದ ಎಂತಲೂ ಪರಾಕು ಹಾಕುತ್ತಾರೆ. ವಾಸ್ತವ ಸ್ಥಿತಿಯೇ ಬೇರೆ ಎಂದು ತೋರುತ್ತದೆ. ಬಸವಪೂರ್ವ ಶೈವ ಪರಂಪರೆಯ ಅಥವಾ ದ್ರಾವಿಡ ಪರಂಪರೆಯ ನಿಜವಾದ ಶಕ್ತಿ ಕಾಳಿ ಮತ್ತು ಶಿವ ಇವೆರಡೇ ಆಗಿದ್ದನ್ನು ಎಲ್ಲರೂ ಬಲ್ಲರು. ಜಾತಿಯಿಂದ ಹೊರಬಂದ ಬಸವಣ್ಣನಿಗೆ ಜಾತಿಯ ಹಂಗಿಲ್ಲದ, ಅಹಂಕಾರವಿಲ್ಲದ, ಮುಗ್ಧವಾದ ಸಮುದಾಯ ಬೇಕಿತ್ತು. ಜಾತಿಯ ಕೊನೆಯಲ್ಲಿರುವ ದಲಿತರ ಆಶ್ರಯವಿಲ್ಲದೆ ಮತ್ತೆ ಬೇರ್‍ಯಾರಲ್ಲಿಗೂ ಹೋಗಲು ಬಸವಣ್ಣನಿಗೆ ಸಾಧ್ಯವಿರಲಿಲ್ಲ. ಬಸವಣ್ಣ ಬರುವ ವೇಳೆಗಾಗಲೆ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯನಂತಹ ಹತ್ತಾರು ದಲಿತ ವಚನಕಾರರು ವೈದಿಕ ಜಾತಿ ವ್ಯವಸ್ಥೆಯ ವಿರುದ್ಧವಾಗಿ ಅತ್ಯಂತ ಸೂಕ್ಷ್ಮವಾಗಿ ಅಂಜಿಕೆಯಿಂದ ತಮ್ಮದೇ ಆದ ಒಂದು ಚಳುವಳಿಯನ್ನು ರೂಪಿಸಿಕೊಳ್ಳಲು ಸಜ್ಜಾಗುತ್ತಿದ್ದರು. ಅಂತಹ ವೇಳೆಯಲ್ಲಿ

ಬಸವಣ್ಣ ವೈದಿಕ ಜಾತಿ ಪರಂಪರೆಯನ್ನು ತಿರಸ್ಕರಿಸಿ ಬೀದಿಗೆ ಬಂದಾಗ ಆತ ಅನಿವಾರ್ಯವಾಗಿ ಹೊಲೆಮಾದಿಗರ ಕೇರಿಯಲ್ಲೆ ತನ್ನ ಮುಂದಿನ ದಾರಿಯನ್ನು ಕಂಡುಕೊಳ್ಳಬೇಕಾಗಿತ್ತು. ಹೀಗಾಗಿಯೆ ಆಗಲೆ ಮೊಳಕೆಯೊಡೆದಿದ್ದ ದಲಿತ ಅನುಭಾವಿಗಳ ಜೊತೆ ಬಸವಣ್ಣನ ಕ್ರಾಂತಿಕಾರಿ ಮಾತುಗಳು ಹೊಂದಾಣಿಕೆಯಾದವು. ಕ್ರೂರ ಜಾತಿಪದ್ಧತಿಯ ಒಳಗೆ ದಲಿತ ಅದರ ವಿರುದ್ಧ ಸಮರ ಸಾರುವುದಕ್ಕೂ ಮತ್ತು ಜಾತಿಯಿಂದ ಹೊರಬಂದ ಮೇಲ್ಜಾತಿಯವನೊಬ್ಬ ಹೋರಾಡುವುದಕ್ಕೂ ವ್ಯತ್ಯಾಸವಿದೆ.

ಮೇಲುಜಾತಿಯ ಮಾರ್ಕ್ಸ್‌ವಾದಿಗಳ ಜಾತಿವಿನಾಶದ ಮಾತುಗಳನ್ನು ಅಥವಾ ಗಾಂಧಿಯಂತಹ ಸುಧಾರಣಾವಾದಿಗಳ ಮಾತನ್ನು ಜಾತಿನಿಷ್ಠ ಸಮಾಜ ಸಹಿಸಿಕೊಳ್ಳಬಲ್ಲದು. ಮನಸ್ಸಿಟ್ಟು ಕೇಳಿ ತಿದ್ದಿಕೊಳ್ಳಲೂಬಹುದು. ಆದರೆ ಅಂಬೇಡ್ಕರ್ ರಂತಹವರ ಸಮರವನ್ನು ಈ ಸಮಾಜ ಒಪ್ಪಿಕೊಳ್ಳಲಾರದು. ವಚನ ಚಳುವಳಿಯ ಸಂದರ್ಭದಲ್ಲೂ ಇಂಥದೇ ಮನಸ್ಥಿತಿಯಿತ್ತು. ಕಾಲಮಾನ ಬದಲಾದರೂ ಜಾತಿ ಮತ್ತು ಪುರೋಹಿತಶಾಹಿಯ ಗುಣ ಎಲ್ಲ ಕಾಲದಲ್ಲೂ ಒಂದೇ ರೀತಿಯಲ್ಲಿ ಜಾತಿಗೆ ಸಂಬಂಧಿಸಿದಂತೆ ವರ್ತಿಸಿರುವುದನ್ನು ಚರಿತ್ರೆಯಲ್ಲಿ ಎಲ್ಲರೂ ನೋಡಬಹುದು. ದಲಿತ ವಚನಕಾರರು ತಮ್ಮ ಆಶಯಗಳನ್ನು, ಕನಸುಗಳನ್ನು ಬಸವಣ್ಣನ ಮೂಲಕ ನಿರೂಪಿಸಲು ಯತ್ನಿಸಿದ್ದಾರೆ. ಕೆಳಜಾತಿಗಳ ಸಾಂಸ್ಕೃತಿಕ ಎಚ್ಚರವನ್ನು ಬಸವಣ್ಣ ಕವಿ ಸಂವೇದನೆಯಿಂದ ಅರಿತು ಅದನ್ನು ಸಾಮಾಜಿಕವಾಗಿ ವಿಸ್ತರಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾನೆ. ಬಹುತೇಕ ವಿದ್ವಾಂಸರು, ಗುರುಮಠದವರೂ ಪೀಠಾಧಿಪತಿಗಳೂ ಅಭಿಮಾನದಿಂದ ಹೇಳಿಕೊಳ್ಳುವ, 'ಬಸವಣ್ಣ ಬಂದು ದಲಿತರನ್ನು ಎಚ್ಚರಿಸಿದ' ಎಂಬ ಮಾತು ಸುಳ್ಳು. ಮೊದಲೇ ಎಚ್ಚರಗೊಂಡಿದ್ದ ಒಂದಿಷ್ಟು ದಲಿತ ವಚನಕಾರರ ಜೊತೆ ಬಂದು ಸೇರಿ ಸ್ವತಃ ಬಸವಣ್ಣನೂ ದಲಿತರಿಂದ ಎಚ್ಚರಗೊಂಡಿದ್ದಾನೆ. ಬಸವಣ್ಣನ ವಚನಗಳಲ್ಲಿ ಪ್ರಖ್ಯಾತವಾದ 'ಮಾದಿಗರ ಮನೆಯ ಮಗನು' ವಚನವು ಈ ಬಗೆಯ ಎಚ್ಚರದಲ್ಲಿ ಮೂಡಿಬಂದದ್ದಾಗಿದೆ. ಸೃಜನಶೀಲತೆ ಯನ್ನು ಈ ಪ್ರಮಾಣದಲ್ಲಿ ಜಾತ್ಯತೀತಗೊಳಿಸಿಕೊಳ್ಳುವ ಪರಿಯು ಬುದ್ಧನ ಸ್ವಭಾವಕ್ಕೆ ಹತ್ತಿರವಾಗುತ್ತದೆ. ಅನುಭಾವಿಗಳ ಆತ್ಯಂತಿಕವಾದ ತುಡಿತಗಳೆಲ್ಲವೂ ಒಂದೇ ಬಗೆಯ ಮೂಲವನ್ನು ಕಂಡುಕೊಳ್ಳುತ್ತವೆ. ತಿರಸ್ಕೃತರ ಪರವಾದ ಚಹರೆಯಲ್ಲಿ ತನ್ನ ಜನ್ಮಸ್ಥಾನವನ್ನು ಗುರುಸಿತಿಕೊಳ್ಳುವುದು ಸಾಮಾನ್ಯವಾದ ಸಂಗತಿ ಅಲ್ಲ. ಹೀಗಾಗಿಯೆ ಬಸವಣ್ಣನ ವಚನಗಳಲ್ಲಿ ನೊಂದವರ ಪರವಾದ ದನಿಯಿರುವುದು ಹಾಗೂ ಆಷಾಢಭೂತಿಗಳ ವಿರುದ್ಧ ಪ್ರತಿರೋಧವಿರುವುದು. ಬಸವಣ್ಣನ ವಚನಗಳಲ್ಲಿ ನೊಂದವರ ಪರವಾದ ನೇರ ನಡೆನುಡಿಯ ತೀಕ್ಷ್ಣ ಸಾಧ್ಯತೆಯು ದಲಿತರ ಜೊತೆಗಿನ ಅನುಸಂಧಾನದಿಂದಲೇ ಬಂದುದು. ಬಸವಣ್ಣ ದಲಿತರ ಕೇರಿಯ ನುಡಿಗಳನ್ನು ತನ್ನದಾಗಿಸಿಕೊಂಡಿದ್ದಾನೆ. ದಲಿತರ ಅನುಭಾವವೇ ಆತನ ಅಂತರಂಗದ ಧ್ಯಾನವಾಗಿತ್ತು. ದಲಿತರ ಕಾಯಕ ನಿಷ್ಠೆಯಲ್ಲಿದ್ದ ಅಧ್ಯಾತ್ಮವು ಬಸವಣ್ಣನಿಗೆ ಕಣ್ಣು ತೆರೆಸಿದೆ. ಆದ್ದರಿಂದಲೇ ಆತ 'ದೇಹವೇ ದೇಗುಲ' ಎಂಬ ದಿವ್ಯತೆಯನ್ನು ಕಾಣಲು ಸಾಧ್ಯವಾಗಿರುವುದು. ವೇದಶಾಸ್ತ್ರ ಪುರಾಣಗಳ ಬಗೆಗಿನ ಕಟುನಿಲುವನ್ನು ಬಸವಣ್ಣ ತಿರಸ್ಕೃತರ ಅಂತರಂಗದಿಂದ ಆಲಿಸಿ ನುಡಿದಿರುವುದು ವಿಶೇಷವಾಗಿದೆ.

ದಂಗೆ ಸ್ವರೂಪದ ಅಧ್ಯಾತ್ಮವು ಬಸವಣ್ಣನಿಗೆ ದಲಿತರ ಬದುಕಿನ ಪರಕಾಯ ಪ್ರವೇಶದಿಂದ ಬಂದಿದೆ. ಬಸವಣ್ಣ ಅಷ್ಟೊಂದು ಖಚಿತವಾಗಿ 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ಎಂದು ಆದೇಶಿತ ಧಾಟಿಯಲ್ಲಿ ನೀತಿ ಹೇಳುವುದು ನೊಂದವರ ಆಕ್ರೋಶದ ಸಾತ್ವಿಕತೆಯ ಫಲವಾಗಿದೆ. ಬಸವಣ್ಣ ಹುಟ್ಟಿನಿಂದ ಮೇಲುಜಾತಿಯಿಂದ ಬಂದವನೇ ಆಗಿದ್ದರೂ ಆತನ ವಚನಗಳ ಸಂಸ್ಕಾರವು ಬಡ ಜನರ ದನಿಯಿಂದ ಪರಿಷ್ಕಾರಗೊಂಡಿದೆ. ದೇವರನ್ನು ನಿರಾಕರಿಸುವ ಸ್ವಭಾವ ಬ್ರಾಹ್ಮಣ್ಯದ್ದಲ್ಲ. ದಲಿತರು ಕಾಯಕವನ್ನೆ ದೇವರೆಂದು ನಂಬಿದ್ದರು. ಕಾಯಕವೇ ಜೀವನವಾಗಿದ್ದಾಗ ದಲಿತರಿಗೆ ಅದನ್ನು ನಿರಾಕರಿಸಿ ವೇದಾಧ್ಯಯನ ಮಾಡಿಯೋ ತಪಶ್ಶಕ್ತಿಯಿಂದ ಮಹಾತ್ಮರಾಗಲೋ ಆಸಕ್ತಿಯಿರಲಿಲ್ಲ. ಬಸವಣ್ಣ ಕೆಳಜಾತಿಗಳ ಇಂತಹ ಮನಸ್ಸನ್ನು ತಿಳಿದೇ ಸರಳ ಮಾತಿನಲ್ಲೇ ಜಗದ ನೀತಿಯನ್ನು ಧ್ವನಿಸುತ್ತಾನೆ. ಜಾತ್ಯತೀತ ಸೃಜನಶೀಲತೆಯನ್ನು ಮೈಗೂಡಿಸಿಕೊಳ್ಳುವುದು ದೊಡ್ಡ ಕ್ರಾಂತಿಯೇ. ಬಸವಣ್ಣನ ಕಲ್ಯಾಣದ ಕ್ರಾಂತಿಯು ವಿಫಲವಾಗಿದ್ದರೂ ವಚನ ನೀತಿಯಲ್ಲಿ ಆತ ಯಾವ ರೀತಿಯಲ್ಲೂ ವಿಫಲನಾಗಲಿಲ್ಲ. ಜನಪದರ ನುಡಿಗಟ್ಟನ್ನು ಬಸವಣ್ಣನಷ್ಟೇ ಅಲ್ಲದೆ ಆ ಕಾಲದ ಎಲ್ಲರೂ ಗಾಢವಾಗಿ ಮೈದುಂಬಿದ್ದರು. ಇದು ಕೂಡ ಬಸವಣ್ಣನ ಜಾತ್ಯತೀತ ಪ್ರಭೆಯ ಪರಿಣಾಮವಿರಬಹುದು. ಅಲ್ಲಮನಂತಹ ಶ್ರೇಷ್ಠ ದಾರ್ಶನಿಕ ಕವಿಯೂ ದೇಶೀ ಸಂವೇದನೆಯ ರೂಪಕದ ಬಯಲಲ್ಲಿ ತಿರಸ್ಕೃತರ ಸಂವೇದನೆಯನ್ನು ಅಂತರ್ಗತಿಸಿಕೊಂಡದ್ದಿದೆ. ಬಸವಣ್ಣ ಈ ನಿಟ್ಟಿನಲ್ಲಿ ಅಲ್ಲಮನಿಗಿಂತ ಹೆಚ್ಚು ಲೌಕಿಕದ ಮಾನವ ಸಂಬಂಧಗಳಲ್ಲಿ ತೊಡಗುವುದು ವಿಶೇಷವಾಗಿದೆ. ಬಸವಣ್ಣ ಸಾಮಾಜಿಕ ನ್ಯಾಯವನ್ನು ವಚನಗಳಲ್ಲಿ ಸಾಧಿಸಿದ್ದು ಮುಂದೆ ಕನ್ನಡ ಕಾವ್ಯವು ಸಾಮಾಜಿಕ ನ್ಯಾಯವನ್ನು ಗಾಢವಾಗಿ ನಿರೂಪಿಸಲು ಸಾಧ್ಯವಾಯಿತು. ಕನ್ನಡದ ಪ್ರಾಚೀನ ಕಾವ್ಯಗಳಲ್ಲೆಲ್ಲೂ ಬಸವಣ್ಣನಂತಹ ಜಾತ್ಯತೀತ ಸಂವೇದನೆಯನ್ನು ಕಾಣಲು ಸಾಧ್ಯವಿಲ್ಲ. ಆ ಮಟ್ಟಿಗೆ ಬಸವಣ್ಣನ ಕ್ರಾಂತಿಯಲ್ಲಿ ದಲಿತರಿಗೆ ತಕ್ಕ ನ್ಯಾಯ ಸಿಗದಿದ್ದರೂ ಕಾವ್ಯಾತ್ಮಕ ನ್ಯಾಯವು ಅಗತ್ಯಕ್ಕಿಂತ ಹೆಚ್ಚೇ ದೊರಕಿದೆ.

ಒಂದು ವೇಳೆ ಬಸವಣ್ಣ ಪೂರ್ಣವಾಗಿ ದಲಿತರ ಕೇರಿಗಳಲ್ಲೇ ಬಡವರ ಮನೆ ಅಂಗಳದಲ್ಲೇ ಉಳಿದಿದ್ದರೆ ಭಾಗಶಃ ಆತನ ಕ್ರಾಂತಿ ಪೂರ್ಣಗೊಳ್ಳುತ್ತಿತ್ತೇನೋ. ಬಸವಣ್ಣ ಬಿಜ್ಜಳನ ಆಸ್ಥಾನ ಸೇರಿದ್ದು ಸಾಂಸ್ಕೃತಿಕ ರಾಜಕಾರಣ ಮಾಡಲು ಅನುಕೂಲವಾಯಿತೇ ವಿನಃ ಸಾಮಾಜಿಕ ರಾಜಕಾರಣವನ್ನು ಮಾಡಲು ಆಗಲಿಲ್ಲ. ದಲಿತರ ಸಾಂಸ್ಕೃತಿಕ ರಾಜಕಾರಣ ಕೂಡ ಭಿನ್ನವಾದುದಾಗಿತ್ತು. ಬಸವಣ್ಣ ವಚನ ಚಳವಳಿಯನ್ನು ವಿಸ್ತರಿಸುತ್ತಾ ಹೋದಂತೆಲ್ಲ ಆತನ ಅನುಯಾಯಿಗಳು ಕೂಡಲ ಸಂಗಮದಲ್ಲಿ ಸೇರಿ ಮೂಲದ ದಲಿತ ಸಂವೇದನೆಯನ್ನು ಕರಗಿಸಿ ಪರೋಕ್ಷವಾಗಿ ವೈದಿಕ ಆಚಾರ ವಿಚಾರಗಳು ಬಂದು ಸೇರಿಕೊಳ್ಳುವಂತೆ ಮಾಡಿದ್ದನ್ನು ಗಮನಿಸಬಹುದು. ಇದರಿಂದಾಗಿಯೇ ಬಸವಣ್ಣನ ಚಳವಳಿಯು ಧಾರ್ಮಿಕ ಸ್ವರೂಪವನ್ನು ಪಡೆಯಬೇಕಾದ ಇಕ್ಕಟ್ಟಿಗೆ ಒಳಗಾದದ್ದು. ಲಿಂಗಧಾರಣೆಯ ಕ್ರಮವೇ ಧಾರ್ಮಿಕ ವಿಧಿ ಆಚರಣೆಗಳಿಗೆ ತಕ್ಕಂತಿದ್ದು ಮುಂದೆ ಇದು ಮತಾಂತರದ ಸ್ವರೂಪ ಪಡೆದು ಇಷ್ಟಲಿಂಗದ ಆರಾಧನೆಯು ವೈದಿಕ ಧರ್ಮಾಚರಣೆಯ ಇನ್ನೊಂದು ಭಿನ್ನ ಆವೃತ್ತಿಯಂತೆ ರೂಪಾಂತರಗೊಂಡಿದ್ದು ವಿಪರ್ಯಾಸ. ಈ

ಬಗೆಯ ಲಿಂಗಧಾರಣೆಯನ್ನು ದಲಿತರು ಒಪ್ಪಿರಲಿಲ್ಲ ಎಂಬುದನ್ನು ಮುಂದೆ ಬಂದ ಮಲೆಮಾದೇಶ್ವರ, ಮಂಟೇಸ್ವಾಮಿಯಂತಹ ದಲಿತ ಸಾಂಸ್ಕೃತಿಕ ನಾಯಕರು ಪ್ರತಿರೋಧಿಸುವುದರಲ್ಲಿ ಕಂಡುಕೊಳ್ಳಬಹುದು. ಹೀಗಾಗಿಯೆ ದಲಿತರ ಸಾಂಸ್ಕೃತಿಕ ರಾಜಕಾರಣವನ್ನು ಕೂಡ ಬಿಜ್ಜಳನ ರಾಜ್ಯಾಧಿಕಾರದಲ್ಲಿ ಬಸವಣ್ಣ ಸಾಧಿಸಲು ಸಾಧ್ಯವಾಗಲಿಲ್ಲ. ದಲಿತರ ಬೇರಿನಿಂದಾದ ಶೈವ ಸಂಸ್ಕೃತಿಯು ಹೀಗೆಯೇ ಮಧ್ಯಕಾಲೀನ ಸಮಾಜದಲ್ಲಿ ಬೇರೆ ರೂಪ ಧರಿಸಿ ಹತ್ತಾರು ಜಾತಿಗಳಿಗೂ ಮತಶ್ರದ್ಧೆಗಳಿಗೂ ಕಾರಣವಾಯಿತು. ಆದರೆ ಮೂಲದ ದಲಿತ ಶೈವ ಸಂಸ್ಕೃತಿಯು ತನ್ನ ಚಹರೆಯನ್ನು ಎಲ್ಲೂ ಭದ್ರಪಡಿಸಿಕೊಳ್ಳಲು ಆಗಲಿಲ್ಲ.

ವಚನಗಳಲ್ಲಿ ಮಾತ್ರ ದಲಿತರ ಅಸ್ಪಷ್ಟ ಚಹರೆಗಳು ಉಳಿದುಕೊಂಡಿವೆ. ಬಸವಣ್ಣನ ಅಂಗೀಕಾರದಿಂದಲೇ ಹಾಗೆ ಉಳಿಯಲು ಸಾಧ್ಯವಾದದ್ದು. ಆದರೆ ಮುಂದೆ ಹದಿನಾರನೇ ಶತಮಾನದ ವೇಳೆಗೆ ವಚನ ಸ್ವರೂಪದ ದಲಿತ ರೂಪಗಳು ಮುಂದುವರಿಯಲಿಲ್ಲ. ದಲಿತ ಸಮುದಾಯದ ಶರಣರು ದಿಕ್ಕಾಪಾಲಾಗಿದ್ದರು. ಬಸವಣ್ಣನ ಕ್ರಾಂತಿಯಲ್ಲಿ ದಲಿತ ಸಂವೇದನೆ ಇತ್ತೇ ವಿನಃ ದಲಿತ ನಾಯಕತ್ವ ಇರಲಿಲ್ಲ. ದಲಿತರಿಗೆ ತಕ್ಕ ಪ್ರಾತಿನಿಧ್ಯವಿಲ್ಲದೇ ಹೋದದ್ದರಿಂದಲೇ ಬಸವಣ್ಣನ ನಂತರ ದಲಿತರಿಗೆ ಸಮರ್ಥ ಶರಣರು ಸಿಗಲಿಲ್ಲ. ಬದಲಿಗೆ ಮಂಟೇಸ್ವಾಮಿ, ಮಾದೇಶ್ವರರಂತಹ ಎಡಗೈ ಬಲಗೈ ನಾಯಕರು ಸಿಗಬೇಕಾದರೆ ಆ ಹೊತ್ತಿಗೆ ನೂರಾರು ವರ್ಷಗಳೇ ಕಳೆದುಹೋಗಿದ್ದವು. ಬಸವಣ್ಣನ ವಚನಗಳು ದಲಿತರಿಗೆ ಭ್ರಮನಿರಸನ ಉಂಟುಮಾಡಿದ್ದವು. ವಚನಗಳು ಮತೀಯ ಅಭಿಲಾಷೆಗಳಿಗೆ ಬಳಕೆಯಾಗಿ ವೀರಶೈವ ಧರ್ಮದ ಸಾಂಸ್ಥಿಕ ಆಸ್ತಿಯಾಗಿ ಮಾರ್ಪಟ್ಟಿದ್ದವು. ಹನ್ನೆರಡನೇ ಶತಮಾನದ ಕ್ರಾಂತಿಯ ವೈಫಲ್ಯದಿಂದ ಸುಮಾರು ಹದಿನಾರನೇ ಶತಮಾನಗಳವರೆಗೆ ದಲಿತರು ಕರ್ನಾಟಕದ ಜನಜೀವನದಲ್ಲಿ ಸಾಂಸ್ಕೃತಿಕವಾಗಿ ಯಾವ ಬಗೆಯ ಇಕ್ಕಟ್ಟಿನಲ್ಲಿದ್ದರು? ಅವರ ಜನಪದ ದೈವ ಸಂಬಂಧ ಹೇಗಿತ್ತು? ವೀರಭದ್ರನ ಅವತಾರವು ದಲಿತರ ಸ್ತ್ರೀದೈವಗಳನ್ನೆಲ್ಲ ಹೇಗೆ ಮೂಲೆಗುಂಪು ಮಾಡಿ ಅವರನ್ನೆಲ್ಲ ಕೀಳು ದೈವವಾಗಿಸಿ ವೀರಶೈವ ಧರ್ಮದ ಪತಾಕೆಯನ್ನು ಹಾರಿಸಿತು? ಅದರಿಂದ ದಲಿತ ಸಂಸ್ಕೃತಿಯ ಸ್ವರೂಪದಲ್ಲಾದ ಬದಲಾವಣೆಗಳೇನು? ಆ ಸಂದರ್ಭದಲ್ಲಿ ದಲಿತರ ಮೌಖಿಕ ಪರಂಪರೆಯು ತಮ್ಮ ಸಾಂಸ್ಕೃತಿಕ ವೀರರ ಬಗೆಗೆ ಮಹಾಕಾವ್ಯಗಳನ್ನು ಹೇಗೆ ಸೃಷ್ಟಿಸಿಕೊಂಡಿತು? ಎಂಬ ಅಂಶಗಳನ್ನೆಲ್ಲ ಗಮನಿಸಿದರೆ ಬಸವಣ್ಣನಿಂದಾಗಿ ದಲಿತರು ಅನೇಕ ಬಗೆಯ ಸಾಂಸ್ಕೃತಿಕ ಇಕ್ಕಟ್ಟುಗಳಿಗೆ ಸಿಲುಕಿದರೆಂದು ಹೇಳಬೇಕಾಗುತ್ತದೆ. ಬಸವಣ್ಣ ತನ್ನ ಕ್ರಾಂತಿಗೆ ನಂಬಿದ್ದು ಅಂಚಿನಲ್ಲಿದ್ದ ಸಣ್ಣಪುಟ್ಟ ತಳಸಮುದಾಯಗಳನ್ನೇ. ಅದರಲ್ಲೂ ಹಿಂದುಳಿದ ವರ್ಗಗಳೇ ಬಸವಣ್ಣನ ಕ್ರಾಂತಿಯ ಬೆನ್ನ ಹಿಂದೆ ಇದ್ದವು. ಆದರೆ ಹೀಗೆ ಬೆನ್ನ ಹಿಂದೆ ಇದ್ದ ಹಿಂದುಳಿದ ವರ್ಗಗಳ ಸಾಂಸ್ಕೃತಿಕ ಆಯ್ಕೆಯು ತುಂಬ ಸಂಕೀರ್ಣವಾದುದು ಹಾಗೂ ಸಂಕಟಮಯವಾದುದಾಗಿತ್ತು. ದಲಿತರು ನೇರವಾಗಿ ಬಸವಣ್ಣನನ್ನು ಆಯ್ಕೆಮಾಡಿಕೊಳ್ಳಬಹುದಿತ್ತು. ಆದರೆ ಹಿಂದುಳಿದ ವರ್ಗಗಳಿಗೆ ಮಧ್ಯಕಾಲೀನ ಸಮಾಜದಲ್ಲಿ ಆಯ್ಕೆಗಳು ಅಷ್ಟು ಸರಳವಾಗಿರಲಿಲ್ಲ. ವೈದಿಕ ಸೆಳೆತ ಒಂದು ಕಡೆಗಿದ್ದರೆ ಅವೈದಿಕ ಸೆಳೆತ ಬಸವಣ್ಣನ ಕಡೆಯಿಂದ ಮತ್ತೊಂದು ಬಗೆಯ ಒತ್ತಡವನ್ನು

ಹಿಂದುಳಿದ ವರ್ಗಗಳಿಗೆ ಸೃಷ್ಟಿಸಿತ್ತು. ಇದರಲ್ಲಿ ಸಿಲುಕಿದ ಹಿಂದುಳಿದ ವರ್ಗಗಳು ನಿರ್ಣಾಯಕ ಪಾತ್ರ ವಹಿಸಲು ಮುಂದಾಗಲಿಲ್ಲ. ಒಂದು ವೇಳೆ ಇಡಿಯಾಗಿ ಹಿಂದುಳಿದ ವರ್ಗಗಳು (ಆ ಕಾಲದ ಪಣ ಸಮಾಜ) ಬಸವಣ್ಣನನ್ನು ಕೂಡಿಕೊಂಡಿದ್ದರೆ ದಲಿತ ಸಂಸ್ಕೃತಿಯು ಬಸವಣ್ಣನ ಮೂಲಕ ಬೇರೊಂದು ಆಯಾಮವನ್ನು ಪಡೆದುಕೊಳ್ಳುತ್ತಿತ್ತು. ಬ್ರಾಹ್ಮಣ್ಯ ಆ ಕಾಲದಲ್ಲೂ ಇದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ ಎಂದೇ ನಂಬಬೇಕಾಗುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ಅರ್ಥ ಮಾಡಿಕೊಳ್ಳಲು ಈ ಬಗೆಯ ಅಂಶಗಳನ್ನೂ ಆಶ್ರಯಿಸಬೇಕಾಗುತ್ತದೆ. ಬಸವಣ್ಣ ದಲಿತರನ್ನು ದಿಕ್ಕು ತಪ್ಪಿಸಿದನೇ, ಅವರ ಪಣ ಸಮಾಜವನ್ನು ಸಡಿಲಗೊಳಿಸಿದನೇ? ದಲಿತ ಸಮುದಾಯಗಳ ಅಖಂಡ ಶಕ್ತಿಯು ಹರಿದು ಹಂಚಿಹೋಗಿ ಹೊಸ ಬಗೆಯ ಜಾತಿವ್ಯವಸ್ಥೆಯು ಮಧ್ಯಕಾಲೀನ ಸಮಾಜದಲ್ಲಿ ರೂಪುಗೊಳ್ಳಲು ದಾರಿ ಮಾಡಿದನೇ? ಇಂತಹ ಪ್ರಶ್ನೆಗಳಿಂದಲೂ ಬಸವಣ್ಣನನ್ನು ಪರಿಶೀಲಿಸಬಹುದು. ಆದರೆ ಕನ್ನಡನಾಡಿನ ಬಹುದೊಡ್ಡ ಅಧ್ಯಾತ್ಮದ ದಂಗೆಯ ವೀರನನ್ನು ಆಧುನಿಕ ಜಗತ್ತಿನ ಒರಟು ವೈಚಾರಿಕತೆಯಲ್ಲಿ ಪ್ರಶ್ನಿಸುವುದು ಸರಿ ಅಲ್ಲವೇನೊ. ಆದರೂ ಬಸವಣ್ಣನಿಂದಾಗಿ ಅಲ್ಲದಿದ್ದರೂ ಬಸವಣ್ಣನ ತತ್ವವನ್ನು ದುರುಪಯೋಗಪಡಿಸಿಕೊಂಡವರ ದಾರಿಯಲ್ಲಿ ದಲಿತರಿಗೆ ಅನೇಕ ಬಗೆಯ ಸವಾಲುಗಳು ಎದುರಾದದ್ದಂತು ನಿಜ. ದಲಿತರು ಪ್ರತ್ಯೇಕತೆಯನ್ನು ಭಾವಿಸುವುದಕ್ಕೂ ಹೋಗಲಿಲ್ಲ. ಬಸವಣ್ಣನ ಕಾಲ ಅಳಿದು ಲಿಂಗಾಯಿತ ಜಾತಿ ಮತ್ತು ಧರ್ಮ ಪ್ರವರ್ಧಮಾನಕ್ಕೆ ಬಂದ ಮೇಲೆ ದಲಿತರು ತಮ್ಮ ದಿಕ್ಕನ್ನು ಬದಲಿಸಿಕೊಂಡರು. ಇವತ್ತಿನ ದಲಿತರು ಬಸವಣ್ಣ ನಮ್ಮವನು ಎಂದು ಗಾಢವಾಗಿ ಅಂತರಂಗಕ್ಕೆ ಕರೆದುಕೊಳ್ಳುವುದು ಇದ್ದೇ ಇದೆ. ಆದರೆ ಆ ಕಾಲದಲ್ಲಿ ಬಸವಣ್ಣನೇ ದಲಿತರ ಕೇರಿಗಳಿಗೆ ಹೋಗಿ ಕ್ರಾಂತಿಯ ಕನಸು ಕಾಣುತ್ತಿದ್ದ.

ಆದರೆ ಆ ಕಾಲಕ್ಕೆ ದಲಿತರ ಬಳಿಗೆ ಬಸವಣ್ಣನೇ ಬಂದಿರಬೇಕಾದ ಅನಿವಾರ್ಯತೆ ಇತ್ತೇ ವಿನಃ, ದಲಿತರೇ ಬಸವಣ್ಣನ ಬಳಿಗೆ ಹೋಗಿ ಹಿಂಬಾಲಕರಾದರೆಂದು ಕಾಣುವುದಿಲ್ಲ. ದಲಿತರು ಕಟ್ಟಿದ ವಚನ ಪರಂಪರೆಯನ್ನು ಬಸವಣ್ಣ ಜಾಣ್ಮೆಯಿಂದ ತನ್ನ ಸ್ವಭಾವಕ್ಕೆ ಪರಿವರ್ತಿಸಿಕೊಂಡು ಅದರ ನಾಯಕನಾಗಿದ್ದಾನೆ. ಆ ಹೊತ್ತಿನ ದಲಿತ ವಚನಕಾರರಿಗೆ ಬಸವಣ್ಣನಂತಹ ಕ್ರಾಂತಿಕಾರಿಯ ಅಗತ್ಯವಿತ್ತು. ತಾವು ಹೇಳಿದರೆ ಕೇಳದ ಸಮಾಜದ ಎದುರು ಬಸವಣ್ಣನ ಮೂಲಕ ತಮ್ಮ ಮಾತನ್ನು ಹೇಳಿಸಿ ಅ ಮೂಲಕ ಅವನನ್ನು ಮುಂದಾಳಾಗಿಸಿ ಪುರೋಹಿತಶಾಹಿಯ ವಿರುದ್ಧ ನಿಲ್ಲಿಸಿದ್ದು ಸೂಕ್ತವೇ ಆಗಿತ್ತು. ಬಸವಣ್ಣನ ಆಳದ ಸಂವೇದನೆಯಲ್ಲಿ ನಿಸ್ಸಂದೇಹವಾಗಿ ಅಪಾರ ಮಾನವೀಯತೆ ಇದ್ದೇ ಇತ್ತು. ದಲಿತರ ಪರವಾದ ಆತನ ಕಾಳಜಿ ಅನಿವಾರ್ಯವೂ ಆಗಿತ್ತು. ಜಾತಿಯಿಂದ ಹೊರಬಂದವನು ಜಾತಿಯಿಂದ ಹೀನವಾಗಿ ಅಪಮಾನಿತನಾಗಿ ನೊಂದವರ ಕಡೆಗಿರಬೇಕಾದದ್ದೇ ನಿಜವಾದ ಧರ್ಮವಾಗಿತ್ತು. ಬಸವಣ್ಣ ಈ ಹಾದಿಯನ್ನೇ ಹಿಡಿದು ಕಾಯಕ ಶಕ್ತಿಯನ್ನು ನಂಬಿದ. ಎಲ್ಲ ಕೆಳಜಾತಿಗಳೂ ತಮ್ಮ ಮೂಲಧರ್ಮವಾಗಿ ಕಾಯಕಕ್ಕೇ ಅಂಟಿಕೊಂಡನಂತೆ ಬಸವಣ್ಣ ಕಾಯಕದ ಮೂಲಕ ಆರ್ಥಿಕ ಸಮಾನತೆಯನ್ನು ಹೇಳಿದ್ದರಲ್ಲಿ ವಿಶೇಷತೆಯೇನೂ ಇಲ್ಲ.

ದುಡಿದೇ ಬದುಕಬೇಕಾಗಿದ್ದ ದಲಿತ ಸಮುದಾಯಗಳಿಗೆ ಬಸವಣ್ಣ ಕಾಯಕ ಭಕ್ತಿಯನ್ನು ವಿಶೇಷವಾಗಿ ಒತ್ತಿ ಹೇಳಬೇಕಾದ ಅಗತ್ಯವಿರಲಿಲ್ಲ. ಅದು ಮೇಲ್ಜಾತಿಗಳಿಗೆ ಅನ್ವಯಿಸಬೇಕಾದ ಮಾತಾಗಿತ್ತು. ವಿಚಿತ್ರ ಎಂದರೆ ಬಸವಣ್ಣನ ಈ ಕಾಯಕ ಭಕ್ತಿಯನ್ನು ಇವತ್ತಿಗೂ ದಲಿತರು ಪಾಲಿಸುತ್ತಿದ್ದಾರೆಯೇ ವಿನಃ ಮೇಲ್ಜಾತಿಗಳಲ್ಲ. ಬಸವಣ್ಣನೇ ವಚನ ಚಳುವಳಿಯ ನಾಯಕನಾಗಿದ್ದರೂ ಈ ಚಳುವಳಿಯ ಮೂಲ ಕಾಳುಗಳು ದಲಿತರದೇ ಎಂಬುದನ್ನು ಇವತ್ತಿನ ಯಾವ ಮಠಾಧಿಪತಿಗಳೂ ಸಾರ್ವಜನಿಕವಾಗಿ, ದಿಟ್ಟವಾಗಿ ಹೇಳಿಕೊಳ್ಳುವುದಿಲ್ಲ. ವೈದಿಕ ಪರಂಪರೆಗೆ ವಿರುದ್ಧವಾದ ದ್ರಾವಿಡ ಮನೋಧರ್ಮದ ಜಾನಪದ ಪರಂಪರೆಯ ಸಂವೇದನೆ ಹಾಗೂ ಆ ಬಗೆಯ ವಚನತತ್ವ ಕೆಳಜಾತಿಗಳ ಸೊಲ್ಲಿಗೆ ವಿಶೇಷವಾಗಿ, ಅಗಾಧವಾಗಿ ಸಾಧ್ಯವಾಗಿತ್ತು. ವಚನ ಚಳುವಳಿಯಲ್ಲಿದ್ದ ಅನೇಕ ಕೆಳಜಾತಿಗಳಿಗೆ ಬಸವಣ್ಣ ಮುಂದಾಳಾಗಿದ್ದ ಎಂಬುದು ಮುಖ್ಯವಾಗಿರಲಿಲ್ಲ. ಆ ಚಳುವಳಿಯ ತಾತ್ವಿಕ ಭಿತ್ತಿ ಹಾಗೂ ವೈದಿಕ ಧರ್ಮದ ವಿರುದ್ಧವಾದ ಎಚ್ಚರಗಳಿಂದಾಗಿ ದಲಿತ ಸಮುದಾಯಗಳು ಬಸವಣ್ಣನ ಕ್ರಾಂತಿಗೆ ಕೈದೀವಿಗೆಯಾದವು.

ಆದರೆ ಬಸವಣ್ಣನ ನಂತರಕ್ಕೆ ಏನಾಯ್ತು ಎಂಬುದನ್ನು ಎಲ್ಲರೂ ಬಲ್ಲರು. ಜಾತಿಯನ್ನು ವಿರೋಧಿಸಿ ಮಾನವೀಕರಣಕ್ಕೆ, ನಿರ್ಜಾತೀಕರಣಕ್ಕೆ ಅರ್ಪಿಸಿಕೊಂಡ ಬಸವಣ್ಣನನ್ನು ಮತ್ತೆ ಕಾಲಾಂತರದಲ್ಲಿ ಜಾತಿಯ ಕೂಪಕ್ಕೆ ಎಳೆದುಕೊಂಡದ್ದನ್ನು ಬಿಚ್ಚಿ ಹೇಳಬೇಕಾದ ಅಗತ್ಯವಿಲ್ಲ. ಬಹುಶಃ ಎಲ್ಲ ಮಾನವೀಯ ಚಳುವಳಿಗಳ ನಂತರ ವಿಕೃತ ಆಯಾಮವೊಂದು ಸಾಮಾಜಿಕವಾಗಿ ಏರ್ಪಡುತ್ತದೆಂದು ಕಾಣುತ್ತದೆ. ಬಸವಣ್ಣ ಬದುಕಿದ್ದ ಕಾಲದವರೆಗೂ ವಚನ ಚಳುವಳಿ ಪರೋಕ್ಷವಾಗಿ ವೈದಿಕ ವಿರೋಧಿ ಚಳುವಳಿಯೇ ಆಗಿತ್ತು. ನಿಜಕ್ಕೂ ಆ ಹೊತ್ತಿಗೆ ದಲಿತರ ಸಾಂಸ್ಕೃತಿಕ ನಾಯಕ ಬಸವಣ್ಣನೇ ಆಗಿದ್ದ. ಬಸವಣ್ಣನ ನಂತರಕ್ಕೆ ದಲಿತರಿಗೆ ಅನಿವಾರ್ಯವಾಗಿದ್ದ ಒಬ್ಬ ದೊಡ್ಡ ಸಾಂಸ್ಕೃತಿಕ ವೀರ ಇಲ್ಲದಂತಾಯಿತು. ಬಸವಣ್ಣನಷ್ಟೆ ಯೋಗ್ಯ ನಾಯಕನೊಬ್ಬನನ್ನು ರೂಪಿಸಿಕೊಳ್ಳುವುದೂ ದಲಿತರಿಗೆ ಸಾಧ್ಯವಿರಲಿಲ್ಲ. ಬಸವಣ್ಣನನ್ನು ಬೇರೆ ಬೇರೆ ರೀತಿಯಲ್ಲಿ 'ಲಿಂಗಧಾರಣೆ'ಯಾಗಿದ್ದ ಬಲಿಷ್ಠ ಸಮುದಾಯಗಳು ಹಂಚಿಕೊಂಡವು. ಬಸವಣ್ಣನ ವಚನಗಳನ್ನು ಪಾಠಾಂತರಗೊಳಿಸುವಲ್ಲಿ, ಸಂಪಾದಿಸುವಲ್ಲಿ ಯಾರ್ಯಾರದೋ ಧೋರಣೆಗಳು ಬೆರಕೆಯಾದವು. ಬಸವಣ್ಣನ ಹೆಸರಿನಲ್ಲಿ ಮಠಗಳು ಶಕ್ತಿಕೇಂದ್ರಗಳಾಗಿ ವಚನ ಚಳುವಳಿಯನ್ನು ತಮ್ಮ ತಮ್ಮ ರೂಪಗಳಿಗೆ ತಕ್ಕಂತೆ ಬೆಳೆಸಿಕೊಂಡವು. ಲಿಂಗಾಯತರಲ್ಲೇ ವಿವಿಧ ಬಣಗಳು ಹುಟ್ಟಿಕೊಂಡವು. ಜಾತಿಗೆ ಆಳುವ ಅಧಿಕಾರವನ್ನು, ಸಂಪತ್ತನ್ನು ಹೊಂದುವ ಹಕ್ಕನ್ನು, ಸಮುದಾಯಗಳನ್ನು ನಿಯಂತ್ರಿಸುವ ಸಾಂಸ್ಕೃತಿಕ ರಾಜಕಾರಣದ ತಂತ್ರಗಳನ್ನು ಮಠಗಳು ಪಡೆದ ಮೇಲೆ ದಲಿತ ಸಮುದಾಯಗಳಿಗೆ ದಿಕ್ಕೇ ತೋಚದಂತಾಯಿತು. ವಿಶಾಲ ಮಾನವೀಯ ಕನಸುಗಳಿಂದ ಅನೇಕ ಕೆಳಜಾತಿಗಳನ್ನು ಕಾಯಕ ಧರ್ಮಕ್ಕೆ ರೂಪಾಂತರಿಸಿದ್ದ, ಮತಾಂತರಿಸಿದ್ದ ಬಸವಣ್ಣನ ಆದರ್ಶವನ್ನು ಮುಂದುವರೆಸುವ ಇರಾದೆ ನಂತರದವರಿಗಿರಲಿಲ್ಲ.

ಬಸವಣ್ಣ ಲಿಂಗಧಾರಣೆ ಮಾಡಿಸಿದ್ದು ದ್ರಾವಿಡ ಮೂಲದವರಿಗೇ ಹೊರತು ಉನ್ನತ ಜಾತಿಗಳಿಗಲ್ಲ. ಹಿಂದೂ ಧರ್ಮದ ಸುಧಾರಣೆಗಳಲ್ಲಿ ಮತಾಂತರಗಳು

ಸಾಕಷ್ಟು ನಡೆದಿವೆ. ಜೈನ, ಬೌದ್ಧ ಧರ್ಮಗಳಿಗೆ ಮತಾಂತರಗೊಂಡಿದ್ದವರಲ್ಲೂ ಅನೇಕ ದಲಿತರು ಇದ್ದರು. ಮೇಲ್ಜಾತಿಗಳಿಗೆ ಮತಾಂತರಗೊಳ್ಳುವ ಅನಿವಾರ್ಯತೆ ಇರುವುದಿಲ್ಲ. ಇವತ್ತಿಗೂ ಮತಾಂತರಗಳು ಕೆಳಜಾತಿಗಳಿಂದ ಆಗುತ್ತಿವೆಯೇ ಹೊರತು ಜಾತಿ ಶ್ರೇಣಿಯ ಮೇಲಿನಿಂದಲ್ಲ. ವಚನ ಚಳುವಳಿಯ ವಿಶೇಷವೆಂದರೆ, ದಲಿತರ ಜೊತೆಯಲ್ಲೇ ಅನೇಕ ಮಧ್ಯಮ ಜಾತಿಗಳು ಒಟ್ಟಿಗೇ ಲಿಂಗಧಾರಣೆಗೊಂಡು ಸಾಂಸ್ಕೃತಿಕ ಮತಾಂತರಕ್ಕೆ ಒಳಗಾಗಿವೆ. ಇವತ್ತಿನ ಅನೇಕ ಲಿಂಗಾಯತರು ಚರಿತ್ರೆಯ ಒಂದು ಕಾಲದ ದಲಿತರೇ ಹಾಗೂ ಹಿಂದುಳಿದ ವರ್ಗದ ಪಣ ಸಮಾಜದವರೇ ಆಗಿದ್ದರು. ಮತಾಂತರಗಳಿಂದಾಗಿ ದಲಿತರ ಸಂಖ್ಯಾಪ್ರಮಾಣ ನಿರಂತರವಾಗಿ ಕುಗ್ಗುತ್ತಿದೆ. ಭಾರತದ ಎಲ್ಲ ಧಾರ್ಮಿಕ ಪಂಥಗಳಲ್ಲೂ ಮಾಜಿ ದಲಿತರಿದ್ದಾರೆ. ಅಂತೆಯೇ ಲಿಂಗಾಯುತರಲ್ಲಿರುವ ಮಾಜಿ ದಲಿತರು ಉಳಿದ ಲಿಂಗಾಯುತರಿಗಿಂತ ಭಿನ್ನವಾಗಿದ್ದಾರೆಂಬುದನ್ನು ಮೇಲುನೋಟದಲ್ಲೇ ಗುರುತಿಸಬಹುದು. ಮಾಂಸ ತಿನ್ನುವ, ತಿನ್ನದ ಎರಡೂ ಬಗೆಯ ಲಿಂಗಾಯತರು ನಮ್ಮ ನಡುವೆಯೇ ಇದ್ದಾರೆ.

ಇವತ್ತಿನ ಎಲ್ಲ ಮಠಗಳನ್ನು ಗಮನಿಸಿದರೂ ಕೂಡ ಈ ಗುಂಪುಗಳ ಪ್ರತ್ಯೇಕತೆಯು ವಚನ ಚಳುವಳಿಯ ಭಿನ್ನಾಭಿಪ್ರಾಯುಗಳನ್ನು, ಸೋಲನ್ನು ಪ್ರತಿಬಿಂಬಿಸುತ್ತಿವೆ. ಪಂಚಾಚಾರ್ಯ ಪರಂಪರೆಯುವರು ಉಳಿದೆಲ್ಲ ಲಿಂಗಾಯತರಿಗಿಂತಲೂ ತಾವೇ ಶ್ರೇಷ್ಠ ಎಂದು ಭಾವಿಸಿ ಬಸವಣ್ಣನನ್ನು ತಿರಸ್ಕರಿಸಿ ವೈಷ್ಣವ ಮೂಲದ ಸಂವೇದನೆಯಲ್ಲಿ ಮಠಗಳನ್ನು ಕಟ್ಟಿಕೊಂಡಿದ್ದಾರೆ. ಬಸವಣ್ಣನನ್ನು ಗಾಢವಾಗಿ ದೈವ ಎಂದು ಭಾವಿಸುವ ವಿರಕ್ತ ಪರಂಪರೆಯು ಪಂಚಾಚಾರ್ಯರಿಗಿಂತ ಹೊರತಾಗಿ ಮಠಗಳನ್ನು ರೂಪಿಸಿಕೊಂಡಿದೆ. ಇವೆರಡಕ್ಕೂ ಹೊರತಾಗಿ ದಲಿತ ಮೂಲದ ಮಠಗಳೂ ಇವೆ. ಹಾಗೆಯೇ ಮಧ್ಯಮ ಜಾತಿಯ ಗುಣವನ್ನೂ, ಮೂಲವನ್ನೂ ಸೂಚಿಸುವ ಮಠಗಳಿವೆ. ಲಿಂಗಾಯತರಲ್ಲೇ ಇನ್ನೂರಕ್ಕೂ ಮೀರಿದ ಉಪ ಗುಂಪುಗಳಿವೆ. ಇವೆಲ್ಲವೂ ಬಸವಣ್ಣನ ಕಾಲದ ಸಂವೇದನೆಯಿಂದ ಬದಲಾಗಿ ಆಧುನಿಕ ಶಕ್ತಿರಾಜಕಾರಣದಲ್ಲಿ ಲೀನವಾಗುತ್ತಿವೆ. ನಿಜವಾದ ಲಿಂಗಾಯತರು ಯಾರೆಂಬ ಬಗ್ಗೆ ಒಳಗೊಳಗೇ ಪೈಪೋಟಿಯಿದೆ. ಬಸವಣ್ಣನ ಪರಂಪರೆಗೆ ಒಳಗಾಗಿದ್ದ ಅನೇಕ ಲಿಂಗಾಯತ ಸಮುದಾಯಗಳು ತಮ್ಮ ತಮ್ಮ ಪ್ರಾದೇಶಿಕ ಭೇದವನ್ನಿನ್ನೂ ಬಿಟ್ಟುಕೊಟ್ಟಿಲ್ಲ. ಒಂದನ್ನೊಂದು ಬೆರೆಯುವುದಕ್ಕೆ ಅನೇಕ ತಡೆಗಳನ್ನು ತಾವೇ ರೂಪಿಸಿಕೊಂಡಿರುವುದು ಮತ್ತೆ ಜಾತಿ ಶ್ರೇಣಿಯನ್ನು ಕಟ್ಟಿಕೊಂಡಂತಾಗಿದೆ. ವಚನ ಚಳುವಳಿಯಲ್ಲಿ ಬಲಿಷ್ಠವಾದ ಸಮುದಾಯಗಳು ಮಾತ್ರ ಮೇಲೆ ಬಂದು ಸ್ವತಃ ಲಿಂಗಾಯತರೆನಿಸಿಕೊಂಡೂ ಹಾಗೇ ಉಳಿದಿರುವ ಕೆಳಜಾತಿಗಳ ಲಿಂಗಾಯತರೂ ಇದ್ದಾರೆ. ಈ ಸ್ಥಿತಿಯಲ್ಲಿ ವಚನ ಸಾಹಿತ್ಯವು ಜಾತಿ ಮತ್ತು ಮತೀಯ ನಂಬಿಕೆಗಳಿಗೆ ಬಳಕೆಯಾಗುತ್ತಿರುವ ಅಪಾಯವೂ ನಿರಂತರವಾಗಿ ಸಾಗುತ್ತಿದೆ.

ಲಿಂಗಾಯತರಲ್ಲೆ ಅನೇಕ ಕೆಳಜಾತಿಗಳು ಅರ್ಧ ದಲಿತರಾಗಿ ಇನ್ನರ್ಧ ಕೆಳಮಧ್ಯಮ ಲಿಂಗಾಯತರಾಗಿ ಪ್ರಧಾನ ಮಠಗಳ ರಕ್ಷಣೆಯಿಲ್ಲದೆ ಕೊರಗುವುದು ಇವತ್ತು ಗುಟ್ಟಾಗಿ ಉಳಿದಿಲ್ಲ. ಇಂಥವರೆಲ್ಲ ವಚನ ಚಳಿವಳಿಯಿಂದ ದಿಕ್ಕಾಪಾಲಾಗಿ ತಮ್ಮ ಮೂಲ ಜಾತಿಗಳಿಗೆ ಹಿಂತಿರುಗದೆ ತ್ರಿಶಂಕುಗಳಂತಾದವರು. ಇದರಲ್ಲಿ ಪೂರ್ಣವಾಗಿ ತಮ್ಮ ಜಾತಿಗಳಿಗೆ ಹಿಂತಿರುಗಿದವರ ಸಾಂಸ್ಕೃತಿಕ ಚರಿತ್ರೆಯನ್ನು

ಯಾರೂ ಸರಿಯಾಗಿ ಇವತ್ತಿಗೂ ಗುರುತಿಸಿಲ್ಲ. ಬಸವಣ್ಣನ ತತ್ವಗಳೆಲ್ಲ ಮಠಗಳ ಸ್ವರೂಪಕ್ಕೆ ತಿರುಗಿದಂತೆ ಅವುಗಳಿಗೆ ಧಾರ್ಮಿಕ ಚಹರೆ ಬಂದುಬಿಟ್ಟಿತು. ದಲಿತರನ್ನು ಅಥವಾ ಲಿಂಗಧಾರಣೆಗೊಂಡಿದ್ದ ದಲಿತರನ್ನು ಎರಡನೇ ದರ್ಜೆಗಿಂತಲೂ ಕೀಳಾಗಿ ಕಂಡಿದ್ದನ್ನು ಊಹಿಸಬಹುದು ಇವತ್ತಿಗೂ ದಲಿತ ಕ್ರಿಶ್ಚಿಯನ್ನರ ಪಾಡನ್ನು ನಾವು ನೋಡುತ್ತಿದ್ದೇವೆ. ಹೀಗೆಯೇ ಬಸವಣ್ಣನ ನಂತರಕ್ಕೆ ಉಂಟಾದ ಸಂಕಷ್ಟದಲ್ಲಿ ಅನೇಕ ದಲಿತರು ತಮ್ಮ ಸ್ವಂತ ಜಾತಿಗಳಿಗೆ ಹಿಂತಿರುಗಿದ್ದಾರೆ. ಇವರ ಪೈಕಿ ಹೊಲೆಮಾದಿಗರು, ಕುರುಬರು, ಬೇಡರು ವಿಶೇಷವಾಗಿದ್ದಾರೆ. ಬಸವಣ್ಣನ ನಂತರಕ್ಕೆ ಈ ಸಮುದಾಯಗಳಿಗೆ ಒಂದು ಬಗೆಯ ಸಾಂಸ್ಕೃತಿಕ ಅರಾಜಕತೆ ಉಂಟಾಗಿದೆ. ಬಸವಣ್ಣನಂತಹ ವ್ಯಕ್ತಿತ್ವಕ್ಕಿಂತ ಭಿನ್ನವಾದ ತನ್ನದೇ ದ್ರಾವಿಡ ಮೂಲ ಶೈಲಿಯ ಸಾಂಸ್ಕೃತಿಕ ವೀರರನ್ನು ಕಟ್ಟಿಕೊಳ್ಳಬೇಕೆಂಬ ಚಾರಿತ್ರಿಕ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಹೀಗಾಗಿಯೇ ಹನ್ನೆರಡನೇ ಶತಮಾನದ ನಂತರಕ್ಕೆ ಬಹುರೂಪಿ ದೇಶೀ ಕಾವ್ಯ ಪರಂಪರೆ ಬೆಳೆದು ಬಂದಿರುವುದು. ದಲಿತರು ಮಠಕೇಂದ್ರಿತ ಶೈವ ಧರ್ಮಕ್ಕೆ ಬದ್ಧರಾಗದೆ, ಸ್ಥಾವರಕ್ಕೆ ಅಂಟಿಕೊಳ್ಳದೆ, ಬಯಲು ಆಲಯದಂತಹ ಜನಸಾಮಾನ್ಯರ ಕನಸು–ಮನಸುಗಳ ಪ್ರತಿರೂಪದಂತಹ ಪ್ರಾದೇಶಿಕ ಸಾಂಸ್ಕೃತಿಕ ವೀರರನ್ನು ಪಡೆದುಕೊಂಡರು.

ಹದಿನಾರು–ಹದಿನೇಳನೆ ಶತಮಾನದ ಹೊತ್ತಿಗೆ ಕರ್ನಾಟಕದ ಉದ್ದಕ್ಕೂ ದಲಿತ ಸಮುದಾಯಗಳು ತಮತಮಗೆ ಅನುರೂಪವಾದಂತಹ ಸಾಂಸ್ಕೃತಿಕ ವೀರರ ಕಾವ್ಯ ವ್ಯವಸ್ಥೆಯನ್ನು ರೂಪಿಸಿಕೊಂಡವು. ಮಲೆಮಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ, ಜುಂಜಪ್ಪನಂತಹ ವ್ಯಕ್ತಿತ್ವಗಳ ಸುತ್ತ ಕಾವ್ಯವನ್ನು ಕಟ್ಟಿ ಬಸವಣ್ಣನ ವಚನ ಶೈಲಿಯನ್ನು ಕೈಬಿಟ್ಟು ದೇಶೀ ಶೈಲಿಯ ಜನಪದ ಕಾವ್ಯ ನೀತಿಯನ್ನು ಅನುಸರಿಸಿದರು. ಹಾಗೆಯೇ ಪ್ರಮುಖವಾದ ಎಲ್ಲ ಜನಪದ ಮಹಾಕಾವ್ಯಗಳಲ್ಲಿ ತಪ್ಪದೆ ಬಸವಣ್ಣನ ಕಲ್ಯಾಣದ ಕ್ರಾಂತಿಯನ್ನು ಟೀಕಿಸುವುದನ್ನು ಕಾಣಬಹುದು. ನಾಯಿ, ನರಿ, ಕತ್ತೆ, ಕೋಳಿಗಳಿಗೆಲ್ಲ ಬಸವಣ್ಣ ಲಿಂಗಧಾರಣೆ ಮಾಡಿದ ಎಂದು ಆತನನ್ನು ಬಲವಾಗಿ ಟೀಕಿಸಿ ನಿಜವಾದ ಶರಣರು ತಾವೆಂದು ಪ್ರತಿಪಾದಿಸಿಕೊಳ್ಳುತ್ತವೆ. ದಲಿತ ಮೂಲದ ವಚನ ಚಳುವಳಿಯನ್ನು ಬಸವಣ್ಣನ ನಂತರಕ್ಕೆ ಅದೇ ದಲಿತ ಮೂಲದ ಈ ಕಾವ್ಯ ನಾಯಕರು ಪ್ರಶ್ನಿಸುವುದು ವೈರುಧ್ಯದಂತಿದೆ. ದಲಿತ ವಚನಕಾರರ ಆರಂಭದ ಆಶಯಗಳನ್ನೇ ಮಲೆಮಾದೇಶ್ವರ, ಮಂಟೇಸ್ವಾಮಿಗಳು ಹದಿನಾರನೇ ಶತಮಾನದ ಹೊತ್ತಿಗೆ ಪುನರ್‌ಸೃಷ್ಟಿಸಲು ಬಸವಣ್ಣನ ಕ್ರಾಂತಿಕಾರಿ ದಾರಿಯನ್ನು ಬಿಟ್ಟು ಪವಾಡ ಶೈಲಿಯಲ್ಲಿ, ಮಾಂತ್ರಿಕ ರೀತಿ–ನೀತಿಗಳಿಂದ ಮಾಡಿರುವುದು ಸಾಂಸ್ಕೃತಿಕ ರಾಜಕಾರಣದಂತಿದೆ. ಜಾತಿ ವಿನಾಶವನ್ನು ವೈಚಾರಿಕವಾದ ಗದ್ದಲದಿಂದ, ಗುಂಪುಗಳ ಸ್ವಹಿತ ಹೋರಾಟದಿಂದ ಮಾಡಲು ಸಾಧ್ಯವಿಲ್ಲ ಎಂಬಂತೆ ಈ ಇಬ್ಬರೂ ತಮ್ಮ ಸಂಸ್ಕೃತಿಯ ಎಲ್ಲೆಯನ್ನು ವಿಸ್ತರಿಸುವಂತಹ ಪವಾಡಗಳನ್ನು ಮಾಡತೊಡಗುತ್ತಾರೆ.

ಜನಪದ ಮಹಾಕಾವ್ಯಗಳೆಲ್ಲ ಹುಟ್ಟಿದ್ದು ವಚನ ಚಳುವಳಿಯ ವೈಫಲ್ಯದ ನಂತರವೇ ಎಂಬುದು ಆ ಕಾವ್ಯದ ಸಂಪ್ರದಾಯಗಳಿಂದಲೇ ತಿಳಿಯುತ್ತದೆ. ಕೆಳಜಾತಿಗಳು ಬಸವಣ್ಣನ ವಚನಗಳನ್ನು ಹಾಡುತ್ತ ಕೂರಬೇಕಾದ ಅಗತ್ಯವಿರಲಿಲ್ಲ. ಆ ವೇಳೆಗಾಗಲೇ ಅವು ಒಂದು ಜಾತಿಯ ಆಸ್ತಿಯಂತೆ ಗುರುತಿಸಲ್ಪಡುತ್ತಿದ್ದವು.

ಹಾಗೆ ಆತನ ವಚನಗಳನ್ನು ತಲೆ ಮೇಲೆ ಹೊತ್ತುಕೊಂಡು ಭಜಿಸುವುದಕ್ಕೂ ಅವಕಾಶಗಳಿರಲಿಲ್ಲ. ಆದ್ದರಿಂದಲೇ ಅವರು ವಚನ ಚಳುವಳಿಯ ನಂತರದ ಕಾಲದಲ್ಲಿ ದೇಶೀ ಜನಪದ ಕಾವ್ಯಗಳ ಚಳುವಳಿಯನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯರ ನಂತರದ ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪರ ಮನೋಧರ್ಮಗಳಲ್ಲಿ ಸಾಂಸ್ಕೃತಿಕ ವಿಕಾಸ ಉಂಟಾಗಿದೆ. ಇಡೀ ಜನಾಂಗದ ಅನೇಕ ಶತಮಾನಗಳ ಅನುಭವ ಧರ್ಮವನ್ನು ಗಾಢವಾಗಿ ನಿರೂಪಿಸುವುದಕ್ಕೆ ಸಮಷ್ಟಿಯಾಗಿ ಸಮುದಾಯಗಳು ಆಯಾ ಕಾವ್ಯದಲ್ಲಿ ತೊಡಗಿಸಿಕೊಂಡಿವೆ. ಬಸವಣ್ಣನ ನಂತರ ನಿಧಾನವಾಗಿ ಹುಟ್ಟಿಕೊಂಡ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಹೊಲೆಮಾದಿಗರೆಂಬುದನ್ನು ನೋಡಿದರೆ ಇವರಿಬ್ಬರೇ ಗಾಢವಾಗಿ ವಚನ ಚಳುವಳಿಯನ್ನು ದಾಟಿ ಮೂಲದ ದಲಿತ ಸಂವೇದನೆಯನ್ನು ಪ್ರತಿಬಿಂಬಿಸುವಂತೆ ಕಾಣುತ್ತಾರೆ.

ಬಸವಣ್ಣನ ವಚನಗಳೆಲ್ಲವೂ ಬಿಡಿಬಿಡಿಯಾದ ಅನೇಕರ ನುಡಿಗಳಂತೆ ಕಂಡರೆ ದಲಿತರ ಜನಪದ ಕಾವ್ಯಗಳು ಸಮಷ್ಟಿಯಾದ ಸಂಯುಕ್ತ ಸಂವೇದನೆಯನ್ನು ಇಡಿಯಾಗಿ ಹಾಡುವಂತೆ ತೋರುತ್ತವೆ. ವಚನ ಚಳುವಳಿಗಳಿಗೆ ಸಾಧ್ಯವಾಗದಿದ್ದಂತಹ ಸಮಷ್ಟಿ ಅನುಭವದ ಸಂಯುಕ್ತ ಸಂವೇದನೆ ಜನಪದ ಮಹಾಕಾವ್ಯಗಳನ್ನು ಹಾಡುತ್ತ ನಡೆದ ಕೆಳಜಾತಿಗಳಿಗೆ ಉಂಟಾಗಿದೆ. ಬಸವಣ್ಣನ ವಚನಗಳಲ್ಲೆಲ್ಲ ಬಹು ಸೂಕ್ಷ್ಮವಾದ ದಲಿತ ಸಂವೇದನೆ ಇದೆ ಎಂಬುದನ್ನು ಮಾನವೀಯ ಸೂಕ್ಷ್ಮ ಸಂವೇದನೆ ಇರುವ ಸಂಶೋಧಕರು ಒಪ್ಪಬಲ್ಲರು. ಹಿಂದುಳಿದ ವರ್ಗದ ಪಣ ಸಮಾಜದವರು, ದಲಿತರು, ಮಹಿಳೆಯರು, ನಾಲಗೆ ಇಲ್ಲದವರು ಬಸವಣ್ಣನ ಅಂಕಿತನಾಮದಲ್ಲಿ ತಮ್ಮ ಅಳಲನ್ನು, ಕನಸನ್ನು ತೋಡಿಕೊಂಡಿದ್ದಾರೆ. ಬಸವಣ್ಣನ ನಂತರದಲ್ಲಿ ಅವನ್ನು ಸಂಪಾದಿಸುವವರು ಇವೆಲ್ಲವೂ ಬಸವಣ್ಣನ ವಚನಗಳೆಂದೇ ಭಾವಿಸಿದ್ದಾರೆ. ದಲಿತರಿಗೇ ಸೀಮಿತ ಅನ್ನಿಸುವಂತಿರುವ ಪದಪುಂಜಗಳು, ನುಡಿಗಟ್ಟು, ಉಪಮೆ, ಸಂಕೇತಗಳು ಬಸವಣ್ಣನ ಹೆಸರಿನ ವಚನಗಳಲ್ಲಿರುವುದನ್ನು ಬಹಳ ಸುಲಭವಾಗಿಯೇ ಗ್ರಹಿಸಬಹುದು. ಅನೇಕ ಶಿವಶರಣೆಯರು ಬಸವಣ್ಣನ ಅಂಕಿತದಲ್ಲಿ ತಮ್ಮ ವಚನಗಳನ್ನೆಲ್ಲ ಧಾರೆ ಎರೆದುಕೊಟ್ಟಿರುವಂತಿದೆ. ಬಸವಣ್ಣನ ವಚನಗಳನ್ನು ಸಂಪಾದಿಸಿಕೊಟ್ಟಿರುವ ವಿದ್ವಾಂಸರು ಸಾರಾಸಗಟಾಗಿ ಸಾವಿರಾರು ವಚನಗಳೆಲ್ಲವೂ ಸ್ವಂತ ಅವನವೇ ಎಂದು ತೀರ್ಮಾನಿಸಿರುವುದು ಆಶ್ಚರ್ಯಕರವಾಗಿದೆ. ದಲಿತರು, ಮಹಿಳೆಯರು ತಮ್ಮ ಅಸ್ತಿತ್ವದ ಪ್ರತಿಪಾದನೆಗಾಗಿ ನೂರಾರು ವಚನಗಳನ್ನು ತಾವೇ ಕಟ್ಟಿ ಅವನ್ನು ಬಸವಣ್ಣನ ಅಂಕಿತದ ಮೂಲಕ ಬಸವಣ್ಣನ ಸಾಕ್ಷಿಯಲ್ಲೇ ಸಮಾಜಕ್ಕೆ ಸಲ್ಲಿಸಿರಲಿಕ್ಕೆ ಸಾಧ್ಯವಿದೆ. ಲಿಂಗಾಯತತತ್ವವನ್ನು ಪ್ರತಿಪಾದಿಸಲು ಖೋಟಾ ವಚನಗಳನ್ನು ಸೃಷ್ಟಿಸಿದ್ದಕ್ಕಿಂತ ಭಿನ್ನವಾಗಿ ಇಂತಹ ವಚನಗಳ ಸೇರ್ಪಡೆಯೂ ಆಗಿದೆ ಎಂಬುದನ್ನು ಬಸವಣ್ಣನ ವಚನಗಳನ್ನು ವಿವಿಧ ರೀತಿಗಳಿಂದ ಶೋಧಿಸಿ ಪತ್ತೆ ಮಾಡಬಹುದು.

ಈಗ ಕಾಲ ಬದಲಾಗಿದೆ. ದಲಿತರು ಆರಂಭಿಸಿದ ವಚನ ಚಳುವಳಿ ಬಸವಣ್ಣನ ನಂತರ ಸ್ಥಾವರವಾಗಿದೆ. ಜಂಗಮರಂತೆ ದಲಿತರು ಬಹುರೂಪಿ ಜನಪದ ಕಾವ್ಯಗಳ ಸಾಂಸ್ಕೃತಿಕ ನಾಯಕರು ರೂಪಾಂತರವಾಗುತ್ತಿದ್ದಾರೆ. ಇವತ್ತಿಗೂ

ಮತಾಂತರಗಳು ಉಂಟಾಗುತ್ತಿವೆ. ಒಂದು ಕಾಲದ ಕೆಲವು ದಲಿತರು ಈಗ ಲಿಂಗಾಯತರಾಗಿಯೂ ಸ್ಥಾನಾಂತರಗೊಂಡಿದ್ದಾರೆ. ಇವರಿಬ್ಬರ ನಡುವೆ ಆಗಾಗ ಜಾತಿ ಕಲಹಗಳು ಘಟಿಸುತ್ತಲೂ ಇರುತ್ತವೆ. ಎಷ್ಟೆಲ್ಲ ಕಾಲ ಬದಲಾಗಿದ್ದರೂ ವಚನ ಚಳುವಳಿಯ ಮೂಲ ಆಶಯದ ದಾಹ ಮಾತ್ರ ಇಂಗಿಲ್ಲ. ಇವತ್ತು ಲಿಂಗಾಯತರು ಹಿಂದೂಗಳೋ, ಹಿಂದೂಗಳಲ್ಲವೋ ಎಂಬ ರಾಜಕೀಯ ಮೂಲದ ಪ್ರಶ್ನೆಗಳು ಎದುರಾಗುತ್ತಿವೆ. ಇವನ್ನೆಲ್ಲ ಯಾವ ರೀತಿಯಲ್ಲೂ ಕಾಣದೆ ಎಲ್ಲೋ ದೂರದಲ್ಲಿ ಮುಗ್ಧವಾಗಿ ಉಳಿದಿರುವ ಬಡ ಲಿಂಗಾಯತರು ಆಧುನಿಕ ಯುಗದ ಸವಾಲುಗಳ ನಡುವೆ ಸಿಲುಕುತ್ತಿದ್ದಾರೆ. ವಿಚಿತ್ರ ವಿಪರ್ಯಾಸ ಎಂದರೆ: ವಚನ ಚಳುವಳಿಯನ್ನು ಆರಂಭಿಸಿದಂತಹ ದಲಿತರು, ಪಣಸಮಾಜದ ನೂರಾರು ಅಂಚಿನ ಜಾತಿಯ ಹಿಂದುಳಿದ ವರ್ಗಗಳು ಇವತ್ತು ನೂರೆಂಟು ಹೋಳಾಗಿ ಎಡ–ಬಲ ಗುಂಪಾಗಿ ದಲಿತ ಒಕ್ಕೂಟಗಳೇ ಚದುರಿಹೋಗಿರುವಂತದನ್ನು ನೋಡಿದರೆ; ವೈದಿಕ ಜಾತಿ ವ್ಯವಸ್ಥೆ, ಅದರ ಶಕ್ತಿರಾಜಕಾರಣ ಮತ್ತು ಅಪವಿತ್ರ ಸಾಮಾಜಿಕ ವಿಕೃತಿಗಳು ಎಂತಹ ಭಯಂಕರ ಶಕ್ತಿಯಲ್ಲಿ ಸಮುದಾಯಗಳನ್ನು ಆಳುತ್ತಿರುತ್ತವೆ ಎಂಬುದನ್ನು ಮತ್ತೆ ಮತ್ತೆ ಪ್ರಶ್ನಿಸುತ್ತ ಚಿಂತಿಸಬೇಕಾಗಿರುತ್ತದೆ. ಈ ಬಗೆಯ ಮನೋಧರ್ಮಗಳೆಲ್ಲವೂ ನಮ್ಮ ಭಾಷೆ, ಸಂಸ್ಕೃತಿ, ಸಾಹಿತ್ಯ, ಚರಿತ್ರೆ ಹಾಗೂ ವರ್ತಮಾನದ ರಾಜಕೀಯ ಹಾಗೂ ಆರ್ಥಿಕ ಅಭಿವೃದ್ಧಿಯ ಭಾಗವಾಗಿಯೇ ಬೆಳೆಯುತ್ತ ಬಂದಿರುವುದು ಚೋದ್ಯವಾಗಿದೆ.

*****

ಪರಿಚಯ :

ಅತ್ಯಂತ ಹರಿತವಾದ ಒಳನೋಟಗಳಿಂದ ಜಡ್ಡುಗಟ್ಟಿದ ವ್ಯವಸ್ಥೆ ಮತ್ತು ಚಿಂತನೆಗಳಿಗೆ ಶಾಕ್ ಕೊಡುವುದರಲ್ಲಿ ಎಲ್ಲಿಲ್ಲದ ಹುರುಪು ತೋರುವ ಮೊಗಳ್ಳಿ ಗಣೇಶ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪ್ರವಾಚಕರಾಗಿದ್ದಾರೆ. ಇಂದ್ರಿಯಗಳ ಅನುಭವಗಳನ್ನು ಅಕ್ಷರಗಳಲ್ಲಿ ಕಟ್ಟಿಹಾಕುವ ತುಡಿತ ಅವರದು. ವಾಸ್ತವದಲ್ಲಿ ಅಡಗಿರುವ ಮಾಂತ್ರಿಕತೆಯನ್ನು ಕಥೆ ಕಾದಂಬರಿಗಳಲ್ಲಿ ಹುಡುಕುವ ಮೊಗಳ್ಳಿ ಗಣೇಶ್ ಶೋಷಿತ ಮನಸ್ಸಿನ ಪಾದರಸ ಚುರುಕಿನ ವಿಮರ್ಶೆಯನ್ನು ಚಿಂತನೆಗಳಲ್ಲಿ ಹರಿಯಬಿಡುತ್ತಾರೆ. ಅತ್ಯಂತ ಕಠಿಣವಾದ ಒಳನೋಟ, ಉತ್ಕಟ ಭಾವ ನಿರೂಪಣೆ, ಸಮಗ್ರ ಗ್ರಹಿಕೆ ಅವರ ಎಲ್ಲ ಬರಹಗಳ ಸಂಯುಕ್ತ ಗುಣ. ಮನುಷ್ಯರ ಆದಿಯ ಪ್ರಜ್ಞೆಯಿಂದ ಹಿಡಿದು ಆಧುನಿಕೋತ್ತರ ಸಮಾಜಗಳ ಭಗ್ನತೆಯವರೆಗಿನ ಹುಡುಕಾಟಗಳನ್ನು ಹಿಂಬಾಲಿಸಿಕೊಂಡು ಮೊಗಳ್ಳಿಯವರ ಸೃಜನಶೀಲ ಪಯಣ ಸಾಗುತ್ತದೆ. ಸಾಹಿತ್ಯ ಸಾಧನೆಗಾಗಿ ಕಾವ್ಯಾನಂದ ಪ್ರಶಸ್ತಿ, ವರ್ಧಮಾನ ಸಾಹಿತ್ಯ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡಮೆ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡಮೆ ಪ್ರಶಸ್ತಿ, ದೆಹಲಿಯ ರಾಷ್ಟ್ರೀಯ ಕಥಾ ಪ್ರಶಸ್ತಿ ಮುಂತಾದುವುಗಳಿಂದ ಮೊಗಳ್ಳಿ ಪುರಸ್ಕೃತರಾಗಿದ್ದಾರೆ. ಇವರ ಕಥೆ ಕಾದಂಬರಿಗಳು ತಮಿಳು ಮತ್ತು ಇಂಗ್ಲೀಷ್ ಭಾಷೆಗಳಿಗೆ ಅನುವಾದವಾಗಿವೆ. ಮೊಗಳ್ಳಿಯವರ ಕೆಲವು ಮುಖ್ಯ ಕೃತಿಗಳು :

ಕನ್ನೆಮಳೆ, ಬುಗುರಿ, ತೊಟ್ಟಿಲು, ಅನಾದಿ, ದೇವಸ್ಮಶಾನ, ತಕರಾರು, ದಲಿತ ಕಥನ, ಆದಿಮ, ದಲಿತರು ಮತ್ತು ಜಾಗತೀಕರಣ, ದೇಶಿ.

ಬಸವಣ್ಣಗಿಂತ ಮೊದಲೇ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯನಂತಹ ಹತ್ತಾರು ದಲಿತ ವಚನಕಾರರು ಕ್ರೂರ ಜಾತಿ ವ್ಯವಸ್ಥೆಯ ವಿರುದ್ಧ ತಮ್ಮದೇ ಆದ ಒಂದು ಚಳುವಳಿಯನ್ನು ರೂಪಿಸಿಕೊಳ್ಳಲು ಸಜ್ಜಾಗುತ್ತಿದ್ದರು. ಅಂತಹ ಸಮಯದಲ್ಲಿ ಬಸವಣ್ಣ ವೈದಿಕ ಜಾತಿ ಪರಂಪರೆಯನ್ನು ತಿರಸ್ಕರಿಸಿ ಬೀದಿಗೆ ಬಂದಾಗ ಆತ ಅನಿವಾರ್ಯವಾಗಿ ಅಹಂಕಾರವಿಲ್ಲದವರೂ, ಮುಗ್ದರೂ ಆದ ಹೊಲೆಮಾದಿಗರ ಕೇರಿಯಲ್ಲಿ ತನ್ನ ಮುಂದಿನ ದಾರಿಯನ್ನು ಕಂಡುಕೊಳ್ಳಲು ಆ ದಲಿತ ಅನುಭಾವಿಗಳ ಜೊತೆ ಸೇರಿಕೊಂಡನೆಂದು ನಿರೂಪಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ದಲಿತ ವಚನಕಾರರು ತಮ್ಮ ಆಶಯ, ಕನಸುಗಳನ್ನು ಬಸವಣ್ಣನ ಮೂಲಕ ನಿರೂಪಿಸಲು ಯತ್ನಿಸಿದರೆ, ಕೆಳಜಾತಿಗಳ ಸಾಂಸ್ಕೃತಿಕ ಎಚ್ಚರವನ್ನು ಬಸವಣ್ಣ ಕವಿಸಂವೇದನೆಯಿಂದ ಅರಿತು ಅದನ್ನು ಸಾಮಾಜಿಕ ಜವಾಬ್ದಾರಿಯಿಂದ ವಿಸ್ತರಿಸುವ ಜವಾಬ್ದಾರಿಯನ್ನು ವಹಿಸಿಕೊಂಡ. ಈ ವಿಚಾರದಲ್ಲಿ ಲೇಖಕರ ಖಚಿತ ನಿಲುವೆಂದರೆ "ಬಹುತೇಕ ವಿದ್ವಾಂಸರು, ಪೀಠಾಧಿಪತಿಗಳು ಅಭಿಮಾನದಿಂದ ಹೇಳಿಕೊಳ್ಳುವಂತೆ ಬಸವಣ್ಣ ಎಂದು ದಲಿತರನ್ನು ಎಚ್ಚರಿಸಿದ ಎನ್ನುವ ಮಾತು ಸುಳ್ಳು. ಮೊದಲೇ ಎಚ್ಚರಗೊಂಡಿದ್ದ ದಲಿತ ವಚನಕಾರರ ಜೊತೆ ಸೇರಿ ಬಸವಣ್ಣನೇ ಸ್ವತಃ ಎಚ್ಚರಗೊಂಡಿದ್ದಾನೆ" ಎನ್ನುವುದನ್ನು ಅಷ್ಟೊಂದು ಸುಲಭವಾಗಿ ನಿರಾಕರಿಸಲಾಗದು. ಕನ್ನಡದ ಪ್ರಾಚೀನ ಕಾವ್ಯಗಳಲ್ಲೆಲ್ಲೂ ಬಸವಣ್ಣನಂತಹ ಜಾತ್ಯತೀತ ಸಂವೇದನೆಯನ್ನು ಕಾಣಲು ಸಾಧ್ಯವಿಲ್ಲ. ಆ ಮಟ್ಟಿಗೆ ಬಸವಣ್ಣನ ಕ್ರಾಂತಿಯಲ್ಲಿ ದಲಿತರಿಗೆ ತಕ್ಕ ನ್ಯಾಯ ಸಿಗದಿದ್ದರೂ ಕಾವ್ಯಾತ್ಮಕ ನ್ಯಾಯವಂತೂ ದೊರೆತಂತಾಗಿದೆ. ಬಸವಣ್ಣನ ಕ್ರಾಂತಿಯಲ್ಲಿ ದಲಿತ ಸಂವೇದನೆ ಇತ್ತೇ ವಿನಃ ದಲಿತ ನಾಯಕತ್ವ ಇರಲಿಲ್ಲ. ದಲಿತರಿಗೆ ತಕ್ಕ ಪ್ರಾತಿನಿಧ್ಯ ಇಲ್ಲದೇ ಹೋದುದ್ದರಿಂದಲೇ ಬಸವಣ್ಣನ ನಂತರ ದಲಿತರಿಗೆ ಸಮರ್ಥ ಶರಣರು ಸಿಗಲಿಲ್ಲ. ಮುಂದೆ ಮಂಟೇಸ್ವಾಮಿ, ಮಾದೇಶ್ವರರಂಥ ದಲಿತ ನಾಯಕರು ಕಾಣಿಸಿಕೊಳ್ಳುವ ಹೊತ್ತಿಗೆ ನೂರಾರು ವರ್ಷಗಳೇ ಕಳೆದುಹೋಗಿದ್ದವು. ಬಸವಣ್ಣ ಬದುಕಿದ್ದ ಕಾಲದವರೆಗೂ ವಚನ ಚಳುವಳಿ ಪರೋಕ್ಷವಾಗಿ ವೈದಿಕ ವಿರೋಧಿ ಚಳಿವಳಿಯೇ ಆಗಿತ್ತು. ದಲಿತರ ಸಾಂಸ್ಕೃತಿಕ ನಾಯಕ ಬಸವಣ್ಣನೇ ಆಗಿದ್ದ. ವಿಶಾಲ ಮಾನವೀಯ ಕನಸುಗಳಿಂದ ಅನೇಕ ಕೆಳಜಾತಿಗಳನ್ನು ಕಾಯಕ ಧರ್ಮಕ್ಕೆ ರೂಪಂತರಿಸಿದ್ದ, ಮತಾಂತರಿಸಿದ್ದ ಬಸವಣ್ಣನ ಆದರ್ಶವನ್ನು ಮುಂದುವರಿಸುವ ಉದ್ದೇಶ ಮುಂದಿನವರಿಗಿರಲಿಲ್ಲ. ವಚನ ಚಳುವಳಿಯ ವೈಫಲ್ಯದ ನಂತರ ಕರ್ನಾಟಕದ ಉದ್ದಕ್ಕೂ ದಲಿತ ಸಮುದಾಯಗಳು ತಮತಮಗೆ ಸರಿಹೊಂದುವ ಸಾಂಸ್ಕೃತಿಕ ವೀರರ ಕಾವ್ಯಗಳನ್ನು ಸೃಷ್ಟಿಸಿದವು. ಕೆಳಜಾತಿಗಳು ಬಸವಣ್ಣನ ವಚನಗಳನ್ನು ಹಾಡುತ್ತ ಕೂರದೆ, ದೇಶೀ ಜನಪದ ಕಾವ್ಯಗಳ ಚಳುವಳಿಯನ್ನು ರೂಪಿಸಿಕೊಂಡವು. ಬಸವಣ್ಣನ ವಚನಗಳು ಬಿಡಿಬಿಡಿಯಾದ ಅನೇಕರ ನುಡಿಗಳಂತೆ ಕಂಡರೆ ದಲಿತರ ಜನಪದ ಕಾವ್ಯಗಳು ಸಮಷ್ಟಿಯಾದ ಸಂಯುಕ್ತ ಸಂವೇದನೆಯನ್ನು ಇಡಿಯಾಗಿ ತುಂಬುವ ಮೂಲಕ ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಚರಿತ್ರೆ ಹಾಗೂ ವರ್ತಮಾನದ ರಾಜಕೀಯದ ಭಾಗವಾಗಿ ಬೆಳೆದುಬಂದಿವೆ.

೧೨. ಮಹಿಳೆಯರ ಅಸಾಂಪ್ರದಾಯಿಕ ಸಾಹಸ

ವೀಣಾ ಬನ್ನಂಜೆ

ಒಮ್ಮೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಚಾಣಕ್ಯನ ಅರ್ಥಶಾಸ್ತ್ರದ ಉಪನ್ಯಾಸ ನಡೆಸಿದ್ದರು. ಹಲವು ಸಭಿಕರಲ್ಲಿ ನಾನೂ ಒಬ್ಬಳು. ಅವರ ಮಾತು ಜೀವ ಬೆಳವಣಿಗೆಯ ಕುರಿತು ಇತ್ತು. ಪ್ರತೀ ತಂದೆ ತನ್ನ ಮಗನಲ್ಲಿ, ಮಗ ಅವನ ಮಗನಲ್ಲಿ ಹೀಗೆ ತನ್ನ ಕಂಟಿನ್ಯೂಟಿಯನ್ನು ಕಾಣುತ್ತಿರುತ್ತಾರೆ. ಅಥವಾ ಪ್ರತೀ ಗಂಡು ತನ್ನ ಗಂಡು ಸೃಷ್ಟಿಯಲ್ಲಿ ಜೀವ ಬೆಳವಣಿಗೆಯನ್ನು ಕಾಣುತ್ತಿರುತ್ತಾನೆ. ಹೀಗೆ ಅವರ ಮಾತು ಮುಗಿದಿತ್ತು. ಮುಂದೆ ಚರ್ಚೆಯ ಸಂದರ್ಭ. ನಾನು ಎದ್ದು ನಿಂತು ಪ್ರಶ್ನಿಸಿದೆ. "ಪ್ರತೀ ಹೆಣ್ಣು ಯಾರಲ್ಲಿ ಕಂಟಿನ್ಯೂಟಿ ಕಾಣಬೇಕು? ತಾಯಿಯ ಜೀವಪರಂಪರೆಯನ್ನು ಮುಂದುವರೆಸುವ ಅಪೇಕ್ಷೆ ಅವಳಿಗಿಲ್ಲವೆ? ಇದ್ದರೆ ಅದು ಯಾರ ಮುಖಾಂತರ? ಮಗಳು ಸಾಧುವಲ್ಲವೆ? ನಮ್ಮ ತಂದೆ "ಗಂಡು ಜೀವ ತನ್ನನ್ನು ಬೆಳೆಸುವ ಕಡೆಗೆ ಹೆಣ್ಣು ಪಾತ್ರವಾಗಿ ಕ್ಷೇತ್ರವಾಗಿ ಸಹಕರಿಸುತ್ತಾಳೆ. ಅದೇ ಅವಳ ಸಾರ್ಥಕತೆ. ಅವಳಿಗೆ ಕಂಟಿನ್ಯೂಟಿಯ ಮಾತು ಬರುವುದಿಲ್ಲ" ಎಂಬರ್ಥದ ಉತ್ತರ ನೀಡಿದ್ದರು. ನಾನು ಆಗಿನ್ನೂ ೧೮ರ ಹುಡುಗಿ. ತಂದೆಯನ್ನು ಹಾಗೆ ಪ್ರಶ್ನಿಸಬಾರದೆಂದು ಅಲ್ಲಿರುವ "ಹಿರಿಯರು" ನನ್ನನ್ನು ತಿದ್ದಿ ನುಡಿದಿದ್ದರು. ನನ್ನ ಪ್ರಶ್ನೆ ತಂದೆಯಾಚೆಗೂ ಚಾಚಿಯೇ ಇತ್ತು.

ಅದಾಗಿ ಆರು ವರುಷಗಳ ಬಳಿಕ ಬಸ್ಸಿನಲ್ಲಿ ಪ್ರತ್ಯೇಕತೆ ಬೇಕೆ ಬೇಡವೆ ಎಂಬ ಚರ್ಚೆಯ ಬಿಸಿಯಿದ್ದ ಕಾಲ. ನಮ್ಮಲ್ಲಿಗೆ ತೇಜಸ್ವಿನಿ ನಿರಂಜನ ಬಂದಿದ್ದರು. ಅವರು ಪ್ರತ್ಯೇಕತೆಯನ್ನು ಮೀಸಲಾತಿಯನ್ನು ಅನುಮೋದಿಸಿ ಮಾತಿಗೆ ತೊಡಗಿದ್ದರು. ನಾನು "ಮೀಸಲಾತಿ ಬೇಡ. ಲಿಂಗಾಧಾರಿತವಿರಲಿ, ಜಾತ್ಯಾಧಾರಿತವಿರಲಿ ಬೇಡ. ಅದು ನಮ್ಮ ಬೆಳವಣಿಗೆಯನ್ನು ತಡೆಯುತ್ತದೆ. ಬಸ್ಸಿನಲ್ಲಿ ಸೀಟು ಕಾಯುವ ಪ್ರತ್ಯೇಕತೆಯಂತೂ ಬೇಡವೇ ಬೇಡ. ಅದು ನಮ್ಮನ್ನು ನಾವು ಸೀಟಿಗಾಗಿಯೂ ಹೋರಾಡದಷ್ಟು ದುರ್ಬಲರನ್ನಾಗಿಸುತ್ತದೆ. ನಾವೇನೂ ಅಷ್ಟು ಬಲಹೀನರಲ್ಲ" ಎಂದು ವಾದಿಸಿದೆ. ನನಗೆ ಅವರಿಗೆ ಮಾತು ಕೂಡಲಿಲ್ಲ. ಅಲ್ಲಿಯೂ ಹಲವು ಮಂದಿ ನನಗೆ "ಸೌಮ್ಯವಾಗಿ" ಮಾತಾಡುವಂತೆ ಸೂಚನೆ ಕೊಟ್ಟಿದ್ದರು. ನಾನು ಬಲ ಕಳೆದುಕೊಳ್ಳಬಾರದೆಂದೇ ನಡೆಯುತ್ತಿದ್ದೆ.

ಅಂದಿನಿಂದ ಇಂದಿನವರೆಗೂ ನನ್ನನ್ನು ಎರಡು ಮುಖ್ಯ ಸಂಗತಿಗಳು ನಡೆಸುತ್ತಿವೆ.

೧. ಜೀವ ಬೆಳವಣಿಗೆಗೆ ಕಾತರಿಸುತ್ತದೆ.
೨. ಅದಕ್ಕೆ ಲಿಂಗ ಮಿತಿ ಇದೆ.

ಇವರೆಡನ್ನು ನಾನು ತೆರೆದ ಕಣ್ಣುಗಳಿಂದ ನೋಡುತ್ತಲೇ ಇದ್ದೆ. ನನಗೆ ಪ್ರತಿ ನಿಮಿಷಕ್ಕೂ ಭೇದ ಸೇರುತ್ತಿರಲಿಲ್ಲ. ನನ್ನ ವೃತ್ತಿಯನ್ನು ಗೌರವ, ಆದರಗಳಿಂದ ನೋಡುವ, ಆಡುವ ಜನ ನನ್ನ ತಾಯಿಯ ಕೆಲಸಕ್ಕೆ ಕಿಮ್ಮತ್ತು ಕೊಡುವುದಿಲ್ಲ ಎಂಬ ಅಸಮಾಧಾನವಿತ್ತು. ಅವುಗಳ ಜತೆಗೆ ಸ್ತ್ರೀಯೆಂಬ ಕಾರಣಕ್ಕೆ ನನ್ನನ್ನು, ನನ್ನಂಥ ಎಲ್ಲರನ್ನು ಸಮಾಜದ ಸಾಮೂಹಿಕ ಸಂದರ್ಭಗಳು, ಆಚರಣೆಗಳು ಬೇರ್ಪಡಿಸುವ ಸಂಗತಿಯನ್ನು ಕಾಣುತ್ತಿದ್ದೆ. ಆಗೆಲ್ಲ ಇದನ್ನು ಹರಿದು ಬರುವ ಒಂದು ದಾರಿಯ ಹುಡುಕಾಟವೂ ನನ್ನೊಳಗೆ ನಡೆಯುತ್ತಿತ್ತು.

ನಾನು ಆಗ ತೆರೆದ ಕಣ್ಣುಗಳನ್ನು ಈಗ ಇನ್ನಷ್ಟು ಅಗಲಿಸಿ ನೋಡುತ್ತಿದ್ದೇನೆ. ನನ್ನ ಸುತ್ತಲಿನ ಜನರ ದೇಹಪ್ರಜ್ಞೆ, ಲಿಂಗಪ್ರಜ್ಞೆ, ಲಿಂಗ ಅಸಮಾನತೆಯ ಎಲ್ಲ ಭೇದಗಳನ್ನು ನಾನು ಓದತೊಡಗಿದೆ. ಅದರೊಳಗೆ ನನ್ನ ಕುರಿತ ಒಂದು ಓದೂ ತೀವ್ರವಾಗಿ ನಡೆಯುತ್ತಿತ್ತು. ಕೆಲಸದ ಕುರಿತ, ದುಡಿಮೆಯ ಕುರಿತ ಹಳೆಯ ಚರ್ಚೆಯನ್ನು ನೀವು ಇನ್ನೂ ನಡೆಸುತ್ತಿದ್ದೀರಿ ಹೌದು. ಸಂಬಳ ಪಡೆವ ಕೆಲಸ ಮಾತ್ರ ದುಡಿಮೆಯಾಗಿ, ಮನೆಯಲ್ಲಿ ದುಡಿಯುವ ಅಮ್ಮನ ಕೆಲಸ ದುಡಿಮೆಯಿಲ್ಲದ ವಿಶ್ರಾಂತಿಯಾಗುವ ಪ್ರಶ್ನೆಯೂ ಮೇಲಿನ ಸಂಗತಿಯಷ್ಟೇ ಹಳೆಯದು. ಅದರೊಂದಿಗೆ ಮೈಮುಟ್ಟಿದರೆ ಬಸ್ಸಿನಲ್ಲಿ ತೊಂದರೆಯಾಗುತ್ತದೆ ಎಂದು ಪ್ರತ್ಯೇಕತೆ ಕಾಯ್ದುಕೊಳ್ಳುವ ಸಂಗತಿ – (ಇಂದು ಪುರುಷರಿರುವ ಬಸ್ಸಿಗೂ ಸ್ತ್ರೀಕಂಡಕ್ಟರು ಇದ್ದಾರೆ ಎಂಬುದು ಬೆಳವಣಿಗೆಯಲ್ಲವೇ?) ಇವು ಯಾವುವೂ ಪರಿಹಾರಗಳಲ್ಲ. ಒಂದು ವಸ್ತುಸ್ಥಿತಿಯನ್ನು ಎದುರಿಸಲಾಗದೆ ಆ ಕ್ಷಣಕ್ಕೆ ಅದನ್ನು ದೂರ ಮಾಡುವುದು ಅಥವಾ Postpone ಮಾಡುವುದು ಹೆಣ್ಣಿಗೆ ಅನಿವಾರ್ಯವಾಗಿ ಒಪ್ಪಿಕೊಂಡದ್ದು. ಆದರೆ ನಾಳೆ ಒಂದು ಏಕಾಂತದಲ್ಲಿ ಸ್ತ್ರೀ ತಾನೊಬ್ಬಳೇ ಬದುಕುವ ಪ್ರಸಂಗ ಬಂದಾಗ ಇಂಥ ಘಟನೆಗಳಿಗೆ ಹೇಗೆ ಮುಖಾಮುಖಿಯಾಗಿ ನಿಭಾಯಿಸಬೇಕು ಎಂಬ ತಯಾರಿಯಿಲ್ಲ. ಮಾನಭಂಗವಾಯಿತೆಂದು ಕಿರುಚಿ ಏನೋ ಕಳಕೊಂಡ ಹಾಗೆ ಅಳುತ್ತಾ ಮನೆಗೆ ಮರಳುವುದು. ಅದನ್ನು ಮೀರಿದರೆ ಆತ್ಮಹತ್ಯೆ ಮಾಡಿಕೊಂಡು ಭಂಗವಾದ ಮಾನವನ್ನು ಕಾಪಾಡುವುದು ಸರಿಯಲ್ಲ. ಅಂದರೆ ಇನ್ನೂ ಕೂಡ ನಾವು ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತಿಲ್ಲ.

ನಾನು ಸಮಾಜದ ಒಳಗಿದ್ದು ನನ್ನವರಲ್ಲದವರನ್ನು, ನನ್ನವರನ್ನು ಕಣ್ಣು ತೆರೆದು ನೋಡುವ ಪ್ರಯತ್ನ ಮಾಡುತ್ತಿದ್ದೇನೆ. ಆಗೆಲ್ಲ ನನಗೆ ಕಾಣಿಸಿದ್ದು ಇಷ್ಟು. ಇಲ್ಲಿ ಎರಡು ಸಂಗತಿಗಳಾಗಿ ನಿತ್ಯ ಹೋರಾಟ ನಡೆದಿದೆ. ಒಂದು, ನಾನು

ಎಂಬುದನ್ನು ಸಾಬೀತುಪಡಿಸುವ ಅಹಂಕಾರ ಸ್ಥಾಪನೆ. ಇನ್ನೊಂದು ಅದನ್ನು ಸಾಬೀತುಪಡಿಸಿಕೊಳ್ಳುವುದಕ್ಕೆ ಇರುವ ದೇಹದ ಜತೆಗೆ ಅಥವಾ ಲಿಂಗದ ಜತೆಗೆ ಸಂಬಂಧ. ಇವುಗಳನ್ನು

೧. ಅಹಂಪ್ರಜ್ಞೆ
೨. ಲಿಂಗ ಪ್ರಜ್ಞೆ

ಎಂದು ಗುರುತಿಸಬಹುದು.

ಕೆಳವರ್ಗದ ಹೆಣ್ಣುಮಕ್ಕಳಿಂದ ತೊಡಗಿ ಮೇಲ್ವರ್ಗದವರೆಗಿನ ಮೂರು ಆಯಾಮಗಳಲ್ಲಿ ಇವುಗಳಿಗೆ ಬೇರೆ ಬೇರೆ ಅರ್ಥವ್ಯಾಪ್ತಿಯಿದೆ.

ಒಬ್ಬ ಕೆಳವರ್ಗದ ಹೆಣ್ಣುಮಗಳು ಎಂದಿಗೂ ಕೂಡ ಬಸ್ಸಿನಲ್ಲಿ ಪ್ರತ್ಯೇಕ ಸೀಟುಬೇಕು ಎಂದು ನಮ್ಮ ಹಳ್ಳಿಯಲ್ಲಿ ವಾದಿಸುವುದಿಲ್ಲ. ಅವಳಿಗೆ ಮೈಯ ಹತ್ತಿರ ಬಂದು ನಿಲ್ಲುವ ಗಂಡಸು ಯಾವ ರೋಮಾಂಚನವನ್ನೂ ಉಂಟು ಮಾಡಲಾರ. ಅವಳ ಪಕ್ಕಕ್ಕೆ ಬಂದು ನಿಂತ ಅಂಥದ್ದೇ ವರ್ಗದ ಗಂಡಸಿಗೂ ಅವರು ದಿನ ಬೆಳಗಾದರೆ ಕೂಲಿ ಸಂದರ್ಭದಲ್ಲಿ ಮುಟ್ಟಿ ಸವರಿ ಮಾಡುವ ಕೆಲಸಗಳೇ ಅಂಥವು. ಅವರ Sensitivityಗೆ ಇನ್ನೂ ಅಂಥ ಸೂಕ್ಷ್ಮ ಸಂವೇದನೆಯ ಭಾಗ ಬಂದಿಲ್ಲ. ಅವಳು ಎಲ್ಲರ ಮುಂದೆ ಬಟಾಬಯಲಲ್ಲಿ ಸೊಂಟದ ಕೆಳಗೊಂದು ಅರಿವೆಬಿಟ್ಟರೆ ಉಳಿದಂತೆ ಅರೆಬೆತ್ತಲಾಗಿ ಸ್ನಾನ ಮಾಡುತ್ತಾಳೆ. ಮೇಲೆ ಮುಚ್ಚಬೇಕಾದ ಅಂಗವೇ ಅಲ್ಲ ಅವಳಿಗೆ. ಮಗು ಉಣ್ಣುವ ಪದಾರ್ಥ ಎಂಬುದಷ್ಟೇ ಅವಳ ಪ್ರಜ್ಞೆ, ಇದು ಅವಳ ದೇಹ ಪ್ರಜ್ಞೆಯ ಕುರಿತ ಅಸೂಕ್ಷ್ಮ ಸಂವೇದನೆ. ಅವಳಿಗಿನ್ನು ಲಿಂಗಪ್ರಜ್ಞೆ ಅನತಿ ದೂರ. ಕಾಮ ಎಂದರೆ ಅದು ಸಂಭೋಗವೇ. ಮುಟ್ಟುವುದು; ಮುಟ್ಟಿಸಿಕೊಂಡಾಗ ಪ್ರೀತಿ ಹುಟ್ಟುವ ಭಾಗ ಇನ್ನೂ ಕೇಳದ ಸಂಗತಿ. ಅವಳು ಬದುಕುವ ರೀತಿಗೆ ಅಜ್ಞಾನ, ಮುಗ್ಧ ಇಂಥ ಹೆಸರುಗಳನ್ನಿತ್ತರೂ ಅದು ಲಿಂಗಪ್ರಜ್ಞೆಯಲ್ಲಿ ಜಾಗ್ರತವಲ್ಲದ ಸ್ಥಿತಿ.

ಮೇಲ್ವರ್ಗದವರಿದ್ದಾರೆ, ಅವರದು ಇನ್ನೊಂದು ಮುಖ. ಇಲ್ಲಿ ಅವರಿಗೆ ಅವಲಂಬಕ್ಕಿಂತ ಸ್ವಾತಂತ್ರ್ಯ ಹೆಚ್ಚು. ತಮ್ಮದೇ ವಾಹನ, ತಮ್ಮದೇ ಗುಂಪು ಇವರ ಜತೆಗೆ ಹೆಚ್ಚು ಬದುಕುವವರು ಇವರು. ಇವರು ಕೆಳಗಿನ ಎರಡು ವರ್ಗದ ಸಮೀಕರಣಕ್ಕೆ ಬರಲಾರರು. ಅವರಿಗೆ ಲಿಂಗಪ್ರಜ್ಞೆ ಇದ್ದರೂ ಅದಕ್ಕೆ ಒಂದು ಸೀಮಿತ ಚೌಕಟ್ಟಿನೊಳಗೆ ಮುಕ್ತಿ. ಅದು ಸಾಮಾಜಿಕ ಸಂದರ್ಭಕ್ಕೆ ಮುಖಾಮುಖಿಯಾಗುವುದು ಕಡಿಮೆ.

ಎಲ್ಲ ಸಮಸ್ಯೆಗಳ ಮೂಲ ಮಧ್ಯಮವರ್ಗ. ಇವರಿಗೆ ದೇಹದ ಸುತ್ತ ಸಣ್ಣ ಸೆನ್ಸಿಟಿವಿಟಿ. ಮುಟ್ಟಿದರೆ ಮುನಿಯುವ ಮತ್ತು ಮುಟ್ಟಿದ್ದು ಇಷ್ಟವಾದರೆ ಅರಳುವ ಎರಡು ಸಂಗತಿಗಳ ಮಟ್ಟಿಗೂ ಇವರು ಜಾಗ್ರತರು. ಆದ್ದರಿಂದಲೇ ಇವರದು ತೀರ ಜೆನ್ವಿನ್ ಸಮಸ್ಯೆ. ಆಯ್ಕೆ ಸ್ವಾತಂತ್ರ್ಯ ಮೇಲ್ವರ್ಗದವರಷ್ಟು ಸರಳವಿಲ್ಲ. ಮತ್ತೆ ಕೆಳವರ್ಗದವರಿಗಿಂತ ಉತ್ತಮರೆಂಬ ಭಾವದಿಂದಾಗಿ ಇವರದು ಅತಂತ್ರ ಸ್ವರ್ಗ.

ಇವರದು ಲಿಂಗದ ಅರೆಪ್ರಜ್ಞಾವಸ್ಥೆ. ನಾನು ಎನ್ನುವುದನ್ನು establish ಮಾಡುವ ಅಹಂಪ್ರಜ್ಞೆಗೆ ಸಂಬಂಧಿಸಿಯೂ ಇದೇ ಮಾತು ಅನ್ವಯವಾಗುತ್ತದೆ.

ಕೆಳವರ್ಗದ ಮಹಿಳೆಗೆ ಇಂದು ದುಡಿದು ಅಂದಿನ ರೊಟ್ಟಿ ಸಂಪಾದನೆಯೇ Target. ತನ್ನನ್ನು ಗುರುತಿಸಬೇಕು, ಗುರುತಿಸಿಕೊಳ್ಳಬೇಕು ಈಕಡೆಗೆ ಅವಳದು ತೀರ ಸಲ್ಲದ ನಡೆ. ಉಳಿದದ್ದು ಅವಳಿಗೆ ಗೊತ್ತಿಲ್ಲ ಮತ್ತು ಬೇಕಿಲ್ಲ. ದುಡಿಮೆ ಅವಳ ಅಗತ್ಯ. ಮೇಲ್ವರ್ಗದವರಿಗೆ ಅವರ ಹಣ ತಂದುಕೊಟ್ಟ ಘನಸ್ತಿಕೆ ಸಾಕು. ಅವರಿಗೆ ತನ್ನನ್ನು ಗುರುತಿಸಿಕೊಳ್ಳುವುದಕ್ಕಿಂತಲೂ ಹಣದ ದೊಡ್ಡಸ್ತಿಕೆಯ ಬಲ . ಅದ್ದರಿಂದ ತೃಪ್ತರೆಂದೇ ಅವರು ಸಾಮಾಜಿಕ ಸಂದರ್ಭದ Identity Crisis ಕುರಿತು ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ.

ಮಧ್ಯಮವರ್ಗದ ಮಾತು ಪ್ರಚಲಿತ. ಅವರಿಗೆ ತನ್ನನ್ನು ಗುರುತಿಸಿಕೊಳ್ಳುವುದು ಮುಖ್ಯ. ಆ ದಾರಿಗೆ ಬರುವ ತೊಡಕುಗಳೆಲ್ಲ ಆಗ ನಿವಾರಣೆಯಾಗಬೇಕು. ಅದಕ್ಕಾಗಿ ಹೋರಾಟ. ಆಗ ಹೆಣ್ಣು ತನ್ನನ್ನು ಎಲ್ಲಿಯಾದರೂ Identity ಮಾಡುವ ಮೊದಲು ಗೆಲ್ಲಬೇಕಾದದ್ದು ದೇಹ, ಅದರ ಅಸಮಾನತೆ. ಹೀಗಾಗಿ ಅಹಂಪ್ರಜ್ಞೆಯ ಕುರಿತು ಒಂದಷ್ಟು ಎಚ್ಚರ. ಅಲ್ಲಿಯ ನಡೆಗೆ ಬೇರೆ ಬೇರೆ ಹೋರಾಟ.

ಒಟ್ಟಿನಲ್ಲಿ ಅಜ್ಞಾನ, ಅರೆಜ್ಞಾನ ಮತ್ತು ಸುಜ್ಞಾನ
ಅಪ್ರಜ್ಞೆ ಅರೆಪ್ರಜ್ಞೆ ಮತ್ತು ಪೂರ್ಣಪ್ರಜ್ಞೆ
ಮೊದಲಿನವರು ಹೋರಾಡುವುದಿಲ್ಲ
ಎರಡನೆಯವರು ಒದ್ದಾಡುತ್ತಾರೆ
ಮೂರನೆಯವರು ತಟಸ್ಥರಾಗಿರುತ್ತಾರೆ

ಒಟ್ಟು ಸಾಮಾಜಿಕ ಬೆಳವಣಿಗೆಗಳನ್ನು ಗಮನಿಸಿದರೆ ಒಂದು ವರ್ಗವು ಲಿಂಗ ಅಸಮಾನತೆಗೆ ಹೋರಾಡುತ್ತದೆ. ಮೀಸಲಾತಿ, ಪ್ರತ್ಯೇಕತೆ, ದುಡಿಮೆ, ಸಮಯ, ಮಹಿಳೆ ಎಲ್ಲ ಸಂಗತಿಗಳೂ ಲಿಂಗ ಅಸಮಾನತೆಯ Productಗಳೇ. ಇದು ನಡೆದು ವರುಷ ಕಾಲವಾದರೂ ಸಮಾನತೆಯನ್ನು ನಾವು ಸಾಧಿಸಿಲ್ಲ.

ಕಾರಣ ಸೃಷ್ಟಿ ಲಿಂಗ ಅಸಮಾನತೆಯ ಮೂಲಬೀಜವಲ್ಲ. ಅದು ಲಿಂಗಭಯದ ಬೈಪ್ರಾಡಕ್ಟ್ ಅಷ್ಟೆ. ಎಲ್ಲಿಯವರೆಗೆ ಲಿಂಗಭೀತಿ ನಿರ್ಮೂಲವಾಗುವುದಿಲ್ಲವೋ ಅಲ್ಲಿಯವರೆಗೆ ಲಿಂಗ ಅಸಮಾನತೆ ಪರಿಹಾರವಾಗುವುದಿಲ್ಲ. ಸಮಾನತೆಯ ಕೆಲ ಉದಾಹರಣೆಗಳನ್ನು ಕೊಟ್ಟು ನಾವು ಸಮಾಧಾನಿಸಿಕೊಂಡರೂ ಮೂಲದ ಕಳೆಯನ್ನು ನಾವಿನ್ನೂ ಚಿವುಟಿಲ್ಲ. ಅದಕ್ಕೆ ಲಿಂಗಭೀತಿಯನ್ನು ಕಳೆದುಕೊಳ್ಳುವ ಕಡೆ ಕಣ್ಣು ಹೊರಳಿಸಬೇಕು.

ಗಂಡು ಗಂಡಾದೊಡನೆ ಹೆಣ್ಣಿನ ಸೂತಕ
ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಮನದ ಸೂತಕ ಹಿಂಗಿದೊಡೆ

ತನುವಿನ ಸೂತಕಕ್ಕೆ ತೆರಹುಂಟೆ ಅಯ್ಯ
ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ.

ಎಂಬ ಅಕ್ಕಳ ಮತು ಇದನ್ನೇ ಧ್ವನಿಸುತ್ತಿದೆ.

ನಮ್ಮ ಎಲ್ಲ ಭೀತಿಯ ಮೂಲ ಈ ದೇಹ ಭಯ, ಅದು ಲಿಂಗಪ್ರಜ್ಞೆಯಿಂದಲೇ ಹುಟ್ಟಿದೆ. ಎಂದೋ ದೇಹದ ಕುರಿತು ಅಜ್ಞಾನವುಳ್ಳವರಿಗೆ ಲಿಂಗಪ್ರಜ್ಞೆಯ ಬಹಳವಿಲ್ಲದೆ ಅವರಿಗೆ ಒಂದು ಸಮಸ್ಯೆಯಾಗದು. ಪೂರ್ಣ ತಿಳಿದು ದಾಟಿದ ಸಂತನು ನಿರಾಳವಾಗಿ ಬದುಕಬಲ್ಲ. ಎಡಬಿಡಂಗಿಗಳಿಗೆ ಬಿಡಲಾರದ ಕಗ್ಗಂಟು ಇದು.

ವಾಸ್ತವಿಕ ಲಿಂಗಪ್ರಜ್ಞೆಯ ಅರಿವುಳ್ಳ ಸಂತನ ಕಣ್ಣು ದೇಹದಿಂದ ಲಿಂಗಕ್ಕೆ, ಲಿಂಗದಿಂದ ಜೀವಕ್ಕೆ ನಡೆಯುತ್ತದೆ. ಅಲ್ಲಿ ಬದುಕು ತುಂಬ ಸುಖದಾಯಕ. ಕಾರಣ ಸ್ಪಷ್ಟ. ಲಿಂಗಭಯ ದಾಟಿದವನಿಗೆ ಹಗಲು–ರಾತ್ರಿ ಭೇದವಿಲ್ಲ. ಗಂಡು–ಹೆಣ್ಣು ವ್ಯತ್ಯಾಸ ತಿಳಿಯುವುದಿಲ್ಲ. ಏಕಾಂಗಿ, ಸಾರ್ವಜನಿಕ ಬದುಕು ಎಂಬ ಎರಡು ಮುಖಗಳಿಲ್ಲ. ಇಲ್ಲಿ ಸ್ತ್ರೀಯ ಸ್ತ್ರೀತನ ಮುಳುವಾಗುವ ಭಯವಿಲ್ಲ. ಈ ನಿಟ್ಟಿನ ನಡೆ ಬೆಳವಣಿಗೆಯ ಸೋಪಾನ. ಆದರೆ ಅದು ಇನ್ನೂ ಸಾಧ್ಯವಾಗಿಲ್ಲ.

'ಲಿಂಗಭೀತಿ' ಕಳೆಯುವುದು ಹೇಗೆ? "ಹೇಳಬಾರದಯ್ಯ"(Don't tell and can't tell ಎಂಬ ಅರ್ಥದಲ್ಲಿ) ಎಂಬುದೇ ಸರಿಯಾದ ಉತ್ತರ. ಮಹಿಳೆಗೆ ತಾಯಿಯಾಗುವ ಗುಣವೈಶಿಷ್ಟ್ಯವಿದೆ. ತಾಯಿಯಾಗುವುದನ್ನೇ ಅವಳ ಲಿಮಿಟೇಶನ್ ಮಾಡಿದ ಸಮಾಜ ಅದನ್ನು ಕರ್ತವ್ಯವೆಂದು ಘೋಷಿಸಿತು. ಮಹಿಳಾವಾದಿಗಳು ಹೋರಾಟಕ್ಕೆ ತೊಡಗಿದರು. ಅದು ಕರ್ತವ್ಯವಲ್ಲ ಅವಳ ಆಯ್ಕೆ ಎಂದಿತು. ಎಲ್ಲವೂ ಚಂದವೇ. ಮಹಿಳೆ ಕುಟುಂಬದ ಬಂಧನವಿಲ್ಲದೆ, ಮದುವೆ ಚೌಕಟ್ಟಿನೊಳಗಲ್ಲದೆ ತಾಯಿಯಾಗುವುದನ್ನು ಕುರಿತು ಯೋಚಿಸಿದಳು. ಕೌಟುಂಬಿಕ ಬಂಧನದೊಳಗೆ ತಾಯಿಯಾಗುವುದು, ಬಂಧನವಿಲ್ಲದೆ ಪರಪುರುಷ ಸಂಬಂಧದಿಂದ ತಾಯಿಯಾಗುವುದು ಎರಡು ಮಾರ್ಗಗಳು.

ಮೂರನೆಯದೊಂದಿದೆ. ಮದುವೆಯೂ ಆಗದೆ, ಪುರುಷ ಸಂಪರ್ಕವೂ ಇಲ್ಲದೆ ತಾಯಿಯಾಗುವುದು. ಅದಕ್ಕೆ ಲಿಂಗದೇಹವುಳ್ಳ ಗರ್ಭಪಾತ್ರೆ ಬೇಡ. ಹೃದಯ ಪಾತ್ರೆಯಲ್ಲಿ ಅದರ ಸೃಷ್ಟಿ, ಔರಸವೇ ಅದರ ಸಂತಾನ. ಈ ಮೂರನೆಯ ತಾಯಿಗೆ ಅನಂತ ಸಂಸಾರ. ಅವಳಿಗೆ ಲಿಂಗಪ್ರಜ್ಞೆ ಇಲ್ಲ. ಅವಳು ನಿತ್ಯ ಕನ್ಯಾಕುಮಾರಿ. ಮಗು ಯಾವ ಲಿಂಗ? ಗುರು ಆತ್ಮ ಯಾವ ಲಿಂಗ? ಅಂದರೆ ಸ್ತ್ರೀವಾದಿಗಳ (Third gender) ಶಿಖಂಡಿ ಸೃಷ್ಟಿಯಾಗಿ ಬಿಡುತ್ತದೆ. ಅದನ್ನಲ್ಲ ನಾನು ಹೇಳುವುದು. ಇದು ಪುಲ್ಲಿಂಗವಲ್ಲ, ಸ್ತ್ರೀಲಿಂಗವಲ್ಲ, ನಪುಂಸಕವೋ ನನಗೆ ಗೊತ್ತಿಲ್ಲ. ಈ ಮೂರನೆಯ (ಅಥವಾ ನಾಲ್ಕನೆಯ) ಲಿಂಗಪ್ರಜ್ಞೆ ಆಗಿಬಿಟ್ಟರೆ ಬೆಳವಣಿಗೆ ಒಂದೇ ನಡೆ. ಜತೆಗಿರುವವರನ್ನು ನಡೆಸುವುದೇ ಅದರ ಗುರಿ. ಹಸಿವುಳ್ಳವನನ್ನು ಎತ್ತಿಕೊಳ್ಳುವುದಷ್ಟೇ ಅವರ ಕಾಳಜಿ. ಎತ್ತಿದವನು ಗಂಡೋ ಹೆಣ್ಣೋ ನೋಡುವ

ಕಣ್ಣು ಅಲ್ಲಿರುವುದಿಲ್ಲ. ಮಹಿಳಾವಾದ, ಪುರುಷವಾದ ಅಥವಾ ಎಲ್ಲ ಪ್ರತ್ಯೇಕತೆಗಳ ದ್ವೀಪ ಕಟ್ಟಿಕೊಂಡ ಗುಡ್ಡಗಳು ಎತ್ತ ಹೊರಳಬೇಕು. ಈ ದಾರಿ ಬೆಳಕಿನದು.

ಇಷ್ಟು ದಾರಿ ನಡೆಯುವಾಗ ಕಾಣುವ ಸಂಗತಿ ಸ್ಪಷ್ಟ. ಪ್ರತಿ ಮನುಷ್ಯನೂ ಒಂದು ಸ್ವಾತಂತ್ರ್ಯದ ಹಸಿವಿನಲ್ಲಿ ನಡೆದಿದ್ದಾನೆ. ಸ್ವತಂತ್ರವಾಗುವ ಅಪೇಕ್ಷೆಯೇ ಈ ಎಲ್ಲ ಹೋರಾಟಗಳ ಮೂಲ. ಸ್ವಾತಂತ್ರ್ಯಕ್ಕೆ ಹೆಚ್ಚು ಹೆಚ್ಚು ಅಡ್ಡಿಯಿರುವ ಕಡೆಗಳಲ್ಲೆಲ್ಲ ಹೆಚ್ಚು ಹೆಚ್ಚು ಹೋರಾಟ ನಡೆದಿದೆ.

ಸ್ತ್ರೀವಾದವೂ ಕಟ್ಟಕಡೆಗೆ ನೋಡಿದರೆ ಒಂದು ಬಂಧನದಿಂದ ಹರಿದುಕೊಂಡು ಬರಲು ಮಾಡುತ್ತಿರುವ ಪ್ರಯತ್ನವೇ. ಇದರೊಳಗೆ ಒಂದು ಕುತೂಹಲದ ಸಂಗತಿ ಹೇಳಬೇಕು. ನಾವೀಗ ಪುರುಷರಿಗೆ ಸ್ತ್ರೀಯರನ್ನು ಸೋಲಿಸಿ ಸ್ತ್ರೀ ಸ್ವತಂತ್ರಳಲ್ಲ ಅವಳಿಗೆ ಪಾರತಂತ್ರ್ಯವಿದೆ, ಬಂಧನವಿದೆ, ಅವಲಂಬಿತಳನ್ನಾಗಿ ಮಾಡಲಾಗಿದೆ ಎಂದು ವಾದಿಸುತ್ತಿದ್ದೇವೆ. ಈ ಕಂಪ್ಯಾರಿಸನ್ ಇಲ್ಲದ ಮುಕ್ತ ಸ್ಥಿತಿ. ಈ ಜಗದ ಕಡೆ ಕಣ್ಣು ಹೊರಳಿಸಿದರೆ ಇಲ್ಲಿ ಯಾರೂ ಸ್ವತಂತ್ರರಿಲ್ಲ. ಪುರುಷನೂ ಬಂಧಿತನೇ. ಸಂಪೂರ್ಣ ಸ್ವತಂತ್ರನೆಂಬ ಯಾವ ಪುರುಷನನ್ನೂ ಇದುವರೆಗೆ ನಾನು ನೋಡಿಲ್ಲ. ಅವನೂ ಒಂದಿಲ್ಲೊಂದು ಬಂಧನಕ್ಕೆ ಒಳಗಾದವನೇ. ಯಾವುದೋ ಭಯ ಅವನೊಳಗೂ ಇದೆ. ಅವನೂ ಯಾವುದೋ ಕುಟುಂಬಕ್ಕೆ ತನ್ನನ್ನು ಬಂಧಿಸಿಕೊಂಡವನೇ. ಮಾನಸಿಕವಾಗಿ ಅವನೂ ಅವಲಂಬಿತನೆ. ನಿರ್ಭೀತ ಸ್ವಾತಂತ್ರ್ಯ ಇನ್ನೂ ಗಳಿಸಲಾಗದ ಸೊತ್ತು.

ನನಗೆ ಕಾಣಿಸುವುದಿಷ್ಟು.

ಇನ್ನೊಂದು ನಿರ್ಭೀತ ಸ್ವಾತಂತ್ರ್ಯದ ಹಸಿವಿದೆ. ಅದಕ್ಕೆ ದಿಕ್ಕು ದೆಶೆಗಳಿಲ್ಲದ ಹೋರಾಟ ನಡೆದಿದೆ. ಅಲ್ಲೊಮ್ಮೆ ಇಲ್ಲೊಮ್ಮೆ ಅಕ್ಕ ಪಡೆದ ಸಣ್ಣಪುಟ್ಟ ಸುಖ ಸ್ವಾತಂತ್ರ್ಯಗಳನ್ನೇ enjoy ಮಾಡಿ ಮನುಷ್ಯ ಮತ್ತೆ ಅದೇ ವಿಶಿಯಸ್ ಸರ್ಕಲ್‌ನೊಳಗೆ ಗಿರಕಿ ಹೊಡೆಯುತ್ತಿದ್ದಾನೆ.

ಈಗಾಗಲೇ ಲಿಂಗಭಯವೇ ಲಿಂಗ ಅಸಮಾನತೆಯ ಮೂಲ ಕಾರಣ ಎಂದಂತೆ ನಮ್ಮ ಎಲ್ಲ ಸ್ವಾತಂತ್ರ್ಯ ಹೋರಾಟಗಳು ಜೀವ ಸ್ವಾತಂತ್ರ್ಯದ ಹಸಿವಿನಿಂದಲೇ ಹುಟ್ಟಿವೆ. ಜೀವ ಸ್ವಾತಂತ್ರ್ಯದ ಒಳಹಸಿವೇ ನಮ್ಮ ಬಂಧನಗಳನ್ನು ಬಿಡಿಸುವಂತೆ ಒತ್ತಾಯಿಸುತ್ತದೆ. ಈ ಜೀವ ಸ್ವಾತಂತ್ರ್ಯದ ಹಸಿವಿಗೆ ಪುರುಷ ಸ್ತ್ರೀ ಎಂಬ ಭೇದವಿಲ್ಲ. ಜೀವಕ್ಕೆ ಬೆಳವಣಿಗೆ ಗುಣ. ಬಿತ್ತಿದ ಬೀಜ, ಉಗುರು, ಕೂದಲು ಬೆಳೆಯುತ್ತವೆ. ಜೀವದ ಬೆಳವಣಿಗೆಗೆ ಹಪಹಪಿಸುವುದು ಅಸಹಜವಲ್ಲ. ಜೀವದ ಬೆಳವಣಿಗೆಯನ್ನು ಯಾರೂ ತಡೆಯಲಾರರು. ಇಂದಲ್ಲ ನಾಳೆ ಸ್ವಾತಂತ್ರ್ಯದ ಪರಮಾನುಭವದ ಕಡೆ ಜೀವ ತುಡಿದೇ ತುಡಿಯುತ್ತದೆ.

ಅದಕ್ಕೆಂದೇ ಅಲ್ಲಮ, ರಾಮಕೃಷ್ಣ ಪರಮಹಂಸರಂಥ ಒಂದೆರಡು ಜೀವಗಳು ಸ್ವಾತಂತ್ರ್ಯದ ಪರಮಾನುಭವ ಪಡೆದಿವೆ.

ಜೀವ ಸ್ವಾತಂತ್ರ್ಯ ಅನಿವಾರ್ಯ ಎಂಬ ಮಾತು ಬಂದಾಗ ಅಲ್ಲಿಯೂ ಮತ್ತೆ ಮಹಿಳೆ ಎಂಬ ವಿಭಾಗಕ್ಕೆ ತೊಡಕುಗಳನ್ನು ಹೇಗೆ ಸೃಷ್ಟಿಸಲಾಯಿತು ಎಂಬುದು ಮಾತ್ರ ತುಂಬ ಕುತೂಹಲದ ಸಂಗತಿ. ಜೀವ ಸ್ವಾತಂತ್ರ್ಯವನ್ನು ಸ್ತ್ರೀ ಅಪೇಕ್ಷಿಸಿದರೂ ಅವಳಿಗೆ ಮುಕ್ತಿಯಿಲ್ಲ ಎಂಬುದನ್ನು ವೇದದ ವಾಕ್ಯವೆಂಬಂತೆ ಶ್ರೀಕೃಷ್ಣನಿಂದ ಹೇಳಿಸಲಾಯಿತು. ಇದು ಕೃಷ್ಣನ ಮಾತು.

"ಸ್ತ್ರೀಯರಿಗೂ ಶೂದ್ರರಿಗೂ ಮೋಕ್ಷವಿಲ್ಲ". ಸ್ತ್ರೀಯರಿಂದಲೇ ಮುಕ್ತಿ ಕಂಡ ಕೃಷ್ಣ ಈ ಮಾತು ಆಡಿರಲಿಕ್ಕಿಲ್ಲ. ಆಡಿದ್ದರೂ ಅದಕ್ಕೆ ಅಕ್ಕ ಹೇಳುವ 'ಮನದ ಸೂತಕ'ದ ಅರ್ಥವನ್ನು ಹಚ್ಚಿ ಓದಬೇಕು.

ಜೀವ ಸ್ವಾತಂತ್ರ್ಯದ ಸಾಧ್ಯತೆಗಳನ್ನು ಮಹಿಳೆಯಿಂದ ಕಸಿದುಕೊಳ್ಳಲಾಗಿದೆ. ಅವಳು ಪೂಜೆ ಮಾಡಬಾರದು ನೋಡಬಹುದು ಅಷ್ಟೆ. ಅವಳು ತಪಸ್ವಿಯಾಗಲಾರಳು. ತಪಸ್ವಿಗಳ ಸೇವೆ ಮಾಡಬೇಕು. ಇನ್ನೂ ಕುತೂಹಲದ ಸಂಗತಿ ವಿಷ್ಣು ಅವಳನ್ನು ಪಾದಸೇವೆಗೆ ಇಟ್ಟ, ಬ್ರಹ್ಮ ಅವಳನ್ನು ಹುಟ್ಟಿಸಿ ಹೆಂಡತಿ ಎಂಬ ಪೀಠ ಕೊಟ್ಟ. ಈಶ್ವರ ಅವಳು ತನ್ನೊಳಗೇ ಇರುವುದನ್ನು ಕಂಡ. ಇದು ಸ್ತ್ರೀ ಬೆಳೆಯಬೇಕಾದ ಮೂರು ಹಂತವೂ ಹೌದು.

ಜೀವಸ್ವಾತಂತ್ರ್ಯಾಕಾಂಕ್ಷಿಗೆ ಇರಲೇಬೇಕಾದ ಎರಡು ಅರ್ಹತೆ ಅಥವಾ ಗುಣಗಳೆಂದರೆ ಸಮರ್ಪಣೆ ಮತ್ತು ಪ್ರೀತಿ. ಈ ಎರಡು ಗುಣಗಳೂ ಸ್ತ್ರೀಸಹಜವೇ. ಈ ಮಾತು ಫೆಮಿನೈನ್ ಕ್ವಾಲಿಟಿ ಇರಬಹುದು. ಅದು ಅವನ ಫೆಮಿನಿಟಿಗೆ ಸಂಬಂಧಿಸಿದ್ದು. ಹೆಚ್ಚು ಹೆಚ್ಚು ಅರ್ಪಿಸಿಕೊಂಡ ಜೀವಕ್ಕೆ ಸ್ವಾತಂತ್ರ್ಯಾನುಭವ ತನ್ನನ್ನು ವಿಸ್ತರಿಸಿಕೊಳ್ಳುವುದು ಕಾಣಿಸುತ್ತದೆ. ಕೊಟ್ಟ ಕೊಂಡವನಿಗೆ ಬೆಳೆಯುತ್ತಾ ಹೋಗುವ ಅನುಭವವಾಗುತ್ತದೆ. ಅದನ್ನೇ ನಾನು ಅಹಂ ಪ್ರಜ್ಞೆ ಎಂದದ್ದು. ತಾನು ಬೆಳೆಯಬೇಕು, ಹೆಸರಾಗಬೇಕು ಎಂಬ ಭಾವವಿಲ್ಲದೆ, ತಾನು ತನ್ನನ್ನು ಕೊಟ್ಟ ಕೊಳ್ಳಬೇಕು, ಕಳೆದುಕೊಳ್ಳಬೇಕು ಎಂಬ ಸಮರ್ಪಣಾ ಭಾವ ಒಂದು ದೊಡ್ಡ ಬೆಳವಣಿಗೆಯನ್ನು ಅನುಭವಕ್ಕೆ ತರುತ್ತದೆ. ಆ ಬೆಳವಣಿಗೆಯ ಮುಖ ತುಂಬ ಅಂತರ್ಗತವಾದದ್ದು. ಇವನು ತುಂಬ ದೊಡ್ಡವ ಎಂದು ಬೇರೆಯವರಿಗೆ ತಿಳಿಯುವುದು, ತಾನು ತುಂಬ ದೊಡ್ಡವ ಎಂದು ತನಗೆ ತಿಳಿಯುವುದು ಇವೆರಡರಲ್ಲಿ ತುಂಬ ಅಂತರವಿದೆ. ಒಂದು, ಸಮಾಜದಲ್ಲಿ ಹೆಸರುವಾಸಿಯಾಗುವ ಪ್ರತಿಷ್ಠೆಯ ದಾರಿ; ಇನ್ನೊಂದು, ಉಳಿದವರ ಆಳ ಆಗಲಿ ಎತ್ತರ ಕಾಣುತ್ತಾ ತನ್ನ ಎತ್ತರವನ್ನು ಅರಿತುಕೊಳ್ಳುವ ಅರಿವು. ಮೊದಲನೆಯ ದಾರಿಯಲ್ಲಿ ವೀರಪ್ಪನ್ ಕೂಡ ಜಗತ್ಪ್ರಸಿದ್ಧನಾಗಲಿಕ್ಕೆ ಸಾಧ್ಯ. ಎರಡನೆಯ ದಾರಿಯಲ್ಲಿ ಅಲ್ಲಮನ ದೊಡ್ಡಸ್ತಿಕೆ.

ಈ ಎರಡನೆಯ ಸಮರ್ಪಣೆ ಮತ್ತು ಪ್ರೀತಿಯ ದಾರಿ ಸ್ತ್ರೀಗೆ ತುಂಬ ಸರಳ. ಅವಳ ಆ ಗುಣಗಳು ಅವಳನ್ನು ಬೆಳೆಸುತ್ತವೆಂದೇ ಅವಳನ್ನು ಗಂಡನಿಗೆ ಸಮರ್ಪಿಸಿಕೊಳ್ಳುವಂತೆ, ಕುಟುಂಬವನ್ನು ಪ್ರೀತಿಸುವಂತೆ ಒತ್ತೆಯಿಡಲಾಯಿತು. ಆದರೆ ಪ್ರೀತಿ ಮತ್ತು ಸಮರ್ಪಣೆ ಎರಡೂ ಇಷ್ಟು ಸಣ್ಣ ವಸ್ತುಗಳಲ್ಲ. ಅವು ಒಬ್ಬನಿಗೆ

ಸಮರ್ಪಿಸಿಕೊಳ್ಳುವುದರಲ್ಲಿ ತೃಪ್ತಿ ಕಾಣುವುದಿಲ್ಲ. ಕುಟುಂಬವನ್ನಷ್ಟೇ ಪ್ರೀತಿಸುವುದರಲ್ಲಿ ಮುಗಿದುಹೋಗುವುದಿಲ್ಲ. ಎಂದೇ ಅವು ಹರಿಹಾಯ್ದಿವೆ. ಬೇಲಿದಾಟಿವೆ. ಕಾಲಪಕ್ವವಾದಾಗ ಹೊಸದು ಹುಟ್ಟುತ್ತದೆ.

ಕೊನೆಯದಾಗಿ ಒಂದು ಮಾತು ಹೇಳಬೇಕು.

ಈ ನಿಟ್ಟಿನಲ್ಲಿ ನೋಡಿದಾಗ ಮಹಿಳೆ ಇನ್ನೂ ಅಸಾಂಪ್ರದಾಯಿಕ ಸಾಹಸ ಮಾಡಿಲ್ಲ. ಇಂದಿರಾಗಾಂಧಿ, ಕಿರಣ್ ಬೇಡಿ (ನಾನು ಹೆಸರು ಸೂಚಿಸಲು ಹೋಗುವುದಿಲ್ಲ. ಇಂಥ ಹೆಸರು ಹಲವು ಹೇಳದೆ ಉಳಿಯುತ್ತವೆ. ಎಲ್ಲರ ಹೆಸರು ಹೇಳಿದರೂ ಅವರು ನಾನು ಹೇಳಬೇಕಾದದ್ದನ್ನು ಸೂಚಿಸಲಾರರು) ಇವರು ಒಂದೆರಡು ಗೆರೆದಾಟುವ ಪ್ರಯತ್ನ ಮಾಡಿದರು. ಅವು ಸಾಂಪ್ರದಾಯಿಕ ಚೌಕಟ್ಟನ್ನು ಒಪ್ಪಿಕೊಂಡೇ ಕೊಂಚ ಧೈರ್ಯ ಮಾಡಿ ಪುಟ್ಟ ಬೇಲಿ ದಾಟಿದ ಪ್ರಯತ್ನ ಅಷ್ಟೆ. ಅವು ಸಾಹಸವೆಂದೂ ನಾನು ಹೇಳಲಾರೆ. ಪುರುಷ ಪ್ರಧಾನಿಯಾಗುವುದು ಸಹಜವೇ. ಹೌದಾದರೆ ಇದು ಸಾಹಸ ಯಾಕಾಗಬೇಕು ನನಗೆ ತಿಳಿಯುವುದಿಲ್ಲ. ಸಾಂಪ್ರದಾಯಿಕ ಚೌಕಟ್ಟನ್ನು ಹೀಗೆ ಒಪ್ಪಿಕೊಂಡು, ಅಲ್ಲಿ ಇಲ್ಲಿ ಇಂಥ ಸಣ್ಣಪುಟ್ಟ 'ಸಾಹಸ' ಎಂಬ ಸಂಗತಿಗಳು ನಡೆದಿವೆ. ಹಳ್ಳಿಯಲ್ಲಿ ಎಲ್ಲ ಗಂಡಸರೂ ಸೇರಿ ನಾಗರಹಾವು ಬಡಿಯುವಾಗ, ನಾನೊಂದು ಬಡಿಗೆ ಹಿಡಿದು ಹಾವು ಬಡಿಯುವ ಪ್ರಸಂಗ ಬಂದರೆ ಅದನ್ನು ಆ ಸಮಾಜ ಸಾಹಸ ಎನ್ನುತ್ತದೆ. ನಾನು ಇವೆರಡೂ ಅಲ್ಲದ ನಿಟ್ಟಿನಲ್ಲಿ ಬೆಳವಣಿಗೆಯನ್ನು ಸೂಚಿಸಿದ್ದೇನೆ.

ಆ ದೃಷ್ಟಿಯಲ್ಲಿ ಅಸಾಂಪ್ರದಾಯಿಕ ಸಾಹಸದ ಒಂದೇ ಒಂದು ಪ್ರಯತ್ನ ಅಕ್ಕಮಹಾದೇವಿ ಮಾತ್ರ. ಅವಳೂ ಮದುವೆಯ ಚೌಕಟ್ಟನ್ನು ಮೀರಲಾಗದ (ಮದುವೆಯಾದದ್ದು ಹೌದಾದರೆ)ಸಾಂಪ್ರದಾಯಿಕ ಸಂಗತಿಯಲ್ಲೇ ಇದ್ದರೂ ಕಡೆಗೆ ಅದನ್ನು ಮೀರಿ ಜೀವ ಸ್ವಾತಂತ್ರ್ಯದ ಕಡೆಗೆ ನಡೆದದ್ದೇ ಅಸಾಂಪ್ರದಾಯಿಕ ಸಾಹಸ. ಅವಳನ್ನು ಬಿಟ್ಟರೆ ಇಲ್ಲಿಯವರೆಗೆ ಅಸಾಂಪ್ರದಾಯಿಕ ಸಾಹಸ ಇನ್ನೂ ನಡೆದಿಲ್ಲ ಎನ್ನುವ ನನ್ನ ಮಾತು ತೀರ ಉದ್ಧಟತನದ್ದೆನಿಸಿದರೆ ಕ್ಷಮೆಯಿರಲಿ, ನಮಸ್ಕಾರ.

*****

ಪರಿಚಯ :

ಉಡುಪಿ ಜಿಲ್ಲೆಯ ಅಂಬಲಪಾಡಿಯಲ್ಲಿ ಹುಟ್ಟಿದ ವೀಣಾ ಬನ್ನಂಜೆ ಪ್ರಸ್ತುತ 'ಆಚಾರ್ಯ ರಜನೀಶ್ ಮತ್ತು ಸತ್ಯಕಾಮರ ಸಾಹಿತ್ಯದಲ್ಲಿ ತಂತ್ರಮಾರ್ಗ' ವಿಷಯ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾರ್ಥಿಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ಅಕ್ಕಮಹಾದೇವಿಯ ವಚನಗಳಲ್ಲಿ ಸ್ತ್ರೀ ಸಂವೇದನೆ' ಸಂಶೋಧನ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿ ಪಡೆದಿದ್ದಾರೆ. ಸ್ವಲ್ಪಕಾಲ ಉಡುಪಿಯ ಉಪೇಂದ್ರ ಮೆಮೋರಿಯಲ್ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ

ಸೇವೆಸಲ್ಲಿಸಿ ೧೯೯೪ರಿಂದ ೧೯೯೮ರವರೆಗೆ ಸತ್ಯಕಾಮರೊಂದಿಗೆ ಹಿಮಾಲಯ ವಾಸದಲ್ಲಿದ್ದರು. ಸತ್ಯಕಾಮರ ಮರಣಾನಂತರ ಜಮಖಂಡಿಯ ಕಲ್ಲಹಳ್ಳಿಯಲ್ಲಿ ನೆಲೆಸಿದ್ದರು. ನಂತರ ಕಲ್ಲಹಳ್ಳಿಯನ್ನೂ ತೊರೆದು, ಅಲೆಮಾರಿ ಜೀವನ ನಡೆಸಿ ಬೆಂಗಳೂರು ಸೇರಿದರು. 'ಅಕ್ಕಮಹಾದೇವಿಯ ದ್ವೈತ' ಕೃತಿಗೆ ೨೦೦೭ರಲ್ಲಿ ಜಿ.ಟಿ. ದೇಸಾಯಿ ಪ್ರಶಸ್ತಿ, ಎಂ.ಕೆ. ಇಂದಿರಾ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಶಿವರಾತ್ರೀಶ್ವರ ಪ್ರಶಸ್ತಿ – ಹೀಗೆ ನಾಲ್ಕು ಪ್ರಶಸ್ತಿಗಳು ಬಂದಿವೆ. ಎಚ್ಚರದ ಕನಸು ಎಂಬ ಕಥಾಸಂಕಲನವನ್ನೂ, ತಂದೆ–ಮಗಳು ಎಂಬ ಪತ್ರ ಸಂಕಲನವನ್ನೂ ವೀಣಾ ಪ್ರಕಟಿಸಿದ್ದಾರೆ. ಉದಯವಾಣಿ ಮತ್ತು ಮಯೂರದಲ್ಲಿ ಬರೆದ ಅಂಕಣ ಬರಹಗಳ ಪುಸ್ತಕ ಪ್ರಕಟಣೆಗೆ ಸಿದ್ಧವಾಗಿದೆ. "ನಡೆದದ್ದು ಸ್ವಲ್ಪ, ನಡೆಯಬೇಕಾದ್ದು ಘನ. ಹಿಂದೆ ನೋಡಿಲ್ಲ, ನನಗೆ ಭೂತದ ಭಯವಿಲ್ಲ. ಮುಂದೆ ನೋಡುವುದಿಲ್ಲ, ನನಗೆ ಭವಿಷ್ಯವಿಲ್ಲ" ಇದು ವೀಣಾ ಬನ್ನಂಜೆಯವರ ನಿರ್ಭಿಡೆಯ ಮಾತು.

"ಲಿಂಗಾಧಾರಿತವಾದ ಅಥವಾ ಜಾತ್ಯಾಧಾರಿತವಾದ ಮೀಸಲಾತಿ ಹೆಣ್ಣಿಗೆ ಬೇಡವೇ ಬೇಡ, ಅದು ಹೆಣ್ಣಿನ ಬೆಳವಣಿಗೆಯನ್ನು ತಡೆಯುತ್ತದೆ. ಅದು ಹೆಣ್ಣನ್ನು ಬಸ್ಸಿನಲ್ಲಿ ಸಿಟಿಗಾಗಿಯೂ ಹೋರಾಡದಿರುವಷ್ಟು ದುರ್ಬಲಳನ್ನಾಗಿಸುತ್ತದೆ. ಹೆಂಗಸರು ಅಷ್ಟೊಂದು ದುರ್ಬಲರೆಂದು ಭಾವಿಸಬೇಕಾಗಿಲ್ಲ" ಎನ್ನುವುದು ಈ ಪ್ರಬಂಧದ ಧ್ವನಿ. ನಮಗೆ ಸ್ಪಷ್ಟವಾಗಿ ಗೊತ್ತಿರದ ಕಾಲದಿಂದಲೂ ಗಂಡು ಮೇಲು, ಹೆಣ್ಣು ಕೀಳು ಎನ್ನುವ ಅಮಾನವೀಯ ತಾರತಮ್ಯ ನಡೆದುಕೊಂಡು ಬರುತ್ತಾ ಅದು ಈಗ ಆಧಿನಿಕ ಸಂದರ್ಭದಲ್ಲಿ ಬೇರೆ ಬೇರೆ ರೀತಿಯ ಅವತಾರಗಳನ್ನು ಪಡೆದುಕೊಳ್ಳುತ್ತಿದೆ. ಇದರ ಮತ್ತೊಂದು ರೂಪವೇ ಮಹಿಳಾ ಮೀಸಲಾತಿ. ಸ್ತ್ರೀ ಎನ್ನುವ ಕಾರಣ ದಿಂದಾಗಿಯೇ ಆಕೆಯನ್ನು ಸಮಾಜದ ಸಾಮೂಹಿಕ ಸಂದರ್ಭಗಳು, ಆಚರಣೆಗಳು ಯಾಕೆ ಪ್ರತ್ಯೇಕಿಸಿ ನೋಡುತ್ತಿವಿ ಇನ್ನುವ ಪ್ರಶ್ನೆಗೆ ಹುಡುಕಾಟದ ರೂಪದಲ್ಲಿ ವಿಚಾರಗಳು ಹರಿದುಬಂದಿವೆ. ಕೆಲಸ ಕುರಿತು, ದುಡಿಮೆ ಕುರಿತು ಹಳೆಯ ಚರ್ಚೆಯೇ ಇನ್ನೂ ನಡೆಯುತ್ತಿದೆ. ಸಂಬಳ ಪಡೆಯುವ ಕೆಲಸ ಮಾತ್ರ ದುಡಿಮೆ ಎಂದು ಪರಿಗಣಿತವಾಗಿ ಮನೆಯಲ್ಲಿ ದುಡಿಯುತ್ತಲೇ ಇರುವ ಅಮ್ಮನ ಕೆಲಸ ದುಡಿಮೆಯಿಲ್ಲದೆ ವಿಶ್ರಾಂತಿ ಎನ್ನಿಸುವುದು ಎಷ್ಟು ಸರಿ? ಒಂದು ವಸ್ತುಸ್ಥಿತಿಯನ್ನು ಎದುರಿಸಲಾಗದೇ ಆ ಕ್ಷಣಕ್ಕೆ ಅದನ್ನು ದೂರ ಮಾಡುವುದು ಅಥವಾ ಮುಂದೂಡುವುದು ಹೆಣ್ಣು ಅನಿವಾರ್ಯವಾಗಿ ಒಪ್ಪಿಕೊಂಡಿದ್ದು, ಆದರೆ ಮುಂದೊಂದು ದಿನ ಸ್ತ್ರೀ ತಾನೊಬ್ಬಳೇ ಏಕಾಂಗಿಯಾಗಿ ಬದುಕುವ ಪ್ರಸಂಗ ಬಂದರೆ ಅಲ್ಲಿ ಎದುರಾಗುವ ಘಟನೆಗಳನ್ನು ಹೇಗೆ ನಿಭಾಯಿಸಬೇಕೆನ್ನುವ ತಯಾರಿಯೇ ಅವಳಿ ಗಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಮಾನಭಂಗವಾಯಿತೆಂದು ಕಿರುಚಿಕೊಂಡು ಏನೋ ಕಳೆದುಕೊಂಡಂತೆ ಗೋಳಾಡುವುದು, ಅದನ್ನು ಮೀರಿದರೆ ಆತ್ಮಹತ್ಯೆ ಮಾಡಿಕೊಂಡು ಭಂಗವಾದ ಮಾನವನ್ನು ಕಾಪಾಡುವುದು ಈ ಎರಡು ಕೂಡ ಹೆಣ್ಣು ಎದಿರಿಸಲೇ ಬೇಕಾದ ಸಮಸ್ಯೆಗಳಿಗೆ ಇನ್ನೂ ಸರಿಯಾಗಿ ಮುಖಾಮುಖಿಯಾಗಿತ್ತಿಲ್ಲವೆಂದು ಖಚಿತಪಡಿಸುತ್ತೇವೆ. ಒಟ್ಟು ಸಾಮಾಜಿಕ ಬೆಳವಣಿಗೆ ಯನ್ನು ಗಮನಿಸಿದರೆ ಮಹಿಳೆಯರ ಒಂದು ವರ್ಗ

ಲಿಂಗ ಅಸಮಾನತೆಯ ವಿರುದ್ಧ ಹೋರಾಟ ನಡೆಸಿಕೊಂಡು ಬಂದಿದೆ. ಮೀಸಲಾತಿ, ಪ್ರತ್ಯೇಕತೆ, ದುಡಿಮೆ, ಸಮಯ ಈ ಎಲ್ಲಾ ಸಂಗತಿಗಳೂ ಲಿಂಗ ಅಸಮಾನತೆಯ ಉತ್ಪನ್ನಗಳೇ ಆಗಿವೆ. ಇದು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದರೂ ಸಮಾನತೆಯನ್ನು ಮಾತ್ರ ಸಾಧಿಸಲಾಗಿಲ್ಲ. ಇದರ ಮೂಲದಲ್ಲಿರುವ ಲಿಂಗ ಅಸಮಾನತೆ ಪರಿಹಾರವಾಗಬೇಕಾದರೆ ಲಿಂಗಭೀತಿ ನಿರ್ಮೂಲನೆಯಾಗಬೇಕು. ಅದಾಗಬೇಕಿದ್ದರೆ ನಮ್ಮ ಎಲ್ಲ ಭೀತಿಯ ಮೂಲವಾಗಿರುವ ದೇಹಭಯವನ್ನು ಮೀರಿ ನಿಲ್ಲಬೇಕು. ಇಂಥ ಸಾಹಸದ ಒಂದೇ ಒಂದು ಪ್ರಯತ್ನ ನಡೆದಿರುವುದು ಅಕ್ಕಮಹಾದೇವಿಯಿಂದ ಮಾತ್ರ ಎನ್ನುವುದು ಲೇಖಕಿಯ ಅಭಿಪ್ರಾಯ.

೧೩. ವಿಧವೆಯರನ್ನು ಸಮಾನರಾಗಿ ಕಾಣುತ್ತೀರಾ?

– ಬೃಂದಾ ಎನ್. ರಾವ್

ಇಪ್ಪತ್ತೊಂದನೆಯ ಶತಮಾನ ಇದು. ಈ ಆಧುನಿಕ ಯುಗದಲ್ಲಿ ಅಂದರೆ ಮಹಿಳೆ ರಾಕೆಟ್ಟಿನಲ್ಲಿ ಕುಳಿತು ಗಗನಕ್ಕೆ ಹಾರುವಂತಹ ಈ ಯುಗದಲ್ಲೂ, ವಿದ್ಯಾವಂತ ಹಾಗೂ ಆಧುನಿಕವೆನಿಸಿಕೊಂಡ ಕುಟುಂಬ ಮತ್ತು ಸಮಾಜಗಳು ವಿಧವೆ ಹೆಣ್ಣುಮಗಳೊಬ್ಬಳೊಡನೆ ಯಾವ ರೀತಿ ಅಮಾನವೀಯತೆಯಿಂದ ವರ್ತಿಸಿ ಎಷ್ಟು ಮನ ನೋಯಿಸಬಲ್ಲವು ಎಂಬುದನ್ನು ಊಹಿಸಿಕೊಳ್ಳುವುದೂ ಅಸಾಧ್ಯ. ಇದು ತೀರ ನಾಚಿಕೆಗೇಡಿನ ವಿಷಯ. ಕೇವಲ ಕೆಲವೇ ದಿನಗಳ ಹಿಂದೆ ನಡೆದ ಸಂಗತಿ ಇದನ್ನು ಬರೆಯಲು ನನ್ನನ್ನು ಪ್ರೇರೇಪಿಸಿತು.

ಸುನೀತ ಹುಟ್ಟಿನಿಂದಲೇ ಬಹಳ ಚುರುಕು. ವಿದ್ಯಾವಂತೆ ಆಧುನಿಕ ಮನೋಭಾವವುಳ್ಳವಳು. ವಿವಾಹಾನಂತರ ಒಳ್ಳೆಯ ಪತಿ ಹಾಗೂ ಬುದ್ಧಿವಂತ ಮಕ್ಕಳಿಂದ ಕೂಡಿದ ಸಂತಸದ ಕುಟುಂಬ ಅವಳದಾಗಿತ್ತು. ದುರದೃಷ್ಟವಶಾತ್ ತನ್ನ ನಲವತ್ತರ ಆಸುಪಾಸಿನಲ್ಲಿ ಪತಿಯನ್ನು ಕಳೆದುಕೊಂಡಳು. ಯಾರನ್ನೂ ಅವಲಂಬಿಸದೆ ಮಕ್ಕಳೊಡನೆ ಸ್ವತಂತ್ರವಾಗಿ ವಾಸಿಸತೊಡಗಿದಳು. ಬಹಳ ಆತ್ಮಸ್ಥೈರ್ಯದಿಂದ ಸಾಧ್ಯವಾದಷ್ಟು ಬೇಗ ಆಘಾತದಿಂದ ಚೇತರಿಸಿಕೊಳ್ಳುತ್ತ ಬಂದಳು. ಮಕ್ಕಳು ವಿದ್ಯಾಭ್ಯಾಸಕ್ಕೆಂದು ಹೊರದೇಶಕ್ಕೆ ಹೊರಟಾಗ ಧೈರ್ಯವಾಗಿ ಕಳುಹಿಸಿಕೊಟ್ಟಳು. ಮಕ್ಕಳು ಓದಿ ತಮ್ಮ ಕಾಲಮೇಲೆ ನಿಲ್ಲುವಂತೆ ಮಾಡಿದಳು. ಈಗ ತಾನೊಬ್ಬಳೇ ಸ್ವತಂತ್ರವಾಗಿ ತನ್ನದೇ ಕೆಲಸ, ಹವ್ಯಾಸಗಳನ್ನು ಮುಂದುವರಿಸಿಕೊಂಡು, ಗೆಳತಿಯರೊಡನೆ ಪ್ರವಾಸಗಳನ್ನು ಮಾಡುತ್ತಾ, ತನ್ನಷ್ಟಕ್ಕೆ ತಾನು ಜನ ಮೆಚ್ಚುವಂತಹ ಜೀವನ ನಡೆಸುತ್ತಿದ್ದಾಳೆ. ಇತ್ತೀಚೆಗಷ್ಟೆ ಅವಳ ಕುಟುಂಬವರ್ಗದಲ್ಲಿ ಒಂದು ಮದುವೆಯಾಯಿತು. ಮದುವೆ ಮನೆಯಲ್ಲಿ ಎಂದಿನಂತೆ ಲವಲವಿಕೆಯಿಂದ ಓಡಾಡಿಕೊಂಡಿರದೆ, ಕಳಾಹೀನಳಾಗಿ ಒಂದೆಡೆ ಒಂಟಿಯಾಗಿ ಕುಳಿತಿದ್ದ ಸುನೀತಾಳನ್ನು ನೋಡಿ ಆಶ್ಚರ್ಯ, ಆತಂಕಗಳಾದವು. ವಿಚಾರಿಸಿದ ನಂತರ ಗೊತ್ತಾಯಿತು. ಅವಳು ಮದುವೆಯ ಹಸೆಮಣೆಯ ಬಳಿ ಬರಬಾರದೆಂದು ಮೊದಲೇ ತಾಕೀತಾಗಿತ್ತಂತೆ!!! ವಿಧವೆ ಹತ್ತಿರ ಸುಳಿದರೆ ಅಶುಭವಲ್ಲವೇ???!!

ಇದು ಕೇವಲ ಸುನೀತಳೊಬ್ಬಳ ಅನುಭವವಲ್ಲ. ಇಂತಹ ಹಲವಾರು ಹೆಣ್ಣುಮಕ್ಕಳ ಅನುಭವವೇ ಇದು.

ಜನರ ಈ ನಡವಳಿಕೆಗೆ ಕಾರಣ ಹುಡುಕಬೇಕಾದರೆ, ಹಿಂದಿನ ಕಾಲದ ಸಾಮಾಜಿಕ ಜೀವನ ಪದ್ಧತಿಯನ್ನು ಪರಿಶೀಲಿಸಬೇಕಾಗುತ್ತದೆ. ಹಿಂದೆಲ್ಲ ವಿಧವಾ

ಪುನರ್ವಿವಾಹ ನಿಷೇಧವಾಗಿತ್ತು. ಬಾಲ್ಯವಿವಾಹವೂ ಪದ್ಧತಿಯಲ್ಲಿದ್ದುದರಿಂದ, ಹುಡುಗಿಯೊಬ್ಬಳು ವಯಸ್ಸಿಗೆ ಬಂದು ಗಂಡನ ಮನೆಗೆ ಹೋಗುವ ಮುಂಚೆಯಾಗಲೀ ಅಥವಾ ಅನಂತರವಾಗಲೀ ಅವನನ್ನು ಕಳೆದುಕೊಂಡರೆ, ಅವಳನ್ನು ಮತ್ಯಾರಾದರೂ ಒಬ್ಬ ಗಂಡು ಕಂಡು ಮೋಹಗೊಂಡರೆ ಎಂಬ ಭೀತಿ ಇರುತ್ತಿತ್ತು.

ಅದಕ್ಕೆ ಪರಿಹಾರವೇನು? ಯಾರೂ ಆಕೆಯನ್ನು ಮೋಹಿಸದಿರುವಂತೆ ಹಾಗೂ ದುರುಪಯೋಗಿಸಿಕೊಳ್ಳದಿರುವಂತೆ ಆಕೆಯನ್ನು ಕುರೂಪಗೊಳಿಸುವುದು! ಆದ್ದರಿಂದಲೇ ಅವಳ ಹಣೆ, ಕೈ, ಕೊರಳು ಬರಿದು ಮಾಡಿ, ಅಷ್ಟೇ ಏಕೆ ತಲೆಯನ್ನೂ ಬೋಳಿಸಿ ವಿಕಾರ ಮಾಡಿ ಅವಳನ್ನು ಮನೆಯಲ್ಲಿ ಬಂಧಿಯಾಗಿಡುವಂತಹ ಕ್ರೂರ ಪದ್ಧತಿ ಬೆಳೆದದ್ದು. ಆಡಿಕೊಂಡಿರಬೇಕಾದ ಆ ಹೆಣ್ಣುಮಗು ತನ್ನ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು ಇತರ ಎಲ್ಲರ ಸೇವೆಗಾಗಿಯೇ ತನ್ನ ಜೀವನವನ್ನು ಮುಡುಪಾಗಿಡಬೇಕಾದ ಪರಿಸ್ಥಿತಿ ತಾನಾಗಿಯೇ ಸೃಷ್ಟಿಯಾಗಿಹೋಗಿತ್ತು. ಮನೆಯಲ್ಲಿ ಮದುವೆಯಂತಹ ಶುಭ ಸಮಾರಂಭಗಳಾದಾಗ ಕಂಡಂತೆಯೇ ಝುಣಝುಣ ಬಳೆ, ಹೊಳೆಯುವ ಬಂಗಾರದಲ್ಲಿ ಓಡಾಡುತ್ತಿದ್ದುದನ್ನು ನೋಡುವ ಮುಗ್ಧ ಮನಸ್ಸಿನ ಆ ಮಗು ತನ್ನ ಪರಿಸ್ಥಿತಿ ಹೀಗೇಕೆ ಎಂಬ ಅರಿವು ಸಹ ಇಲ್ಲದೆ, ಸಹಜವಾದ ಆಸೆ ಕಂಗಳಿಂದ ಅವನ್ನೆಲ್ಲ ನೋಡಿ, ತನಗೆ ಅದು ಇಲ್ಲವೆಂದು ದುಃಖ ಅನುಭವಿಸಬೇಕಾಗುತ್ತಿತ್ತು. (ಯೋಚಿಸಿದರೆ ಕರುಳು ಕಿವುಚಿ ಬರುತ್ತದಲ್ಲವೆ?) 'ಕೆಟ್ಟ ದೃಷ್ಟಿ' ಎಂಬ ಅತಿಮೂಢ ನಂಬಿಕೆ ಇರುವವರು, ಈ ಹೆಣ್ಣುಮಗಳು ಅದನ್ನು ನೋಡಿ ಹೊಟ್ಟೆ ಉರಿದುಕೊಂಡರೆ, ಮದುಮಕ್ಕಳಿಗೆ ಅಶುಭವಾಗುತ್ತದೆಂದು ಅವಳನ್ನು ದೂರವಿಡುತ್ತಿದ್ದರು. ಅಥವಾ ಮಗುವಿಗೆ ಆಸೆಯಾಗಿ ದುಃಖವಾಗಬಾರದೆಂದೂ ದೂರವಿಡುತ್ತಿದ್ದಿರಬಹುದು.

ಮತ್ತೆ ಕೆಲವು ಸಂದರ್ಭಗಳಲ್ಲಿ ಮದುವೆಯ ನಂತರ ಕೆಲಕಾಲ ಪತಿಯೊಡನೆ ಸಂಸಾರ ಮಾಡಿ ಮಕ್ಕಳೂ ಆಗಿರುವಂತಹ ಹೆಣ್ಣುಮಗಳು ವಿಧವೆಯಾದಾಗ, ಆಕೆ ಪತಿಯ ತುಂಬು ಕುಟುಂಬದಲ್ಲೇ ಉಳಿಯಬೇಕಾಗುತ್ತಿತ್ತು ಅಥವಾ ತೌರು ಮನೆ ಸೇರಬೇಕಾಗುತ್ತಿತ್ತು. ಸೇರಿದ ಮನೆಯುವರನ್ನು ಸಂಪೂರ್ಣವಾಗಿ ಆಶ್ರಯಿಸಬೇಕಾದ ಅಸಹಾಯಕತೆ ಆಕೆಗೆ ಉಂಟಾಗುತ್ತಿತ್ತು. ಇವಳನ್ನು ಮನೆಯವರು ಹೀನಾಯವಾಗಿ ಕಾಣುತ್ತಿದ್ದುದು ಸಹ ಸಾಮಾನ್ಯವಾಗಿತ್ತು. ಆಕೆಯ ಪರಿಸ್ಥಿತಿಯನ್ನು ಕಂಡವರು ಅನುಕಂಪ ತೋರುತ್ತಿದ್ದರೇ ಹೊರತು ಇನ್ನೇನೂ ಮಾಡುವಂತಿರಲಿಲ್ಲ.

ಈಗ ಪರಿಸ್ಥಿತಿಯೇನೋ ಸ್ವಲ್ಪ ಮಟ್ಟಿಗೆ ಬದಲಾಗಿದೆ. ಅಂದರೆ ಪತಿಯನ್ನು ಕಳೆದುಕೊಂಡಾಕೆ ಹಿಂದೆಲ್ಲಾ ಕೆಲಸಕ್ಕೆ ಹೋಗುತ್ತಿರಲಿಲ್ಲವಾದರೂ, ಈಗ ಎಚ್ಚೆತ್ತು ಮಾನಸಿಕ ಸಮತೋಲನವನ್ನು ಉಳಿಸಿಕೊಂಡು, ಕೆಲಸಕ್ಕೆ ಹೋಗಿ ಸಂಪಾದನೆ ಮಾಡಿ ಮನೆ ನೋಡಿಕೊಂಡು, ಮಕ್ಕಳನ್ನೂ ನೋಡಿಕೊಂಡು ಜೀವನ ನಿಭಾಯಿಸುತ್ತಿದಾಳೆ. ಒಂದು ವೇಳೆ ಅವಳ ಕೆಲಸಕ್ಕೆ ಡಿಗ್ರಿಯೊಂದರ ಅವಶ್ಯಕತೆ ಬಿದ್ದರೆ, ಇವೆಲ್ಲದರ ಜೊತೆ ತನ್ನ ವಿದ್ಯಾಭ್ಯಾಸವನ್ನೂ ಮುಂದುವರಿಸಿಕೊಳ್ಳುತ್ತಾಳೆ. ಮಕ್ಕಳಿಗೆ ಜೀವನದಲ್ಲೊಂದು ನೆಲೆ ಕಾಣಿಸುತ್ತಾಳೆ. ಪತಿ ಪತ್ನಿಯರು ಸಂಸಾರ ರಥದ ಎರಡು ಚಕ್ರಗಳಿದ್ದಂತೆ ಎಂದು ಹೇಳುತ್ತಾರೆ. ಒಂದು ಚಕ್ರ ಕಾಣದಾದರೂ ಪೂರ್ತಿ ರಥದ ಭಾರವನ್ನು ಒಂಟಿಯಾಗಿ ಹೊತ್ತು, ಮನಸ್ಸಿನಲ್ಲಿ ಎಷ್ಟೇ ದುಗುಡ

ಸಂಕಟಗಳಿದ್ದರೂ ತೋರಿಸಿಕೊಳ್ಳದೆ, ತನಗೆ ಹೀಗಾಯಿತಲ್ಲ ಎಂದು ಇತರರ ಮುಂದೆ ಕರುಬದೆ, ತಂದೆ ಇಲ್ಲದ ಕೊರತೆ ಮಕ್ಕಳಿಗೆ ತಟ್ಟದಂತೆ ಧೈರ್ಯವಾಗಿ ಜೀವನ ನಡೆಸುತ್ತಿರುವ ಮಹಿಳೆಯರನ್ನು ಸನಿಹದಿಂದ ನೋಡಿದ್ದೇನೆ. ಆದರೆ ತನ್ನದೇ ಮಕ್ಕಳ ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ಅವಳಿಗೆ ಸ್ಥಾನವಿಲ್ಲ. ಹಸೆಮಣೆಯಲ್ಲಿ ಕುಳಿತು ಸಮಾರಂಭ ನಡೆಸಿಕೊಡುವ ಸಂತಸದ ಕೆಲಸ ಕುಟುಂಬಕ್ಕೆ ಸೇರಿದ ಬೇರೊಬ್ಬ ದಂಪತಿಯ ಪಾಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಆಕೆಗಾಗುವ ಸಂಕಟದ ಪ್ರಮಾಣ ಯಾರಿಗಾದರೂ ಅಂದಾಜಾಗುತ್ತದೆಯೇ? ಇದುವರೆಗೂ ಎಲ್ಲವನ್ನೂ ಒಂಟಿಯಾಗಿ ನಿರ್ವಹಿಸಿದವಳು ಈ ಸಂತೋಷ ಸಂದರ್ಭಗಳಲ್ಲಿಯೂ ಒಂಟಿಯಾಗಿಯೇ ಏಕೆ ಭಾಗವಹಿಸಬಾರದು? ಮಕ್ಕಳಿಗಾಗಿ ಜೀವ ತೇತ್ತ ಅವಳು ಅವರಿಗೆ ಕೇಡೇನೂ ಬಯಸುವುದಿಲ್ಲವಷ್ಟೆ?

ಈ ರೀತಿ ಮಹಿಳೆ ದುಃಖವನ್ನು ಮರೆತು ಧೈರ್ಯದ ಜೀವನ ಸಾಗಿಸಬಲ್ಲಳು ನಿಜ, ಆದರೆ ಸಮಾಜ ಇವಳನ್ನು ನೆಮ್ಮದಿಯಿಂದಿರಗೊಡಬೇಕಲ್ಲ! ಅರಿಶಿಣ ಕುಂಕುಮಕ್ಕೆ ಕರೆಯುವಾಗ ಇವಳನ್ನು ಕೈಬಿಡುತ್ತಾರೆ. ಒಂದು ವೇಳೆ ಕರೆದರೂ ಇವಳ ಮುಂದೆಯೇ ಇವಳೊಬ್ಬಳಿಗೆ ಬಿಟ್ಟು ಇತರರಿಗೆ ಕುಂಕುಮ, ಹೂಗಳನ್ನು ಕೊಡುತ್ತಾರೆ. ಕುಂಕುಮವಿಲ್ಲದೆ ತೆಂಗಿನಕಾಯಿ, ಬ್ಲೌಸು ಪೀಸುಗಳಿಗೆ ಮಾತ್ರ ಆಕೆ ಪಾತ್ರಳು! ಆಕೆ ಇತರ ಆಭರಣಗಳನ್ನು ಧರಿಸಿದರೆ ಯಾರ ಅಡ್ಡಿಯೂ ಇಲ್ಲ. ಕುಂಕುಮ ಮಾತ್ರ ಇಟ್ಟುಕೊಳ್ಳಬಾರದು, ಅಷ್ಟೆ. ಇವೆಲ್ಲ ಯಾವ ರೀತಿಯ ತರ್ಕ? ಕುಂಕುಮವೆಂಬುದು ಪವಿತ್ರವಿರಬಹುದು. ಆದರೆ ಕೇವಲ ಆ ಕೆಂಬಣ್ಣದ ಪುಡಿಯನ್ನು ಮುಟ್ಟದಿರುವಷ್ಟು ಅಸ್ಪೃಶ್ಯರೇ ಈ ಹೆಣ್ಣುಮಕ್ಕಳು? ಮನೆಗೆ ಬಂದವರಿಗೆ ಇವರು ಕುಂಕುಮ ತಮ್ಮ ಕೈಯಿಂದ ಕೊಡುವಂತಿಲ್ಲ. 'ದೇವರ ಮನೆಯಲ್ಲಿ ಕುಂಕುಮ ಇದೆ ಇಟ್ಕೊಳ್ಳಿ' ಅನ್ನಬೇಕು. ಇಲ್ಲವೇ ಒಂದೆಡೆ ತಂದಿಟ್ಟು, 'ಇಟ್ಕೊಳ್ಳಿ' ಅನ್ನಬೇಕು! ಜೀವನದಲ್ಲಿ ಮೊದಲೇ ಒಂದು ದೊಡ್ಡ ಏಟು ತಿಂದಿರುವ ಈ ಹೆಣ್ಣುಮಕ್ಕಳಿಗೆ ಚೇತರಿಸಿಕೊಳ್ಳಲು ಬಿಡದೆ ಪದೇ ಪದೇ ಏಟು ಕೊಡುತ್ತಲೇ ಇರುತ್ತದೆ ನಮ್ಮ ಸಮಾಜ. ಅವರ ಮನಸ್ಸನ್ನು ಮುದುಡಿಹಾಕುತ್ತದೆ. ಇದೇ ಸಮಾಜ ಇತರ ವಿಷಯಗಳಲ್ಲಿ ತನ್ನನ್ನು ತಾನು ಬಹಳ 'ಮುಂದುವರೆದವರು' ಎಂದುಕೊಂಡಿರುತ್ತದೆ. ಅಂದರೆ ವೇಷಭೂಷಣಗಳು, ಹೋಟೆಲ್, ಪಾರ್ಟಿಗಳು, ಪಾಪ್ ಸಂಗೀತ, ಆಡುವ ಭಾಷೆ ಮುಂತಾದ ವಿಷಯಗಳಲ್ಲಿ ಪಾಶ್ಚಾತ್ಯರನ್ನನುಕರಿಸಿ, ತಾವು ಆಧುನಿಕರೆಂದು ಕೊಂಡಿರುತ್ತಾರೆ. ಇತರ ವಿಷಯಗಳಲ್ಲಿ ಮಾತ್ರ ಅವರು ಎರಡು ಶತಮಾನ ಹಿಂದೆಯೇ ಉಳಿದಿರುತ್ತಾರೆ.

ಈಚೆಗಂತೂ ಪತಿಯನ್ನು ಕಳೆದುಕೊಂಡ ಮಹಿಳೆಯರನೇಕರು ಕುಂಕುಮ, ಕಾಲುಂಗುರ, ಮಾಂಗಲ್ಯಗಳನ್ನು ಧರಿಸಿಯೇ ಇರುತ್ತಾರೆ. ಪತಿ ಇದ್ದವರು ಇವೆಲ್ಲವನ್ನು ತೆಗೆದಿಡುವುದೂ ಸಾಮಾನ್ಯವಾಗಿದೆ. ಅಂದಮೇಲೆ ಕುಂಕುಮ, ಮಾಂಗಲ್ಯಗಳು 'ಮುತ್ತೈದೆ ಸಂಕೇತ'ವೆಂಬ ಅರ್ಥವನ್ನು ಕಳೆದುಕೊಳ್ಳುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಿರುವಾಗ ಹಿಂದೆ ಯಾವುದೋ ಸಮಾಜದ ಕಟ್ಟುಪಾಡಿನಿಂದ ಉದ್ಭವಿಸಿದ್ದ,

ಈಗ ಸಂಪೂರ್ಣ ಅರ್ಥ ಕಳೆದುಕೊಳ್ಳುತ್ತಿರುವ ಇಂತಹ ಮೂಢ ಆಚರಣೆಯನ್ನು ಈಗಲೂ ಕುರುಡು ಕುರುಡಾಗಿ ಪಾಲಿಸುವುದು ತೀರ ಮೂರ್ಖತನವಲ್ಲದೆ ಮತ್ತಿನ್ನೇನು? ಅವರವರ ನಂಬಿಕೆ ಅವರವರದು ಎನ್ನುವವರಿರಬಹುದು. ಅದು ನಿಜವೇ. ಆದರೆ ಯೋಚಿಸಿ ನೋಡಿ. ಯಾವ ನಂಬಿಕೆಯೇ ಆಗಲಿ ಇತರರಿಗೆ ಹಾನಿ ಉಂಟುಮಾಡುವಂತಹ ಅಥವಾ ಇತರರ ಮನ ನೋಯಿಸುವಂತಹದಾದರೆ ಸರಿಯೇ? ವಯಸ್ಸಾದವರು, ಅಂದರೆ ಹಳೆಯ ಪದ್ಧತಿ, ಚಿಂತನೆಯುಳ್ಳವರು ಹೀಗೆ ವರ್ತಿಸಿದರೆ ಏನೂ ಮಾಡುವಂತಿಲ್ಲ. ಈಗಿನ ಪೀಳಿಗೆಯವರು, ಓದಿದವರು ಸಹ ಹೀಗೆ ವರ್ತಿಸಿದರೆ ಆಶ್ಚರ್ಯ, ಬೇಸರ ಆಗುತ್ತದೆ. ಇವರ ಚಿಂತನೆಯನ್ನು ಹೇಗೆ ಸುಧಾರಣೆ ಮಾಡಬಹುದು ಎಂಬತ್ತ ಯೋಚನೆ ಹರಿಯುತ್ತದೆ. ಅದೇ ಪುರುಷನೊಬ್ಬನಿಗೆ ಈ ಪರಿಸ್ಥಿತಿ ಬಂದರೆ, ಅಂದರೆ ಪತ್ನಿ ಸತ್ತರೆ, ಆತ ಕಂಗಾಲಾಗುತ್ತಾನೆ. ಮಕ್ಕಳನ್ನು ನೋಡಿಕೊಳ್ಳಲು ಕುಟುಂಬದ ಇತರ ಮಹಿಳಾ ಸದಸ್ಯರ ಮೊರೆ ಹೋಗುತ್ತಾನೆ. ಮನೆಕೆಲಸಕ್ಕೊಬ್ಬರನ್ನು, ಅಡುಗೆಗೊಬ್ಬರನ್ನು ಹುಡುಕುತ್ತಾನೆ. ಮನೆಯವರೇ ಅವನಿಗೆ ಬೇರೆ ಮದುವೆ ಮಾಡುವ ಪ್ರಯತ್ನ ಪ್ರಾರಂಭಿಸುತ್ತಾರೆ. ಪತ್ನಿಯ ಅಗಲಿಕೆ ಬಿಟ್ಟರೆ ಅವನ ಮನನೋಯುವ ಸಂದರ್ಭಗಳು ಬರುವುದಿಲ್ಲ.

ಇದನ್ನೆಲ್ಲ ನೋಡಿದಾಗ ಸಂಸಾರದ ನೊಗವನ್ನು ಒಬ್ಬಂಟಿಯಾಗಿ ಹೊತ್ತ ಮಹಿಳೆಯರನ್ನು ಸಮಾಜ ಕೀಳಾಗಿಯಾಗಲೀ, ಅನುಕಂಪದಿಂದಾಗಲೀ ಕಾಣುವ ಬದಲು ಹೆಚ್ಚು ಗೌರವದಿಂದ ಕಾಣಬೇಕಾದ್ದು ನ್ಯಾಯವಲ್ಲವೇ? ಜೀವನದಲ್ಲಿ ಅವಳಿಗಾಗಿರುವ ಅನ್ಯಾಯಕ್ಕೆ ಯಾರೂ ಹೊಣೆಯಲ್ಲ, ನಿಜ. ಅವಳು ಖಂಡಿತ ಯಾವ ಅಪರಾಧವನ್ನೂ ಮಾಡಿಲ್ಲ. ಹೀಗಿರುವಾಗ, ಅವಳು ಸಮಾಜದ ಮೌಢ್ಯದಿಂದಾಗಿ ಶಿಕ್ಷೆ ಅನುಭವಿಸಬೇಕಾಗಿ ಬರುವುದು ಎಂತಹ ವಿಪರ್ಯಾಸ ಅಲ್ಲವೆ? ಇದು ನ್ಯಾಯವೇ? ಇನ್ನಾದರೂ ಜನ ಇವರಿಗೆ ವಿಧವೆಯೆಂಬ ಹಣೆಪಟ್ಟಿ ಕಟ್ಟದೆ ಅವರನ್ನು ಸಾಮಾನ್ಯವಾಗಿ ಕಾಣಬೇಕಲ್ಲವೆ?

ಕೊನೆಯದಾಗಿ ಸುಮಾರು ನಲವತ್ತು ವರ್ಷಗಳ ಹಿಂದೆ ನಡೆದ ಘಟನೆ ತಿಳಿಸಬಯಸುತ್ತೇನೆ.

ನಮ್ಮ ತೀರ ಹತ್ತಿರದ ಹಿರಿಯ ಬಂಧು ಒಬ್ಬರು ಪತಿಯನ್ನು ಕಳೆದುಕೊಂಡಿದ್ದರು. ಒಮ್ಮೆ ಯಾವುದೋ ಮಠದ ಉತ್ಸವಕ್ಕಾಗಿ ಆಕೆ ಹಣ ದಾನ ನೀಡಿದ್ದರು. ಪೂಜೆಯ ಸಮಯದಲ್ಲಿ ಅವರು ಅಲ್ಲಿ ಹೋದಾಗ ನೆರೆದಿದ್ದ ಭಕ್ತ ಸಮೂಹಕ್ಕೆ ಸ್ವಾಮಿಗಳು ತಮ್ಮ ಕೈಯಿಂದಲೇ ಪ್ರಸಾದ ನೀಡುತ್ತಿದ್ದರು. ಈಕೆಯ ಸರದಿ ಬರುವ ವೇಳೆಗೆ, ಈಕೆ ವಿಧವೆಯೆಂಬುದನ್ನು ಗಮನಿಸಿದ ಸ್ವಾಮಿಗಳ ಶಿಷ್ಯರೊಬ್ಬರು ಇವರನ್ನು 'ಶ್,ಚ್,ಚ್' ಎಂದು ಪಕ್ಕಕ್ಕೆ ಕರೆದು ಪ್ರಸಾದವನ್ನು ದೂರದಿಂದಲೇ ಇವರ ಕೈಗೆ ಎಸೆಯಲು ಪ್ರಯತ್ನಿಸಿದರು. ಕೂಡಲೇ ಆಕೆ ಎಲ್ಲರಿಗೂ ಕೇಳುವಂತೆ 'ನಾನು ನೀಡಿದ ಹಣ ನಿಮಗೆ ಮೈಲಿಗೆಯಲ್ಲ, ನಾನು ಮಾತ್ರ

ಮೈಲಿಗೆ ಹೇಗೆ?!' ಎಂದು ಹೇಳಿ, ಮಗನನ್ನು ಕುರಿತು 'ನಡೆಯೋ ಮಗು ಇವರ ಪ್ರಸಾದ ಯಾರಿಗೆ ಬೇಕಾಗಿದೆ' ಎಂದು, ಅವನ ಕೈ ಹಿಡಿದು ನಡೆದೇಬಿಟ್ಟರು. ಅವರ ಮನಸ್ಸಿನಲ್ಲಿದ್ದುದು ದುಃಖ ಅಥವಾ ಅವಮಾನವಲ್ಲ, 'ಇವರೆಂತಹವರು' ಎಂಬ ಅಸಡ್ಡೆಯ ಭಾವನೆಯಷ್ಟೆ! ಆಗಿನ ಕಾಲದ ದಿಟ್ಟ ಮಹಿಳೆ ಆಕೆ. ಇದು ನಮ್ಮ ಕುಟುಂಬದಲ್ಲಿ ಆಗಿನಿಂದಲೂ ಪ್ರಚಲಿತವಾಗಿರುವ ಹೆಮ್ಮೆಯ ಕತೆ.

ಸಮಾಜ ಬದಲಾದರೆ ಒಳ್ಳೆಯದು. ಇಲ್ಲದಿದ್ದರೆ ಹೆಣ್ಣುಮಕ್ಕಳೇ 'ಐ ಡೋಂಟ್ ಕೇರ್' ಮನೋಭಾವ ಬೆಳೆಸಿಕೊಂಡುಬಿಟ್ಟರೆ ಮತ್ತಷ್ಟು ಒಳ್ಳೆಯದು.

*****

ಪರಿಚಯ :

ಮಹಿಳಾಲೋಕದ ಅನಂತ ಸಂಕಟಗಳನ್ನು, ಮೂಕವೇದನೆಗಳ್ನು, ಸಾಂಸಾರಿಕ ಬಿಕ್ಕಟ್ಟು-ಸಮಸ್ಯೆಗಳು ಮಹಿಳೆಯನ್ನು ಕಾಡುವ ಪರಿಯನ್ನು, ಕಗ್ಗಂಟುಗಳನ್ನು ಮಹಿಳೆ ಜಾಣತನದಿಂದ ಬಿಡಿಸಿಕೊಳ್ಳುವ ಉಪಾಯಗಳನ್ನು, ಹೆಣ್ಣಿನ ಮನೋಭೂಮಿಕೆಯ ಸೂಕ್ಷ್ಮ ನೆಲೆಗಳನ್ನು ಸರಳವಾಗಿ ಆದರೆ ಶಕ್ತಿಯುತವಾಗಿ ಅಭಿವ್ಯಕ್ತಿಸುವ ಹತ್ತಾರು ಲೇಖನಗಳನ್ನು ಬೃಂದಾ ಎನ್. ರಾವ್ ಬರೆದಿದ್ದಾರೆ. ಮಹಿಳೆಗೆ ಸಂಬಂಧಿಸಿದ ಯಾವುದೇ ಸಂಗತಿಯನ್ನು ರಂಗವಲ್ಲಿಯಂತೆ ನಾಜೂಕಾಗಿ ಬಿಡಿಸುವ ಕಲೆಗಾರಿಕೆ ಬೃಂದಾ ಅವರಿಗೆ ಸಿದ್ಧಿಸಿದೆ. ಪ್ರಜಾವಾಣಿಯ 'ಭೂಮಿಕಾ ವಿಭಾಗದಕ್ಕಿ ಬೃಂದಾ ಅವರ ಈ ಬಗೆಯ ಲೇಖನಗಳು ಆಗಾಗ ಪ್ರಕಟವಾಗುತ್ತ ಬಂದಿವೆ.

ಪುರುಷಪ್ರಧಾನ ಸಮಾಜ ಒಡ್ಡುವ ಎಲ್ಲ ಸವಾಲುಗಳನ್ನೂ ಆತ್ಮಸ್ಥೈರ್ಯದಿಂದ ಎದುರಿಸಿ ಪುರುಷನಿಗೆ ಸಮಾನವಾಗಿ ನಿಂತು ಪುರುಷನಿಗೆ ಮಾತ್ರ ಎಂದು ಭಾವಿಸಲಾಗಿದ್ದ ಎಲ್ಲ ಜವಾಬ್ದಾರಿಗಳನ್ನು ಮಹಿಳೆ ಅತ್ಯಂತ ಸಮರ್ಥವಾಗಿ ನಿಭಾಯಿಸುತ್ತಿರವ ಈ ದಿನಗಳಲ್ಲೂ ಆಧುನಿಕವೆನಿಸಿಕೊಂಡ ಕುಟುಂಬ ಮತ್ತು ಸಮಾಜಗಳು ವಿಧವೆಯಾದ ಹೆಣ್ಣುಮಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ಅಮಾನವೀಯವೂ ನಾಗರಿಕ ಸಮಾಜ ತಲೆತಗ್ಗಿಸುವಂಥದ್ದೂ ಆಗಿದೆಯೆನ್ನುವುದು ಈ ಪ್ರಬಂಧದ ಧ್ವನಿಯಾಗಿದೆ. ನಮ್ಮ ಸುತ್ತಮುತ್ತ ಮತ್ತು ನಮ್ಮ ಮನೆಯೊಳಗೆ ನಡೆಯುತ್ತಿರುವ ಘಟನೆಗಳೇ ಈ ಲೇಖನ ಬರೆಯಲು ಪ್ರೇರೇಪಣೆ ನೀಡಿವೆ. ನಲವತ್ತರ ಆಸುಪಾಸಿನಲ್ಲಿ ಪತಿಯನ್ನು ಕಳೆದುಕೊಂಡ ಹೆಣ್ಣುಮಗಳೊಬ್ಬರು ಯಾರನ್ನೂ ಅವಲಂಬಿಸದೆ ಮಕ್ಕಳೊಡನೆ ಸ್ವತಂತ್ರವಾಗಿ ಬದುಕುತ್ತ ಜನಮೆಚ್ಚುವಂತಹ ಬದುಕನ್ನು ನಡೆಸುತ್ತಿದ್ದರೂ ಅವಳು ಮದುವೆ ಮನೆಗೆ ಬಂದಾಗ ಸುತ್ತಲಿನ ಜನ ಅವಿವೇಕಿಗಳಂತೆ ವರ್ತಿಸುವುದು ಈ ವೈಜ್ಞಾನಿಕ ಯುಗದಲ್ಲೂ ನಿಜದ ಸಂಗತಿ. ಇಂಥ ಅನುಭವ

ಅಪರೂಪದ್ದೇನೂ ಅಲ್ಲ. ಬದಲಾದ ಪರಿಸ್ಥಿತಿಯಲ್ಲಿ ವಿಧವೆಯರಾದ ಹೆಣ್ಣುಮಕ್ಕಳು ತವರುಮನೆ ಅಥವಾ ಅತ್ತೆಮನೆಯ ನಾಲ್ಕು ಗೋಡೆಗಳಿಂದಾಚೆಗಿನ ಪ್ರಪಂಚಕ್ಕೆ ಬರಲೇಬೇಕಾಗುತ್ತದೆ. ಮಕ್ಕಳನ್ನು ಬೆಳೆಸುವುದಕ್ಕಾಗಿ, ತನ್ನ ಕಾಲ ಮೇಲೆ ಗಟ್ಟಿಯಾಗಿ ನಿಲ್ಲುವುದಕ್ಕಾಗಿ ಹೊರಗಡೆ ದುಡಿಯಲೇಬೇಕಾಗುತ್ತದೆ. ಮನಸ್ಸಿನ ದುಗಡು, ಸಂಕಟಗಳನ್ನು ತೋರಿಸಿಕೊಳ್ಳದೆ ಧೈರ್ಯವಾಗಿ ಜೀವನ ನಡೆಸಬೇಕಾಗುತ್ತದೆ. ಅಂಥವರಿಗೆ ಸಮೂಹ ಒತ್ತಾಸೆಯಾಗಿ ನಿಂತು ವೈಧವ್ಯ ಒಂದು ಶಾಪವಲ್ಲ. ಅದು ಯಾವ ಹೆಣ್ಣಿಗೂ ಯಾವಾಗ ಬೇಕಾದರೂ ಎದುರಾಗಬಹುದಾದ ಒಂದು ಆಕಸ್ಮಿಕ ಎಂದು ಭಾವಿಸಬೇಕಾಗುತ್ತದೆ. ಆದರೆ ವಿಧವೆ ಹೆಣ್ಣಿನ ವಿಚಾರದಲ್ಲಿ ನಮ್ಮ ಸಾಮಾಜಿಕ ನಡವಳಿಕೆಗಳು ಅತ್ಯಂತ ಕ್ರೂರವಾಗಿವೆ ಮತ್ತು ಅಮಾನವೀಯವಾಗಿವೆ. ವಿಧವೆ ಮಹಿಳೆ ಅರಿಶಿಣ ಕುಂಕುಮಕ್ಕೆ ಆಹ್ವಾನವಿರುವುದಿಲ್ಲ. ಕುಂಕುಮವೆನ್ನುವ ಕೆಂಪುಬಣ್ಣದ ಪುಡಿಯನ್ನು ಮುಟ್ಟದಿರುವಷ್ಟು ಆಕೆ ಅಸ್ಪೃಶ್ಯಳು. ಅಂಥವರು ಮನೆಗೆ ಬಂದಾಗ ಕೈಯಾರ ಕುಂಕುಮ ಕೊಡಲಾಗುವುದಿಲ್ಲ. ಮೊದಲೇ ನೊಂದಿರುವ ವಿಧವೆಯರಿಗೆ ಚೇತರಿಕೆಗೆ ಅವಕಾಶವೇ ಇಲ್ಲದಂತೆ ಸಮಾಜ ಅವಳಿಗೆ ಮತ್ತೆಮತ್ತೆ ಪೆಟ್ಟನ್ನು ಹಾಕುತ್ತಲೇ ಇರುತ್ತದೆ. ಯಾವ ಅಪರಾದವನ್ನೂ ಮಾಡಿದರ, ಬೇರೆಯವರಿಗಿಂತ ಹೆಚ್ಚು ಗೌರವಕ್ಕೆ ಅರ್ಹಳಾದ ವಿಧವೆಯನ್ನು ಮೂಢಮತಿಗಳು ತಮ್ಮ ಮಾತು ನಡವಳಿಕೆಗಳಿಂದ ಶಿಕ್ಷಿಸುತ್ತಿರುವುದು ಅನ್ಯಾಯವಲ್ಲವೇ? ಎನ್ನುವ ಮಾರ್ಮಿಕವಾದ ಎಲ್ಲರನ್ನು ಅಲೋಚನೆಗೆ ಒಡ್ಡುವ ಪ್ರಶ್ನೆಯಲ್ಲಿ ಈ ಲೇಖನ ಹಾಕುತ್ತದೆ; "ಸಮಾಜ ಬದಲಾದರೆ ಒಳ್ಳೆಯದು. ಇಲ್ಲದಿದ್ದರೆ ಹೆಣ್ಣುಮಕ್ಕಳೇ 'ಐ ಡೋಂಟ್ ಕೇರ್' ಮನೋಭಾವ ಬೆಳೆಸಿಕೊಂಡರೆ ಮತ್ತಷ್ಟು ಒಳ್ಳೆಯದು" ಎನ್ನುವ ಸಮಯೋಚಿತ ನಿರ್ಧಾರವನ್ನೂ ಪ್ರಕಟಿಸುತ್ತದೆ.

'ಪ್ರವೇಶ' ಕಾವ' 'ಜಾಣ' ಮತ್ತು 'ರತ್ನ' ಕನ್ನಡ ಸಾಹಿತ್ಯ ಪರಿಷತ್ತಿನ ಬಹು ಜನಪ್ರಿಯವಾದ ಸಾಹಿತ್ಯ ಪರೀಕ್ಷೆಗಳು. ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಪದವಿ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಜ್ಞಾನವನ್ನು ಒರೆಗೆ ಹಚ್ಚಿ ನೋಡಿಕೊಳ್ಳುವುದಕ್ಕೋ ಮುಂದಿನ ಪರೀಕ್ಷೆಗಳಿಗೆ ಅಗತ್ಯವಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳುವುದಕ್ಕೋ ಈ ಪರೀಕ್ಷೆಗಳನ್ನು ತೆಗೆದುಕೊಂಡರೆ, ವಯಸ್ಸಾಗಿರುವವರು ತಮ್ಮೊಳಗಿರುವ ವಿದ್ಯಾರ್ಥಿಯನ್ನು ಜೋಪಾನವಾಗಿ ಕಾಪಾಡಿಕೊಂಡು, ಪೋಷಿಸಿಕೊಂಡು ಹೋಗುವ ಉದ್ದೇಶದಿಂದ ಪರೀಕ್ಷೆ ಬರೆಯುತ್ತಾರೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಪಡೆಯುವುದರಿಂದ ಕರ್ನಾಟಕ ಸರ್ಕಾರದ ನೌಕರರು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ಉತ್ತೀರ್ಣತೆಯಿಂದ ವಿನಾಯಿತಿ ಪಡೆಯಬಹುದಾದ ಲೌಕಿಕ ಲಾಭವೂ ಉಂಟು.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮